ದೆಹಲಿ ಕರ್ನಾಟಕ ಸಂಘದ

# ಅಭಿಮತ

**35ನೇ ವಾರ್ಷಿಕ ವಿಶೇಷ ಸಂಚಿಕೆ**

ಅಕ್ಟೋಬರ್ 2025- ಮಾರ್ಚ್ 2026 । ಬೆಲೆ ರೂ. 1


ಗೀತೋತ್ಸವ


ನಾಟಕೋತ್ಸವ


ನೃತ್ಯೋತ್ಸವ


ಕ್ರೀಡೋತ್ಸವ

## ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪುರಸ್ಕೃತರು–2025


ಶ್ರೀ ಅನಂತರಾಮ ಅರಳಿ


ಶ್ರೀಮತಿ ರೇಣುಕಾ ನಿಡಗುಂದಿ


ಶ್ರೀಮತಿ ಮಿತಾ ಮಿಶ್ರ

## ಸಂಘದ ವಿವಿಧ ಪ್ರಶಸ್ತಿ ಪುರಸ್ಕೃತರು


ಡಾ. ಹಂಪ ನಾಗರಾಜಯ್ಯ
ಜ್ಞಾನಪೀಠ ಪುರಸ್ಕೃತ, ರಾಷ್ಟ್ರಕವಿ
ಕುವೆಂಪು ಪ್ರಶಸ್ತಿ-2024


ಡಾ. ಪ್ರಧಾನ್ ಗುರುದತ್ತ
ಜ್ಞಾನಪೀಠ ಪುರಸ್ಕೃತ, ರಾಷ್ಟ್ರಕವಿ
ಕುವೆಂಪು ಪ್ರಶಸ್ತಿ-2025


ಶ್ರೀ ಬಿ.ಆರ್. ಲಕ್ಷ್ಮಣ ರಾವ್
ಡಾ. ಸರೋಜಿನಿ ಮಹಿಷಿ
ಪ್ರಶಸ್ತಿ-2024


ಡಾ. ಲತಾ ರಾಜಶೇಖರ್
ಡಾ. ಸರೋಜಿನಿ ಮಹಿಷಿ
ಪ್ರಶಸ್ತಿ-2025


ಡಾ. ಟಿ.ಎಸ್. ನಾಗಾಭರಣ
ದೆಹಲಿ ಕರ್ನಾಟಕ ಸಂಘದ ಕನ್ನಡ
ಭಾರತೀ ರಂಗ ಪ್ರಶಸ್ತಿ-2024


ಶ್ರೀ ಚರಣ್‌ರಾಜ್
ದೆಹಲಿ ಕರ್ನಾಟಕ ಸಂಘದ ಕನ್ನಡ
ಭಾರತೀ ರಂಗ ಪ್ರಶಸ್ತಿ-2025


ಶ್ರೀ ಪಟ್ಲ ಸತೀಶ್ ಶೆಟ್ಟಿ
ಡಾ. ಶಿವರಾಮ ಕಾರಂತ
ಪ್ರಶಸ್ತಿ-2024

**ಅಭಿನಂದನೆ**

# 2026ರ ಪ್ರದ್ಮ ಪ್ರಶಸ್ತಿ ಪುರಸ್ಕೃತರಾದ ಹೆಮ್ಮೆಯ ಕನ್ನಡಿಗರಿಗೆ ಅಭಿನಂದನೆಗಳು

**ಪದ್ಮಭೂಷಣ**



ಸುಪ್ರಸಿದ್ಧ ಅವಧಾನಮ್ ಭಜನಾ ಕಲಾವಿದ
**ಶ್ರೀ ಶತಾವಧಾನಿ ಆರ್. ಗಣೇಶ್**
(ಕಲಾ ಕ್ಷೇತ್ರ)

**ಪದ್ಮಶ್ರೀ**



ಕೆ.ಎಲ್.ಇ. ಸೊಸೈಟಿ ಅಧ್ಯಕ್ಷ ಮತ್ತು ಶಿಕ್ಷಣ ಅಡ್ಮಿನಿಸ್ಟ್ರೇಟರ್
**ಡಾ. ಪ್ರಭಾಕರ ಬಸವಪ್ರಭು ಕೋರೆ**
(ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರ)

**ಪದ್ಮಶ್ರೀ**



ಜ್ಞಾನ ದಾಸೋಹಿ ಮತ್ತು ಪುಸ್ತಕ ಪ್ರೇಮಿ
**ಶ್ರೀ ಅಂಕೇ ಗೌಡ ಎಂ.**
(ಸಮಾಜ ಸೇವೆ ಕ್ಷೇತ್ರ)

**ಪದ್ಮಶ್ರೀ**



ಸಮಾಜ ಸೇವಕಿ
**ಡಾ. ಎಸ್.ಜಿ. ಸುಶೀಲಮ್ಮ**
(ಸಮಾಜ ಸೇವೆ ಕ್ಷೇತ್ರ)

**ಪದ್ಮಶ್ರೀ**



ಪ್ರಸಾರ ಭಾರತಿ ಸಿ.ಇ.ಓ.
**ಶ್ರೀ ಶಶಿ ಶೇಖರ್ ವೆಂಪತಿ**
(ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರ)

**ಪದ್ಮಶ್ರೀ**



ಏರೋಸ್ಪೇಸ್ ವಿಜ್ಞಾನಿ
**ಡಾ. ಶುಭ ವೆಂಕಟೇಶ ಅಯ್ಯಂಗಾರ್**
(ವಿಜ್ಞಾನ ಮತ್ತು ಇಂಜಿನಿಯರಿಂಗ್ ಕ್ಷೇತ್ರ)

**ಪದ್ಮಶ್ರೀ**



ಟಿಟಿಕೆ ಪ್ರೆಸ್ಟೀಜ್ ಗ್ರೂಪ್ ಮುಖ್ಯಸ್ಥ
**ಶ್ರೀ ಟಿ.ಟಿ. ಜಗನ್ನಾಥನ್**
(ಮರಣೋತ್ತರವಾಗಿ)
(ವ್ಯಾಪಾರ ಮತ್ತು ಕೈಗಾರಿಕಾ ಕ್ಷೇತ್ರ)

**ಪದ್ಮಶ್ರೀ**



ಪ್ರಸಿದ್ಧ ರಕ್ತ ಶಾಸ್ತ್ರಜ್ಞ
**ಡಾ. ಸುರೇಶ್ ಹನಗವಾಡಿ**
(ವೈದ್ಯಕೀಯ ಕ್ಷೇತ್ರ)

**2026ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ನೀಡಲಾದ ಪದ್ಮವಿಭೂಷಣ (5), ಪದ್ಮಭೂಷಣ (13) ಮತ್ತು ಪದ್ಮಶ್ರೀ (113) ಒಟ್ಟಾರೆ 131 ಪ್ರಶಸ್ತಿಗಳಲ್ಲಿ ಪದ್ಮಭೂಷಣ (1) ಮತ್ತು ಪದ್ಮಶ್ರೀ (7) ಪ್ರಶಸ್ತಿಗಳಿಗೆ ಭಾಜನರಾದ ಕರ್ನಾಟಕ ರಾಜ್ಯದ ಹೆಮ್ಮೆಯ ಈ ಎಂಟು ಗಣ್ಯ ಸಾಧಕರಿಗೆ ಅಭಿಮತ ಓದುಗರ ಹಾಗು ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ತುಂಬು ಹೃದಯದ ಅಭಿನಂದನೆಗಳು.**

## ಕನ್ನಡ ಚಲನಚಿತ್ರ ನಿರ್ದೇಶಕ ಶ್ರೀ ಎನ್.ಆರ್. ನಂಜುಂಡೇಗೌಡರಿಗೆ ಪುಟ್ಟಣ್ಣ ಕಣಗಾಲ್ ಪ್ರಶಸ್ತಿ-2019 ಪುರಸ್ಕಾರ

ಕನ್ನಡ ಚಿತ್ರರಂಗದಲ್ಲಿ ಯಶಸ್ವಿ ನಿರ್ದೇಶಕರಲ್ಲೊಬ್ಬರಾದ, ಚಲನಚಿತ್ರ ಕ್ಷೇತ್ರದ ಹಲವಾರು ಆಯಾಮಗಳಲ್ಲಿ ತೊಡಗಿಸಿಕೊಂಡಿರುವ ಶ್ರೀ ಎನ್.ಆರ್. ನಂಜುಂಡೇ ಗೌಡರವರಿಗೆ ಅಕ್ಟೋಬರ್ 2025ರಲ್ಲಿ ಕರ್ನಾಟಕ ಸರ್ಕಾರವು ಅವರ ಜೀವಮಾನ ಸಾಧನೆಗಾಗಿ 2019 ನೇ ಸಾಲಿನ 'ಪುಟ್ಟಣ್ಣ ಕಣಗಾಲ್' ಪ್ರಶಸ್ತಿ ನೀಡಿ ಗೌರವಿಸಿದೆ.

ಮೂಲತಃ ಹಾಸನ ಜಿಲ್ಲೆಯವರಾದ ಶ್ರೀ ನಂಜುಂಡೇಗೌಡರು ಮೈಸೂರಿನಲ್ಲಿ ಬಿ.ಕಾಂ. ಪದವಿ ಪಡೆದ ತರುವಾಯ ಪಿ. ಲಂಕೇಶ್ ಅವರ ಮೂಲಕ ಚಿತ್ರರಂಗಕ್ಕೆ ಪ್ರವೇಶಿಸಿ 1989 ರಲ್ಲಿ ಸ್ವತಂತ್ರವಾಗಿ 'ಸಂಕ್ರಾಂತಿ' ಚಿತ್ರವನ್ನು ನಿರ್ದೇಶಿಸಿದರು. ಕೆ. ಬಾಲಚಂದರ್, ಟಿ.ಎಸ್. ನಾಗಾಭರಣ, ಆರ್. ಎನ್. ಜಯಗೋಪಾಲ್ ಮುಂತಾದ ಖ್ಯಾತನಾಮರ ಜೊತೆ ಸಹಾಯಕ ನಿರ್ದೇಶಕರಾಗಿ 20ಕ್ಕೂ ಹೆಚ್ಚು ಚಿತ್ರಗಳಲ್ಲಿಯೂ ಕೆಲಸ ಮಾಡಿದ್ದಾರೆ.

ಕನ್ನಡದ ಮೊದಲ ಡಿಜಿಟಲ್ ಸ್ಯಾಟೆಲೈಟ್ ಚಾನೆಲ್ 'ಸುಪ್ರಭಾತ'ದ ಮುಖ್ಯಸ್ಥರಾಗಿ, 'ಚಿಲ್ಡ್ರನ್ ಇಂಡಿಯಾ'ದ ಸಂಸ್ಥಾಪಕ ಅಧ್ಯಕ್ಷರಾಗಿ, ಚಲನಚಿತ್ರ ನಿರ್ದೇಶಕರ ಸಂಘ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ದಕ್ಷಿಣ ಭಾರತದ ಚಲನಚಿತ್ರ ನಿರ್ದೇಶಕರ ಸಂಘ, ಅಂತರರಾಷ್ಟ್ರೀಯ ಮಕ್ಕಳ ಚಲನಚಿತ್ರೋತ್ಸವ ಮಹಾಮಂಡಳಿಯ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಇವರು ನಿರ್ದೇಶಿಸಿರುವ 'ಸಂಕ್ರಾಂತಿ', 'ನೋಡು ಬಾ ಹಮ್ಮೀರ', 'ಹೆಬ್ಬೆಟ್ ರಾಮಕ್ಕ' ಮತ್ತು 'ನಾನು ಗಾಂಧಿ' ಚಿತ್ರಗಳಿಗೆ ರಾಜ್ಯ ಪ್ರಶಸ್ತಿ ಹಾಗು 'ಹೆಬ್ಬೆಟ್ ರಾಮಕ್ಕ' ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ದೊರೆತಿವೆ. ಇತರ ಜನಪ್ರಿಯ ಕನ್ನಡ ಚಿತ್ರಗಳಾದ ಅಮಾನುಷ, ನವತಾರೆ, ಅಪೂರ್ವ ಜೋಡಿ, ಚುಕ್ಕಿ ಚಂದ್ರಮ, ಮತ್ತು ಮಕ್ಕಳ ಚಿತ್ರಗಳಾದ ಅ ಆ ಇ ಈ, ಚಿಲ್ಡ್ರನ್ಸ್ ಇಂಡಿಯಾ ಡಾಟ್‌ಕಾಮ್ ಹಾಗು ಕಾಸಿನ ಸರ ಇವರ ನಿರ್ದೇಶನದಲ್ಲಿ ಮೂಡಿ ಬಂದಿದ್ದು ಹಲವಾರು ಅಂತರರಾಷ್ಟ್ರೀಯ ಚಿತ್ರೋತ್ಸವದಲ್ಲಿ ಪ್ರದರ್ಶನಗೊಂಡಿವೆ.

ಶ್ರೀ ನಂಜುಂಡೇಗೌಡರು ಸಂಘದ ಹಲವಾರು ಕಾರ್ಯಕ್ರಮಗಳಲ್ಲಿ ಈ ಹಿಂದೆ ಭಾಗವಹಿಸಿದ್ದು, ಇವರ ನಿರ್ದೇಶನದ 'ಹೆಬ್ಬೆಟ್ ರಾಮಕ್ಕ' ಚಿತ್ರ



ಸಂಘದ ಸಭಾಂಗಣದಲ್ಲಿ ಬೆಳ್ಳಿತೆರೆಯ ಮೇಲೆ ಪ್ರದರ್ಶಿತಗೊಂಡಿದೆ. ಹೆಸರಾಂತ ನಿರ್ದೇಶಕರಿಗಾಗಿ ನೀಡಲಾಗುವ ಪ್ರತಿಷ್ಠಿತ ಪುಟ್ಟಣ್ಣ ಕಣಗಾಲ್ ಪ್ರಶಸ್ತಿಗೆ ಭಾಜನರಾಗಿ, ರಾಜ್ಯದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರಿಂದ 2019ನೇ ಸಾಲಿನ ಪ್ರಶಸ್ತಿ ಸ್ವೀಕರಿಸಿರುವ **ಶ್ರೀ ಎನ್.ಆರ್. ನಂಜುಂಡೇ ಗೌಡರಿಗೆ ಸಮಸ್ತ ದೆಹಲಿ ಕನ್ನಡಿಗರ ಹಾರ್ದಿಕ ಅಭಿನಂದನೆಗಳು!** ❑

# ‘ಅಭಿಮತ’ ೩೫ನೇ ವಾರ್ಷಿಕ ವಿಶೇಷ ಸಂಚಿಕೆ

## ಒಳಗಿನ ಪುಟಗಳಲ್ಲಿ...


1. ಸಂಪಾದಕರ ಮನದ ನುಡಿ 4

2. ಅಧ್ಯಕ್ಷರ ನುಡಿ 6

3. ಮುನ್ನೋಟ 7

4. ಅಭಿಮತ–35 ವರ್ಷದ ನಿರಂತರ ಪಯಣ–ಅಭಿನಂದನೆಗಳು ಮತ್ತು ಶುಭ ಹಾರೈಕೆಗಳು 8

5 ನಾರಿ ಶಕ್ತಿಗೆ ವಂದನೆ : **ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ** 9

6. 2024 ಮತ್ತು 2025ನೇ ಸಾಲಿನ ಸಂಘದ ವಿವಿಧ ಪ್ರಶಸ್ತಿಗಳ ಪ್ರದಾನ ಸಮಾರಂಭ–ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ 11

7. **‘ಕ್ರೀಡೋತ್ಸವ’** ಅಂಗವಾಗಿ 2025ರ ವಾರ್ಷಿಕ ಕ್ರಿಕೆಟ್ ಪಂದ್ಯಾವಳಿಯ ಯಶಸ್ವಿ ಆಯೋಜನೆ 21

8. **‘ಕ್ರೀಡೋತ್ಸವ’**–ಒಳಾಂಗಣ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು, ಹೊರಾಂಗಣ ಆಟೋಟ ಸ್ಪರ್ಧೆಗಳು 26

9. ತಿಂಗಳ ವ್ಯಕ್ತಿ–ಶ್ರೀ **ಎಂ. ಶಿವರಾಮ ರೈ** 30

10 ಸಂಘದಲ್ಲಿ ಯಶಸ್ವಿ **‘ಆಹಾರೋತ್ಸವ’**–ದೆಹಲಿ ಕನ್ನಡಿಗರ ಬಹು ಜನಪ್ರಿಯ ಕೈರುಚಿ ಆಹಾರ ಮೇಳ 32

11. **‘ನೃತ್ಯೋತ್ಸವ’**–ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಸಂಘದಲ್ಲಿ ‘ವಿಶಿಷ್ಟ ಕನ್ನಡಿಗ’ ಪ್ರಶಸ್ತಿ ಪ್ರದಾನ ಮತ್ತು ‘ನೃತ್ಯೋತ್ಸವ’ ಸಂಭ್ರಮ 35

12. ರಾಷ್ಟ್ರ ರಾಜಧಾನಿಯಲ್ಲಿ ರಾಷ್ಟ್ರಕವಿ ಕುವೆಂಪು ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ ಮತ್ತು ಅವರಿಗೆ ಭಾರತರತ್ನ ಪುರಸ್ಕಾರ ನೀಡಲು ಮನವಿ 42

13. ಕೇಂದ್ರ ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ರಾಣಿ ಚೆನ್ನಮ್ಮ ಅವರ ಕಿತ್ತೂರು ಯುದ್ಧದಲ್ಲಿ ಬ್ರಿಟೀಷ್ ವಿರುದ್ಧದ ವಿಜಯದ ಸ್ಮರಣಾರ್ಥ 200ನೇ ವಾರ್ಷಿಕೋತ್ಸವ ಕಾರ್ಯಕ್ರಮ 45

14. ಸಂಘದಲ್ಲಿ ಯಶಸ್ವಿ **‘ಆರೋಗ್ಯೋತ್ಸವ’** ಮತ್ತು ಉಚಿತ ರಕ್ತ ಪರೀಕ್ಷಾ ಶಿಬಿರ 50

15. ಆರೋಗ್ಯವೇ ಭಾಗ್ಯ–ವೈದ್ಯಕೀಯ ಲೇಖನಗಳು ಬೇಸಿಗೆಯ ಆರೋಗ್ಯ ಸಂರಕ್ಷಣೆಗಾಗಿ ಆಯುರ್ವೇದ ಗ್ರೀಷ್ಮ ಋತುಚರ್ಯೆ ಮತ್ತು ‘ಬೊಜ್ಜು ಬಲವಲ್ಲ, ಭೌತಿಕ ಫಿಟ್ನೆಸ್ ನಂಬಲಾರ್ಹ ಆರೋಗ್ಯ ಲಕ್ಷಣ ಅಲ್ಲವೇ ಅಲ್ಲ’ 51

16. **‘ಗೀತೋತ್ಸವ’**–ಸಂಘದ ವೇದಿಕೆಯಲ್ಲಿ ಯಶಸ್ವಿಯಾಗಿ ಜರುಗಿದ ಸಂಗೀತಮಯ ಗೀತೋತ್ಸವ 55

17. ಜನಕಪುರಿ ಮಹಿಳಾ ಮಂಡಳಿಯ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಹೊಸ ಸಮಿತಿಯ ರಚನೆ 57

18. ಕರ್ನಾಟಕ ಭವನ ನವದೆಹಲಿ ವತಿಯಿಂದ ಸಂಭ್ರಮದ ಕರ್ನಾಟಕ ರಾಜ್ಯೋತ್ಸವ ಆಚರಣೆ 58

19. ಗುರುಗ್ರಾಮದಲ್ಲಿ **ಕರ್ನಾಟಕ ರಾಜ್ಯೋತ್ಸವ** ಆಚರಣೆ–2025 59

20. ಸಂಘದಲ್ಲಿ ನಡೆದ **‘ನಾಟಕೋತ್ಸವ’**ದಲ್ಲಿ ಸ್ಥಳೀಯ ಕಲಾತಂಡಗಳಿಂದ ಏಳು ಅಮೋಘ ನಾಟಕಗಳ ಪ್ರಸ್ತುತಿ 62

21. ದೆಹಲಿ ಒಕ್ಕಲಿಗ ಗೌಡ ಸಂಘ(ರಿ) ನವದೆಹಲಿ ವತಿಯಿಂದ, ಅದ್ದೂರಿಯಾಗಿ ಮೂಡಿ ಬಂದ **‘ಸಂಕ್ರಾಂತಿ ಮಿಲನ–2026’** 93

22. ಮೈಸೂರು ದಸರಾ ಎಷ್ಟೊಂದು ಸುಂದರ, ನೋಡಿದಿರಾ ನಮ್ಮ ದೆಹಲಿ ಮಕ್ಕಳ ನೃತ್ಯವಾ... 95

23. ಸಂಘದಲ್ಲಿ ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ **ಕಲ್ಯಾಣ ಕರ್ನಾಟಕ ಉತ್ಸವ** ಆಚರಣೆ 99

24. ಪ್ರವಾಸ ಕಥನ–**ದೇವಭೂಮಿಯ ಮತ್ತೊಂದು ಪರ್ಯಟನೆ,** ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆ–ರಾಷ್ಟ್ರ ಧ್ವಜಾರೋಹಣ 100

25. **77ನೇ ಗಣರಾಜ್ಯೋತ್ಸವ** ಅಂಗವಾಗಿ ಸಂಘದಲ್ಲಿ ರಾಷ್ಟ್ರ ಧ್ವಜಾರೋಹಣ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ಪಿಕ್‌ನಿಕ್ 102

26. ಜನಕಪುರಿ ಕನ್ನಡ ಕೂಟದಿಂದ ವಾರ್ಷಿಕ ಕ್ರೀಡೆ ಮತ್ತು ರಾಜ್ಯೋತ್ಸವ ಆಚರಣೆ 103

27. ಸಂಘದಲ್ಲಿ ಸಪ್ತಕದ 950ನೇ ಕಾರ್ಯಕ್ರಮದ ಸಂಭ್ರಮ 104

28. ‘ದೆಹಲಿ ಕನ್ನಡ ಶಾಲೆಯ ಸಂಸ್ಕೃತ ಶಿಕ್ಷಕ **ಡಾ. ಗಣೇಶ ಹೆಗಡೆ**ಯವರಿಗೆ ಪಿ.ಎಚ್‌ಡಿ ಪದವಿ ಪ್ರದಾನ’ 105

29. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಮತ್ತು ದೆಹಲಿ ಕನ್ನಡ ಶಾಲೆಯ ವಿವಿಧ ಕಾರ್ಯಕ್ರಮಗಳ ವರದಿಗಳು 106

30. ಲೇಖನ–**ಶಿಕ್ಷಕರು ಶರಣಾಗಬೇಕಿಲ್ಲ** 111

ದೆಹಲಿ ಕರ್ನಾಟಕ ಸಂಘದ

ಸಂಪುಟ 36 । ಸಂಚಿಕೆ 1–6

ಅಕ್ಟೋಬರ್ 2025–ಮಾರ್ಚ್ 2026

ವಾರ್ಷಿಕ ವಿಶೇಷ ಸಂಚಿಕೆ


**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ (2024–26)**

ಅಧ್ಯಕ್ಷರು
ಸಿ.ಎಂ. ನಾಗರಾಜ
9811325440

ಉಪಾಧ್ಯಕ್ಷರು
ವಸಂತ ಶೆಟ್ಟಿ ಬೆಳ್ಳಾರೆ
9958697823
ಪೂಜಾ ಪಿ. ರಾವ್
9810882498

ಪ್ರಧಾನ ಕಾರ್ಯದರ್ಶಿ
ರಾಧಾಕೃಷ್ಣ
9818252183

ಖಜಾಂಚಿ
ಆಶಾಲತಾ ಎಂ.
9891249149

ಜಂಟಿ ಕಾರ್ಯದರ್ಶಿಗಳು
ನಾರಾಯಣ ಬಿ.
9868393978
ಅಶ್ವಿನಿ ಬಿ.ಎಸ್.
9036235665

ಸಮಿತಿ ಸದಸ್ಯರು
ಡಾ. ವೆಂಕಟಾಚಲ ಜಿ. ಹೆಗಡೆ
9312712476
ಕೆ.ಎಸ್. ಮೂರ್ತಿ
9871140222
ಪ್ರಭಾಕರ ಮಡ್ಡಿತೋಟ್
9910091978
ನವೀನ್ ಕುಮಾರ್ ವಿ.
9871945819
ಅರುಣ್ ಸಿ.ಎಸ್.
9741282211
ಜಯಶ್ರೀ ಬಸವರಾಜು ಬಿ.ಕೆ.
9560760341
ಶುಭಾ ದೇವಿಪ್ರಸಾದ್
9319762969
ಮಾಲಿನಿ ಪ್ರಹ್ಲಾದ
9910269085
ಎನ್.ಆರ್. ಶ್ರೀನಾಥ
7836954402
ಶಶಿಕಾಂತ ಪಿ. ಪಾಟೀಲ್
9650182413

**ಕಾವಲು ಸಮಿತಿ**

ಶ್ರೀ ಎನ್.ಎ. ಮಾಧವ
ಶ್ರೀ ಎಂ.ವಿ. ವೆಂಕಟೇಶ್
ಶ್ರೀಮತಿ ರಾಧಾ ಕೌಜಲಗಿ


# ಸಂಪಾದಕರ ಮನದ ನುಡಿ....

## “ಅಭಿಮತ’ಕ್ಕಾಯಿತು ಮೂವತ್ತೈದು ವರುಷ, ಬೇಗನೇ ದಾಟಲಿ ಐವತ್ತರ ಗಡಿ, ಹರುಷ ತರುತ್ತಿರಲಿ ದೆಹಲಿ ಕನ್ನಡಿಗರ ಹೃನ್ಮನಗಳ ‘ಅಭಿಮತ’ದ ಅಕ್ಷರ ಕುಡಿ”

ಆತ್ಮೀಯ ಅಭಿಮತ ಓದುಗ ಬಂಧುಗಳಿಗೆ ಸಪ್ರೇಮ ನಮಸ್ಕಾರಗಳು.

ನಿಮ್ಮೆಲ್ಲರ ಹೆಮ್ಮೆಯ ಸಂಘದ ಅಚ್ಚುಮೆಚ್ಚಿನ ಮಾಸಪತ್ರಿಕೆ ‘ಅಭಿಮತ’ವು ಕಳೆದ ಅಕ್ಟೋಬರ್ 2025ರಲ್ಲಿ 35 ವಸಂತಗಳನ್ನು ಯಶಸ್ವಿಯಾಗಿ ದಾಟಿ ಈಗಾಗಲೇ 36ನೇ ವರ್ಷದ ಪಯಣಕ್ಕೆ ಕಾಲಿಟ್ಟಿರುವುದು ಬಹಳ ಹರುಷದ ಸಂಗತಿ ಒಂದೆಡೆಯಾದರೆ, ಇನ್ನೊಂದೆಡೆ ತಾಯ್ನಾಡಿನಿಂದ ದೆಹಲಿಗೆ ಬಂದು ಇಲ್ಲಿನ ಕನ್ನಡಿಗರೊಂದಿಗೆ 34 ವರ್ಷಗಳ ಒಡನಾಟದ ಜೀವನ ನಡೆಸುತ್ತಾ ದೆಹಲಿ ಬದುಕಿನ 35ನೇ ವರ್ಷದ ಆರಂಭದಲ್ಲಿರುವ ನಿಮ್ಮ ಈ ಪ್ರಧಾನ ಸಂಪಾದಕನಿಗೆ ಬಹಳ ಸಂತಸದ ಕ್ಷಣವೂ ಸಹಾ.ಈ ಮೂರೂವರೆ ದಶಕಗಳ ಕಾಲಘಟ್ಟದಲ್ಲಿ ಸಂಘದ ಸುವರ್ಣ ಜಯಂತಿ, ನೂತನ ಸಾಂಸ್ಕೃತಿಕ ಸಮುಚ್ಚಯದ ಉದ್ಘಾಟನೆ, ಜೆ.ಎನ್.ಯು.ನಲ್ಲಿ ಕನ್ನಡ ಪೀಠ ಸ್ಥಾಪಿಸುವಲ್ಲಿ ಸಹಯೋಗ, ಮತ್ತು ಮೋತಿಭಾಗ್ ಮೆಟ್ರೋ ಸ್ಟೇಷನ್‌ಗೆ ಸರ್.ಎಂ. ವಿಶ್ವೇಶ್ವರಯ್ಯನವರ ಹೆಸರಿಡುವಲ್ಲಿ ಯೋಗದಾನ ಮತ್ತು ಅಮೃತ ಮಹೋತ್ಸವದಂತಹ ಮಹತ್ತರ ಮೈಲಿಗಲ್ಲುಗಳ ಹಾದಿಯಲ್ಲಿ ಸಾಗಿದ ಸಂಘದ ಬೆಳವಣಿಗೆಯ ಜೊತೆ ಜೊತೆಗೆ ಅದರ ಅವಿಭಾಜ್ಯ ಅಂಗವಾಗಿ, ದೆಹಲಿ ಕನ್ನಡಿಗರ ಅನುಭವ ಮತ್ತು ಅನುಭಾವದ ಬಿಂಬ ಪ್ರತಿಬಿಂಬವಾಗಿ, ಮುಖವಾಣಿ ಪತ್ರಿಕೆಯಾಗಿ ಅಭಿಮತವು ಸಂಘದ ಆಗು ಹೋಗುಗಳನ್ನು, ಕಾರ್ಯಕ್ರಮಗಳ ಮತ್ತು ಚಟುವಟಿಕೆಗಳ ವಿವರಗಳನ್ನು ಸದಸ್ಯರುಗಳಿಗೆ ನಿರಂತರವಾಗಿ ತಲುಪಿಸುತ್ತಾ ಸಂಘ ಮತ್ತು ಸದಸ್ಯರ ನಡುವಿನ ಬೆಸುಗೆಯ ಕೊಂಡಿಯಾಗಿ ತನ್ನದೇ ಆದ ಕೊಡುಗೆಯನ್ನು ನೀಡಿರುವುದು ಗಮನಾರ್ಹ.

ಬಂಧುಗಳೇ, ದಿನಾಂಕ 02.10.1990ರಂದು ಅಂದಿನ ಸಂಘದ ಅಧ್ಯಕ್ಷರಾಗಿದ್ದ ಶ್ರೀ ಎನ್.ಪಿ. ಭಟ್ಟರ ಸಾರಥ್ಯದಲ್ಲಿ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ವಿ. ಗೋಪಿನಾಥ್ ಅವರ ಮುತುವರ್ಜಿಯಲ್ಲಿ ಮೈತಳೆದ ಅಭಿಮತದ ಪ್ರಥಮ ಪ್ರಧಾನ ಸಂಪಾದಕರಾದ ಡಾ. ವೆಂಕಟಾಚಲ ಜಿ. ಹೆಗಡೆಯವರಿಂದ ಸಿದ್ಧಗೊಂಡ ಮೊದಲ ಸಂಪುಟದ ಪ್ರಥಮ ಸಂಚಿಕೆ ಭಾರತ ಸರ್ಕಾರದ ಅಧಿಕಾರಿಯಾಗಿದ್ದ ಶ್ರೀಮತಿ ಮುತ್ತಮ್ಮನವರ ಅಮೃತ ಹಸ್ತದಿಂದ ಬಿಡುಗಡೆಗೊಂಡಿದ್ದು ಅವಿಸ್ಮರಣೀಯ. ಅಂದಿನಿಂದ ಈವರೆಗೆ ನಿರಂತರವಾಗಿ 35 ವರ್ಷಗಳಲ್ಲಿ ಪ್ರಕಟಗೊಂಡು ಇಲ್ಲಿನ ಕನ್ನಡಿಗರ ಜೀವನದ ಹಾಸು ಹೊಕ್ಕಾಗಿರುವ ನಮ್ಮೀ ಸಂಘದ ಮುಖಪತ್ರಿಕೆಯಲ್ಲಿ ಸಂಘದ ಕಾರ್ಯಚಟುವಟಿಕೆಗಳ, ಕಾಲ ಕಾಲದ ವಿವಿಧ ಕಾರ್ಯಕ್ರಮಗಳ ಸಚಿತ್ರ ವಿವರಗಳ ಜೊತೆ ಜೊತೆಯಲ್ಲಿ ದೆಹಲಿ ಕನ್ನಡಿಗರ ಬರಹಗಳು, ವಿಚಾರಗಳು, ಭಾವನೆಗಳು, ಅನುಭವಗಳು, ಅನಿಸಿಕೆಗಳು, ಅಭಿವ್ಯಕ್ತಗೊಂಡಿರುವುದು ಮತ್ತು ಸಂಘದ ಹಾಗು ಇತರ ಸಂಘ ಸಂಸ್ಥೆಗಳ ಕಾರ್ಯಕ್ರಮಗಳ ವಿವರಣೆಗಳು ಸದಸ್ಯರಿಗೆ ತಲುಪಿದ್ದು ವಿಶೇಷವಾದ ಸಂಗತಿ. ಈ ಸಾರ್ಥಕ ಮೂರೂವರೆ ದಶಕಗಳ ಸುದೀರ್ಘ ಕಾಲದ ಪಯಣದಲ್ಲಿ ‘ಅಭಿಮತ’ವೆಂಬ ಪುಟ್ಟ ಕುವರಿಯನ್ನು ಪೋಷಿಸಿ, ಬೆಳೆಸಿ, ಸದೃಢಗೊಳಿಸಿ ಆಕರ್ಷಕವಾಗಿ ಮತ್ತು ಆಸಕ್ತಿದಾಯಕವಾಗಿ ರೂಪಿಸಿ, ಮಧ್ಯವಯಸ್ಕಳಾಗಿ ಹೊರಹೊಮ್ಮಲು ಅವಿರತ ಶ್ರಮಿಸಿ, ಯಶಸ್ಸಿಗೆ ಕಾರಣೀಭೂತರಾದ ಹಿಂದಿನ ಪ್ರಧಾನ ಸಂಪಾದಕರಾದ **ಡಾ. ವೆಂಕಟಾಚಲ ಜಿ. ಹೆಗಡೆ** (ಸತತ 14 ವರ್ಷ: 1990–2003), **ಶ್ರೀಮತಿ ಉಷಾ ಭರತಾದ್ರಿ** (ಒಟ್ಟು 7 ವರ್ಷ: 2004–2009 ಮತ್ತು 2011–13), **ಶ್ರೀ ವಸಂತ ಶೆಟ್ಟಿ ಬೆಳ್ಳಾರೆ** (2 ವರ್ಷ: 2009–10), **ಶ್ರೀ ಬಾಲಕೃಷ್ಣ ನಾಯ್ಕ್ ಡಿ.** (5 ವರ್ಷ : 2013–18), **ಡಾ. ವೈ. ಅವನೀಂದ್ರನಾಥ್ ರಾವ್** (2 ವರ್ಷ: 2019–21), **ಶ್ರೀ ಎನ್.ಪಿ. ಚಂದ್ರಶೇಖರ** (2 ವರ್ಷ: 2021–23) ಮತ್ತು ಅವರೊಂದಿಗೆ ಆಯಾಕಾಲದ ಅಭಿಮತ ಸಂಪಾದಕ ಮಂಡಳಿ ಹಾಗು ಸಲಹಾ ಸಮಿತಿ ಸದಸ್ಯರ ಸೇವೆ ಮತ್ತು ಕೊಡುಗೆ ಅಭಿನಂದನೀಯ. ಹಾಗೆಯೇ, 2021 ರಿಂದ ಎರಡು ವರ್ಷ ಈ ಪತ್ರಿಕೆಯ ಸಂಪಾದಕ ಮಂಡಳಿಯ ಸದಸ್ಯನಾಗಿ ತದನಂತರ 2023 ರಿಂದ ಈವರೆಗೆ 3 ವರ್ಷ ಅಭಿಮತದ ಪ್ರಧಾನ ಸಂಪಾದಕನಾಗಿ ಕಾರ್ಯ ನಿರ್ವಹಿಸಲು ಸೌಭಾಗ್ಯದ ಅವಕಾಶಕ್ಕೆ ಅನುವು ಮಾಡಿಕೊಟ್ಟ 2021–23 ಮತ್ತು 2024–26ರ ಎರಡೂ ಅವಧಿಯ, ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿಗಳು, ಕಾರ್ಯಕಾರಿ ಸಮಿತಿ ಪದಾಧಿಕಾರಿಗಳಿಗೆ, ಸಂಘದ ಆಜೀವ ಸದಸ್ಯರಿಗೆ, ನಲ್ಮೆಯ ಅಭಿಮತ ಓದುಗರಿಗೆ ಹಾಗು ನನ್ನೊಂದಿಗೆ ಪತ್ರಿಕೆ ಸಿದ್ಧಪಡಿಸಿ ಪ್ರಕಟಿಸುವಲ್ಲಿ ಜವಾಬ್ದಾರಿ ನಿಭಾಯಿಸಿದ ಪ್ರಸ್ತುತ ಸಂಪಾದಕ ಮಂಡಳಿಯ ಸದಸ್ಯರಿಗೆ, ಸಂಘದ ವ್ಯವಸ್ಥಾಪಕರು ಮತ್ತು ಸಿಬ್ಬಂದಿಗೆ ಹೃದಯಪೂರ್ವಕ ಕೃತಜ್ಞತೆಗಳು.

ಆತ್ಮೀಯರೇ, ಅಭಿಮತ ಪತ್ರಿಕೆಯ ಆರ್‌ಎನ್‌ಐ ರಿಜಿಸ್ಟ್ರೇಷನ್ ಮರುನೋಂದಣಿಯಲ್ಲಾದ ತಾಂತ್ರಿಕ ತೊಡಕುಗಳು ಮತ್ತು ಸಂಬಂಧಿತ ವಿಳಂಬಗಳು ಹಾಗು ಇನ್ನಿತರ ಅನಿವಾರ್ಯ ಕಾರಣಗಳಿಂದ ಅಭಿಮತದ ಅಕ್ಟೋಬರ್–25 ಮತ್ತು ನಂತರದ ಸಂಚಿಕೆಗಳು ಪ್ರಕಟವಾಗಿರಲಿಲ್ಲ. ಇದಕ್ಕಾಗಿ ವಿಷಾದವನ್ನು ವ್ಯಕ್ತಪಡಿಸುತ್ತಾ, ಅಭಿಮತವು ಅಕ್ಟೋಬರ್–2025ರಲ್ಲಿ 35 ವರ್ಷದ ಮೈಲಿಗಲ್ಲನ್ನು ದಾಟಿದ ಈ ಸಂತಸದ ಸಂದರ್ಭದಲ್ಲಿ 35ನೇ ವಾರ್ಷಿಕ ವಿಶೇಷ ಸಂಚಿಕೆಯನ್ನು ಹೊರ ತಂದಿರುವುದರ ಶ್ರೇಯ ನಿಮ್ಮೆಲ್ಲರದ್ದು ಎಂಬ ಕೃತಜ್ಞತಾಭಾವ ಮತ್ತು ಅಭಿಮತವನ್ನು ಆಕರ್ಷಕವಾಗಿ ಸಿದ್ಧಪಡಿಸಿದ ಸಾರ್ಥಕತೆಯ ತೃಪ್ತಿ ನಮ್ಮದು. ಕಳೆದ ಆರು ತಿಂಗಳಲ್ಲಿ ಸಂಘದ ವತಿಯಿಂದ ಆಯೋಜನೆಗೊಂಡ ವಿನೂತನ, ವೈವಿಧ್ಯಮಯ ಉತ್ಸವಗಳ ಸಂಭ್ರಮ : 70ನೇ ಕರ್ನಾಟಕ ರಾಜ್ಯೋತ್ಸವ, ಗೀತೋತ್ಸವ, ನೃತ್ಯೋತ್ಸವ, ನಾಟಕೋತ್ಸವ, ಕಲ್ಯಾಣ ಕರ್ನಾಟಕ ಉತ್ಸವ, ಆರೋಗ್ಯೋತ್ಸವ, ಆಹಾರೋತ್ಸವ, ಕ್ರೀಡೋತ್ಸವ–ಕ್ರಿಕೆಟ್ ಪಂದ್ಯಾವಳಿ, 2025ರ ‘ವಿಶಿಷ್ಟ ಕನ್ನಡಿಗ’ ಪ್ರಶಸ್ತಿ ಹಾಗು 2024 ಮತ್ತು 2025ನೇ ಸಾಲಿನ ಸಂಘದ ವಿವಿಧ ಪ್ರಶಸ್ತಿಗಳ ಪ್ರದಾನ ಸಮಾರಂಭಗಳು, ರಾಣಿ ಕಿತ್ತೂರು ಚೆನ್ನಮ್ಮ ವಿಜಯೋತ್ಸವ, ರಾಷ್ಟ್ರಕವಿ

**ಅಭಿಮತ ಸಂಪಾದಕ ಮಂಡಳಿ–(2024–26)**


ಕೆ.ಎಸ್. ಮೂರ್ತಿ
ಪ್ರಧಾನ ಸಂಪಾದಕ



ಸರವು ಕೃಷ್ಣ ಭಟ್


ಯಲ್ಲಾಲಿಂಗ ಕೊಪ್ಪದ


ತಿಮ್ಮಪ್ಪ ಜಿ.ಆರ್.


ಎಸ್. ರಮೇಶ


ಸದಸ್ಯರು




**ಸಾಂಸ್ಕೃತಿಕ ಸಮುಚ್ಚಯ**
**ಉದ್ಘಾಟನಾ ಸಮಾರಂಭದ ಸ್ಮರಣ ಸಂಚಿಕೆ**




**'ಅಭಿಮತ–25'**
**ಬೆಳ್ಳಿ ಸಂಪುಟದ ವಿಶೇಷ ಸಂಚಿಕೆ**




**'ಅಭಿಮತ'**
**೩೦ರ ಸಂಚಿಕೆ**

ಕುವೆಂಪು ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ, 77ನೇ ಗಣರಾಜ್ಯೋತ್ಸವ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಮುಂತಾದ ಕಾರ್ಯಕ್ರಮಗಳ ಸವಿಸ್ತಾರ ಸಚಿತ್ರ ವರದಿಗಳ ಸರಮಾಲೆ ಮತ್ತು ಸ್ಥಳೀಯ ಇತರ ಕನ್ನಡ ಪರ ಸಂಘ ಸಂಸ್ಥೆಗಳ ಹಲವು ಕಾರ್ಯ ಚಟುವಟಿಕೆಗಳು ಹಾಗು ಕಾರ್ಯಕ್ರಮಗಳ ವರದಿಗಳನ್ನು ನಿಮಗಾಗಿ ಈ ಸುಂದರವಾಗಿ ಸಜ್ಜುಗೊಳಿಸಿದ ವಿಶೇಷ ಸಂಚಿಕೆಯಲ್ಲಿ ನೀಡಲಾಗಿದೆ.

ಹಾಗೆಯೇ, 36ನೇ ವರ್ಷದ ಈ ಮೊದಲ ಸಮಗ್ರ ಸಂಚಿಕೆಯಲ್ಲಿ ಅಭಿಮತ ಸಂಪಾದಕ ಮಂಡಳಿಯಲ್ಲಿ ಸದಸ್ಯರಾಗಿ ಸುಮಾರು 18 ವರ್ಷಗಳ ಕಾಲ ಎಲೆಮರೆ ಕಾಯಿಯಂತೆ ಶ್ರಮಿಸಿದ, ಎರಡು ಬಾರಿ ಸಂಘದ ಜಂಟಿ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸಿದ ಹಿರಿಯ ದೆಹಲಿ ಕನ್ನಡಿಗ **ಶ್ರೀ ಚೆನ್ನು ಎಸ್. ಮಠದ** ಅವರು 'ಅಭಿಮತ' ಸಾಗಿ ಬಂದ ದಾರಿಯನ್ನು ಹಾಗು ಆದರೊಡನೆಯ ಒಡನಾಟವನ್ನು ತಮ್ಮ ನೆನಪಿನಂಗಳದಿಂದ ಮೆಲುಕು ಹಾಕುತ್ತಾ ಅದರ ಅಭಿವೃದ್ಧಿಯಲ್ಲಿ ಶ್ರಮಿಸಿದ ಆಯಾ ಸಂಪಾದಕ ಮಂಡಳಿ ಮತ್ತು ಸಲಹಾ ಮಂಡಳಿ ಸದಸ್ಯರುಗಳನ್ನು, ವಿವಿಧ ಕಾಲಘಟ್ಟದ ಪ್ರಧಾನ ಸಂಪಾದಕರನ್ನು ಸ್ಮರಿಸುವ ಕಿರು ಲೇಖನ ನೀಡಿದ್ದಾರೆ. ಜೊತೆಗೆ 'ಆರೋಗ್ಯವೇ ಭಾಗ್ಯ' ಮಾಲಿಕೆಯಲ್ಲಿ ನವದೆಹಲಿ AIIAನ ಸಹ ಪ್ರಾಧ್ಯಾಪಕರಾದ **ಡಾ. ರಮೇಶ್ ಕುಮಾರ್ ಕೆ.ಎಲ್.** ಅವರ 'ಬೇಸಿಗೆಯ ಆರೋಗ್ಯ ಸಂರಕ್ಷಣೆಗಾಗಿ ಆಯುರ್ವೇದ ಗ್ರೀಷ್ಮ ಋತು ಚರ್ಯೆ' ಲೇಖನ, ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆಯ ಸುಪ್ರಸಿದ್ಧ ವೈದ್ಯರಾದ **ಡಾ. ಎಂ. ಅಣ್ಣಯ್ಯ ಕುಲಾಲ್ ಉಳ್ತೂರು** ಅವರ ಬೊಜ್ಜು–ಭೌತಿಕ ಫಿಟ್‌ನೆಸ್ ಕುರಿತಾದ ಆರೋಗ್ಯ ಲೇಖನ / ಸಲಹೆ ಹಾಗು **ಶ್ರೀ ಸರವು ಕೃಷ್ಣ ಭಟ್**ರವರ ತಿಂಗಳ ವ್ಯಕ್ತಿ ಅಂಕಣದಲ್ಲಿ ಕ್ರಿಕೆಟ್ ಆಟಗಾರ ಹಾಗು ತರಬೇತಿದಾರರಾದ ದೆಹಲಿ ಕನ್ನಡಿಗ **ಶ್ರೀ ಶಿವರಾಮ್ ರೈ** ಕುರಿತು ಬರಹಗಳು, ನಾಟಕೋತ್ಸವ ಕುರಿತು ನಿರ್ದೇಶಕರ ಅನಿಸಿಕೆ, ಓದುಗರ ಅಭಿಪ್ರಾಯ, **ಶ್ರೀಮತಿ ವೈಜಯಂತಿ ಗಿರೀಶ್**ರವರ ದೇವಭೂಮಿ ಉತ್ತರಖಂಡದ ಪಂಚಪ್ರಯಾಗಗಳ ಪ್ರವಾಸ ಕಥನ, ಸಂಘದಿಂದ ನೀಡಲಾದ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ಮತ್ತು ವಿವಿಧ ಪ್ರಶಸ್ತಿಗಳ ಪುರಸ್ಕೃತರ ಪರಿಚಯ ವಿವರಗಳು ಇವೆಲ್ಲವನ್ನು ತುಂಬಿಕೊಂಡು ಮೈತಳೆದಿದೆ ಈ ಅಭಿಮತ–35ರ ವಾರ್ಷಿಕ ವಿಶೇಷಾಂಕ.

ಬಂಧುಗಳೇ, ಇತ್ತೀಚೆಗಷ್ಟೇ ಸಂಸ್ಕೃತದಲ್ಲಿ ಪಿ.ಎಚ್‌ಡಿ. ಪದವಿ ಪಡೆದ ದೆಹಲಿ ಕನ್ನಡ ಶಾಲೆಯ ಸಂಸ್ಕೃತ ಶಿಕ್ಷಕರಾದ **ಡಾ. ಗಣೇಶ ಹೆಗಡೆ** ಅವರಿಗೆ, 2025ರ 'ಧನ್ವಂತರಿ' ಪ್ರಶಸ್ತಿಗೆ ಭಾಜನರಾದ ಆಯುರ್ವೇದ ತಜ್ಞ ದೆಹಲಿ ಕನ್ನಡಿಗ **ಡಾ. ಭೀಮ ಭಟ್ಟ** ಅವರಿಗೆ, 2019ರ ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ಪುರಸ್ಕೃತ ಕನ್ನಡ ಚಲನಚಿತ್ರ ನಿರ್ದೇಶಕರಾದ **ಶ್ರೀ ಎನ್.ಆರ್. ನಂಜುಂಡೇಗೌಡ**ರಿಗೆ, ಹುಲಸೂರ ತಾಲ್ಲೂಕು ಆಡಳಿತ ವತಿಯಿಂದ ಕರ್ನಾಟಕ ರಾಜ್ಯೋತ್ಸವ ಗೌರವ ಸನ್ಮಾನಿತರಾದ ಹಿರಿಯ ದೆಹಲಿ ಕನ್ನಡಿಗ **ಶ್ರೀ ವಿ.ವಿ. ಬಿರಾದಾರ** ಅವರಿಗೆ, 2025ರ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ಪಡೆದ ಎಲ್ಲಾ ಐದು ದೆಹಲಿ ಕನ್ನಡಿಗರಿಗೆ, 2024 ಮತ್ತು 2025ನೇ ಸಾಲಿನ ಸಂಘದ ವಿವಿಧ ನಾಲ್ಕು ಪ್ರಶಸ್ತಿಗಳಿಗೆ ಭಾಜನರಾದ ನಾಡಿನ ವಿಭಿನ್ನ ಕ್ಷೇತ್ರಗಳ ಎಲ್ಲಾ ಎಂಟು ಹಿರಿಯ ಗಣ್ಯ ಸಾಧಕರಿಗೆ, 2026ರ ಪದ್ಮ ಪ್ರಶಸ್ತಿಗಳನ್ನು ಪಡೆದ ಎಂಟು ಹೆಮ್ಮೆಯ ಕನ್ನಡಿಗರಿಗೆ, ಕರ್ನಾಟಕ ಸರ್ಕಾರದ 2025ರ ರಾಜ್ಯೋತ್ಸವ ಪ್ರಶಸ್ತಿ ಪಡೆದ ನಾಡಿನ 70 ವಿವಿಧ ಕ್ಷೇತ್ರಗಳ ಸಾಧಕರಿಗೆ ತುಂಬು ಹೃದಯದ ಅಭಿನಂದನೆಗಳು.

ಇನ್ನು, ಸಂಘದಲ್ಲಿ ಆಯೋಜನೆಗೊಂಡ ವಿವಿಧ ಉತ್ಸವಗಳು ಮತ್ತು ಕ್ರೀಡೋತ್ಸವ ಅಂಗವಾಗಿ ದಾಖಲೆಯ 23 ತಂಡಗಳು ಭಾಗಿಯಾದ ಐತಿಹಾಸಿಕ 2026ರ ಕ್ರಿಕೆಟ್ ಪಂದ್ಯಾವಳಿ ಅಭೂತಪೂರ್ವ ಯಶಸ್ಸು ಕಂಡು ದೆಹಲಿ ಕನ್ನಡಿಗರ ಮೆಚ್ಚುಗೆಯನ್ನು ಪಡೆದಿವೆ. **ಶ್ರೀ ವಿನೋದ್ ಕೈಕಾಡೆ** ನಾಯಕತ್ವದಲ್ಲಿ ಕರ್ನಾಟಕ ಕಮಾಂಡೋಸ್ ತಂಡ ಈ ಬಾರಿಯ ಕ್ರಿಕೆಟ್ ಚಾಂಪಿಯನ್ಸ್ ಆಗಿದೆ. ನಾಟಕೋತ್ಸವದಲ್ಲಿ ಸ್ಪರ್ಧಿಸಿದ ಏಳೂ ನಾಟಕಗಳು ಆಯಾ ನಿರ್ದೇಶಕರ ಸಮರ್ಥ ಸಾರಥ್ಯದಲ್ಲಿ ವಿಭಿನ್ನ ಕಥಾವಸ್ತು ಮತ್ತು ಅಮೋಘ ಪ್ರದರ್ಶನದೊಂದಿಗೆ ಜನಮನ್ನಣೆ ಗಳಿಸಿವೆ. ಅಂತರರಾಷ್ಟ್ರೀಯ ಕ್ರಿಕೆಟ್ ಟೂರ್ನಿಗಳಲ್ಲಿ **ಹರ್‌ಮನ್ ಪ್ರೀತ್‌ಕೌರ್** ನೇತೃತ್ವದ ಭಾರತೀಯ ಮಹಿಳಾ ಕ್ರಿಕೆಟ್ ತಂಡ '2025ರ ಐಸಿಸಿ ಮಹಿಳಾ ಕ್ರಿಕೆಟ್ ವಿಶ್ವಕಪ್' ಗಳಿಸಿದ್ದು, **ಸೂರ್ಯಕುಮಾರ್ ಯಾದವ್** ನಾಯಕತ್ವದಲ್ಲಿ ಪುರುಷರ ಕ್ರಿಕೆಟ್ ಪಡೆ '2026ರ ಐಸಿಸಿ ಟಿ20 ವರ್ಲ್ಡ್‌ಕಪ್' ಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಭರ್ಜರಿ ಜಯಗಳಿಸಿ ಚಾಂಪಿಯನ್ಸ್ ಆಗಿದ್ದು, ಕ್ಯಾಪ್ಟನ್ ಆಯುಷ್ ಮಹತ್ರೆ ನೇತೃತ್ವದ ಯುವ ತಂಡ 2026ರ ಐಸಿಸಿ ಅಂಡರ್ 19 ಪುರುಷರ ಕ್ರಿಕೆಟ್ ಟೂರ್ನಮೆಂಟ್‌ನಲ್ಲಿ ಜಯಗಳಿಸಿ ವಿಶ್ವಕಪ್ ಅನ್ನು ಪಡೆದಿದ್ದು ಹಾಗು **ದೀಪಿಕಾ ಟಿ.ಸಿ.** ನಾಯಕತ್ವದಲ್ಲಿ ಬ್ಲೈಂಡ್ ವಿಮೆನ್ಸ್ ಟಿ20 ವರ್ಲ್ಡ್ ಕಪ್ 2025 ಅನ್ನು ನಮ್ಮ ಭಾರತೀಯ ಮಹಿಳೆಯರು ಗಳಿಸಿದ್ದು, ಭಾರತೀಯ ಕ್ರಿಕೆಟ್ ಪ್ರಿಯರಿಗೆ ಅತ್ಯಂತ ಹೆಮ್ಮೆ ಮತ್ತು ಸಂತಸ ತಂದಿದೆ. ಈ ನಾಲ್ಕೂ ವಿಜೇತ ತಂಡದ ಕ್ಯಾಪ್ಟನ್ ಮತ್ತು ಎಲ್ಲಾ ಕ್ರಿಕೆಟ್ ಆಟಗಾರರಿಗೆ, ಆಟಗಾರ್ತಿಯರಿಗೆ ದೆಹಲಿ ಕನ್ನಡಿಗರ ಪರವಾಗಿ ಶುಭಾಶಯಗಳು.

**2025 ಮತ್ತು 2026ರ ಟಾಟಾ ಐಪಿಎಲ್ ಚಾಂಪಿಯನ್ಸ್ ರಾಯಲ್ ಚಾಲೆಂಜರ್ಸ್ ಬೆಂಗಳೂರು** (ಆರ್‌ಸಿಬಿ) ತಂಡದ ನಾಯಕ **ರಜತ್ ಪಾಟಿದಾರ್, ಕಿಂಗ್ ಕೊಹ್ಲಿ,** ಎಲ್ಲಾ ಆಟಗಾರರು ಮತ್ತು ಸಿಬ್ಬಂದಿಗೆ ಅಭಿನಂದನೆಗಳು! ಈ ಸಲನೂ ಕಪ್ ನಮ್ಮದೇ.

ಮಾನ್ಯರೇ, ಈ ಹಿಂದೆ **ಶ್ರೀಮತಿ ಉಷಾ ಭರತಾದ್ರಿ**ಯವರ ಪ್ರಧಾನ ಸಂಪಾದಕತ್ವದಲ್ಲಿ ಏಪ್ರಿಲ್ 16, 2005ರಂದು ಸಂಘದ ಸಾಂಸ್ಕೃತಿಕ ಸಮುಚ್ಚಯದ ಉದ್ಘಾಟನಾ ಸಮಾರಂಭದ ಸ್ಮರಣ ಸಂಚಿಕೆಯಾಗಿ 320 ಪುಟಗಳ ಅಭಿಮತ ವಿಶೇಷ ಸಂಚಿಕೆ ಬಿಡುಗಡೆಯಾಗಿತ್ತು. ಹಾಗೆಯೇ, ಅಭಿಮತ 25 ವರ್ಷಗಳ ನೆನಪುಗಳ ಮೆಲುಕು–ಬೆಳ್ಳಿ ಸಂಪುಟದ ವಿಶೇಷ ಸಂಚಿಕೆ ಸೆಪ್ಟೆಂಬರ್ 2015ರಲ್ಲಿ **ಶ್ರೀ ಬಾಲಕೃಷ್ಣ ನಾಯ್ಕ್ ಡಿ.** ಅವರ ಸಂಪಾದಕತ್ವದಲ್ಲಿ 88 ಪುಟಗಳಲ್ಲಿ ಹೊರ ಬಂದಿರುವುದು ಹಾಗು 'ಸುವರ್ಣ ಕರ್ನಾಟಕ' ಸಂಭ್ರಮ ಸ್ಮರಣೆಯ ಅಂಗವಾಗಿ ನವೆಂಬರ್ 2006 ರಿಂದ ಅಕ್ಟೋಬರ್ 2007ರ ನಡುವೆ ವಿಶೇಷ ಸಂಚಿಕೆಗಳು ಪ್ರಕಟಗೊಂಡಿರುವುದು ಅಭಿಮತದ ಮಹತ್ತರ ಘಟ್ಟಗಳು. ಡಿಸೆಂಬರ್ 2024ರಲ್ಲಿ 32 ಪುಟಗಳ ರಾಜ್ಯೋತ್ಸವ ವಿಶೇಷಾಂಕ ಮತ್ತು ಸೆಪ್ಟೆಂಬರ್ 2025ರಲ್ಲಿ 48 ಪುಟಗಳ ಸಾಹಿತ್ಯೋತ್ಸವ ವಿಶೇಷಾಂಕ ಹೊರ ತಂದಿರುವುದು ನಮ್ಮ ಪ್ರಸ್ತುತ ಸಂಪಾದಕ ಮಂಡಳಿಯ ಪ್ರಮುಖ ಹೆಜ್ಜೆ ಗುರುತುಗಳು. ಇದಲ್ಲದೇ ಅಭಿಮತ ಓದುಗರ ಪ್ರೋತ್ಸಾಹ ಹಾಗು ಕಾರ್ಯಕಾರಿ ಸಮಿತಿಯವರ ಬೆಂಬಲದಿಂದ 2023ರಲ್ಲಿ ವಿಜೃಂಭಿಸಿದ ಸಂಘದ ಅಮೃತ ಮಹೋತ್ಸವದ ಸವಿನೆನಪಿನ ಸ್ಮರಣ ಸಂಚಿಕೆ ಬಿಡುಗಡೆಯಾಗಿರುವುದು ಅದರ ಪ್ರಧಾನ ಸಂಪಾದಕನಾಗಿ ಸಂಘದೊಂದಿಗಿನ ದೆಹಲಿ ಜೀವನದ ಅತ್ಯಂತ ಸಂತಸದ ಮೈಲಿಗಲ್ಲಾಗಿದೆ.

ಪ್ರಿಯ ಓದುಗರೇ, ಕಳೆದ ಆರು ತಿಂಗಳಲ್ಲಿ ನಾವೆಲ್ಲರೂ ಸಂಭ್ರಮಿಸಿದ ನವರಾತ್ರಿ, ದಸರಾತ,

## ಅಧ್ಯಕ್ಷರ ನುಡಿ

ಆತ್ಮೀಯ ಕನ್ನಡ ಬಂಧುಗಳೇ,

ದೆಹಲಿ ಕರ್ನಾಟಕ ಸಂಘದ ಮುಖಪತ್ರಿಕೆ "ಅಭಿಮತ" 35 ವಸಂತಗಳನ್ನು ಯಶಸ್ವಿಯಾಗಿ ಕಳೆದ ಸಂದರ್ಭದಲ್ಲಿ ಈ ವಿಶೇಷ ಸಂಚಿಕೆ ನಿಮ್ಮ ಕೈಸೇರುತ್ತಿದೆ. ಮೂವತ್ತೈದು ವರುಷಗಳ ಹಿಂದೆ ಒಂದು ಕನಸಾಗಿ ಆರಂಭವಾದ 'ಅಭಿಮತ' ಇಂದು ಕನ್ನಡದ ಚಿಂತನಶೀಲ ಓದುಗರ ಮನಸ್ಸಿನಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿರುವುದು ನಮ್ಮೆಲ್ಲರ ಹೆಮ್ಮೆಯ ಸಂಗತಿ. ಇದು ಕೇವಲ ಪ್ರಕಟಣೆಯ ಪಯಣವಲ್ಲ; ಅದು ದೇಶದ ರಾಜಧಾನಿಯಲ್ಲಿ ಭಾಷಾ ಅಸ್ಮಿತೆಯನ್ನು ಜೀವಂತವಾಗಿಟ್ಟಿರುವ ಕನ್ನಡಿಗರ ವಿಚಾರ, ಸಂವಾದ, ಸಂಸ್ಕೃತಿ ಮತ್ತು ಸಾಮಾಜಿಕ ಬದ್ಧತೆಯ ಪಯಣವಾಗಿದೆ.

ಕಳೆದ ಅಕ್ಟೋಬರ್ 2025ರಲ್ಲಿ 35 ರ ಹೊಸಿಲನ್ನು ದಾಟಿ ಮೂವತ್ತಾರಿಗೆ ಕಾಲಿಟ್ಟಿರುವ "ಅಭಿಮತ" ಆಗಲೇ ಬರಬೇಕಿತ್ತು. ಆದರೆ ತಡವಾಗಿ ಪ್ರಕಟಗೊಳ್ಳುತ್ತಿರುವುದಕ್ಕೆ ತೀವ್ರ ವಿಷಾದವಿದೆ. ಕಾರಣವೆಂದರೆ ಅಭಿಮತ ಪತ್ರಿಕೆಯ ಆರ್‌ಎನ್‌ಐ ರಿಜಿಸ್ಟ್ರೇಷನ್ ಮರುನೋಂದಣಿಯಲ್ಲಾದ ತಾಂತ್ರಿಕ ತೊಡಕುಗಳು ಹಾಗೂ ಇನ್ನಿತರ ಅನಿವಾರ್ಯ ಕಾರಣಗಳಿಂದ ಈ ವಿಶೇಷ ಸಂಚಿಕೆ ಸರಿಯಾದ ಸಮಯದಲ್ಲಿ ಪ್ರಕಟಗೊಳ್ಳಲು ಸಾಧ್ಯವಾಗಲಿಲ್ಲ. ಅಕ್ಟೋಬರ್‌ನಿಂದ ಮಾರ್ಚ್‌ವರೆಗಿನ ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಎಲ್ಲಾ ಸಾಂಸ್ಕೃತಿಕ ಚಟುವಟಿಕೆಗಳನ್ನು ಈ ವಿಶೇಷ ಸಂಚಿಕೆಯಲ್ಲಿ ದಾಖಲಿಸಲಾಗಿದೆ. ಇದೇ ಎಪ್ರಿಲ್ 12 ರಂದು ದೆಹಲಿ ಕರ್ನಾಟಕ ಸಂಘದ ದ್ವೈವಾರ್ಷಿಕ ಚುನಾವಣೆ ನಡೆದಿದ್ದು ಇದೀಗ ನೂತನ ತಂಡ ಮುಂದಿನ ಎರಡು ವರ್ಷದ ಆಡಳಿತಾವಧಿಯ ಕಾರ್ಯವನ್ನು ವಹಿಸಿಕೊಂಡಿದೆ. ಈ ಸಂದರ್ಭದಲ್ಲಿ 35ರ ವಿಶೇಷ ಸಂಚಿಕೆ ಪ್ರಕಟಗೊಳ್ಳುತ್ತಿರುವುದು ನಮಗೆಲ್ಲ ಸಂತಸದ ಸಂಗತಿಯಾಗಿದೆ.

ಕಳೆದ ಮೂರು ದಶಕಗಳಿಂದ ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರ ದನಿಯನ್ನು ಬಲಪಡಿಸುವುದರಲ್ಲಿ, ಕರ್ನಾಟಕದ ಕಾಲಾಳುಗಳಂತೆ ದೆಹಲಿಯಲ್ಲಿ ಕನ್ನಡಿಗರ ಸಾಮಾಜಿಕ, ಸಾಂಸ್ಕೃತಿಕ ಅಸ್ಮಿತೆಯನ್ನು ಎತ್ತಿ ಹಿಡಿಯುವಲ್ಲಿ ದೆಹಲಿ ಕರ್ನಾಟಕ ಸಂಘದ ಪಾತ್ರ ಬಹುದೊಡ್ಡದು. ಡಾ. ಸರೋಜಿನಿ ಮಹಿಷಿಯವರ ಕನಸಿನ ಕೂಸು ಈ ದೆಹಲಿ ಕರ್ನಾಟಕ ಸಂಘ. ಇದಕ್ಕಾಗಿ ಶ್ರಮಿಸಿದ ಮಹನೀಯರು ಅನೇಕರು. ಉದ್ಯೋಗ ನಿಮಿತ್ತ ಉದರ ನಿಮಿತ್ತಂ ತಾಯ್ನಾಡನ್ನು ತೊರೆದು ದಿಲ್ಲಿಗೆ ಬಂದ ಕನ್ನಡಿಗರನ್ನು ಒಂದೆಡೆ ಸೇರಿಸುವ ತಾಣ. 'ಎಲ್ಲೆ ಇರು ಕನ್ನಡವಾಗಿರು' ಎಂಬಂತೆ ನಾವೆಲ್ಲ ಒಂದು, ನಾಡಿನಿಂದ ದೂರವಿದ್ದೇವೆಯೇ ಹೊರತು ಕನ್ನಡ ನುಡಿಯಿಂದ ದೂರವಿಲ್ಲ, ಹೊರದೇಶದಲ್ಲಿ ನಾವು ಅನ್ಯರು ಎಂಬ ಭಾವನೆ ಬರದಂತೆ ನಮ್ಮೆಲ್ಲರನ್ನು ಪೊರೆಯುವ ತಾಯಿಯಂತೆ ಈ ದೆಹಲಿ ಕರ್ನಾಟಕ ಸಂಘ ಸಾಂಸ್ಕೃತಿಕ ಕೇಂದ್ರವಾಗಿ ನಿರಂತರವಾಗಿ ಕೆಲಸ ಮಾಡುತ್ತಿದೆ. ಜೊತೆಗೆ ದೆಹಲಿ ಕನ್ನಡಿಗರ ಮುಖವಾಣಿಯಾಗಿ ಅಭಿಮತ ಪತ್ರಿಕೆ ನಾಡಿನ ಮೂಲೆ ಮೂಲೆಗೂ ಕನ್ನಡದ ಕಂಪನ್ನು ಪಸರಿಸುತ್ತಿದೆ.

ಇದೀಗ ಈ 35ರ ವಿಶೇಷ ಸಂಚಿಕೆ ನಿಮ್ಮ ಕೈಸೇರುತ್ತಿರುವ ಈ ಪಯಣದಲ್ಲಿ ನಮ್ಮೊಂದಿಗೆ ನಿಂತ ಹಲವಾರು ಲೇಖಕರು, ನಾಡಿನ ಚಿಂತಕರು, ಇಷ್ಟು ಕಾಲ ಪತ್ರಿಕೆಯನ್ನು ನಡೆಸಿಕೊಂಡು ಬಂದ ಎಲ್ಲಾ ಸಂಪಾದಕ ಮಂಡಳಿ, ಓದುಗರು ಹಾಗೂ ದೆಹಲಿ ಕರ್ನಾಟಕ ಸಂಘದ ಎಲ್ಲಾ ಪದಾಧಿಕಾರಿಗಳು ಮತ್ತು ಕಚೇರಿ ಸಿಬ್ಬಂದಿಗೆ ಹೃತ್ಪೂರ್ವಕ ಕೃತಜ್ಞತೆಗಳು. ಎಲ್ಲರ ಸಹಕಾರ ಮತ್ತು ವಿಶ್ವಾಸವೇ 'ಅಭಿಮತ'ದ ನಿಜವಾದ ಶಕ್ತಿ.❑

***ರೇಣುಕುಮಾರ್ ಆರ್.***
ಅಧ್ಯಕ್ಷರು




**ಪುರುಷರ ಟಿ20 ಕ್ರಿಕೆಟ್ ವರ್ಲ್ಡ್ ಕಪ್ (2026)**



**ಮಹಿಳಾ ಕ್ರಿಕೆಟ್ ವರ್ಲ್ಡ್ ಕಪ್ (2025)**




**ಅಂಡರ್-19 ಪುರುಷರ ಕ್ರಿಕೆಟ್ ವರ್ಲ್ಡ್ ಕಪ್ (2026)**



**ಬ್ಲೈಂಡ್ ವಿಮೆನ್ಸ್ ಟಿ20 ಕ್ರಿಕೆಟ್ ವರ್ಲ್ಡ್ ಕಪ್ (2025)**

ಕರ್ನಾಟಕ ರಾಜ್ಯೋತ್ಸವ, ದೀಪಾವಳಿ, ನವವರ್ಷ 2026, ಸಂಕ್ರಾಂತಿ, ಗಣರಾಜ್ಯೋತ್ಸವ, ಯುಗಾದಿ ಹಾಗು ಮಹಿಳಾ ದಿನಾಚರಣೆಗಳನ್ನು ಮತ್ತು ವಿವಿಧ ಉತ್ಸವ ಕಾರ್ಯಕ್ರಮಗಳನ್ನು ಮೆಲುಕು ಹಾಕುತ್ತಾ ಎಲ್ಲರಿಗೂ ಶುಭಾಶಯಗಳನ್ನು ಮತ್ತು ಅಭಿನಂದನೆಗಳನ್ನು ತಿಳಿಸುತ್ತಿದ್ದೇವೆ. 2021 ರಿಂದ 5 ವರ್ಷ ಅಭಿಮತದ ಜೊತೆ ಸಂಪಾದಕ ಮಂಡಳಿಯ ಒಡನಾಟದ ಸವಿಯಾದ ಕ್ಷಣಗಳನ್ನು ಆಸ್ವಾದಿಸುತ್ತಾ ಸಹಕರಿಸಿದ ಪ್ರಸ್ತುತ ಅಭಿಮತ ಸಂಪಾದಕ ಮಂಡಳಿ ಸದಸ್ಯರಾದ ಶ್ರೀ ಸರವು ಕೃಷ್ಣ ಭಟ್, ಶ್ರೀ ಯಲ್ಲಾಲಿಂಗ ಕೊಪ್ಪದ, ಶ್ರೀ ತಿಮ್ಮಪ್ಪ ಜಿ.ಆರ್. ಹಾಗೂ ರಮೇಶ ಎಸ್. ಅವರಿಗೆ ಮತ್ತು ಈ ನಮ್ಮ ಅಭಿಮತವನ್ನು ಒಪ್ಪ ಓರಣವಾಗಿ ಸಿದ್ದಪಡಿಸಿ ಹೊರತರಲು ನೆರವಾದ ಸಂಘದ ವ್ಯವಸ್ಥಾಪಕರಾದ ಶ್ರೀ ಬಾಲಚಂದ್ರ ಬಿ.ಎಸ್., ಶ್ರೀ ಶೇಖರ್ ಕುಂದರ್, ಶ್ರೀ ದರ್ಶನ್ ದೇವಯ್ಯ ಎಂ.ಇ. ಮತ್ತು ಸಿಬ್ಬಂದಿಗೆ, ಅಂದವಾಗಿ ಮುದ್ರಿಸಿ ಕೊಡುತ್ತಿರುವ ಸೌಜನ್ಯ ಪ್ರಿಂಟಿಂಗ್ ಪ್ರೆಸ್‌ನವರಿಗೆ ಹಾಗು ವಿಶೇಷವಾಗಿ ಸಂಘದ ಎಲ್ಲಾ ಸದಸ್ಯರಿಗೆ ಮತ್ತು ಅಭಿಮಾನದ ಓದುಗರಿಗೆ ಅನಂತಾನಂತ ವಂದನೆಗಳನ್ನು ತಿಳಿಸುತ್ತಾ, ನಮ್ಮ ಪ್ರಸ್ತುತ ಸಂಪಾದಕ ಮಂಡಳಿಯ ಈ ಕೊನೆಯದಾದ, 112 ಪುಟಗಳ ವಿಸ್ತೃತ 35 ನೇ ವಾರ್ಷಿಕ ವಿಶೇಷ ಸಂಚಿಕೆಯನ್ನು ಅತ್ಯಂತ ವಿನಮ್ರತಾಪೂರ್ವಕವಾಗಿ ನಿಮ್ಮ ಕೈಯಲ್ಲಿಡುತ್ತಿದ್ದೇವೆ.

ಇತ್ತೀಚೆಗಷ್ಟೇ ಸಂಘದಲ್ಲಿ ನಡೆದ ಚುನಾವಣೆಯಲ್ಲಿ 2026-28ರ ಅವಧಿಗೆ ನೂತನ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರು ಆಯ್ಕೆಯಾಗಿದ್ದು, ಈಗಾಗಲೇ ಅಧಿಕಾರ ವಹಿಸಿಕೊಂಡು ಕಾರ್ಯ ಪ್ರವೃತ್ತರಾಗಿರುವ ಸಂಘದ ನೂತನ ಅಧ್ಯಕ್ಷರಾದ **'ಶ್ರೀ ರೇಣುಕುಮಾರ್ ಆರ್.**, ಪ್ರಧಾನ ಕಾರ್ಯದರ್ಶಿ **ಶ್ರೀ ರಾಧಾಕೃಷ್ಣ** ಮತ್ತು ಅವರ ನೇತೃತ್ವದ ಹೊಸ ಕಾರ್ಯಕಾರಿ ಸಮಿತಿಗೆ ಹಾರ್ದಿಕ ಅಭಿನಂದನೆಗಳು. ಹಾಗೇನೇ, ಕಳೆದ 24 ವರ್ಷಗಳಿಂದ ಜಂಟಿ ಕಾರ್ಯದರ್ಶಿಯಾಗಿ, ಪ್ರಧಾನ ಕಾರ್ಯದರ್ಶಿಯಾಗಿ ಹಾಗು ಎರಡು ಅವಧಿಗೆ ಅಧ್ಯಕ್ಷರಾಗಿ ಸಂಘದ ಶ್ರೇಯೋಭಿವೃದ್ಧಿಗೆ ಅವಿರತ ಶ್ರಮಿಸುತ್ತಾ ಅತ್ಯುತ್ತಮ ಮತ್ತು ಐತಿಹಾಸಿಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿ ನಮ್ಮ ಸಂಘದ ಹಿರಿಮೆ ಗರಿಮೆಗಳನ್ನು ಹೆಚ್ಚಿಸಿರುವ **ಶ್ರೀ ಸಿ.ಎಂ. ನಾಗರಾಜ** ಮತ್ತು ಅವರೊಂದಿಗೆ ಕಾರ್ಯ ನಿರ್ವಹಿಸಿದ ಆಯಾ ಕಾರ್ಯಕಾರಿ ಸಮಿತಿಯ ಸಮಸ್ತ ಪದಾಧಿಕಾರಿಗಳು ಮತ್ತು ಸದಸ್ಯರಿಗೆ ಮನಃಪೂರ್ವಕ ಕೃತಜ್ಞತೆಗಳು.

'ಅಭಿಮತ'ದ ಮುಂಬರುವ ನೂತನ ಪ್ರಧಾನ ಸಂಪಾದಕರಾದ ಶ್ರೀಮತಿ ರೇಣುಕಾ ನಿಡಗುಂದಿ ಅವರಿಗೆ ಮತ್ತು ಅವರೊಂದಿಗಿನ ಹೊಸ ಸಂಪಾದಕ ಮಂಡಳಿಯ ಸದಸ್ಯರಿಗೆ ಈ 'ಅಭಿಮತ'ವನ್ನು ಮತ್ತಷ್ಟು ಅಭಿಮಾನ, ಅಕ್ಕರೆಯಿಂದ ಪೋಷಿಸಿ, ಬೆಳೆಸಿ ಹೊಸತನದಿಂದ ಮುನ್ನಡೆಸಲು ತುಂಬು ಹೃದಯದ ಶುಭಾಶಯಗಳನ್ನು ತಿಳಿಸುತ್ತಾ, 'ಅಭಿಮತ' ಆದಷ್ಟು ಬೇಗನೇ 50 ವರ್ಷಗಳ ಪೂರ್ಣತೆಯನ್ನು ಸಾಧಿಸಲೆಂದು ನಮ್ಮ ಶುಭ ಆಶಯಗಳೊಂದಿಗೆ ಈ 35ನೇ ವಾರ್ಷಿಕ ವಿಶೇಷ ಸಂಚಿಕೆಯನ್ನು ನಿಮಗೊಪ್ಪಿಸುತ್ತಿದ್ದೇವೆ. **ಎಲ್ಲರಿಗೂ ಬಸವಣ್ಣ ಮತ್ತು ಅಕ್ಕಹಾದೇವಿ ಜಯಂತಿ, 2026ರ ವಿಶ್ವಪರಿಸರ ದಿನಾಚರಣೆ ಹಾಗು ಮುಂಬರುವ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಹಾರ್ದಿಕ ಶುಭಾಶಯಗಳು!...** ಧನ್ಯವಾದ, ಶುಭ ವಂದನೆ.❑

***ಕೆ. ಶ್ರೀನಿವಾಸ ಮೂರ್ತಿ***
ಪ್ರದಾನ ಸಂಪಾದಕ ಮತ್ತು ಅಭಿಮತ
ಸಂಪಾದಕ ಮಂಡಳಿ

# ಮುನ್ನೋಟ

ಆತ್ಮೀಯರೇ, ಕರ್ನಾಟಕ ಸಂಘದ ಮುಖವಾಣಿಯಾಗಿ 35 ವಸಂತ ಕಳೆದ ದೆಹಲಿ ಕನ್ನಡಿಗರ ನೆಚ್ಚಿನ ಅಭಿಮತ.

ಎಂಟು ಪುಟಗಳೊಂದಿಗೆ 35 ವರ್ಷಗಳ ಹಿಂದೆ ಅಂದರೆ 1990ರಲ್ಲಿ ಆರಂಭವಾದ ಅಭಿಮತಕ್ಕೆ ಈಗ 36ರ ಸಂಭ್ರಮ. ಕಪ್ಪು ಬಿಳುಪಿನ ಮುದ್ರಣ, ಕ್ರಿಯಾಶೀಲ ಬರವಣಿಗೆ ಕಾಲಕಳೆದಂತೆ ವರ್ಣರಂಜಿತವಾಗಿ ದೆಹಲಿ ಕನ್ನಡಿಗರ ಕೈ ಸೇರಿತು. ದೆಹಲಿ ಕರ್ನಾಟಕದ ಎಲ್ಲಾ ಐತಿಹಾಸಿಕ ಚಟುವಟಿಕೆಗಳು ಅಭಿಮತದಲ್ಲಿ ಲಭ್ಯ. ಮುಂದಿನ ದಿನಗಳಲ್ಲಿ ಈ ಮುಖವಾಣಿಯನ್ನು ಇನ್ನೂ ಕ್ರಿಯಾಶೀಲ, ವೃತ್ತಿಪರ ಬರವಣಿಗೆ ಮತ್ತು ಸಾಹಿತ್ಯಿಕವಾಗಿ ಶ್ರೀಮಂತಗೊಳಿಸುವತ್ತ ಹೆಜ್ಜೆ ಹಾಕೋಣ.

ದೆಹಲಿ ಕರ್ನಾಟಕ ಸಂಘ ಸ್ಥಳೀಯರಿಗಾಗಿ ನಾಟಕೋತ್ಸವ ಸ್ಪರ್ಧೆಯನ್ನು ಏರ್ಪಡಿಸಿ ಅದರಲ್ಲಿ ಸುಮಾರು ಏಳು ನಾಟಕಗಳು ಸಿದ್ಧಗೊಂಡು ಪ್ರದರ್ಶನಗೊಂಡವು. ಸುಮಾರು ನೂರಕ್ಕು ಹೆಚ್ಚು ಕಲಾವಿದರು ಭಾಗವಹಿಸಿದ ಏಳು ನಾಟಕಗಳು ಎಂತಹ ವೃತ್ತಿಪರರಿಗೂ ಮೀರಿಸುವಂತ ಅಭಿನಯ, ನಿರ್ದೇಶನ, ಬೆಳಕು, ಹಿನ್ನೆಲೆ ಸಂಗೀತ ಮತ್ತು ಸಂಯೋಜನೆ. ಸ್ಪರ್ಧೆಯಲ್ಲಿ ವಿವಿಧ ಪ್ರಶಸ್ತಿಗಳನ್ನು ಹೊರಗಿಂದ ಬಂದಂತಹ ತೀರ್ಪುಗಾರರ ನಿರ್ಣಯದ ಮೇರೆಗೆ ನೀಡಲಾಯಿತು. ಉತ್ತಮ ನಿರ್ದೇಶಕ ಪ್ರಶಸ್ತಿ ಜೊತೆಗೆ ಪ್ರತಿ ನಾಟಕದ ಉತ್ತಮ ನಟ ಮತ್ತು ನಟಿಗೆ ವಿಶೇಷವಾಗಿ ಪ್ರಶಸ್ತಿಯನ್ನು ಪ್ರೋತ್ಸಾಹದ ಮೇರೆಗೆ ನೀಡಲಾಯಿತು.

ದೆಹಲಿ ಕರ್ನಾಟಕ ಸಂಘ ವಿವಿಧ ಕಲಿಕಾ ಕೇಂದ್ರಗಳನ್ನು ಮಕ್ಕಳಿಗಾಗಿ ಆಯೋಜಿಸಿ ನಡೆಸುತ್ತಿರುವುದು ತಮಗೆ ತಿಳಿದ ವಿಷಯ. ಈ ನಿಟ್ಟಿನಲ್ಲಿ ನೃತ್ಯ ತರಬೇತಿಯಲ್ಲಿ ಭಾಗಿಯಾಗಿರುವ ಮಕ್ಕಳನ್ನು ಪ್ರತಿಷ್ಠಿತ ಮೈಸೂರು ದಸರಾ ಕಾರ್ಯಕ್ರಮದ ಅಂಗವಾಗಿ ಮೈಸೂರಿನ ಅರಮನೆ ವೇದಿಕೆಯಲ್ಲಿ ನೃತ್ಯ ಕಾರ್ಯಕ್ರಮ ನೀಡಲು ಪೋಷಕರು ಸೇರಿ ಸುಮಾರು 15 ಜನರನ್ನು ದಸರಾ ವೇದಿಕೆಯಲ್ಲಿ ಪಾಲ್ಗೊಳ್ಳುವ ಅವಕಾಶ ನೀಡಲಾಯಿತು.

ಕೇಂದ್ರ ಸರ್ಕಾರದ ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ 2025ರ ಅಕ್ಟೋಬರ್ 24ರಂದು ಕಿತ್ತೂರು ವಿಜಯೋತ್ಸವದ 200ನೇ ವರ್ಷಾಚರಣೆಯನ್ನು ಸಿರಿಫೋರ್ಟ್ ಅಡಿಟೋರಿಯಂನಲ್ಲಿ ವಿಜಂಭಣೆಯಿಂದ ಆಚರಿಸಲಾಯಿತು. ಸುಮಾರು ಸಾವಿರಕ್ಕೂ ಹೆಚ್ಚು ಕನ್ನಡಿಗರು ಪಾಲ್ಗೊಂಡು ಈ ಐತಿಹಾಸಿಕ ಕಾರ್ಯಕ್ರಮವನ್ನು ಯಶಸ್ಸುಗೊಳಿಸಿದ್ದಕ್ಕಾಗಿ ನನ್ನ ಅಭಿನಂದನೆಗಳು. ಇದೆ ಸಂಧರ್ಭದಲ್ಲಿ ಕಿತ್ತೂರು ರಾಣಿ ಚೆನ್ನಮ್ಮ ಅವರ 200 ರೂಪಾಯಿ ನಾಣ್ಯವನ್ನು ಬಿಡುಗಡೆ ಮಾಡಲಾಯಿತು.

ಕನ್ನಡ ಚಲನಚಿತ್ರದ ಇತಿಹಾಸದಲ್ಲಿ ಸಂಗೀತ ಮತ್ತು ಹಾಡುಗಳ ಮಹತ್ವ ಬಹಳ ದೊಡ್ಡದು. ಆ ಯೋಚನೆಯೊಂದಿಗೆ ಕನ್ನಡ ಚಲನಚಿತ್ರದ ಮೇರು ಸಾಹಿತಿಗಳ ಹಾಡನ್ನು ಸ್ಥಳೀಯರು ಕರೋಕೆ ಮುಖಾಂತರ ಹಾಡಲು ಅಯೋಜಿಸಿದ ಕಾರ್ಯಕ್ರಮದಲ್ಲಿ 50ಕ್ಕೂ ಹೆಚ್ಚು ಸುಮಧುರ ಹಾಡುಗಳನ್ನು ಸ್ಥಳೀಯರು ಹಾಡಿ ರಂಜಿಸಿದರು. ಆರೋಗ್ಯವೇ ಭಾಗ್ಯ ಎಂಬ ಮೂಲಮಂತ್ರದಂತೆ, ಪ್ರತಿ ವರ್ಷದಂತೆ ಈ ವರ್ಷವೂ ವಿವಿಧ ಪ್ರತಿಷ್ಠಿತ ವೈದ್ಯರಿಂದ ಉಚಿತ ತಪಾಸಣೆ ಮಾಡಿಸಿಕೊಳ್ಳಲು ಆರೋಗ್ಯೋತ್ಸವ ಶೀರ್ಷಿಕೆ ಅಡಿಯಲ್ಲಿ ದೆಹಲಿ ಕನ್ನಡಿಗರಿಗೆ ಅವಕಾಶ ನೀಡಲಾಯಿತು. ಈ ಬಾರಿ ಹೆಚ್ಚಿನ ಕನ್ನಡಿಗ ವೈದ್ಯರು ನಮ್ಮ ಕರೆಗೆ ಸ್ಪಂದಿಸಿ ಈ ಸತ್ಕಾರ್ಯದಲ್ಲಿ ವೈದ್ಯೋನಾರಾಯಣೋ ಹರಿಃ ಅನ್ನುವ ನಾಣ್ಣುಡಿಗನುಗುಣವಾಗಿ ಸತ್ಕಾರ್ಯದಲ್ಲಿ ನಗುತ್ತಲೆ ಎಲ್ಲರನ್ನು ತಪಾಸಣೆ ಮಾಡಿದರು.

ಮಠ ಮಾನ್ಯಗಳು ಮತ್ತು ಸ್ವಾಮೀಜಿಗಳು ಸಾಮಾನ್ಯ ಜನರ ಕಷ್ಟಗಳನ್ನು ನೀಗಿಸುವ ಶಕ್ತಿಯಾಗಿ ನಿಲ್ಲುವಂತವರು. ಅಂತಹ ಶೃಂಗೇರಿ ಶ್ರೀ ಶಾರದಾ ಪೀಠದ ಸ್ವಾಮಿಗಳು ದೆಹಲಿ ಭೇಟಿ ಸಂದರ್ಭದಲ್ಲಿ ಸಂಘದಲ್ಲಿ ದೆಹಲಿ ಕನ್ನಡಿಗರು ಅವರ ಹಿತವಚನ ಮತ್ತು ಅವರ ಅಮೃತಹಸ್ತದಿಂದ ಫಲಾಮೃತ ಸ್ವಿಕರಿಸಲು ಸಂಘದ ಅಡಿಟೋರಿಯಂನಲ್ಲಿ ಅವಕಾಶ ಮಾಡಿಕೊಡಲಾಗಿತ್ತು. ಇನ್ನು, ವಾರ್ಷಿಕ 2024–25ರ ವಿವಿಧ ಪ್ರಶಸ್ತಿಗಳನ್ನು ಅರ್ಹರಿಗೆ ನೀಡುವ ಸಲುವಾಗಿ ಕಾರ್ಯಕಾರಿ ಸಮಿತಿಯ ಆಯ್ಕೆಯಂತೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು 2026ರ ಫೆಬ್ರವರಿ ತಿಂಗಳಲ್ಲಿ ಅದ್ದೂರಿ ತುಂಬಿದ ಸಭಾಂಗಣದಲ್ಲಿ ನೆರವೇರಿಸಲಾಯಿತು. ಅದೇ ತಿಂಗಳಲ್ಲಿ ವಾರ್ಷಿಕ ಕ್ರೀಡೋತ್ಸವವನ್ನು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆ ಮೈದಾನದಲ್ಲಿ ಆಯೋಜಿಸಲಾಗಿತ್ತು. ಸುಮಾರು 1000 ಕ್ರೀಡಾಸಕ್ತರು ಭಾಗವಹಿಸಿ ಮೂರು ದಿನಗಳು ನಡೆದ ಕ್ರೀಡೋತ್ಸವ ಉತ್ಸಾಹದಿಂದ ಮುಕ್ತಾಯಗೊಂಡಿತು.

ಜನಪ್ರಿಯ ದೆಹಲಿ ಕರ್ನಾಟಕ ಸಂಘ ಆಯೋಜಿಸುವ ಕ್ರಿಕೆಟ್ ಟೂರ್ನಮೆಂಟ್ ಈ ಬಾರಿ ನವದೆಹಲಿಯ ವೃತ್ತಿಪರ ಪ್ರತಿಷ್ಠಿತ ಕರ್ನೈಲ್‌ಸಿಂಗ್ ರೈಲ್ವೆ ಕ್ರಿಕೆಟ್ ಮೈದಾನದಲ್ಲಿ ಆಯೋಜಿಸಲಾಗಿತ್ತು. 23 ದಾಖಲೆಯ ತಂಡಗಳು ಭಾಗವಹಿಸಿದ್ದ ಈ ಪಂದ್ಯಾವಳಿಯಲ್ಲಿ ಪ್ರತಿ ಕ್ರೀಡಾಪಟುವಿಗೆ ನಾಮಫಲಕದ ಟೀ ಶರ್ಟ್ ಮತ್ತು ಪ್ಯಾಂಟ್ ನೀಡಲಾಯಿತು. ಈ ಸಮವಸ್ತ್ರದ ಪ್ರಾಯೋಜಕತ್ವ ನೀಡಿದ ಮದನಪಲ್ಲಿ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಸೈನ್ಸ್‌ನ ಸಂಸ್ಥಾಪಕ ಸದಸ್ಯರಾದ ಶ್ರೀ ಟಿ.ಜಿ. ರವಿಕುಮಾರ್ ಅವರಿಗೆ, ಕರ್ಣಾಟಕ ಬ್ಯಾಂಕ್ ಲಿ., IRCTC ಮತ್ತು RITES ಗೆ, ನನ್ನ ಹೃದಯದಾಳದ ಧನ್ಯವಾದಗಳು.

ನನ್ನ ಕನಸಿನ ಕೂಸಾದ ಬಹು ಜನಮನ್ನಣೆ ಪಡೆದ ಆಹಾರೋತ್ಸವ ಈ ಬಾರಿಯೂ ಕೂಡ ಜನ ಸಾಗರವೇ ಹರಿದು ಬಂದು ಯಶಸ್ವಿಯಾಯಿತು. ಮುಂದಿನ ಬಾರಿ ಇನ್ನೂ ಹೊಸ ರೂಪ ನೀಡಿ ದೊಡ್ಡ ಮಟ್ಟದಲ್ಲಿ ಆಯೋಜನೆ ಮಾಡಲು ಇದು ಪ್ರೇರಣೆ.ನಮ್ಮ ಹೊತ್ತು ಸಾಕುತಿಹಳು ಧರಣಿ ತಾಯಿ, ಉಸಿರು, ಆಹಾರ, ಜಲ ನೀಡುತಿಹಳು ಪ್ರಕೃತಿ ತಾಯಿ. ಪ್ರತಿ ಹಂತದಲ್ಲು ಮಹಿಳೆ ಮನುಷ್ಯನಿಗೆ ಆಧಾರ. ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಈ ಬಾರಿ ವಿಶಿಷ್ಟ ರೀತಿಯಲ್ಲಿ ಆಚರಿಸಲಾಯಿತು ಮತ್ತು ಈ ಸಂದರ್ಭದಲ್ಲಿ ಮುಖ್ಯ ಅತಿಥಿ ಡಾ. ರೂಪದೇವಿ ಪ್ರೇರಣದಾಯಕವಾದ ಮಾತುಗಳನ್ನಾಡಿ ಕಾರ್ಯಕ್ರಮಕ್ಕೆ ಅರ್ಥಪೂರ್ಣ ಸಂದೇಶ ನೀಡಿ ಸಾರ್ಥಕಗೊಳಿಸಿದರು.

ಈ ಅವಧಿಯಲ್ಲಿ ನಾನು ನನ್ನ ಪೂರ್ತಿ ಸಮಯ ಮತ್ತು ಯೋಚನೆಗಳನ್ನು ಜನಪರ ಯೋಜನೆಗಳಿಗಾಗಿ ಅರ್ಪಿಸಿದ್ದೇನೆ. ಮುಂದಿನ ದಿನಗಳಲ್ಲಿ ಇನ್ನೂ ಹೊಸರೂಪದ ಕನ್ನಡಪರ ಕಾರ್ಯಕ್ರಮದ ರೂಪುರೇಷೆಗಳನ್ನು ಹಾಕಿ ಯಶಸ್ವಿಗೊಳಿಸೋಣ.❑


ಜೈ ಕರ್ನಾಟಕ ಮಾತೆ. ಜೈ ಭುವನೇಶ್ವರಿ

**ರಾಧಾಕೃಷ್ಣ**
ಪ್ರಧಾನ ಕಾರ್ಯದರ್ಶಿ




ನವದೆಹಲಿಯ ಸಿರಿಫೋರ್ಟ್ ಆಡಿಟೋರಿಯಮ್‌ನಲ್ಲಿ ಜರುಗಿದ ರಾಣಿ ಚೆನ್ನಮ್ಮನ ಬ್ರಿಟಿಷ್ ವಿರುದ್ಧ ಯುದ್ಧದ 200ನೇ ವರ್ಷದ ವಿಜಯೋತ್ಸವ ಕಾರ್ಯಕ್ರಮದಲ್ಲಿ ಕೇಂದ್ರ ಸಂಸ್ಕೃತಿ ಹಾಗು ಪ್ರವಾಸೋದ್ಯಮ ಮಂತ್ರಿಗಳಾದ **ಶ್ರೀ ಗಜೇಂದ್ರಸಿಂಗ್ ಶೆಖಾವತ್** ಮತ್ತು ಅತಿಥಿ ಗಣ್ಯರೊಂದಿಗೆ ಸಂಘದ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳ ದೃಶ್ಯ.

# ಅಭಿಮತ-35 ವರ್ಷದ ನಿರಂತರ ಪಯಣ-
# ಅಭಿನಂದನೆಗಳು ಮತ್ತು ಶುಭ ಹಾರೈಕೆಗಳು



ರಾಷ್ಟ್ರದ ರಾಜಧಾನಿಯಲ್ಲಿ 1948ರಲ್ಲಿ ಸ್ಥಾಪಿತವಾದ ದೆಹಲಿ ಕರ್ನಾಟಕ ಸಂಘದ ಮುಖಪತ್ರಿಕೆಯಾಗಿ ಮೊದಲ ಸಂಚಿಕೆಯನ್ನು1990ರ ಅಕ್ಟೋಬರ್ 2ರಂದು ತಂದವರು ಶ್ರೀಯುತರಾದ ಎನ್.ಪಿ. ಭಟ್ಟ, (ಅಂದಿನ ಸಂಘದ ಅಧ್ಯಕ್ಷರು), ಸಿ.ವಿ. ಗೋಪಿನಾಥ ಹಾಗೂ ಅಭಿಮತದ ಪ್ರಥಮ ಪ್ರಧಾನ ಸಂಪಾದಕರಾದ ಡಾ. ವೆಂಕಟಾಚಲ ಹೆಗಡೆಯವರು. "ಅಭಿಮತ" ನಾಮಧೇಯ ಹೊತ್ತು ಭಾರತ ಸರ್ಕಾರದ ನೋಂದಾಯಿತ ದೆಹಲಿ ಕರ್ನಾಟಕ ಸಂಘದ ತಿಂಗಳ ಮುಖಪತ್ರಿಕೆಯಾಗಿ ಸಂಘದ ಆಗು ಹೋಗುಗಳು, ಸದಸ್ಯರ ಅಭಿಪ್ರಾಯ ಹಾಗೂ ದೆಹಲಿ ಕನ್ನಡಿಗರ ಅನುಭವ, ಕ್ರಿಯಾಶೀಲತೆ ದಾಖಲಿಸುತ್ತ ಮೂವತ್ತೈದು ವರ್ಷಗಳ ಕಳೆದು ಪ್ರಬುದ್ಧತೆಯ ದಿಟ್ಟ ಹೆಜ್ಜೆ ಇಡುತ್ತಿರುವ ಅಭಿಮತಕ್ಕೆ ನನ್ನ ಶುಭ ಹಾರೈಕೆಗಳು.

ಆರಂಭದಲ್ಲಿ ಕಪ್ಪು ಬಿಳುಪು ಚಿತ್ರಗಳಿಂದ ನಾಲ್ಕು ಪುಟಗಳ "ಅಭಿಮತ" ಶೀರ್ಷಿಕೆಯೊಂದಿಗಿನ ಕಾರ್ಯಕ್ರಮ ದಾಖಲೆ ಪತ್ರವಾಗಿ ತಯಾರಾದದ್ದು ಶ್ರೀ ಗೋಪಿನಾಥರ ಮನೆಯ ಗಣಕ ಯಂತ್ರ ಟೇಬಲ್ ಮೇಲೆ, ತದನಂತರದ ಸಂಚಿಕೆಗಳು ತಯಾರಾದದ್ದು ಮುನಿರ್ಕಾದ ಚಿಕ್ಕ ಮುದ್ರಣಾಲಯದಲ್ಲಿ. ಮುಂದೆ ಕೆಲ ವರ್ಷಗಳು ಅಚ್ಚಾದದ್ದು ಪಹಾಡ್‌ಗಂಜ್‌ನ ಮುದ್ರಣಾಲಯದಲ್ಲಿ. ಈಗ ಪತ್ರಿಕೆ ಪ್ರತಿಗಳು ನಮ್ಮವರೇ ಆದ ಶ್ರೀ ಹೆಗಡೆಯವರ ಆಧುನಿಕ ಮುದ್ರಣಾಲಯದಲ್ಲಿ ವರ್ಣರಂಜಿತ ಪ್ರತಿ ಅಚ್ಚಾಗಿ ನಮ್ಮ ಕೈ ಸೇರುತ್ತಿದ್ದಾವೆ. ಇಲ್ಲಿಯ ತನಕ ದೇಶದ ಗಡಿಗೆ ಸೀಮಿತವಾದ ಅಭಿಮತದ ಹರಿವು ಇನ್ನು ಅಂತರ್ಜಾಲದಲ್ಲಿ ಜಗದಗಲ ವಿಸ್ತಾರವಾಗಲಿದೆ ಎಂಬುದು ಸಂತಸದ ವಿಷಯ.

ಕಾಲಕಾಲಕ್ಕೆ ದೆಹಲಿ ಕರ್ನಾಟಕ ಸಂಘದ ಆಡಳಿತ ಮಂಡಳಿಗೆ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀಯುತರಾದ ಎನ್.ಪಿ. ಭಟ್ಟ, ಎ.ಪಿ. ಕುಮಟಾಕರ, ಐ. ರಾಮಮೋಹನ ರಾವ್, ಕೆ. ಆರ್. ನಾಗರಾಜ್, ಡಾ. ಪುರುಷೋತ್ತಮ ಬಿಳಿಮಲೆ, ಸಿ.ವಿ. ಗೋಪಿನಾಥ್, ಡಾ. ವೆಂಕಟಾಚಲ ಹೆಗಡೆ, ವಸಂತ ಶೆಟ್ಟಿ ಬೆಳ್ಳಾರೆ ಹಾಗೂ ಸಿ.ಎಂ. ನಾಗರಾಜ ಇವರುಗಳು ಪೋಷಕರಾಗಿ ಅಭಿಮತದ ಬೆಳವಣಿಗೆಗೆ ಬೇಕಾದ ಸೌಲಭ್ಯಗಳನ್ನು ಒದಗಿಸುತ್ತಾ ಬಂದರು. ಕಾರ್ಯದರ್ಶಿ ಸ್ಥಾನಕ್ಕೆ ಆಯ್ಕೆ ಆಗಿ ಬಂದವರು ನೋಂದಾಯಿತ ಪತ್ರಿಕೆಯ ಕಾನೂನಿನ ಜವಾಬ್ದಾರಿ ವಹಿಸಿಕೊಳ್ಳುತ್ತಾ ಬಂದಿದ್ದಾರೆ. "ಅಭಿಮತ" ಸಂಘದ ಮುಖಪತ್ರಿಕೆಯಾಗಿದ್ದರೂ ಆಡಳಿತ ಮಂಡಳಿಯ ಮುಖವಾಣಿ ಆಗದೇ ಸಂಘದ ಸಂವಿಧಾನಿಕ ಹಿತರಕ್ಷಣೆಗಾಗಿ ತನ್ನ ಸ್ವಾಯುತ್ತತೆಯನ್ನು ಕಾಯ್ದುಕೊಳ್ಳಲೆಂಬ ಸದುದ್ದೇಶದಿಂದ ಪತ್ರಿಕಾರಿತೆಯಲ್ಲಿ ಪದವಿ ಪಡೆದು ಸುಪ್ರಸಿದ್ಧರಾಗಿದ್ದ ಎಚ್.ವೈ. ಶಾರದಾ ಪ್ರಸಾದ್, ಐ. ರಾಮ ಮೋಹನ್ ರಾವ್, ನರೇಂದ್ರ, ರವೀಂದ್ರ, ಬಿ.ಎಸ್. ಚಂದ್ರಶೇಖರ್, ಡಿ.ಸಿ.ಎಸ್. ರಾವ್, ಟಿ.ಎಮ್. ಶಿರೂರ, ಡಾ. ಎಲ್.ಜಿ. ಸುಮಿತ್ರ, ಶುಭಾ ಸಿನ್ನೂರ ದಾಸ್, ಚೆನ್ನು ಎಸ್. ಮಠದ, ಡಾ. ಪುರುಷೋತ್ತಮ ಬಿಳಿಮಲೆ ಇನ್ನೂ ಹಲವರನ್ನು ಒಳಗೊಂಡ "ಅಭಿಮತ ಸಲಹಾ ಮಂಡಳಿ" ಕೂಡ ಇತ್ತು. ಇದು ಅಭಿಮತಕ್ಕೆ ಭದ್ರ ಬುನಾದಿಯನ್ನು ಹಾಕಲು ಸಹಾಯಕವಾಯಿತು ಎಂದರೆ ತಪ್ಪಾಗಲಾರದು. ಸಂಘದ ಸಾಂಸ್ಕೃತಿಕ ಸಮುಚ್ಚಯ ಬಂದ ನಂತರ ಈ "ಅಭಿಮತ ಸಲಹಾ ಮಂಡಳಿ" / ಅಭಿಮತ ಉಪ ಸಮಿತಿ ಘಟಿತವಾಗದೇ ಉಳಿದಿದೆ.

ಇವರಲ್ಲದೇ, 36 ನೇ ವರ್ಷಕ್ಕೆ ಕಾಲಿಟ್ಟ 'ಅಭಿಮತ' ನಿನಗಾಗಿ ಸಾಕಷ್ಟು ಶ್ರಮಿಸಿದ ಶ್ರಮಿಸುತ್ತಿರುವ ಸಾಹಿತ್ಯಾಸಕ್ತ ಸಂಘದ ಸದಸ್ಯರ ಅತೀ ದೊಡ್ಡ ಬಳಗವೇ ಇದೆ. ಕೆಲವರು ಪ್ರಧಾನ ಸಂಪಾದಕರಾಗಿ, ಇನ್ನು ಕೆಲವರು ಸಂಪಾದಕ ಮಂಡಳಿಯ ಸದಸ್ಯರಾಗಿ, ಇನ್ನು ಅನೇಕರು ಕೇವಲ ಬರಹಗಾರರಾಗಿ ನಿನ್ನ ಒಡನಾಟದಲ್ಲಿ ತಾವು ಬೆಳೆದು ನಿನ್ನನ್ನು ಈ ಎತ್ತರಕ್ಕೆ ಬೆಳೆಸಿದ್ದಾರೆ. ನನಗೆ ನೆನಪಿರುವ ಹಲವರೆಂದರೆ–ಡಾ. ವೆಂಕಟಾಚಲ ಜಿ. ಹೆಗಡೆ, ಟಿ.ಎಸ್. ಸತ್ಯನಾಥ, ಶುಭಾ ಸಿನ್ನೂರ ದಾಸ್, ರಂಗಸ್ವಾಮಯ್ಯ, ಚೆನ್ನು ಎಸ್. ಮಠದ, ಡಿ.ಸಿ.ಎಸ್. ರಾವ್, ಡಾ. ಅಹಲ್ಯಾ ಚಿಂತಾಮಣಿ, ಟೇಕಲ್ ಗೋಪಾಲಕೃಷ್ಣ, ಸೇತೂರಾವ್, ಬೆಳ್ಳಾರೆ ಮದ್ವರಾಯ, ಬಿ.ಎಸ್. ಚಂದ್ರಶೇಖರ್, ಸುಧಾಕರ ಕುರಂದವಾಡ, ಎಮ್.ಎಸ್. ಸಂತೂರ, ಎಚ್. ಎಸ್. ಕುಲಕರ್ಣಿ, ಎ.ಕೆ. ಹಿಮಕರ, ಎಚ್. ಎಸ್. ಪ್ರಭಾಕರ್, ಹೆಬ್ರಿ ಚಂದ್ರಕಾಂತ ಮಲ್ಯ, ಬೊಳುವಾರು ಮೊಹಮ್ಮದ್ ಕುಂಞ, ಬಾಲಕೃಷ್ಣ ಶೆಟ್ಟಿ ಪೊಳಲಿ, ಡಾ. ಪುರುಷೋತ್ತಮ ಬಿಳಿಮಲೆ, ಉಷಾ ಭರತಾದ್ರಿ, ಎಚ್. ವೀರೇಶ, ವಸಂತ ಶೆಟ್ಟಿ ಬೆಳ್ಳಾರೆ, ಸಖಾರಾಮ್ ಉಪ್ಪೂರು, ಸರವು ಕೃಷ್ಣ ಭಟ್, ಡಾ. ಅವನೀಂದ್ರನಾಥ್ ರಾವ್, ಬಾಲಕೃಷ್ಣ ನಾಯ್ಕ್ ಡಿ., ರೇಣುಕಾ ನಿಡಗುಂದಿ, ಡಾ. ಎಸ್.ಎಲ್. ಭಂಡಾರಕರ್, ಸಂತೋಷ್ ಕುಮಾರ್ ಉಪಾಧ್ಯಾಯ, ಸವಿತಾ ಇನಾಮದಾರ್, ಎನ್.ಪಿ. ಚಂದ್ರಶೇಖರ, ಪ್ರಕಾಶ್ ಶೆಟ್ಟಿ ಉಳೆಪಾಡಿ,



ಅಭಿಮತ

ಸಂಪುಟ 1 | ಅಕ್ಟೋಬರ್ 1990 | ಸಂಚಿಕೆ 1

ನನ್ನ ಕನಸಿನ ಕರ್ನಾಟಕ ಸಂಘ

ಮಹಾಬಲೇಶ್ವರ ಭಟ್ ಕೆ., ನಂದಿನಿ ಮಲ್ಯ, ಎಸ್. ಕುಮಾರ್, ಚಂದ್ರಶೇಖರ ಜೋಳದರಾಶಿ, ಅಮರೇಶ ದೊಡ್ಡಮನಿ, ಆಶಾಲತಾ ಎಂ., ಇನ್ನೂ ಅನೇಕರು.

ಪ್ರಸ್ತುತ ಪ್ರಧಾನ ಸಂಪಾದಕ ಶ್ರೀ ಕೆ.ಎಸ್. ಮೂರ್ತಿಯವರ ಸೇವೆ ಪ್ರಶಂಸನೆಗೆ ಅರ್ಹವಾದುದು. ಇವರು ವೃತ್ತಿಯಿಂದ ಅಭಿಯಂತರಾದರೂ ತಮ್ಮ ವೃತ್ತಿಗಿಂತ ವಿಭಿನ್ನ ಜವಾಬ್ದಾರಿ ನಿಭಾಯಿಸುತ್ತ ಉತ್ತಮ ಬರಹಗಾರರಾಗಿ ಹೊರಹೊಮ್ಮಿದ್ದಾರೆ. ಇವರಿಗೆ ಮತ್ತು ಇವರ ಜೊತೆ ಸಂಪಾದಕ ಮಂಡಳಿಯಲ್ಲಿ ಕಾರ್ಯ ನಿರ್ವಹಿಸಿರುವ ಶ್ರೀಯುತರಾದ ಸರವು ಕೃಷ್ಣ ಭಟ್, ಯಲ್ಲಾಲಿಂಗ ಕೊಪ್ಪದ, ಶ್ರೀ ತಿಮ್ಮಪ್ಪ ಜಿ.ಆರ್. ಹಾಗು ರಮೇಶ ಎಸ್. ಅವರಿಗೆ ನನ್ನ ವಿಶೇಷ ಅಭಿನಂದನೆಗಳು.

ಇವರಲ್ಲದೇ, ಸಂಘದ ಕರ್ಮಚಾರಿಗಳಾದ ಲಕ್ಷ್ಮೀ ನಾರಾಯಣ ಹೆಗಡೆ, ರಮಾ, ಬಾಲಚಂದ್ರ ಬಿ.ಎಸ್., ಶೇಖರ್, ದೇವಯ್ಯ, ಶಂಕರ, ಮಹಾದೇವ, ಅಶೋಕ, ಚುನ್ನೂರಾಮ, ಅನಿಲ್ ಇನ್ನಿತರರ ಸೇವೆಯೂ ಅಭಿಮತದ ಬೆಳವಣಿಗೆಗೆ ಬಹಳಷ್ಟು ಸಹಕಾರಿಯಾಗಿದೆ.

ಆರಂಭದ ದಿನಗಳಿಂದ ಸರಿ ಸುಮಾರು ಹದಿನೆಂಟು ವರ್ಷಗಳ ಕಾಲ ಸತತ ಅಭಿಮತದ ಬೆಳವಣಿಗೆಯ ಭಾಗವಾಗಿ ಬೆಳೆದವನು ನಾನು. ಆ ದಿನಗಳಿಂದ ಇಲ್ಲಿಯವರೆಗೆ ನಾನು ಕಂಡದ್ದು ಕಾರ್ಯಕ್ರಮಗಳ ವರದಿಗಾರರ ಕೊರತೆ. ನಮ್ಮ ಮುಂದಿನ ಪೀಳಿಗೆಯ ವರದಿಗಾರರನ್ನು ಗುರುತಿಸುವ ಬೆಳೆಸುವ ಪ್ರಯತ್ನ ನಮ್ಮದಾಗಲಿ. ಸೃಜನಶೀಲ ಬರವಣಿಗೆ ದೆಹಲಿಯ ಮಕ್ಕಳಿಂದಲೂ ಬರುವಂತಾದರೆ "ಅಭಿಮತ" ಐವತ್ತು ವರ್ಷಗಳ ಮಹೋತ್ಸವ ಆಚರಿಸುವುದು ಖಂಡಿತ, ಅಭಿಮತದ ಮುಂದಿನ ಹೆಜ್ಜೆಗಳಿಗೆ ಶುಭವಾಗಲಿ.❑

***ಚೆನ್ನು ಎಸ್. ಮಠದ***

# ನಾರಿ ಶಕ್ತಿಗೆ ವಂದನೆ: ಸಂಘದಲ್ಲಿ ಅರ್ಥಪೂರ್ಣ 'ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ'




ಹೆಣ್ಣು ಕುಟುಂಬದ ಕಣ್ಣು, ಅಕ್ಷರ ಕಲಿತ ನಾರಿ ದೇಶಕ್ಕೆ ಮಾದರಿ, ಮಹಿಳೆಯೊಬ್ಬಳು ಶಿಕ್ಷಿತಳಾದರೆ ಇಡೀ ಸಮಾಜವೇ ಪ್ರಶಿಕ್ಷಿತವಾದಂತೆ ಎನ್ನುವ ಮಾತುಗಳು ಇಂದಿನ ಸಮಾಜ ವ್ಯವಸ್ಥೆಯಲ್ಲಿ ಬಹಳ ಪ್ರಸ್ತುತವಾಗಿ ದೆಹಲಿ ಕರ್ನಾಟಕ ಸಂಘದಲ್ಲಿಯೂ ನಾರಿ ಶಕ್ತಿಗೆ ಗೌರವ ಸಲ್ಲಿಸುವ ಪರಿಪಾಠ ನಿರಂತರವಾಗಿ ನಡೆಯುತ್ತಿದ್ದು ಈ ನಿಟ್ಟಿನಲ್ಲಿ ಪ್ರತಿ ವರ್ಷದಂತೆಯೇ ಈ ವರ್ಷದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಸಂಘದ ಸಭಾಂಗಣದಲ್ಲಿ ದಿನಾಂಕ 08.03.2026 ರಂದು ಬಹಳ ಸಡಗರ ಸಂಭ್ರಮದಿಂದ ಅರ್ಥಪೂರ್ಣವಾಗಿ ಆಚರಿಸಲಾಯಿತು.

ದೆಹಲಿ ಕನ್ನಡತಿಯರಿಂದ ನಾಡ ಗೀತೆಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ನವದೆಹಲಿಯ ಪ್ರಸಿದ್ಧ ಕನ್ಸಲ್‌ಟೆಂಟ್ ಗೈನಾಕಾಲಜಿಸ್ಟ್ ಮತ್ತು ಅಂಕೋಲಜಿಕಲ್ ಸರ್ಜನ್ ಡಾ. ರೂಪ ದೇವಿ ಅವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ವಹಿಸಿದ್ದರು, ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ, ಮಹಿಳಾ ಪದಾಧಿಕಾರಿಗಳಾದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್, ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್., ಸದಸ್ಯೆಯರಾದ, ಶ್ರೀಮತಿ ಮಾಲಿನಿ ಪ್ರಹ್ಲಾದ, ಶ್ರೀಮತಿ ಜಯಶ್ರೀ ಬಸವರಾಜು ಮತ್ತು ಶ್ರೀಮತಿ ಶುಭಾದೇವಿ ಪ್ರಸಾದ್ ಹಾಗು ವಿದುಷಿ ಶ್ರೀಮತಿ ಜ್ಯೋತಿ ಪಟ್ಟಾಭಿರಾಮ್ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪ್ರಾರಂಭದಲ್ಲಿ, ವೇದಿಕೆ ಮೇಲಿದ್ದವರನ್ನು ಹಾಗು ಸಭಾಂಗಣದಲ್ಲಿ ಉಪಸ್ಥಿತರಿದ್ದ ಎಲ್ಲರನ್ನು ಸಂಘದ ಪರವಾಗಿ ಆತ್ಮೀಯವಾಗಿ ಸ್ವಾಗತಿಸಿದ ಶ್ರೀಮತಿ ಪೂಜಾ ರಾವ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರಿಗೂ ಮಹಿಳಾ ದಿನಾಚರಣೆಯ ಶುಭಾಶಯಗಳನ್ನು ತಿಳಿಸಿದರು.

ಅನಂತರ ವೇದಿಕೆಯಲ್ಲಿದವರು ದೀಪ ಪ್ರಜ್ವಲನೆ ಮಾಡುವುದರೊಂದಿಗೆ ಕಾರ್ಯಕ್ರಮ ವಿದ್ಯುಕ್ತವಾಗಿ ಚಾಲನೆಗೊಂಡಿತು. ಕಾರ್ಯಕ್ರಮದ ನಿರೂಪಣೆಯನ್ನು ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್. ಸುಂದರವಾಗಿ ನಿರ್ವಹಿಸಿದರು. ಡಾ. ರೂಪಾದೇವಿ ಅವರ ಪರಿಚಯವನ್ನು ಸಮಿತಿ ಸದಸ್ಯೆ ಶ್ರೀಮತಿ ಮಾಲಿನಿ ಪ್ರಲ್ಹಾದ ಸಭಿಕರಿಗೆ ಅವರು ಮಾಡಿಕೊಟ್ಟರು.

ಮುಖ್ಯ ಅತಿಥಿ ಶ್ರೀಮತಿ ಡಾ. ರೂಪದೇವಿ ಅವರು ಮಾತನಾಡಿ ಪ್ರತಿಯೊಬ್ಬರಿಗೂ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳನ್ನು ತಿಳಿಸುತ್ತಾ ಹೆಣ್ಣು ಮಕ್ಕಳ ಜೀವನದಲ್ಲಿ ಬಾಲ್ಯದಿಂದ ಮುಪ್ಪಿನವರೆಗೆ ವಿವಿಧ ಹಂತಗಳಲ್ಲಿ ಆಗುವ ಭೌತಿಕ, ಮಾನಸಿಕ ಬದಲಾವಣೆ, ಒಂದನೇ ವರ್ಷದಿಂದ ಅರವತ್ತು ವರ್ಷದವರೆಗಿನ ಆರು ದಶಕಗಳಲ್ಲಿ ಬೇರೆ ಬೇರೆ ಕಾಲಘಟ್ಟಗಳಲ್ಲಿ ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ಅವಳು ನಿಭಾಯಿಸುವ ಪಾತ್ರದಲ್ಲಿ / ಸ್ಥಾನಗಳಲ್ಲಿ ಯಾವ ರೀತಿ ಅವಳಿಗೆ ಪೂರಕ ಮತ್ತು ಪ್ರೋತ್ಸಾಹ ಕೊಡಲು ಬೇಕಾದಂತ ವೈದ್ಯಕೀಯ ನೆರವಿನ ಮತ್ತು ಕುಟುಂಬದಲ್ಲಿ ಪೋಷಕರ ಬೆಂಬಲ ವ್ಯವಸ್ಥೆ ಇರಬೇಕೆಂಬುವುದರ ಬಗ್ಗೆ ಮಾಹಿತಿ ನೀಡಿದರು. ನಮ್ಮ ಹೆಣ್ಣು ಮಕ್ಕಳನ್ನು ಅವರ ಬೆಳವಣಿಗೆಯ ಪ್ರತಿ ಘಟ್ಟಗಳಲ್ಲಿ ಹೇಗೆ ಪೋಷಕರು ಎಮೋಷನಲ್ ಶಕ್ತಿ ನೀಡಿ ಅವರನ್ನು ಸಬಲೀಕರಿಸಬಹುದೆಂಬುದರ ಬಗ್ಗೆ ಉಲ್ಲೇಖಿಸುತ್ತಾ, ಹೆಣ್ಣು ಮಕ್ಕಳ ದೇಹವು ಒಂದು ಸುಂದರ ಬಯೋಲಾಜಿಕಲ್ ಜರ್ನಿ, ಅವರ ಜೀವನದ ವಿವಿಧ ದಶಕಗಳಲ್ಲಿ ವಿಸಿಯೋಲಾಜಿಕಲ್ ಮತ್ತು ಹಾರ್ಮೋನ್‌ಗಳ ಬದಲಾವಣೆ ಆಗುತ್ತಿರುತ್ತವೆ ಎಂದು ತಿಳಿಸಿದರು. 1 ರಿಂದ 10 ವರ್ಷದವರೆಗೆ ಯಾವುದೇ ಹಾರ್ಮೋನ್ ಬದಲಾವಣೆ ಆಗುವುದಿಲ್ಲ, ಹೆಣ್ಣು ಮತ್ತು ಗಂಡು ಮಗು ಇಬ್ಬರನ್ನೂ ಸಮಾನವಾಗಿ ನೋಡಬೇಕು. 10 ರಿಂದ 20 ವರ್ಷದ ಅವಧಿಯಲ್ಲಿ ಹೆಣ್ಣು ಮಕ್ಕಳಲ್ಲಿ ನಿಜವಾದ ಹಾರ್ಮೋನ್ ಬದಲಾವಣೆ ಆಗುತ್ತವೆ, ಆಗ ತಾಯಂದಿರ ಪಾತ್ರ ಬಲು ಮುಖ್ಯ. ಹಾರ್ಮೋನ್‌ಗಳಿಂದಾಗಿ ಮಕ್ಕಳಲ್ಲಿ ಕಂಡು ಬರುವ ನಡವಳಿಕೆಯಲ್ಲಿನ ಬದಲಾವಣೆಯನ್ನು ಅಮ್ಮಂದಿರು ಸಾಮಾನ್ಯವಾಗಿ ಅರ್ಥಮಾಡಿಕೊಳ್ಳುವುದಿಲ್ಲ ಅವರಿಗೆ ಸರಿಯಾದ Space ಕೊಡಲ್ಲ. ಹೆಣ್ಣು ಮಗುವಿಗೆ Body awareness ಮತ್ತು ಅವರ ಜೊತೆ ಬಹಳ ಸ್ನೇಹಪೂರ್ವಕವಾಗಿ (Friendly) ವರ್ತಿಸಬೇಕಿರುವುದು ಅವಶ್ಯಕ ಎಂದರು. 20 ರಿಂದ 30 ವರ್ಷದ ಸಮಯದಲ್ಲಿ ಹಾರ್ಮೋನ್ಸ್ ಸ್ಥಿರ (Stabilize) ಆಗಿರುವ ಕಾರಣ, ಅವರಲ್ಲಿ ಮಗುವಿನಿಂದ ಹುಡುಗಿಯಾಗಿ ಯಾವುದು ಸರಿ








ಯಾವುದು ತಪ್ಪು ಎನ್ನುವ ಹಾಗು ಜಗತ್ತನ್ನು ಸರಿಯಾಗಿ ನೋಡುವ ಅರಿವಾಗುತ್ತದೆ. ತಮ್ಮ ಮುಂದಿನ ಭವಿಷ್ಯದ ವಿದ್ಯಾಭ್ಯಾಸ, ಉದ್ಯೋಗ, ಮದುವೆ ಮುಂತಾದ ವಿಷಯಗಳಲ್ಲಿ ನಿರ್ಧಾರ ತೆಗೆದುಕೊಳ್ಳಲು ಸಶಕ್ತಳಾಗುತ್ತಾಳೆ. ಪೋಷಕರೊಂದಿಗೆ Maximum Disconnect ಆಗುತ್ತಾಳೆ. ಆಗ ಪೋಷಕರು ಹೆಣ್ಣು ಮಕ್ಕಳ ನಿರ್ಧಾರಕ್ಕೆ ವಿರೋಧ ಮಾಡದೇ ಅವರಿಗೆ ಪೂರಕವಾದ ಮತ್ತು ಪ್ರೋತ್ಸಾಹದಾಯಕ ವಾತಾವರಣ ಕಲ್ಪಿಸಬೇಕು ಎಂದರು. ಇನ್ನು ನಂತರದ 30 ರಿಂದ 40 ವರ್ಷಗಳಲ್ಲಿ ಮಹಿಳೆಯರು ಬೇರೊಂದು ಕುಟುಂಬದ (ಗಂಡನ) ಪರಿವಾರದ ಜವಾಬ್ದಾರಿಗಳಿಂದ ಸ್ವಲ್ಪ ಗೊಂದಲಮಯ ಪರಿಸ್ಥಿತಿಯಲ್ಲಿ ಮತ್ತು ಪ್ರಕ್ಷುಬ್ಧತೆಯ ಮನೋಸ್ಥಿತಿಯಲ್ಲಿರುವ ಕಾರಣ ತಾಯಿ–ತಂದೆಯರು ತಮ್ಮ ಹೆಣ್ಣು ಮಕ್ಕಳಿಗೆ ಬೇರೆ ಮನೆಗೆ ಹೊಂದಿಕೊಳ್ಳಲು ನೆರವಾಗಬೇಕು. ಮದುವೆಗಾಗಿ ಅನಾವಶ್ಯಕ ಹೆಚ್ಚು ಖರ್ಚು ಮಾಡದೇ ಅವಳ ಸಹಾಯಕ್ಕೆ ಅದರಲ್ಲೇ ಉಳಿಸಿದ ಸ್ವಲ್ಪ ಹಣವನ್ನು ಒದಗಿಸಿ ಅವಳನ್ನು ಸಬಲೀಕರಿಸಬಹುದು. ಮುಂದೆ 40 ರಿಂದ 50 ವರ್ಷದ ಅವಧಿಯಲ್ಲಿ ಮಹಿಳೆಯ ಬದುಕು ಸ್ವಲ್ಪ ಸ್ಥಿರವಾಗಲಿದ್ದು, ಯಾವುದೇ ಗೊಂದಲಗಳಿರುವುದಿಲ್ಲ, ಸ್ವಲ್ಪ ಆರಾಮಾಗಿರುವುದರಿಂದ ಜ್ಞಾನಾರ್ಜನೆ ಕಡೆ ಗಮನಕೊಟ್ಟು ಬರೆಯುವುದು, ಓದುವುದು, ಸಂಗೀತ ಮುಂತಾದ ಚಟುವಟಿಕೆಗಳನ್ನು ಹವ್ಯಾಸಗಳನ್ನು ಮುಂದುವರಿಸಬಹುದು ಎಂದರು. ಆಮೇಲೆ 50 ವರ್ಷಗಳ ನಂತರ ಆಗುವ ಋತುಬಂಧ (ಮುಟ್ಟು ನಿಲ್ಲುವಿಕೆ–Menopause) ಅನ್ನು ಸಕಾರಾತ್ಮಕವಾಗಿ ತೆಗೆದುಕೊಂಡು 50 ರಿಂದ 60 ವರ್ಷಗಳಲ್ಲಿ ಮತ್ತು ಮುಂದೆ ತನ್ನನ್ನು ತಾನು ಮರುಶೋಧನೆ (Reinvent) ಮಾಡಿಕೊಂಡು ಬದುಕಿನಲ್ಲಿ ಹೊಸ ಆಯಾಮದ ಹೊಸ ಕೆಲಸ ಕಾರ್ಯ ಮತ್ತು ಅವಕಾಶಗಳನ್ನು ಕಾಣಬಹುದು ಹಾಗು ತಮ್ಮ ಜೀವನದ ಅನುಭವವನ್ನು ಹೆಣ್ಣು ಮಕ್ಕಳಿಗೆ, ಮಹಿಳೆಯರಿಗೆ ಹಂಚಿಕೊಳ್ಳಬಹುದೆಂದು ಬಹಳ ವಿಸ್ತಾರವಾಗಿ ಆರು ದಶಕಗಳ ಮಹಿಳೆಯ ಜೀವನದ ಪ್ರಯಾಣದ ಬಗ್ಗೆ ಬೆಳಕು ಚೆಲ್ಲಿದರು. ತಮ್ಮನ್ನು ಮುಖ್ಯ ಅತಿಥಿಗಳಾಗಿ ಈ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದಕ್ಕೆ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಧನ್ಯವಾದಗಳನ್ನು ತಿಳಿಸಿದರು.

ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ ಸಂಘವು ಪ್ರತಿ ವರ್ಷ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಹಮ್ಮಿಕೊಳ್ಳುತ್ತಿದ್ದು, ಮುಂದೆಯೂ ಮಹಿಳಾಪರ ಉತ್ತಮ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ, ಆಗಮಿಸಿರುವ ಮುಖ್ಯ ಅತಿಥಿಗಳಿಗೆ, ನಮ್ಮ ಮಹಿಳಾ ಪದಾಧಿಕಾರಿಗಳು ಮತ್ತು ಸದಸ್ಯರಿಗೆ ಹಾಗೂ ಸಭಾಂಗಣದಲ್ಲಿ ನೆರೆದಿರುವಂತಹ ಎಲ್ಲಾ ಮಹಿಳೆಯರಿಗೆ, ದೆಹಲಿ ಕನ್ನಡಿಗರಿಗೆ ಮಹಿಳಾ ದಿನಾಚರಣೆಯ ಶುಭಾಶಯಗಳನ್ನು ತಿಳಿಸಲು ಬಹಳ ಸಂತೋಷವಾಗುತ್ತಿದೆ ಎಂದರು. ಕಾರ್ಯಕ್ರಮದ ಕೊನೆಯಲ್ಲಿ ಎಲ್ಲರಿಗೂ ಸಮಿತಿ ಸದಸ್ಯೆ ಶ್ರೀಮತಿ ಜಯಶ್ರೀ ಬಸವರಾಜ್ ಅವರು ವಂದನೆಗಳನ್ನು ತಿಳಿಸಿದರು.

ಸಭಾ ಕಾರ್ಯಕ್ರಮದ ನಂತರ ಏರ್ಪಡಿಸಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸ್ಥಳೀಯ ಮಹಿಳಾ ಕಲಾವಿದರಿಂದ ಸಮೂಹ ಗಾಯನ ಮತ್ತು ನೃತ್ಯ ಪ್ರದರ್ಶನ ಪ್ರಸ್ತುತಗೊಂಡವು. ಜೊತೆಗೆ ವಿದುಷಿ ಶ್ರೀಮತಿ ಜ್ಯೋತಿ ಪಟ್ಟಾಭಿ ರಾಮ್ ಅವರ ಸಾರಥ್ಯದಲ್ಲಿ ಬೆಂಗಳೂರಿನ ಸಾಧನ ಸಂಗಮ ನೃತ್ಯ ಕೇಂದ್ರದ ಕಲಾವಿದರಿಂದ ವೈವಿಧ್ಯಮಯ ನೃತ್ಯಗಳು ಪ್ರದರ್ಶನಗೊಂಡು ದೆಹಲಿ ಕನ್ನಡಿಗರ ಮೆಚ್ಚುಗೆ ಪಡೆದವು. ಇದರೊಂದಿಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ 2026ರ ಕಾರ್ಯಕ್ರಮ ಬಹಳ ಹರ್ಷದ ವಾತಾವರಣದಲ್ಲಿ ಸಂಪನ್ನಗೊಂಡಿತು. ❑

***ಅಭಿಮತ ವರದಿ***

# ದೆಹಲಿಯ ನೆನಪಿನ ಬುತ್ತಿ

2000ನೇ ಇಸವಿಯಲ್ಲಿ ದೇಶದ ಬಹುದೊಡ್ಡ ಅರಸೇನೆಯಾದ CRPF ಗೆ ಸೇರಿ ದೇಶದ ಹಲವಾರು ರಾಜ್ಯಗಳಲ್ಲಿ ವರ್ಗಾವಣೆಯಾಗಿ ಅಲ್ಲಿನ ನೆಚ್ಚಿನ ಜಾಗಗಳನ್ನು ಸುತ್ತಾಡಿ ಅಲ್ಲಿನ ಜನ ಜೀವನ ಪರಿಸರದ ಜೊತೆಗೆ ಹೊಂದಿಕೊಂಡು ನನ್ನ ಸುಮಾರು 26 ವರ್ಷದ ಸುದೀರ್ಘ ಪಯಣದಲ್ಲಿ ವರ್ಗಾವಣೆ ಆದಂತ ಎಲ್ಲಾ ರಾಜ್ಯಗಳಲ್ಲೂ ಖುಷಿಯಾಗಿ ಇದ್ದು ಬಂದಿದ್ದೆ. ಆದರೆ, ನನಗೆ ಎಂದೆಂದಿಗೂ ದೆಹಲಿ ಎಂಬ ಜಾಗಕ್ಕೆ ಬರಲು ಅಸಲಿಗೆ ಇಷ್ಟ ಇರಲಿಲ್ಲ, ದೆಹಲಿ ಎಂದರೆ ಕೆಟ್ಟ ವಾತಾವರಣದ ದಟ್ಟ ಹೊಗೆಯ ಒರಟು ಜನರು ವಾಸಿಸುವ ಕಾಂಕ್ರೀಟ್ ಕಾಡು ಎಂಬ ಅನಿಸಿಕೆ ನನ್ನ ಮನಸ್ಸಿನಲ್ಲಿ ದಟ್ಟವಾಗಿ ತಳವೂರಿತ್ತು. ಅಂತಿಪ್ಪ ಈ ದೆಹಲಿಗೆ ಯಾವುದೇ ಕಾರಣಕ್ಕೂ ನಾನು ವರ್ಗಾವಣೆ ಆಗಬಾರದು ಎಂದೆನಿಸಿತ್ತು. ಆದರೆ, ತಾನೊಂದು ಬಗೆದರೆ ದೈವ ಒಂದು ಬಗೆದೀತು ಎಂಬ ಗಾದೆ ಮಾತಿನಂತೆ 2023ರ ವರ್ಗಾವಣೆಯು ಬಂದಾಗ ನಾನು ದಿಗಿಲುಗೊಂಡಿದ್ದೆ. ಏಕೆಂದರೆ, ನನ್ನ ಮನಸ್ಸಿನಲ್ಲಿ ಒಂದು ಕೆಟ್ಟ ನಗರ ಎಂದು ಮನೆ ಮಾಡಿದ್ದ ಆ ದೆಹಲಿಗೆ ನನ್ನ ವರ್ಗಾವಣೆಯಾದ ಬಗ್ಗೆ ಬೇಸರವಾಗಿತ್ತು, ಮನಸಿಲ್ಲದ ಮನಸ್ಸಿನಲ್ಲಿ ನಾನು ದೆಹಲಿಗೆ ಬಂದೆ.

ಆದರೆ ದೆಹಲಿ ಕರ್ನಾಟಕ ಸಂಘಕ್ಕೆ ಭೇಟಿ ನೀಡಿದ ನಂತರ ದೆಹಲಿ ಎಂದರೆ ಬರೀ ಒರಟು ಜನರು ವಾಸಿಸುವ ಕಾಂಕ್ರೀಟ್ ಕಾಡು ಎಂಬ ಭಾವನೆ ನಿಧಾನವಾಗಿ ನನ್ನಿಂದ ಮರೆಯಾಯಿತು ಮತ್ತು ನಮ್ಮ ದೆಹಲಿ ಕರ್ನಾಟಕ ಸಂಘದ ನಂಟನ್ನು ಮತ್ತು ಅಲ್ಲಿನ ಅಧ್ಯಕ್ಷರ ಹಾಗೂ ಹಿರಿಯರ ಮತ್ತು ಸಹೃದಯರ ಪ್ರೀತಿ ಸ್ನೇಹ ಗಳಿಸಲಿಕ್ಕೆ ದೆಹಲಿಗೆ ಬಂದಿದ್ದು ಸಾರ್ಥಕವಾಯಿತು ಎಂದೆನಿಸಿತು. ಸಂಘದ ಎಲ್ಲಾ ಕಾರ್ಯಕ್ರಮಗಳಲ್ಲೂ ಭಾಗವಹಿಸಿ ನನ್ನದೇ ಬರವಣಿಗೆ ಶೈಲಿಯಲ್ಲಿ ಅಲ್ಲಿ ನಡೆದ ಕಾರ್ಯಕ್ರಮದ ವಿವರಣೆಯೊಂದಿಗೆ ಅಲ್ಲಿನ ವಾತಾವರಣದ ಬಗ್ಗೆ ಮತ್ತು ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸದಸ್ಯರು ಅವರ ಪರಿವಾರದವರ ಪರಸ್ಪರ ಪ್ರೀತಿ, ಸ್ನೇಹ, ಆತ್ಮೀಯತೆಗೆ ಹಾಗೂ ಅವರ ಕನ್ನಡಾಭಿಮಾನಕ್ಕೆ ಮನಸೋತು ಸಂಘದ ರಾಯಭಾರಿಯಂತೆ ನಮ್ಮ ನಾಡಿನ ಹಲವಾರು ಪತ್ರಿಕೆಗಳಲ್ಲಿ ವರದಿ ಮಾಡಿದೆ. ಇದರಿಂದ ನಾನು ತುಂಬಾ ಕಡಿಮೆ ಸಮಯದಲ್ಲಿ ಸಂಘದ ಎಲ್ಲರ ಗಮನ ಸೆಳೆದೆ ಮತ್ತು ಎಲ್ಲರಿಗೂ ಹತ್ತಿರನಾದೆ. ಅದು ಸಂಘದ ಅಧ್ಯಕ್ಷರು, ಹಿರಿಯರು ಹಾಗೂ ಸಹೃದಯರು ನನ್ನ ಮೇಲೆ ತೋರಿದ ಪ್ರೀತಿ ಸ್ನೇಹದ ಪ್ರಭಾವವೆಂದು ಹೇಳಬೇಕು. ಒಟ್ಟಿನಲ್ಲಿ ದುರ್ಗಮ ಜಗತ್ತು ಎಂದು ಯಾವ ದೆಹಲಿಯನ್ನು ನಾನು ದ್ವೇಷಿಸುತ್ತಿದ್ದೇನೋ ಅಂತಹ ಪ್ರದೇಶದಲ್ಲಿ ಒಂದು ನಿರ್ಮಲ ವಾತಾವರಣದ ಸ್ವಚ್ಛಂದ ಮನಸುಗಳ ಒಂದು ಪುಟ್ಟ ಕನ್ನಡ ಸಾಮ್ರಾಜ್ಯವನ್ನು ಕಂಡು ದೆಹಲಿಗೆ ಬಂದಿದ್ದು ಇದನ್ನ ನೋಡುವ ಭಾಗ್ಯಕ್ಕೇನೋ ಎಂದು ಅಂದುಕೊಂಡೆ. ಅಕಸ್ಮಾತ್ ನಾನು ದೆಹಲಿಗೆ ಬರದೇ ಹೋಗಿದ್ದರೆ ದೆಹಲಿ ಕರ್ನಾಟಕ ಸಂಘದ ಬಗ್ಗೆ, ಅಧ್ಯಕ್ಷರ ಕನ್ನಡದ ಕಾಳಜಿಯ ಬಗ್ಗೆ ಮತ್ತು ದೆಹಲಿ ಕನ್ನಡಿಗರ ಕನ್ನಡಾಭಿಮಾನದ ಬಗ್ಗೆ ನನಗೆ ಗೊತ್ತಾಗುತ್ತಿರಲಿಲ್ಲ ಮತ್ತು ಸಂಘದ ಎಲ್ಲರ ಸ್ನೇಹ ಪ್ರೀತಿಯಿಂದ ವಂಚಿತನಾಗುತ್ತಿದ್ದೆ ಎಂದೆನಿಸುತ್ತದೆ.

ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಸಾಹಿತ್ಯೋತ್ಸವದಲ್ಲಿ ಪಾಲ್ಗೊಂಡು ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ಬಗ್ಗೆ ವಿಚಾರ ಮಂಡನೆ ಮಾಡಿ ಸಂಘದ ಅಧ್ಯಕ್ಷರು ಮತ್ತು ಸಹೃದಯರಿಂದ ಮಾಸ್ತಿಯವರು ಕನ್ನಡದ ಆಸ್ತಿಯಾದರೆ ನೀವು ನಮ್ಮ ಸಂಘದ ಆಸ್ತಿ ಎಂದು ಕರೆಸಿಕೊಂಡೆ, ನಾಟಕೋತ್ಸವದಲ್ಲಿ ಪಾಲ್ಗೊಂಡು ನಮ್ಮ–ನೆಲ ಜೀವ–ಜಲ ಎಂಬ ಶ್ರೀ ನರಸಿಂಹ ಮೂರ್ತಿ ಸರ್ ರಚಿಸಿ ನಿರ್ದೇಶಿಸಿದ ನಾಟಕದಲ್ಲಿ ದೇವರಾಯ ಪಾತ್ರವನ್ನು ಅಭಿನಯಿಸಿ ಎಲ್ಲರನ್ನೂ ರಂಜಿಸಿದೆ, ಗೀತೋತ್ಸವದಲ್ಲಿ ಪಾಲ್ಗೊಂಡು ಸ್ವರಚಿತ ಕವನ ವಾಚಿಸಿದೆ, ಅಲ್ಲದೆ ಸಂಘದಲ್ಲಿ ನಡೆದ ಆಹಾರೋತ್ಸವ, ಕ್ರೀಡೋತ್ಸವ, ಕ್ರಿಕೆಟ್ ಪಂದ್ಯಾವಳಿ ಮತ್ತು ಆಟೋಟ ಸ್ಪರ್ಧೆಗಳು, ಆರೋಗ್ಯೋತ್ಸವ, ಕುವೆಂಪು ಕುರಿತ ವಿಚಾರ ಸಂಕಿರಣ ಕಾರ್ಯಕ್ರಮ, ಬಸವಣ್ಣನವರ ಕಾರ್ಯಕ್ರಮ, ಕನ್ನಡ ರಾಜ್ಯೋತ್ಸವ ಯಾದಿಯಾಗಿ ಹಲವಾರು ಕಾರ್ಯಕ್ರಮಗಳ ಬಗ್ಗೆ ವರದಿಗಳನ್ನು ಬರೆದು ದೆಹಲಿಯಲ್ಲಿನ ಕನ್ನಡಪರ ಕಾರ್ಯಗಳ ಬಗ್ಗೆ ನಾಡಿನ ಅನೇಕ ಪತ್ರಿಕೆಗಳಲ್ಲಿ ಹಾಗು ಅಭಿಮತ ಪತ್ರಿಕೆಯಲ್ಲಿ ಪ್ರಕಟಿಸಿದ್ದದ್ದು ನನ್ನ ಭಾಗ್ಯ ಎಂದು ಭಾವಿಸುತ್ತೇನೆ. ಶ್ರೀ ಸಿ.ಎಂ. ನಾಗರಾಜರವರ ಅಧ್ಯಕ್ಷೀಯ ಅವಧಿಯಲ್ಲಿ ಪ್ರತಿ ವಾರವೂ ಒಂದೊಂದು ಸಂಭ್ರಮಭರಿತ ಕಾರ್ಯಕ್ರಮಗಳು ಸಂಘದಲ್ಲಿ ನಡೆಯುತ್ತಾ ಬಂದು ದೆಹಲಿ ಕನ್ನಡಿಗರನ್ನು ರಂಜಿಸುವ ಕೆಲಸ ಮಾಡಿದ್ದು ನೋಡಿ ಕಣ್ತುಂಬಿಸಿಕೊಂಡೆ, ಈಗ ರಚನೆಯಾಗಿರುವ ಹೊಸ ಕಾರ್ಯಕಾರಿ ಸಮಿತಿಯು ಸಹಾ ದೆಹಲಿ ಕನ್ನಡಿಗರನ್ನು ರಂಜಿಸುವ ಹಲವಾರು ಉತ್ತಮ ಕಾರ್ಯಕ್ರಮಗಳನ್ನು ನೀಡಲಿ ಎಂದು ಶುಭ ಹಾರೈಸುತ್ತೇನೆ.

ಅಂದಹಾಗೆ, ನನಗೆ ದೆಹಲಿಯಿಂದ ಹೈದರಾಬಾದಿಗೆ ವರ್ಗಾವಣೆ ಆಗಿರುವ ಕಾರಣ ನಾನು ದೆಹಲಿಯಿಂದ ಮೇ ತಿಂಗಳ 22 ರಂದು ಹೈದರಾಬಾದಿಗೆ ತೆರಳುತ್ತಿದ್ದೇನೆ. ದೆಹಲಿಯಲ್ಲಿ ನೀವೆಲ್ಲರೂ ತೋರಿದ ಪ್ರೀತ್ಯಾದರಗಳಿಂದ, ಸ್ನೇಹ ಸಂಬಂಧದಿಂದ 2–3 ವರುಷ ಕಳೆದಿದ್ದೇ ತಿಳಿಯಲಿಲ್ಲ. ನಿಮ್ಮಗಳ ಸಹಕಾರ, ಪ್ರೋತ್ಸಾಹ, ಪ್ರೀತಿ, ವಾತ್ಸಲ್ಯ ಮತ್ತು ಸ್ನೇಹ, ಸಂಬಂಧದ ನೆನಪಿನ ಬುತ್ತಿಯನ್ನು ಮನದಲ್ಲಿ ತುಂಬಿಕೊಂಡು ಹೊರಟಿದ್ದೇನೆ. ದೆಹಲಿಯಿಂದ ಹೊರಟರೂ ನನಗೆ ನಿಮ್ಮೆಲ್ಲರ ನೆನಪು ಮಾತ್ರ ನನ್ನ ಜೀವನದ ಪುಸ್ತಕದಲ್ಲಿ ಹಚ್ಚ ಹಸಿರಾಗಿ ಇರುತ್ತದೆ. ಕುವೆಂಪು ಅವರಿಗೆ ಶಿವಮೊಗ್ಗದಲ್ಲಿದ್ದಾಗ ಮೈಸೂರಿನ ನೆನಪು ಕಾಡಿದಂತೆ, ಕೆ.ಎಸ್. ನಿಸಾರ್ ಅಹಮದ್ ಅವರಿಗೆ ಬೆಂಗಳೂರಿನಲ್ಲಿದ್ದಾಗ ಶಿವಮೊಗ್ಗದ ನೆನಪು ಕಾಡಿದಂತೆ ನಾನು ಹೈದರಾಬಾದಿನಲ್ಲಿರಲಿ, ಬೆಂಗಳೂರಿನಲ್ಲಿರಲಿ ಅಥವಾ ಚಿತ್ರದುರ್ಗದಲ್ಲಿದ್ದರೂ ನನಗೆ ದೆಹಲಿಯ ನಿಮ್ಮೆಲ್ಲರ ನೆನಪು ಸದಾ ಕಾಡುವುದಂತೂ ಸತ್ಯ. ❑

ಧನ್ಯವಾದಗಳು.



***ವೆಂಕಟೇಶ ಹೆಚ್.***
ಪೋಲೀಸ್ ಉಪ ನಿರೀಕ್ಷಕರು,
ಸಿ.ಆರ್.ಪಿ.ಎಫ್., ಚಿತ್ರದುರ್ಗ
ಮೊ: 9742933400

# 2024 ಮತ್ತು 2025ನೇ ಸಾಲಿನ ಸಂಘದ ವಿವಿಧ ಪ್ರಶಸ್ತಿಗಳ ಪ್ರದಾನ ಸಮಾರಂಭ–ಪ್ರಶಸ್ತಿ ಪುರಸ್ಕೃತರಾದ ನಾಡಿನ ಗಣ್ಯಮಾನ್ಯರಿಗೆ ಅಭಿನಂದನೆ




ಕನ್ನಡ ಸಾಹಿತ್ಯ, ಶಿಕ್ಷಣ, ವಿಜ್ಞಾನ, ಕವಿತೆ, ರಂಗಭೂಮಿ, ಸಿನೆಮಾ, ಪ್ರಕಾಶನ, ಯಕ್ಷಗಾನ ಮತ್ತು ಪರಿಸರ ಮುಂತಾದ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿ ಕನ್ನಡ ಭಾಷೆ, ನಾಡು ನುಡಿಗಾಗಿ ತಮ್ಮದೇ ಆದ ಅಪರಿಮಿತ ಸೇವೆ ಸಲ್ಲಿಸಿದ ಕರ್ನಾಟಕದ ಹಲವಾರು ಗಣ್ಯ ಸಾಧಕರನ್ನು ಗುರುತಿಸಿ ಪ್ರತಿವರ್ಷ ದೆಹಲಿ ಕರ್ನಾಟಕ ಸಂಘದಿಂದ ನಾಲ್ಕು ಪ್ರಶಸ್ತಿಗಳನ್ನು ಪ್ರದಾನ ಮಾಡಲಾಗುತ್ತಿದೆ. 2024 ಮತ್ತು 2025ನೇ ವರ್ಷದ ಸಂಘದ ನಾಲ್ಕು ಪ್ರಶಸ್ತಿಗಳಿಗೆ ಭಾಜನರಾದ ವಿವಿಧ ಕ್ಷೇತ್ರಗಳಲ್ಲಿನ ಎಂಟು ಗಣ್ಯ ಸಾಧಕರಿಗೆ ಪ್ರಶಸ್ತಿ ನೀಡಿ ಪುರಸ್ಕರಿಸುವ ಸಮಾರಂಭವನ್ನು ದಿನಾಂಕ 08.02.2026ರಂದು ಭಾನುವಾರ ಸಂಜೆ ಸಂಘದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಸಂಘದ ಕಾರ್ಯಕಾರಿ ಸಮಿತಿಯ ಸರ್ವ ಸಮ್ಮತಿಯಿಂದ ಎರಡೂ ವರ್ಷದ ನಾಲ್ಕು ಪ್ರಶಸ್ತಿಗಳಿಗೆ ಆಯ್ಕೆ ಮಾಡಲಾಗಿದ್ದ ನಾಡಿನ ಎಂಟು ಹಿರಿಯ ಸಾಧಕರಲ್ಲಿ ಒಬ್ಬರ ಹೊರತು ಎಲ್ಲರೂ ಕಾರ್ಯಕ್ರಮಕ್ಕೆ ಆಗಮಿಸಿದ್ದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ವಿಶ್ವವಾಣಿ ಎಡಿಟರ್ ಇನ್ ಚೀಫ್ ಶ್ರೀ ವಿಶ್ವೇಶ್ವರ ಭಟ್ ಆಗಮಿಸಿ ಗೌರವ ಉಪಸ್ಥಿತರಿದ್ದರು. ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ವೇದಿಕೆ ಮೇಲಿದ್ದರು. ಸ್ಥಳೀಯ ಮಹಿಳೆಯರಿಂದ ಸಮೂಹ ನಾಡಗೀತೆಯೊಂದಿಗೆ ಸಭಾ ಕಾರ್ಯಕ್ರಮ ಪ್ರಾರಂಭವಾಯಿತು. ಕಾರ್ಯಕ್ರಮದ ನಿರೂಪಣೆಯನ್ನು ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ಪಿ. ರಾವ್ ಅವರು ನಿರ್ವಹಿಸಿದರು.

ವೇದಿಕೆ ಮೇಲೆ ಆಗಮಿಸಿದ್ದ ಅತಿಥಿಗಣ್ಯರನ್ನು ಮತ್ತು ಸಭಾಂಗಣದಲ್ಲಿ ಆಸೀನರಾಗಿದ್ದ ಸಭಿಕರನ್ನು ಸಂಘದ ಪರವಾಗಿ ಆತ್ಮೀಯವಾಗಿ ಸ್ವಾಗತಿಸಿದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಸಂಘ ನೀಡುತ್ತಿರುವ ನಾಲ್ಕು ಪ್ರಶಸ್ತಿಗಳಿಗೆ ಪುರಸ್ಕೃತರಾಗುತ್ತಿರುವ ಸಾಧಕರ ಕುರಿತು ಸಂಕ್ಷಿಪ್ತ ಮಾಹಿತಿ ತಿಳಿಸುತ್ತಾ ಅವರಿಗೆ ಹಾಗೂ ಮುಖ್ಯ ಅತಿಥಿಗಳಿಗೆ ಕಾರ್ಯಕ್ರಮಕ್ಕೆ ಆಗಮಿಸಿದ್ದಕ್ಕಾಗಿ ಕೃತಜ್ಞತೆಗಳನ್ನು ತಿಳಿಸಿದರು. ಸಂಘವು ಅಮೃತ ಕಾಲದಲ್ಲಿ ಹಮ್ಮಿಕೊಂಡ ಕಾರ್ಯಕ್ರಮಗಳ ಬಗ್ಗೆ ಮತ್ತು ಮುಂಬರುವ ದಿನಗಳಲ್ಲಿ ಯೋಚಿಸಲಾದ ಕಾರ್ಯ ಯೋಜನೆಗಳ ಕಿರು ನೋಟವನ್ನು ನೀಡಿ, ಎಲ್ಲರಿಗೂ ಶುಭಾಶಯಗಳನ್ನು ತಿಳಿಸಿದರು.



ವೇದಿಕೆಯಲ್ಲಿದ್ದ ಅತಿಥಿ ಗಣ್ಯರಿಂದ ದೀಪ ಪ್ರಜ್ವಲನೆ ಮಾಡುವುದರ ಮೂಲಕ ಸಮಾರಂಭಕ್ಕೆ ಚಾಲನೆ ನೀಡಲಾಯಿತು. ಅನಂತರ ವಿವಿಧ ಪ್ರಶಸ್ತಿಗಳನ್ನು ಸಾಧಕರಿಗೆ ಪ್ರದಾನ ಮಾಡಲಾಯಿತು. ಮೊದಲಿಗೆ ಸಂಘದ ಅಮೃತ ಮಹೋತ್ಸವ ಸಂದರ್ಭ 2023 ರಲ್ಲಿ ಸ್ಥಾಪಿಸಲಾದ ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಮಾಡಿದ ಸಾಧನೆಗಾಗಿ ನೀಡಲಾಗುವ 'ಜ್ಞಾನಪೀಠ ಪುರಸ್ಕೃತ ರಾಷ್ಟ್ರಕವಿ ಕುವೆಂಪು' ಪ್ರಶಸ್ತಿಯನ್ನು 2024ನೇ ಸಾಲಿಗೆ ನಾಡಿನ ಹಿರಿಯ ಸಾಹಿತಿ, ಪ್ರಾಧ್ಯಾಪಕ ಹಾಗೂ ಕುವೆಂಪು ಶಿಷ್ಯರಾದ ನಾಡೋಜ ಡಾ. ಹಂಪ ನಾಗರಾಜಯ್ಯನವರಿಗೆ ಮತ್ತು 2025ನೇ ಸಾಲಿನ ಈ ಪ್ರಶಸ್ತಿಯನ್ನು ಕುವೆಂಪು ಅವರ ಬಗ್ಗೆ ಆಳವಾದ ಅಧ್ಯಯನ ಮಾಡಿರುವ ಕನ್ನಡದ ಹಿರಿಯ ಅನುವಾದಕ ಮತ್ತು ಬರಹಗಾರ ಡಾ. ಪ್ರಧಾನ್ ಗುರುದತ್ತ ಅವರಿಗೆ ನೀಡಿ ಸನ್ಮಾನಿಸಲಾಯಿತು. ಅವರುಗಳ ಅಭಿನಂದನಾ ಪತ್ರವನ್ನು ಕ್ರಮವಾಗಿ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಕೆ.ಎಸ್. ಮೂರ್ತಿ ಹಾಗೂ ಜಂಟಿ ಕಾರ್ಯದರ್ಶಿ ಶ್ರೀ ನಾರಾಯಣ ಬಿ. ಅವರು ಓದಿ ಸಭಿಕರಿಗೆ ಅವರಿಬ್ಬರ ಪರಿಚಯ ಮಾಡಿಕೊಟ್ಟರು.

ಅನಂತರ, 1998ರಲ್ಲಿ ಸ್ಥಾಪಿತವಾದ ಯಕ್ಷಗಾನ, ವಿಜ್ಞಾನ, ಪರಿಸರ, ಸಾಹಿತ್ಯ, ಕವಿತೆ, ಪ್ರಕಾಶನ

ಮುಂತಾದ ಕ್ಷೇತ್ರಗಳಲ್ಲಿನ ಸಾಧಕರಿಗೆ ನೀಡುವ ಡಾ. ಕೆ. ಶಿವರಾಮ ಕಾರಂತ ಪ್ರಶಸ್ತಿಯನ್ನು 2025 ನೇ ಸಾಲಿಗೆ ಯಕ್ಷಗಾನ ಕ್ಷೇತ್ರದಲ್ಲಿ ಅತ್ಯಂತ ವಿಶೇಷವಾದ ಸೇವೆ ಸಲ್ಲಿಸಿರುವ ಶ್ರೀ ಪಟ್ಲ ಸತೀಶ್ ಶೆಟ್ಟಿಯವರಿಗೆ ನೀಡಿ ಗೌರವಿಸಿ ಅಭಿನಂದಿಸಲಾಯಿತು. ಅವರ ಪರಿಚಯವನ್ನು ಶ್ರೀ ನಾರಾಯಣ ಬಿ. ಮಾಡಿಕೊಡುತ್ತಾ ಅಭಿನಂದನಾ ಪತ್ರವನ್ನು ಓದಿದರು. 2024 ನೇ ಸಾಲಿನ ಈ ಪ್ರಶಸ್ತಿಗೆ ಭಾಜನರಾದ ಶ್ರೀ ಕೆರೆಮನೆ ಶಿವಾನಂದ ಹೆಗಡೆ ಅವರು ಕಾರಣಾಂತರಗಳಿಂದ ಬರದಿದ್ದ ಕಾರಣ ಅವರಿಗೆ ಈ ಪ್ರಶಸ್ತಿಯನ್ನು ಸಂಘದ ಮುಂದಿನ ದಿನಗಳ ಕಾರ್ಯಕ್ರಮದಲ್ಲಿ ನೀಡಲಾಗುವುದೆಂದು ಘೋಷಿಸಲಾಯಿತು.

ತದನಂತರ 2015ರಲ್ಲಿ ಸಂಘದ ಮಾಜಿ ಅಧ್ಯಕ್ಷರ ಹೆಸರಿನಲ್ಲಿ ಸ್ಥಾಪಿಸಲಾದ ಸಾಹಿತ್ಯ ಕ್ಷೇತ್ರದಲ್ಲಿ ಮಾಡಿದ ಸಾಧನೆಗೆ ನೀಡುವ 'ಡಾ. ಸರೋಜಿನಿ ಮಹಿಷಿ ಪ್ರಶಸ್ತಿ'ಯನ್ನು 2024ನೇ ಸಾಲಿಗೆ ಕನ್ನಡದ ಪ್ರಸಿದ್ಧ ಪ್ರೇಮಕವಿ ಶ್ರೀ ಬಿ.ಆರ್. ಲಕ್ಷ್ಮಣ್‌ರಾವ್ ಅವರಿಗೆ ಹಾಗೂ 2025ನೇ ಸಾಲಿನ ಈ ಪ್ರಶಸ್ತಿಯನ್ನು ಕನ್ನಡದ ಸಾಹಿತಿ, ಮಹಾ ಕವಯಿತ್ರಿ ಡಾ. ಲತಾ ರಾಜಶೇಖರ್ ಅವರಿಗೆ ಪ್ರದಾನ ಮಾಡಿ ಅಭಿನಂದಿಸಲಾಯಿತು. ಅವರುಗಳ ಪರಿಚಯವನ್ನು ಕ್ರಮವಾಗಿ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಪ್ರಭಾಕರ ಮಡ್ಡಿತೋಟ್ ಮತ್ತು ಖಜಾಂಚಿ ಶ್ರೀಮತಿ ಆಶಾಲತಾ ಎಂ. ಅವರು ಅಭಿನಂದನಾ ಪತ್ರ ಓದುವುದರ ಮೂಲಕ ಮಾಡಿಕೊಟ್ಟರು.

ತರುವಾಯ, 2016ರಲ್ಲಿ ಸ್ಥಾಪಿಸಲ್ಪಟ್ಟಿದ್ದ ರಂಗಭೂಮಿ, ಕನ್ನಡ ನಾಟಕ, ಸಿನೆಮಾ ಕ್ಷೇತ್ರಗಳಲ್ಲಿನ ಸಾಧಕರಿಗೆ ನೀಡುವ ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತೀ ರಂಗ ಪ್ರಶಸ್ತಿಯನ್ನು 2024ನೇ ಸಾಲಿಗೆ ಆಯ್ಕೆಯಾದ ಕನ್ನಡ ಚಲನಚಿತ್ರ ರಂಗದ ಪ್ರಸಿದ್ಧ ನಿರ್ದೇಶಕರೂ, ರಂಗಭೂಮಿ ಕಲಾವಿದ, ನಿರ್ದೇಶಕರು ಮತ್ತು ದೂರದರ್ಶನ ಧಾರವಾಹಿಗಳ ನಿರ್ಮಾಪಕ, ನಿರ್ದೇಶಕರೂ ಹಾಗೂ ರಂಗಕರ್ಮಿಗಳಾದ ಡಾ. ಟಿ.ಎಸ್. ನಾಗಾಭರಣ ಅವರಿಗೆ ಮತ್ತು 2025ನೇ ವರ್ಷದ ಈ ಪ್ರಶಸ್ತಿಯನ್ನು ಕನ್ನಡ, ತಮಿಳು ಮತ್ತು ತೆಲುಗು ಚಿತ್ರರಂಗದ ಪ್ರಸಿದ್ಧ ನಟರಾದ ಶ್ರೀ ಚರಣ್‌ರಾಜ್ ಅವರಿಗೆ ನೀಡಿ ಸನ್ಮಾನಿಸಲಾಯಿತು. ಅವರುಗಳ ಪರಿಚಯವನ್ನು ಕ್ರಮವಾಗಿ ಸಮಿತಿ ಸದಸ್ಯರಾದ ಶ್ರೀ ಕೆ.ಎಸ್. ಮೂರ್ತಿ ಮತ್ತು ಶ್ರೀ ಶಶಿಕಾಂತ್ ಪಿ. ಪಾಟೀಲ ಅವರು ಮಾಡಿಕೊಟ್ಟರು.

ಪ್ರಶಸ್ತಿಗಳನ್ನು ಪ್ರದಾನ ಮಾಡಿದ ನಂತರ ಅತಿಥಿ ಗಣ್ಯರು ಹಾಗು ಪುರಸ್ಕೃತರೊಂದಿಗೆ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಹಾಗು ಸದಸ್ಯರ ಸಮೂಹ ಫೋಟೋ ಪಡೆಯಲಾಯಿತು.

ಮುಖ್ಯ ಅತಿಥಿಗಳಾದ ಶ್ರೀ ವಿಶ್ವೇಶ್ವರ್ ಭಟ್, ಪ್ರಧಾನ ಸಂಪಾದಕರು ವಿಶ್ವವಾಣಿ ಕನ್ನಡ ದಿನಪತ್ರಿಕೆ ಅವರು ಮಾತನಾಡಿ ದೆಹಲಿ ಕರ್ನಾಟಕ ಸಂಘವು ಜ್ಞಾನಪೀಠ ಪುರುಸ್ಕೃತ ಡಾ. ಶಿವರಾಮ ಕಾರಂತ, ಕನ್ನಡ ಭಾರತೀ ರಂಗ ಪ್ರಶಸ್ತಿ, ಡಾ. ಸರೋಜಿನಿ ಮಹಿಷಿ ಪ್ರಶಸ್ತಿ ಹಾಗೂ ರಾಷ್ಟ್ರಕವಿ ಕುವೆಂಪು ಪ್ರಶಸ್ತಿಯನ್ನು ಇಂದು ನೀಡಿ ಗೌರವಿಸಿದೆ. ಈ ಪ್ರಶಸ್ತಿಗಳನ್ನು ನೀಡುವಾಗ ನಾವು ಯಾರಿಗೆ ಪ್ರಶಸ್ತಿಯನ್ನು ಕೊಡುತ್ತೇವೆ ಎನ್ನುವುದು ಮುಖ್ಯವಾಗುತ್ತದೆ ಹಾಗೆಯೇ ಆ ಪ್ರಶಸ್ತಿಯನ್ನು ಯಾರ ಹೆಸರಿನಲ್ಲಿ ಸ್ಥಾಪಿಸಿ ಕೊಡಮಾಡುತ್ತಿದ್ದೇವೆ ಎನ್ನುವುದು ಕೂಡಾ ಅಷ್ಟೇ ಮುಖ್ಯವಾಗುತ್ತದೆ. ಡಾ. ಶಿವರಾಮ ಕಾರಂತರು, ಡಾ.ಸರೋಜಿನಿ ಮಹಿಷಿ, ರಾಷ್ಟ್ರಕವಿ ಕುವೆಂಪು, ಕನ್ನಡ ಭಾರತೀ ರಂಗ ಪ್ರಶಸ್ತಿ ಇಂತಹ ಗಣ್ಯ ಮಾನ್ಯರ ಹೆಸರಿನಲ್ಲಿ ಪ್ರಶಸ್ತಿಯನ್ನು ಸ್ಥಾಪನೆ ಮಾಡಿದಾಗ ಅಷ್ಟೇ ತೂಕದ ವ್ಯಕ್ತಿಗಳಿಗೇ ಪ್ರಶಸ್ತಿಯನ್ನು ನೀಡಬೇಕಾಗುತ್ತದೆ. ಹಾಗೇಯೇ ಇಂದು ಪ್ರಶಸ್ತಿಗೆ ಆಯ್ಕೆಯಾದ ಎಲ್ಲರೂ ಕೂಡಾ ಅಷ್ಟೇ ತೂಕದ ವ್ಯಕ್ತಿಗಳಾಗಿದ್ದಾರೆ. ಪ್ರಶಸ್ತಿಯನ್ನು ಸಾಧನೆ ಮಾಡಿದವರಿಗೆ ನೀಡಬೇಕು, ಆದರೆ ವಿಪರ್ಯಾಸವೇನೆಂದರೆ ಪ್ರಶಸ್ತಿಯನ್ನು ತೆಗೆದುಕೊಳ್ಳುವುದೇ ಇಂದು ಒಂದು ದೊಡ್ಡ ಸಾಧನೆಯಾಗಿದೆ. ಇಂದು ಪ್ರಶಸ್ತಿ ಸ್ವೀಕರಿಸಿದ ಎಲ್ಲರೂ ನನಗೆ ಆತ್ಮೀಯರಾದವರು. ನಾನು ಒಂದಲ್ಲ ಒಂದು ಸಂದರ್ಭದಲ್ಲಿ ಅವರೊಂದಿಗೆ ಒಡನಾಡಿದವನು ಮತ್ತು ಅವರಿಂದ ಪ್ರೇರೇಪಿತನಾದವನು, ಪ್ರಶಸ್ತಿ ಸ್ವೀಕರಿಸಿದ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಅಗಾಧ ಸಾಧನೆಯನ್ನು ಮಾಡಿದವರು, ಹಾಗಾಗಿ ಇಂದು ಈ ಪ್ರಶಸ್ತಿಗೇ ಮೌಲ್ಯ ಜಾಸ್ತಿಯಾಗಿದೆ ಎಂದರೆ ಅತಿಶಯೋಕ್ತಿಯಾಗಲಾರದು ಎಂದರು. ಸತ್ಪಾತ್ರರಿಗೆ ಪ್ರಶಸ್ತಿ ಬಂದಾಗ ಆ ಪ್ರಶಸ್ತಿಯ ಮೌಲ್ಯ ಮತ್ತು ಮಹತ್ವ ಜಾಸ್ತಿಯಾಗುತ್ತದೆ. ಇಂದು ಪ್ರಶಸ್ತಿಗೆ ಆಯ್ಕೆಯಾದ ಎಲ್ಲರೂ ಕೂಡಾ ಅತ್ಯಂತ ಗಣ್ಯರು. ಇದರಿಂದಾಗಿ ದೆಹಲಿ ಕರ್ನಾಟಕ ಸಂಘಕ್ಕೂ ಕೂಡಾ ಅದರ ಘನತೆ ಜಾಸ್ತಿಯಾಗಿದೆ, ಈ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘವನ್ನು ಕಟ್ಟಿ ಬೆಳೆಸುವಲ್ಲಿ ಶ್ರಮಿಸಿದ ಎಲ್ಲ ಮಹನೀಯರುಗಳನ್ನು ಸ್ಮರಿಸಿ ಅವರ ಕೊಡುಗೆಗಳನ್ನು ಶ್ಲಾಘಿಸುತ್ತಾ ದೆಹಲಿ ಕರ್ನಾಟಕ ಸಂಘ ಇನ್ನೂ ಹೆಚ್ಚಿನ ಉತ್ತುಂಗಕ್ಕೆ ಏರಲಿ ಎಂದು ಶುಭ ಹಾರೈಸಿದರು.

ನಂತರ ಸಂಘದ ಅಭಿನಂದನೆ ಸ್ವೀಕರಿಸಿದ ಪ್ರಶಸ್ತಿ ಪುರಸ್ಕೃತರು ಮಾತನಾಡಿದರು. ಮೊದಲಿಗೆ 2025ನೇ ಸಾಲಿನ ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತೀ ರಂಗ ಪ್ರಶಸ್ತಿಯನ್ನು ಸ್ವೀಕರಿಸಿದ ಶ್ರೀ ಚರಣ್‌ರಾಜ್ ಅವರು ಮಾತನಾಡಿ ತಾವು ಇಂದು ಈ ಮಟ್ಟವನ್ನು ತಲುಪಬೇಕಾದರೆ ಚಿಕ್ಕಂದಿನಿಂದ ಇಲ್ಲಿಯವರೆಗೆ ಕಷ್ಟಪಟ್ಟ ಸಮಯಗಳನ್ನು ನೆನಪಿಸಿಕೊಂಡು ತಮ್ಮ ಜೀವನದ ವಿವಿಧ ಕಾಲಘಟ್ಟಗಳ ಸಂದರ್ಭಗಳನ್ನು ಮೆಲುಕು ಹಾಕುತ್ತಾ ಇಂದಿನ ವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದ ಮಕ್ಕಳ ಪ್ರತಿಭೆಯನ್ನು ಪ್ರಶಂಸಿಸಿ ಒಳ್ಳೆಯ ಪ್ರೋತ್ಸಾಹ ಪಡೆದು ಅವರು ದೊಡ್ಡವರಾದ ಮೇಲೆ ಒಳ್ಳೆಯ ಪ್ರತಿಭೆಗಳಾಗಿ ಹೊರಬರಲಿ, ಕಲೆಗೆ ತುಂಬಾ ಬೆಲೆ ಇದೆ ಮಕ್ಕಳಲ್ಲಿನ ಕಲೆಯನ್ನು ಪ್ರೋತ್ಸಾಹಿಸಿ ಎಂದು ಹೇಳಿದರು. ಕಲೆ ಯಾರೊಬ್ಬರ ಸ್ವತ್ತಲ್ಲ, ಅದೊಂದು ದೊಡ್ಡ ಸಮುದ್ರವಿದ್ದಂತೆ, ಈಜು ಬಲ್ಲವನು ದಡ ಸೇರಬಲ್ಲನು, ಹಾಗೆಯೇ ಯಾರೊಬ್ಬರೂ ಕೂಡಾ ಸಾಧನೆಯನ್ನು ಮಾಡಬಹುದು ಎಂದು ತಿಳಿಸುತ್ತಾ ತಮ್ಮ ಪ್ರತಿಭೆಯನ್ನು ಗುರುತಿಸಿ ಪ್ರಶಸ್ತಿಯನ್ನು ನೀಡಿದ್ದಕ್ಕಾಗಿ ಸಂಘಕ್ಕೆ ಕೃತಜ್ಞತೆಯನ್ನು ಸಲ್ಲಿಸಿದರು.







ಅನಂತರ 2024ನೇ ಸಾಲಿನ ಡಾ. ಕೆ. ಶಿವರಾಮ ಕಾರಂತ ಪ್ರಶಸ್ತಿಗೆ ಭಾಜನರಾದ ಶ್ರೀ ಸತೀಶ್ ಶೆಟ್ಟಿ ಪಟ್ಲ ಅವರು ಮಾತನಾಡಿ ಇದು ನನ್ನ ಜೀವನದ ಒಂದು ಶ್ರೇಷ್ಠ ಪ್ರಶಸ್ತಿ ಎಂದು ಭಾವಿಸುತ್ತೇನೆ, ಏಕೆಂದರೆ ಯಕ್ಷಗಾನದ ಪಿತಾಮಹ ಪಾರ್ಥಿಸುಬ್ಬರು ಹಾಗೂ ನಂತರದ ದಿನಗಳಲ್ಲಿ ಯಕ್ಷಗಾನ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಹೆಸರು ಗಳಿಸಿದ ಡಾ. ಶಿವರಾಮ ಕಾರಂತರು, ಅವರ ಹೆಸರಿನ ಪ್ರಶಸ್ತಿಗೆ ತಮ್ಮನ್ನು ಆಯ್ಕೆ ಮಾಡಿ ಪ್ರಶಸ್ತಿಯನ್ನು ನೀಡಿದ್ದಕ್ಕಾಗಿ ಅಭಾರ ಮನ್ನಣೆಯನ್ನು ಸಲ್ಲಿಸಿದರು.

2025ನೇ ಸಾಲಿನ ಡಾ. ಸರೋಜಿನಿ ಮಹಿಷಿ ಪ್ರಶಸ್ತಿಯನ್ನು ಸ್ವೀಕರಿಸಿದ ಮಹಾ ಕವಯಿತ್ರಿ ಡಾ. ಲತಾ ರಾಜಶೇಖರ್ ಅವರು ಮಾತನಾಡಿ ತಮ್ಮ ಸಾಹಿತ್ಯ ಕ್ಷೇತ್ರದಲ್ಲಿನ ಕೃಷಿ ಹಾಗೂ ಮಹಾಕಾವ್ಯ ರಚನೆಯನ್ನು ಪರಿಗಣಿಸಿ ಇಂದು ಪ್ರಶಸ್ತಿ ನೀಡಿ ಗೌರವಿಸಿದ್ದಕ್ಕಾಗಿ ಕೃತಜ್ಞತೆಯನ್ನು ಸಲ್ಲಿಸಿದರು. ಬೇರೆ ಬೇರೆ ಪ್ರಶಸ್ತಿ ಪಡೆದ ಗಣ್ಯರ ಉಪಸ್ಥಿತಿಯನ್ನು ಸ್ಮರಿಸಿ ಅವರೆಲ್ಲರಿಗೂ ಕೂಡಾ ತಮ್ಮ ಅಭಿನಂದನೆಯನ್ನು ಸಲ್ಲಿಸಿದರು. ದೆಹಲಿ ಕರ್ನಾಟಕ ಸಂಘ ಕಳೆದ 78 ವರ್ಷಗಳಿಂದ ಅತ್ಯುತ್ತಮವಾಗಿ ಕೆಲಸವನ್ನು ನಿರ್ವಹಿಸುತ್ತಾ ಬಂದಿದೆ, ಒಂದು ಸರ್ಕಾರ ಮಾಡಬೇಕಾದಂತಹ ಕೆಲಸವನ್ನು ದೆಹಲಿ ಕರ್ನಾಟಕ ಸಂಘ ಮಾಡುತ್ತಾ ಬಂದಿದೆ, ಇನ್ನೂ ಹೆಚ್ಚಿನ ಒಳ್ಳೆಯ ಕೆಲಸಗಳನ್ನು ಮಾಡುತ್ತಾ ಅದು ಇನ್ನೂ ದೊಡ್ಡ ಮಟ್ಟಕ್ಕೆ ಬೆಳೆಯಲಿ ಎಂದು ಆಶಿಸಿದರು.

2024ನೇ ಸಾಲಿನ ಸಂಘದ ಡಾ. ಸರೋಜಿನಿ ಮಹಿಷಿ ಪ್ರಶಸ್ತಿಯನ್ನು ಸ್ವೀಕರಿಸಿದ ಪ್ರೇಮಕವಿ ಶ್ರೀ ಬಿ.ಆರ್. ಲಕ್ಷ್ಮಣರಾವ್ ಅವರು ತಮ್ಮನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಿದ್ದಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸಿ ಮಾತನಾಡುತ್ತಾ ಒಬ್ಬ ಕವಿಗೆ ಯಾವಾಗ ಸಂತೋಷವಾಗುತ್ತದೆ ಎಂದರೆ ಅವರ ಕವಿತೆ ಜನರನ್ನು ತಲುಪಿದಾಗ. ಬೇರೆ ಬೇರೆ ದೇಶಗಳಿಗೆ ಹೋಗಿದ್ದೇನೆ, ಅಲ್ಲಿ ಬಿ.ಆರ್. ಲಕ್ಷ್ಮಣರಾವ್ ಗೊತ್ತಿಲ್ಲದೇ ಇರಬಹುದು, ಆದರೆ "ಅಮ್ಮ ನಿನ್ನ ಎದೆಯಾಳದಲ್ಲಿ" ಹಾಡು ಮಾತ್ರ ಎಲ್ಲರಿಗೂ ಗೊತ್ತಿರುತ್ತದೆ. ಒಂದು ಕವಿತೆ ಜನಪ್ರಿಯ ಆದಾಗ ಆ ಕವಿಗೆ ನಿಜವಾದ ಸಾರ್ಥಕತೆ ಸಿಗುತ್ತದೆ. ಕುಮಾರಿ ಭೂಮಿಕಾ ಮಧುಸೂದನ್ ಅವರು ನನ್ನ ಕವಿತೆ "ಅಮ್ಮ ನಿನ್ನ ಎದೆಯಾಳದಲ್ಲಿ" ಹಾಡನ್ನು ಅತ್ಯಂತ ಸುಶ್ರಾವ್ಯವಾಗಿ ಹಾಡಿದಾಗ ನಾನು ನಿಜವಾದ ಕವಿ ಎಂದುಕೊಂಡೆ. ಆಗಲೇ ನನಗೆ ನಿಜವಾದ ಪ್ರಶಸ್ತಿ ಸಿಕ್ಕಿತು, ನಂತರ ದೆಹಲಿ ಕರ್ನಾಟಕ ಸಂಘದ ಪ್ರಶಸ್ತಿ ಸಿಕ್ಕಿತು. ಈ ಪ್ರಶಸ್ತಿಯನ್ನು ಡಾ. ಸರೋಜಿನಿ ಮಹಿಷಿಯವರ ಹೆಸರಿನಲ್ಲಿ ನೀಡುತ್ತಿರುವ ಬಗ್ಗೆ ವಿಚಾರಿಸಿದಾಗ ಅವರು ದೆಹಲಿ ಕರ್ನಾಟಕ ಸಂಘಕ್ಕೆ ನೀಡಿದ ಕೊಡುಗೆ ಬಗ್ಗೆ ತಿಳಿಯಿತು. ಈ ದೆಹಲಿ ಕರ್ನಾಟಕ ಸಂಘದ ಪ್ರಶಸ್ತಿ ನಾನು ಪಡೆದ ಎಲ್ಲ ಪ್ರಶಸ್ತಿಗಳಿಗಿಂತ ಅತ್ಯಂತ ಹೆಚ್ಚಿನ ಸಂತೋಷವನ್ನು ತಂದಿದೆ ಎಲ್ಲರಿಗೂ ಶುಭವಾಗಲಿ ಎಂದರು.

2025ನೇ ಸಾಲಿನ ಸಂಘದ ಜ್ಞಾನಪೀಠ ರಾಷ್ಟ್ರಕವಿ ಕುವೆಂಪು ಪ್ರಶಸ್ತಿಯನ್ನು ಸ್ವೀಕರಿಸಿದ ಡಾ. ಪ್ರಧಾನ್ ಗುರುದತ್ತ ಅವರು ಮಾತನಾಡಿ ನಾನು ಮಾಡಿರುವ ಕೆಲಸಗಳನ್ನು ಗುರುತಿಸಿ ಒಪ್ಪಿಕೊಂಡು ನನ್ನನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಿದ್ದಕ್ಕಾಗಿ ಧನ್ಯವಾದಗಳನ್ನು ತಿಳಿಸಿದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ಪ್ರಶಸ್ತಿ ನೀಡುತ್ತಿರುವ ದೆಹಲಿ ಕರ್ನಾಟಕ ಸಂಘದ ಕಾರ್ಯ ಬಹಳ ವಿಶಿಷ್ಟವಾದುದು. ನಾನು









ದೇಶ–ವಿದೇಶಗಳಲ್ಲಿ ಅನೇಕ ಸಂಘ–ಸಂಸ್ಥೆಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಆದರೆ ದೆಹಲಿ ಕರ್ನಾಟಕ ಸಂಘದಷ್ಟು ಕ್ರಿಯಾತ್ಮಕವಾಗಿ ಕಾರ್ಯ ನಿರ್ವಹಿಸುವುದನ್ನು ನೋಡಿಲ್ಲ ಎಂದು ಹೇಳಿದರು.

ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತೀ ರಂಗ ಪ್ರಶಸ್ತಿ–2024ರ ಪ್ರಶಸ್ತಿಯನ್ನು ಸ್ವೀಕರಿಸಿದ ಡಾ. ಟಿ.ಎಸ್. ನಾಗಾಭರಣ ಅವರು ರಂಗಗೀತೆಯ ಹಾಡನ್ನು ಹೇಳುವುದರ ಮೂಲಕ ಪ್ರಶಸ್ತಿಗೆ ತಮ್ಮನ್ನು ಭಾಜನರನ್ನಾಗಿ ಮಾಡಿದ್ದಕ್ಕೆ ಕೃತಜ್ಞತೆಗಳನ್ನು ಸಲ್ಲಿಸಿದರು. ದೆಹಲಿ ಕರ್ನಾಟಕ ಸಂಘದೊಡಗಿನ ತಮ್ಮ ಬಾಂಧವ್ಯವನ್ನು ನೆನಪಿಸಿಕೊಂಡು ನನ್ನ ಮನೆಯಲ್ಲಿ ನನಗೆ ಸಂಭ್ರಮವನ್ನು ತಂದುಕೊಟ್ಟ ಕ್ಷಣವನ್ನು ಸ್ಮರಿಸುತ್ತಾ ಮತ್ತೊಮ್ಮೆ ಎಲ್ಲರಿಗೂ ಆಭಾರ ಮನ್ನಣೆಯನ್ನು ಸಲ್ಲಿಸಿದರು.

ಕೊನೆಯಲ್ಲಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಹಾಗೂ 2024ನೇ ಸಾಲಿನ ಸಂಘದ ಜ್ಞಾನಪೀಠ ರಾಷ್ಟ್ರಕವಿ ಕುವೆಂಪು ಪ್ರಶಸ್ತಿಯನ್ನು ಸ್ವೀಕರಿಸಿದ ನಾಡೋಜ ಡಾ. ಹಂಪ ನಾಗರಾಜಯ್ಯನವರು ಮಾತನಾಡಿ ಇದೊಂದು ಅಪೂರ್ವವಾದ ಹಾಗೂ ಐತಿಹಾಸಿಕ ಮಹತ್ವದ, ಅವಿಸ್ಮರಣೀಯ ಸಮಾರಂಭ, ನಾವು ಎಷ್ಟೋ ಸಮಾರಂಭಗಳಲ್ಲಿ ಭಾಗವಹಿಸಿದ್ದೇವೆ, ಆದರೆ ಇಂದಿನ ಸಮಾರಂಭ ಭಾವ–ಅಂತಃಕರಣವನ್ನು ಕಲಕುವ ಸಮಾರಂಭ. ದೆಹಲಿ ಕರ್ನಾಟಕ ಸಂಘದ ಅಮೃತಮಹೋತ್ಸವ ಸಮಾರಂಭಕ್ಕೆ ಪ್ರಧಾನಿ ಶ್ರೀ ನರೇಂದ್ರ ಮೋದಿ ಅವರು ಬಂದಿದ್ದು ಕರ್ನಾಟಕ ಸಂಘದ ತಾಕತ್ತು, ಇದು ನಮ್ಮ ಕನ್ನಡಿಗರ ಶಕ್ತಿ, ಪ್ರಧಾನಿಯವರು ಕಾರ್ಯಕ್ರಮದಲ್ಲಿ ಅಷ್ಟೊಂದು ಸಮಯವಿದ್ದರು ಎಂದರೆ ಅದು ಕನ್ನಡಿಗರ ಅಯಸ್ಕಾಂತ ಗುಣ ಎಂದು ಹೇಳಿದರು. ಕುವೆಂಪುರವರ ಕೊನೆಯ ಬ್ಯಾಚಿನ ಶಿಷ್ಯರು ತಾವು, ಅಂದು ಕುವೆಂಪುರವರು ಕನ್ನಡವನ್ನು ಕೊಚ್ಚಿ ಹೋಗದಂತೆ ನೋಡಿಕೊಳ್ಳಿ ಎಂದು ಆದೇಶ ಕೊಟ್ಟಿದ್ದನ್ನು ಸ್ಮರಿಸುತ್ತಾ ಅದನ್ನು ಇಂದಿನವರೆಗೂ ಪಾಲಿಸುತ್ತಾ ಬಂದಿರುವ ಶಿಷ್ಯರಲ್ಲಿ ನಾನೂ ಒಬ್ಬ ಎಂದರು. ಕುವೆಂಪುರವರು ಕನ್ನಡಕ್ಕೆ ಏನು ಕೊಟ್ಟರು ಎನ್ನುವುದು ಎಲ್ಲರಿಗೂ ಗೊತ್ತಿದೆ, ಅವರು ಎರಡು ನಾಡ ಗೀತೆಗಳನ್ನು ಕೊಟ್ಟ ಏಕೈಕ ಭಾರತೀಯ ಕವಿ. ಕುವೆಂಪುರವರು ಕನ್ನಡಕ್ಕೆ ಪ್ರವೇಶಿಸುವ ಮೊದಲು ಭೂಮಿ ಒಣಗಿತ್ತು, ಆ ಭೂಮಿಗೆ ಮಲೆನಾಡನ್ನೇ ತಂದರು. ಮಲೆನಾಡಿನ ಸಂಸ್ಕೃತಿಯನ್ನ, ಭಾಷೆಗಳನ್ನ, ಹಕ್ಕಿಗಳನ್ನ, ಗಿರಿಬನಗಳನ್ನ ಎಲ್ಲವನ್ನೂ ತಂದು ಕನ್ನಡ ಸಮೃದ್ಧವಾಗುವ ಹಾಗೆ ಕುವೆಂಪುರವರು ಮಾಡಿದರು. ಕನ್ನಡಕ್ಕೊಂದು ದಿವ್ಯವಾದ ಪರಂಪರೆಯಿದೆ, ಆ ದಿಶೆಯಲ್ಲಿ ಕುವೆಂಪುರವರು ಕೆಲಸ ಮಾಡಿದರು. ತಮಗೆ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿಸಿರುವ ಸಂಘದ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಕ್ಕೆ ಸಂಘದ ಅಧ್ಯಕ್ಷರಿಗೆ, ಪದಾಧಿಕಾರಿಗಳಿಗೆ, ಸದಸ್ಯರಿಗೆ ಮತ್ತು ಸಭಾಂಗಣದಲ್ಲಿ ಆಸೀನರಾಗಿರುವ ಎಲ್ಲಾ ದೆಹಲಿ ಕನ್ನಡಿಗರಿಗೆ ಕೃತಜ್ಞತೆ ಸಲ್ಲಿಸಿದರು.

ಕಾರ್ಯಕ್ರಮದ ನಡುವೆ 2024–2025ನೇ ಶೈಕ್ಷಣಿಕ ವರ್ಷದಲ್ಲಿ ಅರ್ಹತೆ ಹಾಗು ಆರ್ಥಿಕ ಅವಶ್ಯಕತೆ ಆಧಾರದ ಮೇಲೆ ಮಕ್ಕಳಿಗೆ ಒಟ್ಟಾರೆಯಾಗಿ 8,38,000/– ರೂಪಾಯಿಗಳ ವಿದ್ಯಾರ್ಥಿ ವೇತನವನ್ನು ನೀಡಿ ಅಭಿನಂದಿಸಲಾಯಿತು. ಈ ಕಾರ್ಯಕ್ರಮವನ್ನು ಅಭಿಮತ ಪ್ರಧಾನ ಸಂಪಾದಕ ಶ್ರೀ ಕೆ.ಎಸ್. ಮೂರ್ತಿ ನಡೆಸಿಕೊಟ್ಟರು. ಸಂಘದ







2024–25ನೇ ಶೈಕ್ಷಣಿಕ ವರ್ಷದ 1ನೇ ತರಗತಿಯಿಂದ ಪದವಿ / ಸ್ನಾತಕೋತ್ತರ ಪದವಿ ಪಡೆಯುವಲ್ಲಿ ಉತ್ತಮ ಸ್ಥಾನಗಳಿಗೆ ಅರ್ಹತೆ ಮೇಲೆ ನೀಡಿದ ವಿದ್ಯಾರ್ಥಿ ವೇತನವನ್ನು ಪಡೆದ ಪ್ರತಿಭಾವಂತ ದೆಹಲಿ ಕನ್ನಡಿಗರ ಮಕ್ಕಳು ಹಾಗು ಆರ್ಥಿಕವಾಗಿ ಅವಶ್ಯಕತೆ ಮೇರೆಗೆ ಸಂಘದ ವಿದ್ಯಾರ್ಥಿ ವೇತನ ಸ್ವೀಕರಿಸಿದ ಮಕ್ಕಳು.





ಕಾರ್ಯಕಾರಿ ಸಮಿತಿ ಸದಸ್ಯರ ಶ್ರೀ ಎನ್. ಆರ್. ಶ್ರೀನಾಥ್ ಅವರು ಮುಖ್ಯ ಅತಿಥಿಗಳಿಗೆ, ಪ್ರಶಸ್ತಿ ಪುರಸ್ಕೃತರು ಮತ್ತು ಅತಿಥಿಗಣ್ಯರಿಗೆ ಹಾಗು ನೆರೆದಿದ್ದ ಸಭಿಕರಿಗೆ ವಂದನಾರ್ಪಣೆ ಸಲ್ಲಿಸಿದರು. ಸಭಾ ಕಾರ್ಯಕ್ರಮದ ಕೊನೆಯಲ್ಲಿ ಸಂಘದಲ್ಲಿ ಈ ಹಿಂದೆ ದಿನಾಂಕ 11.01.2026 ರಂದು ನಡೆದ ಆಹಾರೋತ್ಸವ ಕಾರ್ಯಕ್ರಮದಲ್ಲಿ ಆಹಾರ ಮಳಿಗೆಗಳನ್ನು ಹಾಕಿ ದೆಹಲಿ ಕನ್ನಡಿಗರಿಗೆ ಕರ್ನಾಟಕದ ಭಕ್ಷ್ಯ ಭೋಜ್ಯಗಳನ್ನು ಉಣಬಡಿಸಿದ ಹಾಗು ಅದರ ಯಶಸ್ಸಿನಲ್ಲಿ ಭಾಗಿಯಾದ ದೆಹಲಿ ಕನ್ನಡಿಗರಿಗೆ, ಕನ್ನಡತಿಯರಿಗೆ ಬಹುಮಾನಗಳನ್ನು ನೀಡಿ ಅಭಿನಂದಿಸಲಾಯಿತು.

ಸಭಾ ಕಾರ್ಯಕ್ರಮದ ನಂತರ ಕರುನಾಡ ಗಾನತಾರೆ ಹಾಗೂ ಕರ್ನಾಟಕ ಸರ್ಕಾರದ "ಕಲಾಶ್ರೀ" ಪ್ರಶಸ್ತಿ ಪುರಸ್ಕೃತರಾದ ಡಾ. ಭೂಮಿಕ ಎಲ್. ಮಧುಸೂದನ್ ಹಾಗೂ ತಂಡದವರಿಂದ ಮಧುರ ಗೀತೆಗಳ ವಿಶೇಷ ಸಂಗೀತ ಗುಚ್ಛ ಗಾಯನ ಪ್ರಸ್ತುತಗೊಂಡು ಸಭಿಕರ ಮೆಚ್ಚುಗೆಗೆ ಪಾತ್ರವಾಯಿತು. ಜೊತೆಗೆ, ಸಂಘದ ಕನ್ನಡ ಕಲಿಕಾ ಕೇಂದ್ರ ಮತ್ತು ನೃತ್ಯ ತರಬೇತಿ ಕೇಂದ್ರದ ಮಕ್ಕಳಿಂದ ಪ್ರಸ್ತುತಿಯಾದ ಅಮೋಘ ನೃತ್ಯ ಪ್ರದರ್ಶನಗಳು ಸಭಾಂಗಣದಲ್ಲಿದ್ದವರನ್ನು ಮನರಂಜಿಸಿದವು. ❑

**ಅಭಿಮತ ವರದಿ**

**ಅಭಿನಂದನೆ**

# 2024 ಮತ್ತು 2025ನೇ ಸಾಲಿನ ಸಂಘದ ವಿವಿಧ ಪ್ರಶಸ್ತಿ ಪುರಸ್ಕೃತರು



## ಶ್ರೀ ಬಿ.ಆರ್. ಲಕ್ಷ್ಮಣ ರಾವ್

ಪ್ರೇಮಕವಿಯೆಂದೇ ಪ್ರಸಿದ್ಧರಾದ ಶ್ರೀ ಬಿ.ಆರ್. ಲಕ್ಷ್ಮಣ ರಾವ್ ಅವರು ದಿನಾಂಕ 09.09.1946ರಲ್ಲಿ ಶ್ರೀ ಬಿ.ಆರ್. ರಾಜಾರಾವ್ ಮತ್ತು ಶ್ರೀಮತಿ ವೆಂಕಟಲಕ್ಷ್ಮಮ್ಮ ಅವರ ಪುತ್ರನಾಗಿ ಚಿಕ್ಕಬಳ್ಳಾಪುರ ಜಿಲ್ಲೆಯ ಚೀಮಂಗಲ ಗ್ರಾಮದಲ್ಲಿ ಜನಿಸಿದರು. ಪ್ರೌಢಶಾಲೆಯವರೆಗೆ ಚಿಂತಾಮಣಿಯಲ್ಲಿ ವಿದ್ಯಾಭ್ಯಾಸ ಮಾಡಿದ ನಂತರ ದಾವಣಗೆರೆ ಮತ್ತು ಬೆಂಗಳೂರಿನಲ್ಲಿ ಕಾಲೇಜು ಶಿಕ್ಷಣ ಪಡೆದು ಎಂ.ಎ., ಬಿ.ಎಡ್. ಪದವೀಧರರಾದ ಇವರು ಪ್ರಸ್ತುತ ಚಿಂತಾಮಣಿ ನಗರದಲ್ಲಿ ತಮ್ಮದೇ ಆದ ಟ್ಯುಟೋರಿಯಲ್ಸ್ ನಡೆಸುತ್ತಿದ್ದು, ಈಗ ನಿವೃತ್ತ ಉಪಾಧ್ಯಾಯರಾಗಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಇವರ ಧರ್ಮಪತ್ನಿ ಶ್ರೀಮತಿ ಗಿರಿಜಾರಾವ್ ಒಬ್ಬ ಆದರ್ಶ ಗೃಹಿಣಿಯಾಗಿದ್ದು, ಈ ದಂಪತಿಗಳ ಇಬ್ಬರು ಮಕ್ಕಳಲ್ಲಿ ಮೊದಲನೆ ಮಗ ಡಾ. ಬಿ.ಎಲ್. ಹರ್ಷ ಬೆಂಗಳೂರಿನ ನಾರಾಯಣ ನೇತ್ರಾಲಯದಲ್ಲಿ ನೇತ್ರ ತಜ್ಞರಾಗಿದ್ದಾರೆ. ಕಿರಿಯ ಮಗ ಬಿ.ಎಲ್. ಸಂತೋಷ್ ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದು ಅಮೆರಿಕಾದಲ್ಲಿ ಉದ್ಯೋಗದಲ್ಲಿದ್ದಾರೆ.

'ಗೋಪಿ ಮತ್ತು ಗಾಂಡಲೀನ' (1971) ದಿಂದ ಮೊದಲುಗೊಂಡು 'ನವೋನ್ಮೇಷ' (2020) ದವರೆಗೆ ಇವರ ಒಂಬತ್ತು ಕವನ ಸಂಕಲನಗಳು ಪ್ರಕಟವಾಗಿವೆ. ಜೊತೆಗೆ ಹನಿಗವನ ಮತ್ತು ಭಾವಗೀತೆಗಳ ಪ್ರತ್ಯೇಕ ಸಂಕಲನಗಳನ್ನೂ ಸಹ ಇವರು ಹೊರತಂದಿದ್ದಾರೆ. ಸಣ್ಣಕಥೆ, ಕಾದಂಬರಿ, ನಾಟಕ, ವಿಮರ್ಶೆ, ಅನುವಾದ, ವ್ಯಕ್ತಿಚಿತ್ರ, ಲಲಿತ ಪ್ರಬಂಧ–ಹೀಗೆ ಸಾಹಿತ್ಯದ ಬಹುತೇಕ ಎಲ್ಲ ಪ್ರಕಾರಗಳಲ್ಲೂ ಇವರು ಕೃತಿ ರಚನೆ ಮಾಡಿದ್ದಾರೆ. ಇಂಗ್ಲೆಂಡ್, ಅಮೇರಿಕ, ಸಿಂಗಾಪುರ, ಮಧ್ಯಪ್ರಾಚ್ಯ ದೇಶಗಳ ಕನ್ನಡ ಸಂಘಗಳಿಂದ ಆಹ್ವಾನಿತರಾಗಿ ಸನ್ಮಾನಿತರಾಗಿದ್ದಾರೆ. ಇವರ ಕವಿತೆಗಳು ಶಾಲಾ ಕಾಲೇಜುಗಳಲ್ಲಿ ಪಠ್ಯಗಳಾಗಿವೆ; ಇಂಗ್ಲಿಷ್ ಮತ್ತು ಹಲವು ಭಾರತೀಯ ಭಾಷೆಗಳಿಗೆ ಅನುವಾದಗೊಂಡಿವೆ.





ಇವರ ಜನಪ್ರಿಯ ಭಾವಗೀತೆಗಳು: 1) ಅಮ್ಮಾ, ನಿನ್ನ ಎದೆಯಾಳದಲ್ಲಿ 2) ನಿಂಬೆಗಿಡ 3) ಜಾಲಿಬಾರಿನಲ್ಲಿ 4) ಹೇಳಿಹೋಗು ಕಾರಣ 5) ಸುಬ್ಬಾಭಟ್ಟರ ಮಗಳೇ. ಜನಪ್ರಿಯ ಚಿತ್ರಗೀತೆಗಳು: 1) ಬಾ ಮಳೆಯೇ ಬಾ 2) ಬಾರೇ ರಾಜಕುಮಾರಿ 3) ದೇವರೇ, ಅಗಾಧ ನಿನ್ನ ಕರುಣೆಯ ಕಡಲು. ಇವರ ಭಾವಗೀತೆ ಮತ್ತು ಚಿತ್ರಗೀತೆಗಳು ಅಪಾರ ಜನಪ್ರಿಯತೆ ಗಳಿಸಿವೆ. ದೂರದರ್ಶನದ ಜನಪ್ರಿಯ ಧಾರಾವಾಹಿಗಳಿಗೆ ಶೀರ್ಷಿಕೆ ಗೀತೆಗಳನ್ನು ಬರೆದಿದ್ದಾರೆ. ಇವರ ಅನೇಕ ಭಾವಗೀತೆಗಳ ಧ್ವನಿಸಾಂದ್ರಿಕೆಗಳು ಬಿಡುಗಡೆಯಾಗಿವೆ. ಅನೇಕ ವಿನೋದ ಕವಿತೆಗಳು, ಹನಿಗವಿತೆಗಳು, ಕಾದಂಬರಿಗಳು, ನಾಟಕಗಳು ಇವರಿಂದ ಮೂಡಿವೆ.

ಇವರು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಇವರಿಗೆ ಸಂದ ಪ್ರತಿಷ್ಠಿತ ಪ್ರಶಸ್ತಿಗಳಲ್ಲಿ ಪ್ರಮುಖವು: ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ (1981), ಡಾ. ಪುತಿನ ಕಾವ್ಯ ಪುರಸ್ಕಾರ (2004), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (2010), ಡಾ. ಮಾಸ್ತಿ ಪ್ರಶಸ್ತಿ (2014), ಚಿತ್ರಗೀತೆಯ ಸಾಹಿತ್ಯಕ್ಕಾಗಿ ಫಿಲ್ಮ್‌ಫೇರ್ ಪ್ರಶಸ್ತಿ–2024, ಸಂದೇಶ್ ಸಾಹಿತ್ಯ ಪ್ರಶಸ್ತಿ (ಮಂಗಳೂರು) (2025), ಕನ್ನಡಪ್ರಭ ಮತ್ತು ಸುವರ್ಣ ನ್ಯೂಸ್ ಯುಗಾದಿ ಪುರಸ್ಕಾರ (2025). ಶ್ರೀ ಬಿ.ಆರ್. ಲಕ್ಷ್ಮಣ ರಾವ್ ಅವರು ಈ ಹಿಂದೆ ದೆಹಲಿ ಕರ್ನಾಟಕ ಸಂಘದಲ್ಲಿ ಆಯೋಜನೆಗೊಂಡ ಹಲವಾರು ಸಾಹಿತ್ಯ ಮತ್ತು ಸಂಗೀತ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದಾರೆ ಮತ್ತು ದೆಹಲಿ ಕನ್ನಡಿಗರಿಗೆ ಚಿರಪರಿಚಿತರು.

ಶ್ರೀ ಬಿ.ಆರ್. ಲಕ್ಷ್ಮಣ ರಾವ್ ಅವರು ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಅಪರಿಮಿತ ಸೇವೆಗಳನ್ನು ಪರಿಗಣಿಸಿ ದೆಹಲಿ ಕರ್ನಾಟಕ ಸಂಘವು 2024 ನೇ ಸಾಲಿನ ಡಾ. ಸರೋಜಿನಿ ಮಹಿಷಿ ಪ್ರಶಸ್ತಿಯನ್ನು ದಿನಾಂಕ 08.02.2026 ರಂದು ನವದೆಹಲಿಯ ಸಂಘದ ಸಭಾಂಗಣದಲ್ಲಿ ನಡೆದ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ನೀಡಿ ಅವರನ್ನು ಗೌರವಿಸಿದೆ. ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಗೌರವ ಪೂರ್ವಕ ಅಭಿನಂದನೆಗಳು.

---



## ಡಾ. ಪ್ರಧಾನ್ ಗುರುದತ್ತ

ಕನ್ನಡದ ಖ್ಯಾತ ಅಧ್ಯಾಪಕರು, ಸಂಶೋಧಕರು ಮತ್ತು ಪ್ರಸಿದ್ಧ ಬಹುಭಾಷಾ ಅನುವಾದಕರಾದ ಡಾ. ಪ್ರಧಾನ್ ಗುರುದತ್ತ ಅವರು ದಿನಾಂಕ ಮೇ 30, 1938 ರಂದು ಚಿಕ್ಕಬಳ್ಳಾಪುರದಲ್ಲಿ ಜನಿಸಿದರು. ಇವರು ಮೈಸೂರು ವಿಶ್ವವಿದ್ಯಾಲಯದಿಂದ ಕನ್ನಡದಲ್ಲಿ ಎಂ.ಎ., ಎಂ.ಫಿಲ್. ಮತ್ತು ಪಿಎಚ್.ಡಿ. ಪದವಿಗಳನ್ನು ಪಡೆದಿದ್ದಾರೆ. ಜೊತೆಗೆ ಬನಾರಸ್ ಹಿಂದೂ ವಿಶ್ವವಿದ್ಯಾಲಯದಿಂದ ಹಿಂದಿ ಭಾಷೆಯಲ್ಲಿ ಎಂ.ಎ. ಮತ್ತು ಭಾರತೀಯ ವಿದ್ಯಾಭವನದ ಸಂಸ್ಕೃತ ಕೋವಿದ ಪದವಿಗಳನ್ನು ಗಳಿಸಿದ್ದಾರೆ. ಡಾ. ಪ್ರಧಾನ್ ಗುರುದತ್ತರ ಪರಿವಾರದಲ್ಲಿ, ಪತ್ನಿ ಸೀತಾಲಕ್ಷ್ಮಿ ಹಾಗೂ ಮಕ್ಕಳು : ಶ್ರೀಕಾಂತ, ಆರತಿ, ಅಶ್ವಿನಿ ಅವರು ಇವರ ಯಶಸ್ಸಿನ ಭಾಗವಾಗಿದ್ದಾರೆ.

ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸುಮಾರು 39 ವರ್ಷಗಳ ಕಾಲ ಅಧ್ಯಾಪಕರಾಗಿ ಸೇವೆ ಸಲ್ಲಿಸಿ, 1998 ರಲ್ಲಿ ನಿವೃತ್ತರಾದರು. ಇವರು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಸಾಹಿತ್ಯಿಕ ಕೊಡುಗೆ: ಡಾ. ಪ್ರಧಾನ್ ಗುರುದತ್ತರವರು 150ಕ್ಕೂ ಹೆಚ್ಚು ಪುಸ್ತಕಗಳನ್ನು ಮತ್ತು 250ಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದಾರೆ.ಅನುವಾದ ಕಾರ್ಯ: ಡಾ. ಎಸ್.ಎಲ್. ಭೈರಪ್ಪನವರ 'ದಾಟು' ಕಾದಂಬರಿಯನ್ನು ಇಂಗ್ಲಿಷ್‌ಗೆ ಹಾಗೂ 'ಆವರಣ', 'ಸಾರ್ಥ', 'ಮಂದ್ರ', 'ಭಿತ್ತಿ' ಮುಂತಾದ ಕೃತಿಗಳನ್ನು ಹಿಂದಿಗೆ ಅನುವಾದಿಸಿದ್ದಾರೆ. ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಕೃತಿಯನ್ನು ಹಿಂದಿಗೆ ಅನುವಾದಿಸಿರುವುದು ಇವರ ಪ್ರಮುಖ ಸಾಧನೆಗಳಲ್ಲೊಂದು. ಶ್ರೀ ವೀರಪ್ಪ ಮೊಯಿಲಿ ಅವರ 'ಶ್ರೀ ರಾಮಾಯಣ ಮಹಾನ್ವೇಷಣಂ' ಮತ್ತು ಡಾ. ಲತಾ ರಾಜಶೇಖರ್ ಅವರ 'ಶ್ರೀ ರಾಮ ಮಹಾದರ್ಶನ' ಕೃತಿಯನ್ನು ಸಹಾ ಹಿಂದಿಗೆ ಅನುವಾದಿಸಿದ್ದಾರೆ.




ಡಾ. ಪ್ರಧಾನ್ ಗುರುದತ್ತ ಅವರು ಅನೇಕ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಇವರಿಗೆ ಸಂದ ಪ್ರತಿಷ್ಠಿತ ಪ್ರಶಸ್ತಿಗಳಲ್ಲಿ ಪ್ರಮುಖವಾದವು: ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (1994), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (2003), ಕುವೆಂಪು ಭಾಷಾ ಭಾರತಿ ಸಮ್ಮಾನ (2024), ಪ್ರೊ. ಕೆ.ಎಸ್. ನಾರಾಯಣಚಾರ್ಯ ಸಮ್ಮಾನ (2025), ಪ್ರೊ. ಬಿ.ಎಂ. ಶ್ರೀಕಂಠಯ್ಯ ಸಮ್ಮಾನ (2026), ಆರ್ಯಭಟ್ಟ ಹಾಗೂ ದೇಜಗೌ ಪ್ರಶಸ್ತಿಗಳು ಮತ್ತು ಇತರ ಹಲವಾರು ಪುರಸ್ಕಾರಗಳು ಇವರಿಗೆ ಲಭಿಸಿವೆ.

ಡಾ. ಪ್ರಧಾನ್ ಗುರುದತ್ತ ಅವರು ಈ ಹಿಂದೆ ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ ಹಲವಾರು ಸಾಹಿತ್ಯಿಕ ಕಾರ್ಯಕ್ರಮಗಳಲ್ಲಿ ಮತ್ತು ಇತ್ತೀಚಿಗೆ ರಾಷ್ಟ್ರಕವಿ ಕುವೆಂಪು ಅವರ ಸಾಧನೆ ಮತ್ತು ಕೊಡುಗೆ

ಕುರಿತು ಸಂಘದ ವೇದಿಕೆಯಲ್ಲಿ ನಡೆದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಪಾಲ್ಗೊಂಡಿದ್ದರಲ್ಲದೆ ಅಲ್ಲಿ ಬಿಡುಗಡೆಗೊಂಡ "ತ್ರಿರಂಗ" ಸಂಪಾದಿತ ಕೃತಿಯಲ್ಲಿ ಕುವೆಂಪು ಅವರ ಬಗ್ಗೆ ಲೇಖನವನ್ನು ನೀಡಿದ್ದಾರೆ ಡಾ. ಪ್ರಧಾನ್ ಗುರುದತ್ತ ಅವರು ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಅಪಾರ ಸೇವೆಯನ್ನು ಮತ್ತು ರಾಷ್ಟ್ರಕವಿ ಕುವೆಂಪು ಕುರಿತು ಮಾಡಿದ ಅಧ್ಯಯನ, ಸಾಧನೆ ಮತ್ತು ನೀಡಿದ ಕೊಡುಗೆಗಳನ್ನು ಪರಿಗಣಿಸಿ ಇವರಿಗೆ ದೆಹಲಿ ಕರ್ನಾಟಕ ಸಂಘವು 2025 ನೇ ಸಾಲಿನ ಜ್ಞಾನಪೀಠ ಪುರಸ್ಕೃತ ರಾಷ್ಟ್ರಕವಿ ಕುವೆಂಪು ಪ್ರಶಸ್ತಿಯನ್ನು ದಿನಾಂಕ 08.02.2026 ರಂದು ನವದೆಹಲಿಯ ಸಂಘದ ಸಭಾಂಗಣದಲ್ಲಿ ನಡೆದ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ನೀಡಿ ಗೌರವಿಸಿದೆ. ಇವರಿಗೆ ಸಮಸ್ತ ನಾಡಿನ ಮತ್ತು ದೆಹಲಿ ಕನ್ನಡಿಗರ ಪರವಾಗಿ ಹೃದಯ ಪೂರ್ವಕ ಅಭಿನಂದನೆಗಳು!

---



## ಡಾ. ಲತಾ ರಾಜಶೇಖರ್

ಡಾ. ಲತಾ ರಾಜಶೇಖರ್ ಅವರು ದಿನಾಂಕ 02.06.1954 ರಂದು ಮಂಡ್ಯ ಜಿಲ್ಲೆಯ ಅಂಬಿಗರ ಹಳ್ಳಿಯಲ್ಲಿ ಶ್ರೀ ಕೃಷ್ಣೇಗೌಡ ಹಾಗೂ ಶ್ರೀಮತಿ ಕಾವೇರಮ್ಮನವರ ಸುಪುತ್ರಿಯಾಗಿ ಜನಿಸಿದರು. ಇವರು ಮೈಸೂರು ವಿಶ್ವವಿದ್ಯಾಲಯದ ಎಂ.ಎ. (ಕನ್ನಡ) ಹಾಗೂ ಪಿ.ಎಚ್.ಡಿ. ಪದವೀಧರರು. 'ಕುವೆಂಪು ಕಾವ್ಯದಲ್ಲಿ ಪ್ರಕೃತಿ–ಒಂದು ಅಧ್ಯಯನ' ಇವರ ಪಿ.ಎಚ್.ಡಿ. ಮಹಾಪ್ರಬಂಧ. ಇವರು ದೇಶ ವಿದೇಶಗಳಲ್ಲಿ ಸಂಚರಿಸಿ ತಮ್ಮ ಜ್ಞಾನಕ್ಷಿತಿಜವನ್ನು ವಿಸ್ತರಿಸಿಕೊಂಡಿದ್ದಾರೆ. ಅಮೇರಿಕಾ, ಇಂಗ್ಲೆಂಡ್, ಇಟಲಿ, ಫ್ರಾನ್ಸ್, ಸ್ವಿಟ್ಜರ್‌ಲ್ಯಾಂಡ್, ಈಜಿಪ್ಟ್, ಇಸ್ರೇಲ್, ಪ್ಯಾಲೆಸ್ಟೈನ್, ಸ್ವೀಡನ್, ನಾರ್ವೆ, ಚೈನಾ, ಹಾಂಗ್‌ಕಾಂಗ್ ಮುಂತಾದ ಮೂವತ್ತಕ್ಕೂ ಹೆಚ್ಚು ದೇಶಗಳಲ್ಲಿ ಪ್ರವಾಸ ಮಾಡಿದ್ದಾರೆ.

ಡಾ. ಲತಾ ರಾಜಶೇಖರ್‌ರವರು ಸಾರಸ್ವತ ಲೋಕದ ದಿಗ್ಗಜರ ಅಪಾರವಾದ ಪ್ರಶಂಸೆ, ಅಭಿಮಾನಕ್ಕೆ ಪಾತ್ರರಾಗಿದ್ದು, ಜನಮಾನಸವನ್ನು ಸೂರೆಗೊಂಡಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ಅಪೂರ್ವ ಸಾಧನೆಯನ್ನು ಮಾಡಿರುವ ಇವರು ವಿಶ್ವವಿಭೂತಿಗಳಾದ ಬುದ್ಧ, ಯೇಸು, ಬಸವೇಶ್ವರ, ಮಹಾವೀರ, ಶ್ರೀರಾಮ, ಹನುಮ ಹಾಗೂ ಭಗವದ್ಗೀತೆ ಇವರುಗಳನ್ನು ಕುರಿತಂತೆ ಮಹತ್ವದ ಏಳು ಮಹಾಕಾವ್ಯಗಳನ್ನು ರಚಿಸುವ ಮೂಲಕ ಭಾರತೀಯ ಹಾಗೂ ವಿಶ್ವ ಸಾಹಿತ್ಯದ ದಿಗಂತವನ್ನು ವಿಸ್ತರಿಸಿದ್ದಾರೆ. ಕನ್ನಡ ತಾಯಿ ಭುವನೇಶ್ವರಿಯ ಶ್ರೀ ಮುಕುಟಕ್ಕೆ ವಜ್ರದ ಗರಿಯನ್ನು ತೊಡಿಸಿದ್ದಾರೆ ಹಾಗೂ ಸಪ್ತ ಮಹಾಕಾವ್ಯಗಳನ್ನು ರಚಿಸಿದ ವಿಶ್ವದ ಏಕೈಕ ಕವಿ ಎಂಬ ಮನ್ನಣೆಗೆ ಪಾತ್ರರಾಗಿದ್ದಾರೆ. ತಮ್ಮ ಅಪೂರ್ವವಾದ ಸಾಹಿತ್ಯ ರಚನೆಯ ಮೂಲಕ ಕನ್ನಡವನ್ನು ವಿಶ್ವದ ಭಾಷೆಯನ್ನಾಗಿಸುವ ನಿಟ್ಟಿನಲ್ಲಿ ನಿರಂತರವಾಗಿ ಶ್ರಮಿಸಿದ್ದಾರೆ.

'ಸಾರಸ್ವತ ಲೋಕದ ವಿಸ್ಮಯ' ಎನಿಸಿರುವ ಡಾ. ಲತಾ ರಾಜಶೇಖರ್ ಅವರು ತಮ್ಮ ಮಹಾಕಾವ್ಯಗಳ ರಚನೆಗಾಗಿ ದೇಶ ವಿದೇಶಗಳಲ್ಲಿ ಸಂಚರಿಸಿ ಅಪಾರ ಕ್ಷೇತ್ರಾಧ್ಯಯನಗಳನ್ನು ಮಾಡಿದ್ದಾರೆ. ಸತತ ಎರಡು ದಶಕಗಳ ಕಾಲ ಈ ಮಹಾಕಾವ್ಯಗಳ ನಿರ್ಮಾಣ ಕಾರ್ಯವನ್ನು ಒಂದು ವ್ರತದಂತೆ ಕೈಗೊಂಡು ಪೂರ್ಣಗೊಳಿಸಿದ್ದಾರೆ. ಬುದ್ಧ ಮಹಾದರ್ಶನ, ಯೇಸು ಮಹಾದರ್ಶನ, ಮಹಾವೀರ ಮಹಾದರ್ಶನ, ಶ್ರೀರಾಮ ಮಹಾದರ್ಶನ, ಹನುಮ ಮಹಾದರ್ಶನ ಹಾಗೂ ಭಗವದ್ಗೀತಾ ಮಹಾದರ್ಶನ ಮಹಾಕಾವ್ಯಗಳು ಇವರ ಈ ವಾಙ್ಮಯ ತಪದ ಪ್ರತಿಫಲಗಳಾಗಿವೆ. ಈ ಮೂಲಕವಾಗಿ ಡಾ. ಲತಾ ಅವರು ಈ ಮಹಾ ಪುರುಷರು ಸಾರಿದ ಚಿರಂತನ ಮಾನವೀಯ ಮೌಲ್ಯಗಳಾದ ಪ್ರೀತಿ, ಕರುಣೆ, ತ್ಯಾಗ, ಕ್ಷಮೆ, ಸತ್ಯ, ಶಾಂತಿ, ಸಮಾನತೆಗಳನ್ನು ಎತ್ತಿ ಹಿಡಿದಿದ್ದಾರೆ ಹಾಗೂ ಧಾರ್ಮಿಕ ಸಾಮರಸ್ಯ, ಭ್ರಾತೃತ್ವ ಭಾವನೆ, ರಾಷ್ಟ್ರೀಯ ಭಾವೈಕ್ಯತೆಗಳಿಗಾಗಿ ಶ್ರಮಿಸಿದ್ದಾರೆ. ಅದೇ ರೀತಿ ಅವರು ವಿಶ್ವಪ್ರೇಮ ಹಾಗು ವಿಶ್ವಶಾಂತಿ ಇವುಗಳನ್ನು ತಮ್ಮ ಬದುಕಿನ ಧ್ಯೇಯವಾಗಿಸಿಕೊಂಡಿದ್ದಾರೆ.




ಕನ್ನಡವನ್ನು ತಮ್ಮ ಉಸಿರಾಗಿಸಿಕೊಂಡಿರುವ ಡಾ. ಲತಾ ಅವರು ಕಾವ್ಯ, ಮಹಾಕಾವ್ಯ, ಕಾದಂಬರಿ, ಸಣ್ಣಕತೆ, ನಾಟಕ, ಸಂಶೋಧನೆ, ಸಂಪಾದನೆ, ಜೀವನ ಚರಿತ್ರೆ, ಪ್ರವಾಸ ಕಥನ, ಮಕ್ಕಳ ಸಾಹಿತ್ಯ ಮುಂತಾದ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಕೃಷಿ ಮಾಡಿ ಈವರೆಗೆ ಐವತ್ತು ಕೃತಿಗಳನ್ನು ರಚಿಸಿದ್ದಾರೆ. ಇವರ ಕಥೆ, ಕವಿತೆ, ಲೇಖನ, ಸಂದರ್ಶನಗಳು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ ಹಾಗೂ ಅನೇಕ ಅಂತರರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಚಿಂತನಶೀಲ ಮನಸ್ಸಿನ ಡಾ. ಲತಾ ರಾಜಶೇಖರ್ ಅವರ ಕಾವ್ಯ ಕೃತಿಗಳು ಅನೇಕ ಭಾಷೆಗಳಿಗೆ ಅನುವಾದಗೊಂಡಿವೆ. ಈಗಾಗಲೇ ಅವರ ಆಯ್ದ ಕವಿತೆಗಳ ಹಿಂದಿ ಮತ್ತು ಇಂಗ್ಲಿಷ್ ಸಂಕಲನಗಳು ಹೊರಬಂದಿವೆ.

ಮಹಿಳಾ ಸಂವೇದನೆಯ, ಮಹಿಳಾ ಪರ ನಿಲುವಿನ ಇವರು ಸ್ತ್ರೀಶೋಷಣೆಯ ಆಯಾಮಗಳನ್ನು ಕುರಿತು ತಮ್ಮ ಕಾದಂಬರಿ, ಕೃತಿಗಳಲ್ಲಿ ಮನೋಜ್ಞವಾಗಿ ಚಿತ್ರಿಸಿದ್ದಾರೆ. ಪ್ರಕೃತಿಪ್ರೇಮಿಯಾದ ಇವರು ಪರಿಸರ ಸಂರಕ್ಷಣೆಯ ಬಗೆಗೆ ಅನನ್ಯ ಕಾಳಜಿಯನ್ನು ಹೊಂದಿದ್ದು, ತಮ್ಮ ಕೃತಿಗಳಲ್ಲಿ ನಿಸರ್ಗವನ್ನು ಅಸದೃಶವಾಗಿ ವರ್ಣಿಸಿದ್ದಾರೆ. 'ಪ್ರಕೃತಿ ಕವಿ' ಎಂದೆನಿಸಿದ್ದಾರೆ. ಸೌಜನ್ಯ ಸಜ್ಜನಿಕೆಗಳ ಸಂಗಮವಾದ ಇವರು ಏಳು ಮಹಾಕಾವ್ಯಗಳನ್ನು ನಾಡಿನ ಜನತೆ ಒಗ್ಗೂಡಿ ಅಲಂಕೃತ ಆನೆಗಳ ಮೇಲಿರಿಸಿ ಜಾನಪದ ಕಲಾ ತಂಡಗಳೊಂದಿಗೆ ಮೈಸೂರಿನ ರಾಜ ಬೀದಿಗಳಲ್ಲಿ ಮೆರವಣಿಗೆ ಮಾಡಿ ಗೌರವಿಸಿದ್ದಾರೆ. ಸಾಹಿತ್ಯ ಲೋಕದ ದಿಗ್ಗಜರು ಹಾಗು ಸಹಸ್ರಾರು ಮಂದಿ ಅದಕ್ಕೆ ಸಾಕ್ಷಿಯಾಗಿದ್ದಾರೆ.

ನಾಡು, ನುಡಿಗಳ ಬಗೆಗೆ ಅತಿಶಯವಾದ ಅಭಿಮಾನವನ್ನು ಹೊಂದಿರುವ ಡಾ. ಲತಾ ರಾಜಶೇಖರ್ ಅವರು ಹಲವಾರು ಕನ್ನಡಪರ ಹೋರಾಟಗಳಲ್ಲಿ ಭಾಗವಹಿಸಿದ್ದಾರೆ. ಕಾವೇರಿ ಚಳುವಳಿ, ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ತಂದುಕೊಡುವ ನಿಟ್ಟಿನಲ್ಲಿ ನಡೆದ ಹೋರಾಟ, ಕನ್ನಡ ಮಾಧ್ಯಮದಲ್ಲಿ ಶಿಕ್ಷಣವನ್ನು ಜಾರಿಗೊಳಿಸಲು ನಡೆಸಿದ ಹೋರಾಟ ಹಾಗೂ ನಾಡು ನುಡಿಗಳಿಗೆ ಸಂಬಂಧಿಸಿದ ಪ್ರಮುಖ ಹೋರಾಟ, ಪ್ರತಿಭಟನೆ, ಧರಣಿ, ಉಪವಾಸ ಸತ್ಯಾಗ್ರಹಗಳಲ್ಲಿ ಪಾಲ್ಗೊಂಡಿದ್ದಾರೆ.

ಕ್ರಿಯಾಶೀಲ ವ್ಯಕ್ತಿತ್ವದ ಇವರು ಈ ಮೊದಲು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ. ಹಲವಾರು ಮಹತ್ವದ ಸಂಘ ಸಂಸ್ಥೆಗಳ ಅಧ್ಯಕ್ಷರು ಹಾಗೂ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರಲ್ಲದೇ ಹಾಗೂ ಯುವ ಬರಹಗಾರರಿಗೆ ತುಂಬು ಹೃದಯದ ಪ್ರೋತ್ಸಾಹವನ್ನು ನೀಡುತ್ತಾ ಬಂದಿದ್ದಾರೆ. ಅದೇ ರೀತಿ ಮಹಾಕವಿ ಡಾ. ಲತಾ ರಾಜಶೇಖರ್ ಸಾಹಿತ್ಯಕ ಪ್ರತಿಷ್ಠಾನದ ಕಾರ್ಯಾಧ್ಯಕ್ಷರಾಗಿ ಉನ್ನತ ಮಟ್ಟದಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಬಹುಮುಖ ಪ್ರತಿಭೆಯ ಜನಪರ ಕಾಳಜಿಯ ಇವರ ಸಾಹಿತ್ಯ ಸಾಧನೆಗೆ ಹಲವಾರು ಪ್ರತಿಷ್ಠಿತ ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ.

'ಮಹಾಕಾವ್ಯ ಸರಸ್ವತಿ', 'ಸಾಹಿತ್ಯ ಲೋಕದ ಧ್ರುವತಾರೆ', 'ಮಹಾಕಾವ್ಯ ಗಂಗೋತ್ರಿ' ಮುಂತಾದ ಬಿರುದುಗಳನ್ನು ಪಡೆದಿರುವ ಡಾ. ಲತಾ ಅವರ ಸಾಹಿತ್ಯ ಸಾಧನೆಯನ್ನು ಗೌರವಿಸಿ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳು ಇವರಿಗೆ ಸಂದಿವೆ. ಅಂತರರಾಷ್ಟ್ರೀಯ ವಿಶ್ವಕವಿ ಪ್ರಶಸ್ತಿ ಹಾಗೂ ಅಂತರರಾಷ್ಟ್ರೀಯ ಅಹಿಂಸಾ ಪುರಸ್ಕಾರ, ರಾಷ್ಟ್ರೀಯ ಕೆಂಪೇಗೌಡ ಪುರಸ್ಕಾರ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ವಿಶ್ವಕರ್ಮ ಪ್ರಶಸ್ತಿ ಹಾಗೂ ಚಿನ್ನದ ಪದಕ, ಶ್ರೀ ಶಿವರಾತ್ರೀಶ್ವರ ಪ್ರಶಸ್ತಿ, ಡಾ. ಸಂ.ಶಿ. ಭೂಸನುರ ಮಠ ಪ್ರಶಸ್ತಿ, ಮಾತೃಶ್ರೀ ಸಾವಿತ್ರಮ್ಮ ದೇಜಗೌ ಪ್ರಶಸ್ತಿ, ಮಾನವರತ್ನ ಪ್ರಶಸ್ತಿ, ಸಾಹಿತ್ಯ ಸರಸ್ವತಿ ಪ್ರಶಸ್ತಿ, ರತ್ನಾಕರವರ್ಣಿ ಪ್ರಶಸ್ತಿ, ರಾಷ್ಟ್ರಕವಿ ಕುವೆಂಪು ಪ್ರಶಸ್ತಿ, ಅತ್ತಿಮಬ್ಬೆ ಕಾವ್ಯ ಪ್ರಶಸ್ತಿ, ಮಹಾಕವಿ ರತ್ನ ಪ್ರಶಸ್ತಿ, ವಚನ ಸಾಹಿತ್ಯ ಶ್ರೀ ಪ್ರಶಸ್ತಿ, ಮಹಾಕಾವ್ಯ ಸರಸ್ವತಿ ಪ್ರಶಸ್ತಿ ಮುಂತಾದ 50ಕ್ಕೂ ಹೆಚ್ಚು ಪ್ರತಿಷ್ಠಿತ ಪ್ರಶಸ್ತಿ ಪುರಸ್ಕಾರಗಳು ಇವರಿಗೆ ಸಂದಿವೆ. ಭಾರತೀಯ ವಿದ್ಯಾಭವನದ ಡಾ. ಕೆ.ಎಂ. ಮುನ್ಷಿ ಪುರಸ್ಕಾರ, ರೋಟರಿ ಸಂಸ್ಥೆಯ ಗೌರವ ಸದಸ್ಯತ್ವಕ್ಕೂ ಇವರು ಪಾತ್ರರಾಗಿದ್ದಾರೆ.

ಆತ್ಮೀಯ ಸ್ನೇಹಶೀಲ ವ್ಯಕ್ತಿತ್ವದ ಡಾ. ಲತಾ ರಾಜಶೇಖರ್ ಅವರು ಸ್ತ್ರೀಪರ ಧೋರಣೆಯನ್ನು, ಕನ್ನಡಪರ ಕಾಳಜಿಯನ್ನು ಹೊಂದಿದ್ದಾರೆ. ಸರ್ವಧರ್ಮ ಸಮನ್ವಯತೆ, ವಿಶ್ವ ಭ್ರಾತೃತ್ವ ಹಾಗೂ ವಿಶ್ವಶಾಂತಿ ಇವುಗಳು ಲತಾ ಅವರ ಮಹಾಕಾವ್ಯಗಳ ಮುಖ್ಯ ಆಶಯಗಳಾಗಿವೆ. ಡಾ. ಲತಾ ರಾಜಶೇಖರ್ ಅವರ ಸಾಹಿತ್ಯವನ್ನು ಹಾಗೂ ಮಹಾಕಾವ್ಯಗಳನ್ನು ಕುರಿತಂತೆ ಈಗಾಗಲೇ ನಾಡಿನ ಹಲವೆಡೆಗಳಲ್ಲಿ ಹಲವಾರು ಮಹತ್ವದ ವಿಚಾರ ಸಂಕಿರಣಗಳು ನಡೆದಿವೆ. ಇವರ ಸಾಹಿತ್ಯವನ್ನು ಕುರಿತಂತೆ ಕೆಲವು ವಿಶ್ವವಿದ್ಯಾಲಯಗಳಲ್ಲಿ ಪಿ.ಎಚ್.ಡಿ. ಅಧ್ಯಯನವನ್ನು ನಡೆಸಲಾಗುತ್ತಿದೆ.

ಡಾ. ಲತಾ ರಾಜಶೇಖರ್ ಅವರು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಅಪಾರ ಸೇವೆಗಳನ್ನು ಪರಿಗಣಿಸಿ ಅವರಿಗೆ ದೆಹಲಿ ಕರ್ನಾಟಕ ಸಂಘವು 2025 ನೇ ಸಾಲಿನ 'ಡಾ. ಸರೋಜಿನಿ ಮಹಿಷಿ ಪ್ರಶಸ್ತಿ'ಯನ್ನು ದಿನಾಂಕ 08.02.2026 ರಂದು ನವದೆಹಲಿಯ ಸಂಘದ ಸಭಾಂಗಣದಲ್ಲಿ ನಡೆದ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ನೀಡಿ ಗೌರವಿಸಿದೆ. ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಪ್ರೀತಿಪೂರ್ವಕ ಅಭಿನಂದನೆಗಳು.



## ಡಾ. ಟಿ.ಎಸ್. ನಾಗಾಭರಣ

ಡಾ. ಟಿ.ಎಸ್. ನಾಗಾಭರಣ ಅವರು ರಂಗಭೂಮಿ, ಚಲನಚಿತ್ರ ಹಾಗು ದೂರದರ್ಶನ ಕ್ಷೇತ್ರಗಳಲ್ಲಿ ಕಲಾತ್ಮಕ ಮತ್ತು ಮುಖ್ಯವಾಹಿನಿ ಎರಡರಲ್ಲೂ ಯಶಸ್ವಿಯಾಗಿರುವ ದೇಶದ ಅತ್ಯುತ್ತಮ ನಿರ್ದೇಶಕರಲ್ಲೊಬ್ಬರು. ರಂಗಭೂಮಿ ಹಿನ್ನೆಲೆಯಿಂದ ಬಂದ ಇವರು ಕನ್ನಡ ಚಲನಚಿತ್ರಗಳಲ್ಲಿ ಶ್ರೇಷ್ಠ ನಿರ್ದೇಶಕರಾಗಿ ಖ್ಯಾತಿಯ ಉತ್ತುಂಗದಲ್ಲಿದ್ದಾಗ, ರಂಗಭೂಮಿಗೆ ಮತ್ತೆ ಹಿಂತಿರುಗಿದರು. ಕನ್ನಡದ ಮಣ್ಣಿನ ಮಗ ಶ್ರೀ ನಾಗಾಭರಣ ಅವರನ್ನು, 'ದೃಶ್ಯ ಮಾಧ್ಯಮದ ಬಹುಮುಖಿ ರಂಗಕರ್ಮಿ' ಎಂದು ಪರಿಚಯಿಸಿದರೂ ಉತ್ಪ್ರೇಕ್ಷೆಯಾಗಲಾರದು. ಶ್ರೀ ನಾಗಾಭರಣ ಅವರು ತಮ್ಮ ಐದು ದಶಕಗಳ ಸೆಲ್ಯುಲಾಯ್ಡ್ ಪ್ರಯಾಣದಲ್ಲಿ, 37 ಚಲನಚಿತ್ರಗಳನ್ನು ನಿರ್ದೇಶಿಸಿದ್ದಾರೆ ಮತ್ತು 10 ರಾಷ್ಟ್ರೀಯ ಪ್ರಶಸ್ತಿಗಳು ಹಾಗು 23 ರಾಜ್ಯ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಇವರ ಅನೇಕ ಚಿತ್ರಗಳು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವಗಳಲ್ಲಿ ಪಾಲ್ಗೊಂಡಿವೆ. ಗಂಭೀರವಾದ ಕಲಾತ್ಮಕ ಮತ್ತು ಮುಖ್ಯವಾಹಿನಿಯ ಚಲನಚಿತ್ರಗಳನ್ನೂ ಸಮತೋಲನದಲ್ಲಿಡುವಲ್ಲಿ ಇವರು ಯಶಸ್ವಿಯಾಗಿದ್ದು, ಬ್ರಿಡ್ಜ್ ಸಿನಿಮಾ ಪ್ರಕಾರಕ್ಕೆ ಒಂದು ಮೈದಾಸ್ ಸ್ಪರ್ಶ ನೀಡಿದ್ದಾರೆ.

ತೆರೆಯ ಹೊರಗೆ ಮತ್ತು ಪರದೆಯ ಮೇಲೆ ನಿರ್ದೇಶನ, ನಟನೆ ಮತ್ತು ಹಾಡುವ ಸಾಮರ್ಥ್ಯವನ್ನು ಹೊಂದಿರುವ ಅನುಭವಿ ರಂಗಕರ್ಮಿ ನಾಗಾಭರಣ ಅವರು ಕನ್ನಡ ಚಿತ್ರರಂಗದಲ್ಲಿ ಐದು ದಶಕಗಳ ಅನುಭವ ಹೊಂದಿರುವ ಚಲನಚಿತ್ರ ನಿರ್ಮಾಪಕರೂ ಸಹಾ. ದಿನಾಂಕ ಜನವರಿ 23, 1953ರಲ್ಲಿ ಜನಿಸಿದ ತಲಕಾಡು ಶ್ರೀನಿವಾಸಯ್ಯ ನಾಗಾಭರಣರು ತಮ್ಮ ಜನ್ಮಸ್ಥಳ ತಲಕಾಡಿನಲ್ಲಿ ತನ್ನ ಅಜ್ಜನಿಗೆ ಯಕ್ಷಗಾನಕ್ಕೆ ಪರದೆ ಎಳೆಯುವ ಮತ್ತು ಕಲಾವಿದರಿಗೆ ನೀರನ್ನು ಕೊಡುವ ಕೆಲಸ ಮಾಡುತ್ತಾ, ಸುತ್ತ ಮುತ್ತ ಹಾರಾಡುತ್ತಿದ್ದ ಕಲೆಯ ಬಣ್ಣಗಳನ್ನು ಬಾಲ್ಯದಲ್ಲೇ ಕಂಡು ತಮ್ಮ ಕನಸುಗಳನ್ನು ಚಿತ್ರಿಸಿಕೊಂಡರು. ಆ ಕನಸುಗಳೊಂದಿಗೆ ಪ್ರೌಢಶಾಲಾ ಶಿಕ್ಷಣಕ್ಕಾಗಿ ಬೆಂಗಳೂರಿಗೆ ಬಂದು, ನಾಟಕಗಳು ಮತ್ತು ಭಾಷಣಗಳಂತಹ ಪಠ್ಯೇತರ ಕಾರ್ಯಕ್ರಮಗಳಲ್ಲಿ ಭಾಗವಹಿಸಿದರು. 2.50 ರೂಪಾಯಿ ಸ್ಟೈಫಂಡ್‌ಗಾಗಿ ಅವರು ಭಾರತೀಯ ರಂಗಭೂಮಿಯ ದಂತಕಥೆಗಳಾದ ಬಿ.ವಿ. ಕಾರಂತ್, ಪ್ರೇಮಾ ಕಾರಂತ್, ಸಾಯಿ ಪರಾಂಜಪೆ ಮತ್ತು ಆದ್ಯ ರಂಗಾಚಾರ್ಯರು ಸಂಪನ್ಮೂಲ ವ್ಯಕ್ತಿಗಳಾಗಿದ್ದ ರಂಗಭೂಮಿ ತರಗತಿಗಳಿಗೆ ಸೇರಿದರು. ಬಿ.ಎಸ್ಸಿ. ಸೇರುವ ಹೊತ್ತಿಗೆ, ವೃತ್ತಿಪರ ರಂಗಕರ್ಮಿಯಾಗಿದ್ದರು, ರಂಗಭೂಮಿಯಲ್ಲಿನ ಪರಿಣತಿ ಮತ್ತು ಅನುಭವ ಅವರನ್ನು ಅತ್ಯುತ್ತಮ ತಂತ್ರಜ್ಞರಲ್ಲೊಬ್ಬರನ್ನಾಗಿಸಿತು.

ಶ್ರೀ ನಾಗಾಭರಣ ಅವರಲ್ಲಿ ಬಿ.ಎಸ್ಸಿ. ಅಂತಿಮ ವರ್ಷದಲ್ಲೇ ನಿರ್ದೇಶನದ ಕಲ್ಪನೆ ಚಿಗುರಿತ್ತು. ಡಾ. ಗಿರೀಶ್ ಕಾರ್ನಾಡ್ ಅವರ ವಂಶವೃಕ್ಷ' ಚಿತ್ರ ಮತ್ತು "ಕಾಡು" ಚಿತ್ರದಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ ಇವರು ಭಾರತದ ಗ್ರಾಮೀಣ ಭಾಗಗಳಲ್ಲಿ ಜಾತಿ ವ್ಯವಸ್ಥೆಯ ದುಷ್ಟ ಬೇರುಗಳು ಮತ್ತು ಪರಿಣಾಮಗಳನ್ನು ಎತ್ತಿ ತೋರಿಸುವ ತಮ್ಮ ನಿರ್ದೇಶನದ ಮೊದಲ ಚಿತ್ರ 'ಗ್ರಹಣ'ಕ್ಕಾಗಿ




1978-79 ರಲ್ಲಿ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದರು. 'ಗ್ರಹಣ'ದಿಂದ 'ಅಲ್ಲಮ' ಚಿತ್ರದವರೆಗಿನ ಪಯಣದಲ್ಲಿ ನಾಗಾಭರಣ ಅವರು ಪ್ರಾಯೋಗಿಕ ಹೊಸ ಅಲೆಯ ಚಲನಚಿತ್ರಗಳು ಮತ್ತು ಮುಖ್ಯವಾಹಿನಿಯ ಚಲನಚಿತ್ರಗಳು ಈ ಎರಡೂ ಪ್ರತ್ಯೇಕ ಮಾಧ್ಯಮಗಳಲ್ಲಿ ಕಾರ್ಯ ನಿರ್ವಹಿಸಿರುವರು.


ಶ್ರೀ ನಾಗಾಭರಣ ಅವರ "ಮೈಸೂರು ಮಲ್ಲಿಗೆ" ಮತ್ತು "ಸಂತ ಶಿಶುನಾಳ ಶರೀಫ" ಚಿತ್ರಗಳಲ್ಲಿ ಪರಿಣಾಮಕಾರಿ ಸಂವಹನ, ಉತ್ತಮ ಸಮಯ ನಿರ್ವಹಣಾ ಕೌಶಲ್ಯ, ಅತ್ಯುತ್ತಮ ನಿರೂಪಣಾ ತಂತ್ರ, ಕವಿತೆಗಳನ್ನು ಸುಮಧುರ ಸಂಗೀತದೊಂದಿಗೆ ದೃಶ್ಯ ಕರಕುಶಲತೆಗೆ ಸೃಜನಾತ್ಮಕವಾಗಿ ಅಳವಡಿಸಿಕೊಂಡ ರೀತಿ ಕಾಣಬಹುದು. ಹೆಚ್ಚಿನ ಚಲನಚಿತ್ರಗಳಲ್ಲಿ ತಮ್ಮ ಅದ್ಭುತ ವೀಕ್ಷಣಾ ಶಕ್ತಿಯ ಮೂಲಕ ಪರಿಕಲ್ಪನೆಯನ್ನು ಕಲಾತ್ಮಕವಾಗಿ ರಚಿಸುವ ಮತ್ತು ದೃಶ್ಯೀಕರಿಸುವ ಪ್ರಯತ್ನ ಮಾಡಿದ್ದಾರೆ. 'ಆಕಸ್ಮಿಕ' ಮತ್ತು "ಜನುಮದ ಜೋಡಿ" ಇವರ ನಿರ್ದೇಶನದ ಅತ್ಯಂತ ಜನಪ್ರಿಯ ಸೂಪರ್ ಹಿಟ್ ಚಿತ್ರಗಳಾಗಿವೆ. 'ಆಸ್ಫೋಟ', "ಮೈಸೂರು ಮಲ್ಲಿಗೆ", "ಚಿನ್ನಾರಿ ಮುತ್ತಾ" ಮತ್ತು "ನಾಗಮಂಡಲ" ಚಿತ್ರಗಳು ವಿಮರ್ಶಕರ ಮೆಚ್ಚುಗೆ ಪಡೆಯುವುದರೊಂದಿಗೆ ಹಣ ಗಳಿಕೆಯಲ್ಲೂ ದಾಖಲೆ ನಿರ್ಮಿಸಿದ್ದಾರೆ. ಶಿವರಾಮ ಕಾರಂತರ ಕಾದಂಬರಿ ಆಧಾರಿತವಾದ "ಚಿಗುರಿದ ಕನಸು" ಚಿತ್ರವನ್ನೂ ನಿರ್ದೇಶಿಸಿರುವ ಇವರು ಕನ್ನಡದಲ್ಲಿ ಹೆಚ್ಚು ಯಶಸ್ಸಿನ ಮಕ್ಕಳ ಚಿತ್ರಗಳನ್ನೂ ನಿರ್ಮಿಸಿ, ನಿರ್ದೇಶಿಸಿದ್ದಾರೆ.

ಬೆಂಗಳೂರಿನ 'ಬೆನಕ' ರಂಗ ತಂಡದ ಸ್ಥಾಪಕ ಸದಸ್ಯರಾದ ಇವರು ಈಗ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಸಾರಥ್ಯದಲ್ಲಿ ಈ ತಂಡದ ಹೊಸ ಪೀಳಿಗೆಯ ಪ್ರತಿಭಾನ್ವಿತ ಕಲಾವಿದರು ದೆಹಲಿಯಲ್ಲಿ ಮತ್ತು ರಾಜ್ಯದೆಲ್ಲೆಡೆ ಉತ್ತಮ ನಾಟಕಗಳನ್ನು ಪ್ರದರ್ಶಿಸಿದ್ದಾರೆ. ಸೆಪ್ಟಂಬರ್ 2023ರಲ್ಲಿ ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿ ನಡೆದ ನಾಟಕೋತ್ಸವದಲ್ಲಿ ಬೆನಕ ತಂಡದಿಂದ ಪ್ರದರ್ಶನಗೊಂಡ 'ಸತ್ತವರ ನೆರಳು' ದೆಹಲಿ ಕನ್ನಡಿಗರ ಮೆಚ್ಚುಗೆಗೆ ಪಾತ್ರವಾಗಿದೆ. ಸಂಘದ ಅಮೃತ ಮಹೋತ್ಸವ ಸಂಭ್ರಮ ಕಾರ್ಯಕ್ರಮದಲ್ಲಿ ನಾಡಿನ ಸಾಹಿತಿ ಗಣ್ಯರೊಂದಿಗೆ ಸಾಹಿತ್ಯ ಸಂವಾದದಲ್ಲಿ ನಾಗಾಭರಣ ಅವರು ಪಾಲ್ಗೊಂಡಿದ್ದರು. ತುಮಕೂರು ವಿಶ್ವವಿದ್ಯಾಲಯದಿಂದ 2023ರಲ್ಲಿ ಡಿ.ಲಿಟ್. ಮತ್ತು ಗೌರವ ಡಾಕ್ಟರೇಟ್ ಪದವಿ ಪಡೆದಿರುವ ಶ್ರೀ ನಾಗಾಭರಣ ಅವರು ಕರ್ನಾಟಕ ಚಲನಚಿತ್ರ ಅಕಾಡೆಮಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ರಂಗ ಸಮಾಜ ರಂಗಾಯಣ, ಬೆನಕ, NFDC, CBFC, ಮುಂತಾದ ಸರ್ಕಾರಿ ಸಂಸ್ಥೆಗಳಲ್ಲಿಯೂ ಕೂಡ ಅಪಾರವಾದ ಪರಿಶ್ರಮವನ್ನು ಮಾಡಿದ್ದಾರೆ ಮತ್ತು ಅವರಿಂದಾಗಿ ಹತ್ತು ಹಲವು ಯೋಜನೆಗಳು ರೂಪುಗೊಂಡಿವೆ.

ಡಾ. ನಾಗಾಭರಣ ಅವರ ಧರ್ಮಪತ್ನಿ ಶ್ರೀಮತಿ ನಾಗಿಣಿ ನಾಗಾಭರಣ ಒಬ್ಬ ನಟಿ, ನೃತ್ಯಗಾರ್ತಿ, ನಿರ್ದೇಶಕಿ ಮತ್ತು ನಿರ್ಮಾಪಕಿಯಾಗಿದ್ದಾರೆ. ಇವರ ಮಗಳು ಶ್ರುತಾ ಭರಣ ರಂಗಭೂಮಿ ಕಲಾವಿದೆ ಮತ್ತು ಶಿಕ್ಷಣ ತಜ್ಞೆಯಾಗಿದ್ದು, ಭರಣ ಅಕಾಡೆಮಿ ಆಫ್ ಫರ್ಫಾಮಿಂಗ್ ಆರ್ಟ್ಸ್ ನಡೆಸುತ್ತಿದ್ದಾರೆ. ಇವರ ಸುಪುತ್ರ ಪನ್ನಗಾಭರಣ ಸಹಾ ಒಬ್ಬ ನಟ, ನಿರ್ದೇಶಕ ಮತ್ತು ನಿರ್ಮಾಪಕರಾಗಿ ತೊಡಗಿಸಿಕೊಂಡಿದ್ದಾರೆ.

ದೂರದರ್ಶದಲ್ಲಿ (ಟೆಲಿವಿಷನ್‌ನಲ್ಲಿ) ಸಮೀಪ ದರ್ಶನವಾದವರು ನಾಗಾಭರಣ. 1986ರಲ್ಲಿ ಪ್ರಸಾರವಾದ ಮೊಟ್ಟ ಮೊದಲ ಧಾರಾವಾಹಿ 'ನಮ್ಮ ನಮ್ಮಲ್ಲಿ'ಯಿಂದ ಹಿಡಿದು ಇಂದಿನವರೆಗೆ ನಿರಂತರ ಕೆಲಸ ಮಾಡಿರುವ ನಾಗಾಭರಣ ಸುಮಾರು 28 ಧಾರಾವಾಹಿಗಳು, ಅದರಲ್ಲಿ 'ಸಂಕ್ರಾಂತಿ', 'ಮಹಾಮಾಯಿ' ಮುಂತಾದ 11 ಮಹಾ ಧಾರಾವಾಹಿಗಳನ್ನು ನಿರ್ಮಿಸಿ, ನಿರ್ದೇಶಿಸಿದ್ದಾರೆ. ಬೆಂಗಳೂರು ದೂರದರ್ಶನ, ರಾಷ್ಟ್ರೀಯ ದೂರದರ್ಶನ, ಉದಯ ಮತ್ತು ಇತರ ವಾಹಿನಿಗಳಲ್ಲಿ ಕನ್ನಡ, ಹಿಂದಿ ಮತ್ತು ತಮಿಳು ಧಾರಾವಾಹಿಗಳನ್ನು ನಿರ್ಮಿಸಿ, ನಿರ್ದೇಶಿಸಿದ್ದಾರೆ. ತಿರುಗು ಬಾಣ, ತೆನಾಲಿ ರಾಮ, ಸ್ಟೋನ್ ಬಾಯ್, ಸಂಕ್ರಾಂತಿ, ಜನ್ನಲ್ ಮುಂತಾದ ಧಾರಾವಾಹಿಗಳಲ್ಲಿ ನಟ, ನಿರ್ಮಾಪಕ, ನಿರ್ದೇಶಕ ಮತ್ತು ಲೇಖಕರಾಗಿ ಅವರ ಕೊಡುಗೆ ಅಪಾರ. ಇವರು ಅಂತರರಾಷ್ಟ್ರೀಯ, ರಾಷ್ಟ್ರ ಮತ್ತು ರಾಜ್ಯಮಟ್ಟದ ಅನೇಕ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ಡಾ. ಟಿ.ಎಸ್. ನಾಗಾಭರಣ ಅವರು ಕನ್ನಡ ರಂಗ ಭೂಮಿ, ನಾಟಕ, ದೂರದರ್ಶನ ಮತ್ತು ಸಿನೆಮಾ ಕ್ಷೇತ್ರದಲ್ಲಿ ಮಾಡಿದ ಅಸಾಧಾರಣ ಸಾಧನೆ ಮತ್ತು ಸಲ್ಲಿಸಿದ ಅಪಾರ ಸೇವೆಗಳನ್ನು ಪರಿಗಣಿಸಿ ಅವರಿಗೆ 2024 ನೇ ಸಾಲಿನ ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತೀ ರಂಗ ಪ್ರಶಸ್ತಿಯನ್ನು ದಿನಾಂಕ 08.02.2026ರಂದು ನವದೆಹಲಿಯ ಸಂಘದ ಸಭಾಂಗಣದಲ್ಲಿ ನಡೆದ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘವು ನೀಡಿ ಗೌರವಿಸಿದೆ. ಇವರಿಗೆ ಸಮಸ್ತ ನಾಡಿನ ಮತ್ತು ದೆಹಲಿ ಕನ್ನಡಿಗರ ಪರವಾಗಿ ಹೃದಯ ಪೂರ್ವಕ ಅಭಿನಂದನೆಗಳು!



## ನಾಡೋಜ
## ಡಾ. ಹಂಪ ನಾಗರಾಜಯ್ಯ (ಹಂಪನಾ)

ಪ್ರೊಫೆಸರ್ ಎಮೆರಿಟಸ್ ಡಾ. ಹಂಪ ನಾಗರಾಜಯ್ಯ ಅವರು ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲೂಕಿನ ಹಂಪಸಂದ್ರ ಎಂಬ ಕುಗ್ರಾಮದಲ್ಲಿ ದಿನಾಂಕ 07.10.1936ರಲ್ಲಿ ತಂದೆ ಶ್ರೀ ಶಾನುಬೋಗ ಪದ್ಮನಾಭಯ್ಯ ಮತ್ತು ತಾಯಿ ಶ್ರೀಮತಿ ಪದ್ಮಾವತಮ್ಮನವರ ಸುಪುತ್ರರಾಗಿ ಜನಿಸಿದರು. ಪ್ರಮುಖ ಬರಹಗಾರರಾಗುವ ಕನಸನ್ನು ಬಹಳ ಬೇಗನೇ ಕಂಡ ಇವರು ಅಂತಿಮವಾಗಿ ಅದನ್ನು ನನಸಾಗಿಸಿಕೊಂಡವರು. ಪ್ರಮುಖ ಸಾಹಿತಿಯಾಗಿ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ಅರವತ್ತು ವರ್ಷಗಳಿಗೂ ಹೆಚ್ಚು ಕಾಲದ ಇವರ ಬರಹಗಳು ವಿಭಿನ್ನ ವಿಭಾಗಗಳು ಮತ್ತು ಕ್ಷೇತ್ರಗಳ ವ್ಯಾಪಕ ಶ್ರೇಣಿಯ ವಿಷಯಗಳನ್ನು ಒಳಗೊಂಡಿವೆ. ಇವರ ಕೆಲವು ಪುಸ್ತಕಗಳನ್ನು ಕನ್ನಡದಿಂದ ವಿವಿಧ ಭಾಷೆಗಳಿಗೆ ಅನುವಾದಿಸಲಾಗಿದೆ. ಅವರ ಶ್ರೇಷ್ಠ ಕವಿತೆ 'ಚಾರು ವಸಂತ'ವನ್ನು 16 ಭಾರತೀಯ ಭಾಷೆಗಳಿಗೆ ಮತ್ತು ಇಂಗ್ಲಿಷ್, ಪರ್ಷಿಯನ್ ಹಾಗು ಜರ್ಮನ್ ಭಾಷೆಗಳಿಗೆ ಅನುವಾದಿಸಲಾಗಿದೆ. ಸಾಹಿತ್ಯ ಲೋಕಕ್ಕೆ ಹಂಪನಾ ಅವರು ನೀಡಿರುವ ವೈವಿಧ್ಯಮಯ ಕೊಡುಗೆಯನ್ನು ಗುರುತಿಸಿ, ಅವರಿಗೆ ಅನೇಕ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಗೌರವಗಳು ಮತ್ತು ಪುರಸ್ಕಾರಗಳು ಸಂದಿವೆ. ಅವುಗಳಲ್ಲಿ ಪ್ರಮುಖವು–ಭಾಷಾ ಸಮ್ಮಾನ್ (ಕೇಂದ್ರ ಸಾಹಿತ್ಯ ಅಕಾಡೆಮಿ), ಮಕ್ಕಳ ಸಾಹಿತ್ಯಕ್ಕೆ ಅಸಾಧಾರಣ ಸೇವೆಗಾಗಿ ರಾಷ್ಟ್ರೀಯ ಪ್ರಶಸ್ತಿ (ನವದೆಹಲಿ), 'ಜೈನ ಪ್ರಪಂಚದ ರತ್ನ' ಪ್ರಶಸ್ತಿ (ಯುಎಸ್‌ಎ), ಸಾರ್ಕ್ ಸಾಹಿತ್ಯ ಪ್ರಶಸ್ತಿ (ಸಾರ್ಕ್ ಬರಹಗಾರರ ಪ್ರತಿಷ್ಠಾನ, ನವದೆಹಲಿ), ಶಾಸ್ತ್ರೀಯ ಸಾಹಿತ್ಯದಲ್ಲಿನ ಸೇವೆಗಳಿಗಾಗಿ ಭಾರತದ ರಾಷ್ಟ್ರಪತಿಗಳಿಂದ ಪ್ರಮಾಣಪತ್ರ, ಹಂಪಿ ವಿಶ್ವವಿದ್ಯಾಲಯದಿಂದ ನಾಡೋಜ (ಡಿ.ಲಿಟ್), ಗೌರವ ಡಿ.ಲಿಟ್. (ತುಮಕೂರು ವಿಶ್ವವಿದ್ಯಾಲಯ), 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ' ಮತ್ತು ರಾಜ್ಯದ ಅತ್ಯುನ್ನತ ಸಾಹಿತ್ಯ ಪ್ರಶಸ್ತಿಗಳಾದ 'ಪಂಪ ಪ್ರಶಸ್ತಿ' ಮತ್ತು 'ರನ್ನ ಪ್ರಶಸ್ತಿ' ಮುಂತಾದವು. ಹಾಗೆಯೇ ಭಾರತ ಮತ್ತು ವಿದೇಶಗಳಲ್ಲಿನ ಸಮಕಾಲೀನ ಬರಹಗಾರರು ಹಂಪನಾ ಅವರನ್ನು ಅನೇಕ ಪ್ರಶಸ್ತಿ–ಪುರಸ್ಕಾರಗಳೊಂದಿಗೆ ಸನ್ಮಾನಿಸಿದ್ದಾರೆ.

ಕನ್ನಡದ ಪ್ರಾಧ್ಯಾಪಕರು, ವಾಗ್ಮಿ ಮತ್ತು ಸಾಹಿತಿ ಡಾ. ಹಂಪನಾ ಅವರು ದಕ್ಷ ಆಡಳಿತಗಾರರಾಗಿ ವಿಶ್ವವಿದ್ಯಾಲಯಗಳಲ್ಲಿ ಹಾಗು 116 ವರ್ಷಗಳಷ್ಟು ಹಳೆಯದಾದ ಪ್ರಮುಖ ಸಾಹಿತ್ಯ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಮತ್ತು ಅಧ್ಯಕ್ಷರಾಗಿ ಅತ್ಯುತ್ತಮ ಸೇವೆ ಸಲ್ಲಿಸಿದ್ದಾರೆ. ಇವರು ಈ ಹಿಂದೆ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಅಧ್ಯಕ್ಷರಾಗಿದ್ದರು ಮತ್ತು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ. ಇವರನ್ನು ವಿದೇಶಗಳಲ್ಲಿನ ಹಲವಾರು ಶೈಕ್ಷಣಿಕ ಸಂಸ್ಥೆಗಳ ಸದಸ್ಯರನ್ನಾಗಿ ಆಯ್ಕೆ ಮಾಡಲಾಗಿದೆ. ಹಲವಾರು ಅಂತರರಾಷ್ಟ್ರೀಯ ಕಾಂಗ್ರೆಸ್‌ಗಳು, ವಿಚಾರ ಸಂಕಿರಣಗಳು, ಕಾರ್ಯಾಗಾರಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ ಮತ್ತು ವಿವಿಧ ವಿಶ್ವವಿದ್ಯಾಲಯಗಳಲ್ಲಿ ಘಟಿಕೋತ್ಸವ, ದತ್ತಿ ಮತ್ತು ಪ್ರತಿಷ್ಠಾನ ಉಪನ್ಯಾಸಗಳನ್ನು ಕೂಡ ನೀಡಿದ್ದಾರೆ.



ಡಾ. ಹಂಪ ನಾಗರಾಜಯ್ಯನವರು ವಾಸ್ತವಿಕವಾಗಿ ಆಳವಾದ ಪಾಂಡಿತ್ಯ, ವಾಗ್ಮಿ ಕೌಶಲ್ಯ ಮತ್ತು ಆಡಳಿತ ಸಾಮರ್ಥ್ಯದ ಸಂಗಮವೆಂದರೆ ಅತಿಶಯೋಕ್ತಿಯಾಗಲಾರದು. ಅವರ ಬಹುಮುಖಿ ಮನಸ್ಸು ಹೊಸ ಕ್ಷೇತ್ರಗಳನ್ನು ದಣಿವರಿಯದೆ ಅನ್ವೇಷಿಸುತ್ತಲೇ ಇರುತ್ತದೆ. ಹಂಪನಾರವರ ಪ್ರಕಟಣೆಗಳು ಒಳಗೊಂಡಿರುವ ವಿಷಯಗಳ ವ್ಯಾಪ್ತಿ ಮತ್ತು ವಿಸ್ತಾರವು ಅವರ ಅದ್ಭುತ ಬೌದ್ಧಿಕ ಸಾಮರ್ಥ್ಯಗಳನ್ನು ಮತ್ತು ಅವರಲ್ಲಿನ ಸೃಜನಶೀಲ ಅಧ್ಯಾಪಕರನ್ನು ಪ್ರಕಟಪಡಿಸುತ್ತದೆ.

ಡಾ. ಹಂಪನಾ ಅವರು ಈ ಹಿಂದೆ ಕನ್ನಡ ಸಾಹಿತ್ಯ ಪರಿಷತ್ತಿನ ಮತ್ತು ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಅಧ್ಯಕ್ಷರಾಗಿದ್ದಾಗ ದೆಹಲಿ ಕರ್ನಾಟಕ ಸಂಘದ ಅನೇಕ ಕಾರ್ಯಕ್ರಮಗಳಲ್ಲಿ ಮುಖ್ಯ ಅತಿಥಿಗಳಾಗಿ, ಸಂಪನ್ಮೂಲ ವ್ಯಕ್ತಿಗಳಾಗಿ ಮತ್ತು ವಿಶೇಷ ಆಹ್ವಾನಿತರಾಗಿ ಭಾಗವಹಿಸಿದ್ದರು. ದಿನಾಂಕ 15.03.2014ರಂದು ಸಂಘದಲ್ಲಿ ನಡೆದ ಕಾರ್ಯಕ್ರಮದಲ್ಲಿ ಇವರು ಆಗ ಅಧ್ಯಕ್ಷರಾಗಿದ್ದ ಕುಪ್ಪಳಿ ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ವತಿಯಿಂದ 'ಕುವೆಂಪು ರಾಷ್ಟ್ರೀಯ ಪ್ರಶಸ್ತಿ' ಪುರಸ್ಕಾರವನ್ನು ಹಿಂದಿ ಸಾಹಿತಿ ಡಾ. ನಾಮವರ್ ಸಿಂಗ್ ಅವರಿಗೆ ನೀಡಲಾಗಿತ್ತು. ಹಾಗೆಯೇ, ಮಾರ್ಚ್ 2023ರಲ್ಲಿ ಸಂಘದಲ್ಲಿ ಆಯೋಜಿಸಲಾದ ಸಾಹಿತ್ಯ ಸಂವಾದ ಕಾರ್ಯಕ್ರಮದಲ್ಲಿ ಹಂಪನಾ ಅವರ Spectrum of Classical Literature in Karnataka ಕೃತಿ ಕುರಿತು ಅವರ ಸಮಕ್ಷಮದಲ್ಲಿಯೇ ನಾಡಿನ ಹಿರಿಯ ಸಾಹಿತಿಗಳಿಂದ ಅನುಸಂಧಾನ ನಡೆದಿದ್ದು ಸ್ಮರಣೀಯ.

ಡಾ. ಹಂಪನಾ ಅವರ ಪತ್ನಿ ಕನ್ನಡದ ಹೆಸರಾಂತ ಲೇಖಕಿ, ಕವಯಿತ್ರಿ ಮತ್ತು ವಿದ್ವಾಂಸರಾಗಿದ್ದ ನಾಡೋಜ ಡಾ. ಕಮಲಾ ಹಂಪನಾ ಅವರು ಸಹಾ ಅಧ್ಯಯನ, ಕಥಾ ಸಂಕಲನ, ಮಕ್ಕಳ ಸಾಹಿತ್ಯ, ವಚನ ಸಂಕಲನ, ಕವನ, ಪ್ರಬಂಧ, ವಿಮರ್ಶೆ, ಅನುವಾದ ಮುಂತಾದ ವಿವಿಧ ಪ್ರಕಾರಗಳ ಕೃತಿಗಳ ಕೊಡುಗೆಯನ್ನು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ್ದರು. ಇವರ ಸುಪುತ್ರ ಶ್ರೀ ಹರ್ಷವರ್ಧನ ಬೆಂಗಳೂರಿನ ಪ್ರಸಿದ್ಧ ಆರ್ಕಿಟೆಕ್ಟ್‌ಗಳಲ್ಲೊಬ್ಬರು. ಭಾರತೀಯ ಜೀವ ವಿಮಾ ಸಂಸ್ಥೆಯಲ್ಲಿ ಚೀಫ್ ಮ್ಯಾನೇಜರ್ ಕಾರ್ಯ ನಿರ್ವಹಿಸುತ್ತಿರುವ ಹಂಪನಾರವರ ಹಿರಿಯ ಮಗಳು ಶ್ರೀಮತಿ ರಾಜಶ್ರೀ ಹಂಪನಾ ಸಹಾ ಲೇಖಕಿಯಾಗಿ ಹಲವಾರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅವರ ಇನ್ನೊರ್ವ ಮಗಳು ಶ್ರೀಮತಿ ಡಾ. ಎಚ್.ಎಸ್. ಆರತಿ ಅವರು ಕೂಡ ಒಬ್ಬ ಲೇಖಕಿ, ವಿಮರ್ಶಕಿ ಮತ್ತು ಕವಯಿತ್ರಿಯಾಗಿ ಗುರುತಿಸಿಕೊಂಡಿದ್ದು, ಪ್ರಸ್ತುತ ಬೆಂಗಳೂರು ದೂರದರ್ಶನದ ಕಾರ್ಯಕ್ರಮ ಮುಖ್ಯಸ್ಥರಾಗಿದ್ದಾರೆ.

ಕುವೆಂಪುರವರ ಶಿಷ್ಯರು ಹಾಗು ಕನ್ನಡ ನಾಡಿನ ಹಿರಿಯ ಸಾಹಿತಿಗಳಾದ ನಾಡೋಜ ಡಾ. ಹಂಪ ನಾಗರಾಜಯ್ಯ ಅವರು ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಅಪಾರ ಸೇವೆಯನ್ನು, ರಾಷ್ಟ್ರಕವಿ ಕುವೆಂಪು ಕುರಿತು ಮಾಡಿದ ಅಧ್ಯಯನ, ಸಾಧನೆ ಮತ್ತು ಕುವೆಂಪು ಪ್ರತಿಷ್ಠಾನಕ್ಕೆ ನೀಡಿದ ಕೊಡುಗೆಗಳನ್ನು ಪರಿಗಣಿಸಿ ಅವರಿಗೆ ದೆಹಲಿ ಕರ್ನಾಟಕ ಸಂಘವು 2024ನೇ ಸಾಲಿನ ಜ್ಞಾನಪೀಠ ಪುರಸ್ಕೃತ ರಾಷ್ಟ್ರಕವಿ ಕುವೆಂಪು ಪ್ರಶಸ್ತಿಯನ್ನು ದಿನಾಂಕ 08.02.2026 ರಂದು ನವದೆಹಲಿಯ ಸಂಘದ ಸಭಾಂಗಣದಲ್ಲಿ ನಡೆದ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ನೀಡಿ ಗೌರವಿಸಿದೆ. ಇವರಿಗೆ ಸಮಸ್ತ ನಾಡಿನ ಮತ್ತು ದೆಹಲಿ ಕನ್ನಡಿಗರ ಪರವಾಗಿ ಗೌರವ ಪೂರ್ವಕ ಅಭಿನಂದನೆಗಳು!




ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಕರ್ನಾಟಕದ ಐಎಎಸ್ ಅಧಿಕಾರಿಯವರನ್ನು ಸಂಘದ ಪರವಾಗಿ ಅಭಿನಂದಿಸಿದ ದೃಶ್ಯ



## ಶ್ರೀ ಎನ್. ವೈ. ಚರಣ್ ರಾಜ್

ಶ್ರೀ ಎನ್.ವೈ. ಚರಣ್ ರಾಜ್ ಅವರು ಒಬ್ಬ ಹೆಸರಾಂತ ಭಾರತೀಯ ನಟ, ನಿರ್ದೇಶಕ, ಚಲನಚಿತ್ರ ನಿರ್ಮಾಪಕ ಮತ್ತು ಚಿತ್ರಕಥೆ ಬರಹಗಾರರಾಗಿದ್ದು, ಈವರೆಗೆ ಸುಮಾರು 500ಕ್ಕೂ ಹೆಚ್ಚು ಕನ್ನಡ, ತಮಿಳು, ತೆಲುಗು, ಮಲಯಾಳಂ, ಒಡಿಯಾ, ಬಂಗಾಳಿ ಮತ್ತು ಹಿಂದಿ ಚಲನಚಿತ್ರಗಳಲ್ಲಿ ನಟರಾಗಿ ಅಭಿನಯಿಸಿದ್ದಾರೆ. ಇವರು ಒಬ್ಬ ಬಹುಮುಖಿ, ಬಹುಭಾಷಾ ನಟರಾಗಿ ದಕ್ಷಿಣ ಭಾರತೀಯ ಚಲನಚಿತ್ರೋದ್ಯಮದಲ್ಲಿ ಮತ್ತು ಹಿಂದಿ ಚಿತ್ರ ರಂಗದಲ್ಲಿ ತಮ್ಮ ಖಳನಾಯಕ ಮತ್ತು ನಾಯಕ ಪಾತ್ರಗಳಿಗೆ ಹೆಸರುವಾಸಿಯಾಗಿದ್ದಾರೆ. ದಿನಾಂಕ 27 ಏಪ್ರಿಲ್ 1958ರಲ್ಲಿ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲೂಕು ಬೀಡಿ ಗ್ರಾಮದಲ್ಲಿ ಜನಿಸಿದ ಇವರ ಹುಟ್ಟು ಹೆಸರು ಬ್ರಹ್ಮಾನಂದ. ನಂತರ ಚಲನಚಿತ್ರರಂಗದಲ್ಲಿ ಇವರು ಚರಣ್ ರಾಜ್ ಎಂದೇ ಪ್ರಖ್ಯಾತರಾದರು.

ಶ್ರೀ ಚರಣ್ ರಾಜ್ ತಮ್ಮ ಹೈಸ್ಕೂಲ್ ವರೆಗಿನ ಶಿಕ್ಷಣವನ್ನು ಬೆಳಗಾವಿಯಲ್ಲಿ ಪಡೆದರು. ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮಗಳಲ್ಲಿ ಹಾಸ್ಯ ನಾಟಕಗಳಲ್ಲಿ ಅಭಿನಯಿಸಿದ್ದರು. ಆಗಲೇ ಸಿನಿಮಾ ಸೇರುವ ಆಸೆ ಇವರಲ್ಲಿ ಮೂಡಿದ್ದು, ಅದನ್ನು ಅರಸಿ 1976ರಲ್ಲಿ ಬೆಂಗಳೂರಿಗೆ ಬಂದ ಇವರು ರಂಗಭೂಮಿ ನಾಟಕಗಳಲ್ಲಿ ಅಭಿನಯಿಸುತ್ತಾ ಸಿನಿಮಾ ರಂಗ ಸೇರಲು ಪ್ರಯತ್ನಿಸಿದರು. ತಮ್ಮ ಚಲನಚಿತ್ರ ವೃತ್ತಿಜೀವನವನ್ನು ಶ್ರೀ ಸಿದ್ದಲಿಂಗಯ್ಯ ನಿರ್ದೇಶನದ ವಾಣಿಜ್ಯಿಕವಾಗಿ ಅತ್ಯಂತ ಯಶಸ್ಸು ಕಂಡ ಕನ್ನಡ ಚಲನಚಿತ್ರ 'ಪರಾಜಿತ'ದೊಂದಿಗೆ 1982ರಲ್ಲಿ ಪ್ರಾರಂಭಿಸಿದರು. ನಂತರ ಶ್ರೀ ಅಬ್ಬಾಯಿ ನಾಯ್ಡು ಅವರ ಮಧು ಆರ್ಟ್ಸ್ ಬ್ಯಾನರ್ ಅಡಿಯಲ್ಲಿ ನಿರ್ಮಿಸಿದ ಅತ್ಯಂತ ಯಶಸ್ಸು ಕಂಡ 'ತಾಳಿಯ ಭಾಗ್ಯ', 'ತಾಯಿಯ ನುಡಿ', 'ತಾಯಿ ನಾಡು', 'ತವರು ಮನೆ' ಮುಂತಾದ ಅನೇಕ ಕುಟುಂಬ ಆಧಾರಿತ ಸಾಮಾಜಿಕ ಕನ್ನಡ ಚಲನಚಿತ್ರಗಳಲ್ಲಿ ಅಭಿನಯಿಸಿದ್ದಾರೆ.




ಶ್ರೀ ಚರಣ್ ರಾಜ್ ಒಬ್ಬ ನಟ ಮಾತ್ರವಲ್ಲ, ನಿರ್ಮಾಪಕ, ಸಂಗೀತ ಸಂಯೋಜಕ ಮತ್ತು ನಿರ್ದೇಶಕರೂ ಆಗಿದ್ದಾರೆ. ಸುಮಾರು 150ಕ್ಕೂ ಹೆಚ್ಚು ಕನ್ನಡ ಚಲನಚಿತ್ರಗಳಲ್ಲಿ ಅಭಿನಯಿಸಿರುವ ಇವರು ತಮಿಳು ಮತ್ತು ತೆಲುಗು ಚಲನಚಿತ್ರೋದ್ಯಮದಲ್ಲಿಯೂ ನಾಯಕ ಮತ್ತು ಖಳನಾಯಕನ ಪಾತ್ರಗಳಿಗೆ ಜನಪ್ರಿಯರಾಗಿದ್ದಾರೆ. ಪ್ರತಿಘಟನ, ಇಂದ್ರುಡು ಚಂದ್ರುಡು ಮತ್ತು ಕರ್ತವ್ಯಂ ಮುಂತಾದ ಚಿತ್ರಗಳೊಂದಿಗೆ ತೆಲುಗು ಭಾಷೆ ಚಿತ್ರಗಳಲ್ಲಿ ಅಭಿನಯಿಸಿರುವ ಇವರು ರಜನಿಕಾಂತ್ ಅವರೊಂದಿಗೆ ಫೂಲ್ ಬನೇ ಅಂಗಾರೆ ಹಿಂದಿ ಚಿತ್ರದಲ್ಲಿ, ಹಿಂದಿ ಚಿತ್ರನಟ ಜಾಕಿಶ್ರೋಫ್ ಜೊತೆ ಹಪ್ತಾ ಬಂದ್ ಹಾಗು ಕುದ್ರತ್ ಕಾ ಕಾನೂನ್ ಹಿಂದಿ ಚಿತ್ರಗಳಲ್ಲಿ ಮತ್ತು ಪಣಕ್ಕರನ್, ಧರ್ಮ ದೊರೈ, ಪಾಂಡಿಯನ್‌ನಂತಹ ತಮಿಳು ಚಿತ್ರಗಳಲ್ಲಿ ನಟಿಸಿದ್ದಾರೆ. ಈ ಎಲ್ಲಾ ಭಾಷೆಗಳ ಚಿತ್ರಗಳಲ್ಲಿ ತಮ್ಮ ಉತ್ತಮ ಅಭಿನಯಕ್ಕಾಗಿ ಸಿನೆಮಾ ಪ್ರೇಕ್ಷಕರ ಅಪಾರ ಪ್ರಶಂಸೆ ಗಿಟ್ಟಿಸಿಕೊಂಡಿದ್ದಾರೆ.

1999ರಲ್ಲಿ 'ಅಣ್ಣನ್ ತಂಗಾಚಿ' ತಮಿಳು ಚಿತ್ರದ ಮೂಲಕ ನಿರ್ದೇಶಕರಾಗಿ ಪಾದಾರ್ಪಣೆ ಮಾಡಿದ ಇವರು ಈ ಚಿತ್ರದಲ್ಲಿ ನಿರ್ದೇಶನದ ಜೊತೆ ನಾಯಕ ನಟನಾಗಿಯೂ ಅಭಿನಯ ಮಾಡಿದ್ದಾರೆ. 1982ರಿಂದ ನಟರಾಗಿ ತಮ್ಮ ಕನ್ನಡ ಸಿನಿಮಾ ಜೀವನವನ್ನು ಆರಂಭಿಸಿದ ಶ್ರೀ ಚರಣ್ ರಾಜ್ ಅವರು 'ವರ್ಣ ಚಕ್ರ', 'ಸೂರಪ್ಪ', 'ರಾಜಾ ಹುಲಿ', 'ಪ್ರೇಮಪರ್ವ', 'ಟೈಗರ್', 'ಪ್ರಳಯ ರುದ್ರ', 'ಅಣ್ಣಾವರ ಮಕ್ಕಳು', 'ಗೋಧಿ ಬಣ್ಣ ಸಾಧಾರಣ ಮೈಕಟ್ಟು', 'ಗಂಧದಗುಡಿ ಭಾಗ',–2, 'ತಿರುಪತಿ' ಮುಂತಾದ ಅನೇಕ ಕನ್ನಡ ಚಿತ್ರಗಳಲ್ಲಿ ನಾಯಕ ನಟನಾಗಿ, ಖಳನಾಯಕನಾಗಿ ಮತ್ತು ಪೋಷಕ ನಟನಾಗಿ ಅಭಿನಯಿಸಿದ್ದಾರೆ. ಇವರಿಗೆ 1985ರಲ್ಲಿ ಅತ್ಯುತ್ತಮ ಖಳನಾಯಕನಿಗಾಗಿ ನೀಡುವ ನಂದಿ ಪ್ರಶಸ್ತಿಯು–ತೆಲುಗಿನ 'ಪ್ರತಿಘಟನ' ಚಲನಚಿತ್ರಕ್ಕೆ ದೊರೆತಿದೆ.

ಇವರ ಬಾಳ ಸಂಗಾತಿ ಶ್ರೀಮತಿ ಕಲ್ಪನಾ ಚರಣ್‌ರಾಜ್ ಒಬ್ಬ ಆದರ್ಶ ಗೃಹಿಣಿ. ಈ ದಂಪತಿಗಳ ಮೂರು ಜನ ಮಕ್ಕಳಲ್ಲಿ ಮಗಳು ಶ್ರೀಮತಿ ಈಶ್ವರಿ ಪೂನಾದಲ್ಲಿ ನೆಲೆಸಿದ್ದಾರೆ. ಹಿರಿಯ ಮಗ ತೇಜ್ ಚರಣ್‌ರಾಜ್ ಒಬ್ಬ ಕ್ರೀಡಾಪಟುವಾಗಿದ್ದು, ಚಲನಚಿತ್ರ ರಂಗದಲ್ಲಿ ನಟ ಮತ್ತು ನಿರ್ಮಾಪಕನಾಗಿ ಗುರುತಿಸಿಕೊಂಡಿದ್ದಾನೆ. ಇವರ ಕಿರಿಯ ಮಗ ದೇವ್ ಚರಣ್ ರಾಜ್ ಕಮರ್ಷಿಯಲ್ ಪೈಲೆಟ್ ಆಗಿದ್ದು, ಸಿನಿಮಾ ನಟನೆಯಲ್ಲೂ ಅಭಿರುಚಿ ಹೊಂದಿದ್ದಾರೆ. ಸಿನಿಮಾ ಕ್ಷೇತ್ರವಲ್ಲದೆ ಶ್ರೀ ಚರಣ್‌ರಾಜ್ ಅವರ ಇತರ ಆಸಕ್ತಿ ಕ್ಷೇತ್ರಗಳು : ಕ್ರೀಡೆ (ಟೆನ್ನಿಸ್ ಮತ್ತು ಸ್ನೂಕರ್), ಪುಸ್ತಕಗಳನ್ನು ಬರೆಯುವುದು ಮತ್ತು ಓದುವುದು, ನಾಟಕದಲ್ಲಿ ಅಭಿನಯ, ಸಂಗೀತ, ಕಾರಿನಲ್ಲಿ ಊರು–ಊರುಗಳ ಪ್ರವಾಸ ಇತ್ಯಾದಿ.

ಶ್ರೀ ಎನ್.ವೈ. ಚರಣ್‌ರಾಜ್ ಅವರು ಕನ್ನಡ ರಂಗಭೂಮಿ ಮತ್ತು ಸಿನೆಮಾ ಕ್ಷೇತ್ರದಲ್ಲಿ ಮಾಡಿದ ಅಸಾಧಾರಣ ಸಾಧನೆ ಮತ್ತು ಸಲ್ಲಿಸಿದ ಅಪಾರ ಸೇವೆಗಳನ್ನು ಪರಿಗಣಿಸಿ ಅವರಿಗೆ 2025ನೇ ಸಾಲಿನ 'ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತೀ ರಂಗ ಪ್ರಶಸ್ತಿಯನ್ನು' ದಿನಾಂಕ 08.02.2026 ರಂದು ನವದೆಹಲಿಯ ಸಂಘದ ಸಭಾಂಗಣದಲ್ಲಿ ನಡೆದ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘವು ನೀಡಿ ಗೌರವಿಸಿದೆ. ಇವರಿಗೆ ಸಮಸ್ತ ನಾಡಿನ ಮತ್ತು ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು!



## ಶ್ರೀ ಪಟ್ಲ ಸತೀಶ್ ಶೆಟ್ಟಿ

ಶ್ರೀ ಪಟ್ಲ ಸತೀಶ್ ಶೆಟ್ಟಿ ಅವರು ದಿನಾಂಕ ಆಗಸ್ಟ್ 1, 1978 ರಂದು ಪ್ರಸಿದ್ಧ ಯಕ್ಷಗಾನ ಮತ್ತು ಮೃದಂಗ ಕಲಾವಿದರಾಗಿದ್ದ ತಂದೆ ಶ್ರೀ ಪಟ್ಲಗುತ್ತು ಮಹಾಬಲ ಶೆಟ್ಟಿ ಮತ್ತು ತಾಯಿ ಶ್ರೀಮತಿ ಲಲಿತಾ ಮಹಾಬಲ ಶೆಟ್ಟಿ ಅವರ ಸುಪುತ್ರರಾಗಿ ಮಂಗಳೂರಿನಲ್ಲಿ ಜನಿಸಿದರು. ಇವರಿಗೆ ಪೋಷಕರಿಂದ ಬಾಲ್ಯದಲ್ಲಿಯೇ ತಮ್ಮ ಕಲಾತ್ಮಕ ಪ್ರಯಾಣಕ್ಕೆ ಪ್ರೋತ್ಸಾಹ ದೊರೆಯಿತು. ಈ ಪರಂಪರೆ ಈಗ ಅವರ ಪತ್ನಿ ಶ್ರೀಮತಿ ನಿರ್ಮಿತಾ ಶೆಟ್ಟಿ ಅವರ ಬೆಂಬಲದೊಂದಿಗೆ ಮಕ್ಕಳಾದ ಹೃದನ್ ಶೆಟ್ಟಿ ಮತ್ತು ಋತ್ವಿಕಾ ಶೆಟ್ಟಿಗೆ ವಿಸ್ತರಿಸುತ್ತಿದೆ. ಶ್ರೀ ಮಾಂಬಾಡಿ ಸುಬ್ರಹ್ಮಣ್ಯ ಭಟ್, ಶ್ರೀ ಬಲಿಪ ನಾರಾಯಣ ಭಾಗವತ, ಬೊಟ್ಟಿಕೆರೆ ಪುರುಷೋತ್ತಮ ಪೂಂಜ, ಶ್ರೀ ಭಜಕಲಾ ಗಣಪತಿ ಭಟ್, ಡಾ. ಶಿಮಂತೂರು ನಾರಾಯಣ ಶೆಟ್ಟಿ ಮತ್ತು ಇತರ ದಿಗ್ಗಜರಿಂದ ಇವರು ತರಬೇತಿ ಪಡೆದಿರುತ್ತಾರೆ.




ಮಾಸ್ಟರ್ ಯಕ್ಷಗಾನ ಕಲಾವಿದ, ದಾರ್ಶನಿಕ ಮತ್ತು ಸಾಂಸ್ಕೃತಿಕ ರಕ್ಷಕರಾದ ಶ್ರೀ ಪಟ್ಲ ಸತೀಶ್ ಶೆಟ್ಟಿ ಅವರು ಕರ್ನಾಟಕದ ಸಾಂಸ್ಕೃತಿಕ ಕ್ಷೇತ್ರದಲ್ಲಿ ಅತ್ಯುನ್ನತವಾಗಿ ಗುರುತಿಸಿಕೊಂಡಿರುವ, ಅಸಾಧಾರಣ ಕಲಾತ್ಮಕತೆ ಮತ್ತು ಪರಿವರ್ತಕ ಸಾಮಾಜಿಕ ನಾಯಕತ್ವಹೊಂದಿರುವ ಅಪರೂಪದ ವ್ಯಕ್ತಿ. ಯಕ್ಷಗಾನಕ್ಕೆ 25 ವರ್ಷಗಳಿಗೂ ಹೆಚ್ಚು ಕಾಲ ಗಮನಾರ್ಹ ಸೇವೆ ಸಲ್ಲಿಸಿದ ಇವರು, ಕೇವಲ ವಿಶಿಷ್ಟ ಪ್ರದರ್ಶಕರಾಗಿ ಮಾತ್ರವಲ್ಲದೆ, ಒಂದು ಕಲಾ ಪ್ರಕಾರವನ್ನು ಮರು ವ್ಯಾಖ್ಯಾನಿಸಿದ ದಾರ್ಶನಿಕರಾಗಿ ಹೊರಹೊಮ್ಮಿದ್ದಾರೆ. ಕಲಾತ್ಮಕ ಶ್ರೇಷ್ಠತೆ ಮತ್ತು ಕ್ರಾಂತಿಕಾರಿ ಸಾಮಾಜಿಕ ಕಲ್ಯಾಣಕ್ಕೆ ತಮ್ಮ ಬದ್ಧತೆಯ ಮೂಲಕ, ಶ್ರೀ ಪಟ್ಲ ಸತೀಶ್ ಶೆಟ್ಟಿ ಯಕ್ಷಗಾನದ ಭೂದೃಶ್ಯವನ್ನು ಮೂಲಭೂತವಾಗಿ ಪರಿವರ್ತಿಸಿದ್ದಾರೆ.

ಮಾಸ್ಟರ್ ಭಾಗವತರಾಗಿ ಯಕ್ಷಗಾನದ ಆತ್ಮವನ್ನು ರೂಪಿಸುವ ಪ್ರಮುಖ ಗಾಯಕ ಮತ್ತು ನಿರೂಪಕರಾದ ಶ್ರೀ ಪಟ್ಲ ಸತೀಶ್ ಶೆಟ್ಟಿ ಕರ್ನಾಟಕದಾದ್ಯಂತ 15,000 ಕ್ಕೂ ಹೆಚ್ಚು ಪ್ರದರ್ಶನಗಳನ್ನು ಮತ್ತು ಯುನೈಟೆಡ್ ಸ್ಟೇಟ್ಸ್, ಸ್ವಿಟ್ಜರ್‌ಲ್ಯಾಂಡ್, ಸಿಂಗಾಪುರ್, ಬ್ಯಾಂಕಾಕ್, ಫ್ರಾನ್ಸ್, ಬ್ರಿಟನ್, ಸ್ಕಾಟ್ಲೆಂಡ್, ಜರ್ಮನಿ, ದುಬೈ, ಮಸ್ಕತ್, ಕುವೈತ್, ಬಹ್ರೇನ್ ಮತ್ತು ಕತಾರ್‌ನ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ 200 ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದ್ದಾರೆ. ಅವರ ಧ್ವನಿಯು ಯಕ್ಷಗಾನದ ಪ್ರಾಚೀನ ಕಥೆಗಳು ಮತ್ತು ಮಧುರಗಳನ್ನು ಅತ್ಯುನ್ನತ ಶ್ರೇಣಿಯ ಸಾಂಸ್ಕೃತಿಕ

ರಾಯಭಾರಿಯಾಗಿ ವಿಶ್ವದಾದ್ಯಂತ ಪ್ರೇಕ್ಷಕರಿಗೆ ತಲುಪಿಸಿದೆ.

ಇವರು 2020ರಲ್ಲಿ ಸ್ಥಾಪಿತ ಪಾವಂಜೆಯ ನಾಗವ್ರಾಜ ಕ್ಷೇತ್ರದಲ್ಲಿರುವ ಶ್ರೀ ಜ್ಞಾನಶಕ್ತಿ ಕೃಪಾ ಪೋಷಿತ ಯಕ್ಷಗಾನ ಮಂಡಳಿಯ ಪ್ರಸ್ತುತ ನಿರ್ದೇಶಕರಾಗಿ ಮತ್ತು ಪ್ರಧಾನ ಭಾಗವತರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಶ್ರೀ ಕಟೀಲು ದುರ್ಗಾ ಪರಮೇಶ್ವರಿ ಪ್ರಸಾದಿತ ದಶಮಾನ ಯಕ್ಷಮಾನ ಮಂಡಳಿ ಜೊತೆ 19 ವರ್ಷಗಳ ಸ್ಮರಣೀಯ ಒಡನಾಟವನ್ನು ಹೊಂದಿದ್ದಾರೆ. ಮತ್ತು ಹಲವಾರು ಇತರ ಪ್ರತಿಷ್ಠಿತ ತಂಡಗಳಿಗೆ ಕೊಡುಗೆ–ಸಹಕಾರಗಳನ್ನು ನೀಡುತ್ತಿದ್ದಾರೆ.

ಇವರ ಪಾಂಡಿತ್ಯವು ಶುದ್ಧ ಸಾವೇರಿ, ಭೈರವಿ, ವಾಸಂತಿ, ರೇವತಿ, ಮೋಹನ ಮತ್ತು ಅಭೇರಿ ಸೇರಿದಂತೆ ಯಕ್ಷಗಾನದ ಸಂಕೀರ್ಣ ರಾಗಗಳಾದ್ಯಂತ ವ್ಯಾಪಿಸಿದೆ. ವಿಶೇಷ ಗುರುಗಳ ಅಡಿಯಲ್ಲಿ ಕರ್ನಾಟಕ ಮತ್ತು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತದಲ್ಲಿ ಔಪಚಾರಿಕ ತರಬೇತಿ, ಸಾಂಪ್ರದಾಯಿಕ ಯಕ್ಷಗಾನ ತರಬೇತಿ ಮತ್ತು ಶಾಸ್ತ್ರೀಯ ಸಂಗೀತ ಶಿಕ್ಷಣದ ಈ ಅಪರೂಪದ ಸಂಗಮ ಇವರ ಕಲಾವಂತಿಕೆಯನ್ನು ಅಸಾಧಾರಣ ಎತ್ತರಕ್ಕೆ ಏರಿಸಿದೆ.

ಅಂತರರಾಷ್ಟ್ರೀಯ ಆರ್ಯಭಟ ಪ್ರಶಸ್ತಿ, ಯಕ್ಷಗಾನ ಅಕಾಡೆಮಿ ಪ್ರಶಸ್ತಿ (2022), ಮೂಲ್ಕಿ ಸುಂದರಂ ಶೆಟ್ಟಿ ಪ್ರಶಸ್ತಿ (2022), ಕರ್ನಾಟಕ ನಾಡಪೋಷಕ ಪ್ರಶಸ್ತಿ (2022), ಸ್ವಸ್ತಿ ಸಿರಿ ರಾಜ್ಯ ಪ್ರಶಸ್ತಿ, ಕನ್ನಡ ಸಿರಿ ಪ್ರಶಸ್ತಿ (2019), ಮೈಸೂರು ಕಲಾ ಪ್ರಶಸ್ತಿ, ತುಳು ಚಲನಚಿತ್ರ ವಾರ್ಷಿಕ ಪ್ರಶಸ್ತಿಗಳಲ್ಲಿ ಅತ್ಯುತ್ತಮ ಪುರುಷ ಗಾಯಕ ಪ್ರಶಸ್ತಿ (2018–2019), ಮತ್ತು ಯಕ್ಷಗಾನದಲ್ಲಿನ ಶ್ರೇಷ್ಠತೆಗಾಗಿ ಮಂಗಳೂರು ವಿಶ್ವವಿದ್ಯಾಲಯದಿಂದ ಸನ್ಮಾನ ಮುಂತಾದವು ಇವರಿಗೆ ಲಭಿಸಿರುವ ಪ್ರಮುಖ ಮನ್ನಣೆ ಮತ್ತು ಗೌರವಗಳು. ಶ್ರೀ ಪಟ್ಲ ಸತೀಶ್ ಶೆಟ್ಟಿ ಅವರು ಯಕ್ಷಧ್ರುವ ಪಟ್ಲ ಫೌಂಡೇಶನ್ ಟ್ರಸ್ಟ್‌ನ ಸ್ಥಾಪಕ ಅಧ್ಯಕ್ಷರಾಗಿ ಭಾರತದ ಸಾಂಪ್ರದಾಯಿಕ ಪ್ರದರ್ಶನ ನೀಡುವ ಕಲಾವಿದರಿಗೆ ಸಮಗ್ರ ಬೆಂಬಲ ವ್ಯವಸ್ಥೆಯನ್ನು ರೂಪಿಸಿದ್ದಾರೆ. ಯಕ್ಷಗಾನ ಕಲಾವಿದರು ಮತ್ತು ಅವರ ಕುಟುಂಬಗಳಿಗೆ ಈವರೆಗೆ ರೂ. 15 ಕೋಟಿಗೂ ಹೆಚ್ಚು ಮೊತ್ತದ ಆರ್ಥಿಕ ನೆರವನ್ನು ಒದಗಿಸಿದ್ದಾರೆ.

ಇವರ ದೂರದೃಷ್ಟಿಯ ನಾಯಕತ್ವದಲ್ಲಿ ಯಕ್ಷಧ್ರುವ ಪಟ್ಲ ಪ್ರತಿಷ್ಠಾನವು ಜಾಗತಿಕ ಸಾಂಸ್ಕೃತಿಕ ರಾಯಭಾರಿಯಾಗಿ ಯಕ್ಷಗಾನವನ್ನು ವಿಶ್ವವೇದಿಕೆಗೆ ಕೊಂಡೊಯ್ಯುವಲ್ಲಿ ಸಫಲವಾಗಿದೆ. ಲೀಡ್ಸ್ ವಿಶ್ವವಿದ್ಯಾಲಯ, ಡರ್ಹ್ಯಾಮ್ ವಿಶ್ವವಿದ್ಯಾಲಯ ಮತ್ತು ಯುನೈಟೆಡ್ ಸ್ಟೇಟ್ಸ್‌ನಾದ್ಯಂತ ವಿವಿಧ ಸ್ಥಳಗಳು ಸೇರಿದಂತೆ ಜಾಗತಿಕ ಪ್ರದರ್ಶನಗಳಲ್ಲಿ ಭಾರತೀಯ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿನಿಧಿಸುವ ಪ್ರತಿಷ್ಠಿತ ಅಂತರರಾಷ್ಟ್ರೀಯ ಕಲಾ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದೆ. ತಮ್ಮ ಪ್ರತಿಷ್ಠಾನದ ಯುರೋಪ್ ಘಟಕದ ಮೂಲಕ ಮೊದಲ ಬಾರಿಗೆ ಜರ್ಮನ್ ಭಾಷೆಯಲ್ಲಿ ಯಕ್ಷಗಾನ ಪ್ರದರ್ಶನ ಮಾಡಿದ್ದು ಒಂದು ಐತಿಹಾಸಿಕ ಮೈಲಿಗಲ್ಲಾಗಿದೆ.

ಶ್ರೀ ಪಟ್ಲ ಸತೀಶ್ ಶೆಟ್ಟಿ ಅವರು ಯಕ್ಷಗಾನ ಕ್ಷೇತ್ರಕ್ಕೆ ಸಲ್ಲಿಸಿರುವ ಅಪಾರ ಸೇವೆಗಳನ್ನು ಪರಿಗಣಿಸಿ ಅವರಿಗೆ ದೆಹಲಿ ಕರ್ನಾಟಕ ಸಂಘವು 2024 ನೇ ಸಾಲಿನ ಡಾ. ಶಿವರಾಮ ಕಾರಂತ ಪ್ರಶಸ್ತಿಯನ್ನು ದಿನಾಂಕ 08.02.2026ರಂದು ನವದೆಹಲಿಯ ಸಂಘದ ಸಭಾಂಗಣದಲ್ಲಿ ನಡೆದ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ನೀಡಿ ಗೌರವಿಸಿದೆ. ಇವರಿಗೆ ಸಮಸ್ತ ನಾಡಿನ ಮತ್ತು ದೆಹಲಿ ಕನ್ನಡಿಗರ ಪರವಾಗಿ ಹೃದಯ ಪೂರ್ವಕ ಅಭಿನಂದನೆಗಳು!.



## ಶ್ರೀ ಕೆರೆಮನೆ ಶಿವಾನಂದ ಹೆಗಡೆ

ಮೂಲತಃ ಉತ್ತರ ಕನ್ನಡ ಜಿಲ್ಲೆಯವರಾದ ಶ್ರೀ ಕೆರೆಮನೆ ಶಿವಾನಂದ ಹೆಗಡೆ ಅವರು ದಿನಾಂಕ 24.10.1961ರಂದು ಜನಿಸಿದರು. ಕರಾವಳಿಯ ಹೊನ್ನಾವರ ತಾಲೂಕಿನ ಹಳ್ಳಿ ಕೆರೆಮನೆಯಲ್ಲಿ ಹೆದ್ದಾರಿಯ ಬಳಿ ನಿಂತರೆ ಯಕ್ಷಗಾನದ ಮಧುರ ಸಂಗೀತದ ಕಂಪನ್ನು ಹರಡುವ ಶ್ರೀಮಯ ಯಕ್ಷಗಾನ ಕೇಂದ್ರವಿದೆ. ಶ್ರೀ ಶಿವಾನಂದ ಹೆಗಡೆ ಇದರ ನಿರ್ದೇಶಕರು. ಕೆರೆಮನೆ ಯಕ್ಷಗಾನ ಪರಂಪರೆಯಲ್ಲಿ ಹೆಸರಾಂತ ರಾಷ್ಟ್ರ ಪ್ರಶಸ್ತಿ ವಿಜೇತರಾದ ಕೆರೆಮನೆ ಶಿವರಾಮ ಹೆಗಡೆಯವರ ಮೊಮ್ಮಗ ಮತ್ತು ಯಕ್ಷಗಾನವನ್ನು ಏಕವ್ಯಕ್ತಿ ಸಾಹಸಿಯಾಗಿ ಮೇಳವನ್ನು ಕಟ್ಟಿ ಬೆಳೆಸಿದ ಕೆರೆಮನೆ ಶಂಭು ಹೆಗಡೆಯವರ ಮಗನಾದ ಶಿವಾನಂದ ಹೆಗಡೆ ತಮ್ಮ 12 ನೇ ವಯಸ್ಸಿಗೇ ಗೆಜ್ಜೆ ಕಟ್ಟಿದವರು. ತಮ್ಮ ಪದವಿ ಶಿಕ್ಷಣ ಪೂರೈಸಿ ಗುರು ಡಾ.ಮಾಯಾ ರಾವ್ ಅವರ ಮಾರ್ಗದರ್ಶನದಲ್ಲಿ ಕೋರಿಯೋಗ್ರಫಿ ಡಿಪ್ಲೋಮಾ ಹಾಗೂ ಕಥಕ್ ನೃತ್ಯ ಅಭ್ಯಸಿಸಿದರು.

ಕೋರಿಯೋಗ್ರಫಿಯ ತಜ್ಞತೆಗಾಗಿ ಮುಖ್ಯವಾಗಿ ಕಥಕ್ ಅದರ ಜೊತೆಗೆ ಸರೈಕಲಾಛಾವೂ, ಮಣಿಪುರಿ ಯುದ್ಧ ನೃತ್ಯ ಸಹಿತ ಜನಪದ ನೃತ್ಯಗಳನ್ನೂ ಕರಗತ ಮಾಡಿಕೊಂಡಿದ್ದಾರೆ. ತಮ್ಮ ಅಪ್ರತಿಮ ಯಕ್ಷಗಾನ ಕಲಾವಿದ ಅಜ್ಜನವರ ಸತತ ಮಾರ್ಗದರ್ಶನ, ತಂದೆಯವರ ನಿರ್ದೇಶನ ಅವರನ್ನು ಅಳಿವಿನಂಚಿನಲ್ಲಿರುವ ಯಕ್ಷಗಾನದ ಸೌಂದರ್ಯಾಂಶಗಳನ್ನು ರಕ್ಷಿಸುವ ಕಲಾವಿದರಲ್ಲಿ ಮುಂಚೂಣಿಯಲ್ಲಿ ನಿಲ್ಲಿಸಿದೆ. ಈ ಅನುಭವಗಳ ಸಾರಥ್ಯದೊಂದಿಗೆ ಅನೇಕ ಯಕ್ಷಗಾನ ಕಮ್ಮಟಗಳನ್ನು ಅವರು ನಡೆಸಿದ್ದು ಯಕ್ಷಗಾನದಲ್ಲಿ ನೇಕ ಪ್ರಾತ್ಯಕ್ಷಿಕೆ ನೀಡಿರುವ ಇವರು ಕಲಾಜಗತ್ತಿನ ಯಕ್ಷಗಾನ ಪ್ರೇಮಿಗಳಿಗೆ ದೇಶ ವಿದೇಶಗಳಲ್ಲಿ ಪರಿಚಿತರು. ತಮ್ಮ ಕಲಾಕೇಂದ್ರದಲ್ಲಿ ನಿರ್ದೇಶಕರಾಗಿ ಮತ್ತು ಗುರುಗಳಾಗಿ ಅನೇಕ ಯಕ್ಷಗಾನ ಕಲಾವಿದರನ್ನು ರೂಪಿಸಿರುತ್ತಾರೆ.

ಯಕ್ಷಗಾನ ಕಲಾ ಕುಟುಂಬದ ಐದನೇ ಪೀಳಿಗೆಯವರಾದ ಶ್ರೀ ಶಿವಾನಂದ ಹೆಗಡೆ ಅವರು ಸಹಜವಾಗಿಯೇ ತಂದೆಯಂತೆ ಯಕ್ಷಗಾನವನ್ನು ತಮ್ಮ ವೃತ್ತಿಯಾಗಿ ಸ್ವೀಕರಿಸಿದರು. ಬಿ.ಎ. ಪದವಿ ಮುಗಿಸಿ ಭಾರತದ ಹಲವಾರು ಜನಪದ ರಂಗಭೂಮಿಗಳ ಅಧ್ಯಯನ ಮಾಡಿದರು. ತಂದೆಯವರೊಂದಿಗೆ ದೇಶ ವಿದೇಶಗಳಲ್ಲಿ ಯಕ್ಷಗಾನ ಪ್ರದರ್ಶಿಸುವುದರೊಂದಿಗೆ ಇವರು ಆಧುನಿಕ ರಂಗಕ್ಕೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ನಾಟ್ಯ ಇನ್ಸ್ಟಿಟ್ಯೂಟ್ ಆಫ್ ಕಥಕ್ ಎಂಡ್ ಕೋರಿಯೋಗ್ರಫಿ ತಂಡ ಬೆಂಗಳೂರು, ನಾಟ್ಯ ಬ್ಯಾಲೆಟ್ ಸೆಂಟರ್ ಮತ್ತು ನವದೆಹಲಿಯ ಇಂಡಿಯನ್ ರಿವೈವಲ್ ಗ್ರೂಪ್‌ನ ತಂಡದವರೊಂದಿಗೆ ಭಾರತವಿಡೀ ಸುತ್ತಿದ್ದಲ್ಲದೇ ಹಲವಾರು ಧಾರವಾಹಿಗಳಲ್ಲಿ, ಚಲನಚಿತ್ರಗಳಲ್ಲಿ ಅಭಿನಯಿಸಿದ್ದಾರೆ. ನಾಟಕಗಳಿಗೆ ನೃತ್ಯ ನಿರ್ದೇಶನ ಮತ್ತು ಸಂಯೋಜನೆ ಮಾಡಿದ್ದಾರೆ. ವಿವಿಧ ಆಧುನಿಕ ರಂಗ ಕಲೆಯ ಕಾರ್ಯಾಗಾರಗಳಲ್ಲಿ ಭಾಗವಹಿಸಿದ್ದಾರೆ. ಅಮೇರಿಕಾದ ಯುನಿವರ್ಸಿಟಿ ಆಫ್ ಲಾಸ್‌ಏಂಜಲೀಸ್‌ನವರು 1996ರಲ್ಲಿ ನಡೆಸಿದ ಅಪೆಕ್ಸ್ ಕಾರ್ಯಾಗಾರಕ್ಕೆ ಆಯ್ಕೆಯಾದ ಇಬ್ಬರು ಪ್ರತಿಭಾನ್ವಿತ ಯುವ ಭಾರತೀಯ ಕಲಾವಿದರಲ್ಲಿ ಇವರು ಒಬ್ಬರಾಗಿದ್ದರು. ಪ್ರಸ್ತುತ ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ ಕೆರೆಮನೆ (ರಿ.) ಇದರ ನಿರ್ದೇಶಕರು ಹಾಗು ಮುಖ್ಯ ಕಲಾವಿದರಾಗಿದ್ದಾರೆ.

ಶ್ರೀ ಕೆರೆಮನೆ ಶಿವಾನಂದ ಹೆಗಡೆ ಅವರು ತಮ್ಮ ವಿಶಿಷ್ಟ ಪರಂಪರಾಗತ ಶೈಲಿಯ ಯಕ್ಷಗಾನ ಪ್ರದರ್ಶನಗಳಿಗೆ ಎಲ್ಲೆಡೆ ಪ್ರಸಿದ್ಧರು.ಯಕ್ಷಗಾನದಲ್ಲಿ ಪುರುಷ ಮತ್ತು ಸ್ತ್ರೀ ಪಾತ್ರಗಳೆರಡನ್ನೂ ಯಶಸ್ವಿಯಾಗಿ ನಿಭಾಯಿಸಬಲ್ಲ ಕಲಾವಿದರು. ಹಲವಾರು ಯಕ್ಷಗಾನ ಪ್ರಸಂಗಗಳ ನಿರ್ದೇಶನ ಮಾಡಿದ್ದಾರೆ ಮತ್ತು ಅನೇಕ ಮುಖ್ಯ ಪಾತ್ರ ಅಭಿನಯಿಸಿದ್ದಾರೆ. ಇವರ "ಆಟವೇ ಪಾಠ" ಯಕ್ಷ ದೀಕ್ಷೆ, ಯೋಜನೆಗಳು ಮಕ್ಕಳಲ್ಲಿ ಯಕ್ಷಗಾನದ ಕುರಿತು ಉದ್ಬೋಧಕವಾದ ತಿಳುವಳಿಕೆಯನ್ನು ಶಾಲೆಗಳಲ್ಲಿ ಸೃಷ್ಟಿಸಿ ಸಂಚಲನ ಉಂಟು ಮಾಡಿದೆ ಮತ್ತು ಯುವ ಜನಾಂಗಕ್ಕೆ ಯಕ್ಷಗಾನದ ಆಸಕ್ತಿ ಮೂಡಿಸುವಲ್ಲಿ ಯಶಸ್ವಿಯಾಗಿದೆ. ಅಲ್ಲದೇ ಯಕ್ಷಾಂಗಣದಲ್ಲಿ ಮಾಸದ ಆಟ, ಅಪೂರ್ವ ಸ್ಮರಣೆ, ಐದು ದಿನಗಳ 'ಕೆರೆಮನೆ ಶಂಭು ಹೆಗಡೆ ರಾಷ್ಟ್ರೀಯ ನಾಟ್ಯೋತ್ಸವ,ಯಕ್ಷಗಾನದ ಶಿಲ್ಪ ಸ್ಥಾಪನೆ, ಕೆರೆಮನೆ ಶಂಭು ಹೆಗಡೆ ಇವರ ಹೆಸರಲ್ಲಿ ಬಯಲು ರಂಗಮಂದಿರ ನಿರ್ಮಾಣ, ಕಲಾವಿದರಿಗೆ ಆರ್ಥಿಕ ಸಹಾಯ, ಅಲ್ಲದೇ ಪಾರಂಪರಿಕ ಯಕ್ಷಗಾನವನ್ನು ಕಲಿಸುವ ಶ್ರೀಮಯ ಕಲಾ ಕೇಂದ್ರ ಕಳೆದ ನಲವತ್ತು ವರ್ಷಗಳಿಂದ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವುದಲ್ಲದೇ, ಇಲ್ಲಿ ಕಲಿಯುವ ವಿದ್ಯಾರ್ಥಿಗಳಿಗ ಉಚಿತ ಊಟ, ಶಿಕ್ಷಣ ಮತ್ತು ವಿದ್ಯಾರ್ಥಿ ವೇತನ ನೀಡಿ ನಡೆಸುತ್ತಿದ್ದು, ಕಳೆದ ನಾಲ್ಕು ವರ್ಷಗಳಿಂದ ಹೊರ ರಾಜ್ಯದ ಕಲಾ ವಿದ್ಯಾರ್ಥಿಗಳಿಗಾಗಿ ಯಕ್ಷಗಾನ ಪರಿಚಯಾತ್ಮಕ ಕಾರ್ಯಾಗಾರವನ್ನು ಉಚಿತ ಊಟ–ವಸತಿ ನೀಡಿ ಯಕ್ಷಗಾನ ಕಲೆಯನ್ನು ಧಾರೆ ಎರೆಯುತ್ತಿದ್ದಾರೆ.

ಅನೇಕ ಸೃಜನಾತ್ಮಕ ವಿನೂತನ ಯೋಜನೆಯನ್ನು ಜಾರಿಗೆ ತರುತ್ತಿದ್ದಾರೆ. ತಮ್ಮ ಯಕ್ಷಗಾನ ಮೇಳದೊಂದಿಗೆ ಶ್ರೀ ಶಿವಾನಂದ ಹೆಗಡೆಯವರು ಈಗಾಗಲೇ ಅಮೇರಿಕಾ, ಇಂಗ್ಲೆಂಡ್, ಸ್ಪೇನ್, ಬಹ್ರೇನ್, ಫ್ರಾನ್ಸ್, ಚೈನಾ, ನೇಪಾಳ, ಶ್ರೀಲಂಕಾ, ಸಿಂಗಾಪುರ, ಇಂಡೋನೇಷ್ಯಾ, ದುಬೈ, ಮಲೇಷಿಯಾ, ಫಿಲಿಫೈನ್ಸ್, ಲಾವೋಸ್, ಬಾಂಗ್ಲಾದೇಶ ಮತ್ತು ಮಯನ್ಮಾರ್ ಮುಂತಾದ ಕಡೆಗಳಲ್ಲಿ ಸಂಚರಿಸಿದ್ದು, ಯಕ್ಷಗಾನವನ್ನು ಜಾಗತಿಕವಾಗಿ ಕಲಾಪ್ರಿಯರಿಗೆ ಯಶಸ್ವಿಯಾಗಿ ತಲುಪಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ. ಸ್ಪಿಕ್ ಮೇಕೆಯ ಸಹಯೋಗದಲ್ಲಿ ದೇಶದಾದ್ಯಂತ ಪ್ರದರ್ಶನ, ಯಕ್ಷಗಾನ ಪ್ರಾತ್ಯಕ್ಷಿಕೆ, ತರಬೇತಿ ನೀಡಿದ್ದಾರೆ. ಈ ಎಲ್ಲಾ ಸಾಧನೆಗಳ ಜೊತೆಗೆ ಪರಿಸರ ರಕ್ಷಣೆ, ಬರಹಗಾರಿಕೆ, ತಾಳಮದ್ದಳೆ ಅರ್ಥಧಾರಿ ಮತ್ತು ಸಾಂಪ್ರದಾಯಿಕ ಕಲೆಗಳ ದಾಖಲಾತಿ ಕ್ಷೇತ್ರಗಳಲ್ಲೂ ಹೆಗಡೆಯವರು ತಮ್ಮ ಕಲಾ ಚಟುವಟಿಕೆಯನ್ನು ವಿಸ್ತರಿಸಿದ್ದಾರೆ. ದೇಶದ ಪ್ರತಿಷ್ಠಿತ ಕಲಾ ಸಂಸ್ಥೆಗಳಾದ ಸಂಗೀತ ನಾಟಕ ಅಕಾಡೆಮಿ, ರಂಗಾಯಣ ರಂಗ ಸಮಾಜ, ಡಾ. ಗಂಗೂಬಾಯಿ ಹಾನಗಲ್ಲ ವಿಶ್ವವಿದ್ಯಾಲಯ, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ ಮುಂತಾದ ಸಂಸ್ಥೆಗಳ ಗೌರವ ಸದಸ್ಯರು, ಸಲಹಾ ಸಮಿತಿ ಸದಸ್ಯರೂ ಆಗಿದ್ದಾರೆ.

ಇವರಿಗೆ ಸಂದ ಪ್ರಮುಖ ಪ್ರಶಸ್ತಿಗಳು: ಕೇರಳದ ಕೊಯಿಕೋಡಿನಲ್ಲಿ, ಪ್ರತಿಷ್ಠಿತ Outlook Responsible Tourism Culture & Heritage Award –2025, ಇವರ ನೇತೃತ್ವದಲ್ಲಿ ಇಡಗುಂಜಿ ಮೇಳಕ್ಕೆ ಪ್ರಪ್ರಥಮವಾಗಿ ಯುನೆಸ್ಕೋ ಮಾನ್ಯತೆ, ಮಧ್ಯಪ್ರದೇಶ ಸರಕಾರದ ಪ್ರತಿಷ್ಠಿತ ರಾಜಾಮಾನಸಿಂಗ ತೋಮರ್ ಸಂಮಾನ, ಕುರಿಯ ವಿಠ್ಠಲ ಶಾಸ್ತ್ರಿ ಸಾಂಸ್ಕೃತಿಕ ಪ್ರತಿಷ್ಠಾನ (ರಿ.)ಇವರಿಂದ ಇಡಗುಂಜಿ ಮೇಳಕ್ಕೆ ಅತ್ಯಂತ ಪ್ರತಿಷ್ಠಿತ "ಕುರಿಯ ವಿಠಲ ಶಾಸ್ತ್ರಿ ಪ್ರಶಸ್ತಿ"( 2025), ಬೆಂಗಳೂರಿನ ದೃಷ್ಟಿ ಸಂಸ್ಥೆಯ "ದೃಷ್ಟಿ ಪ್ರಶಸ್ತಿ", ಸಾಹಿತ್ಯ ಅಕಾಡೆಮಿ ಗುಂಟೂರು (ಆಂಧ್ರ ಪ್ರದೇಶ) ಇವರಿಂದ "ವಿಶ್ವನಾಥ ಸಂಸ್ಕೃತಿ ಪ್ರಶಸ್ತಿ", ರಂಗ ವಿಜಯದಿಂದ "ಕಾಯಕ ಜೀವಿ" ರಾಷ್ಟ್ರೀಯ ಪುರಸ್ಕಾರ, ಪ್ರತಿಷ್ಠಿತ ನಾಡೋಜ ಡಾ. ಎಚ್.ಎಲ್. ನಾಗೇಗೌಡ "ಜಾನಪದ ಲೋಕಶ್ರೀ ಪ್ರಶಸ್ತಿ", ಕುಸುಮ ಫೌಂಡೇಷನ್, ಕುಂದಾಪುರ ಇವರಿಂದ 'ಕುಸುಮಶ್ರೀ' ಪ್ರಶಸ್ತಿ, ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಆರ್ಯಭಟ ಸಾಂಸ್ಕೃತಿಕ ಸಂಸ್ಥೆಯಿಂದ "ಆರ್ಯಭಟ ಅಂತರರಾಷ್ಟ್ರೀಯ ಪ್ರಶಸ್ತಿ", ಜಾನಪದ ವಿಶ್ವ ಪ್ರತಿಷ್ಠಾನ (ರಿ), ಹೊನ್ನಾವರ ಇವರಿಂದ'ಕುವೆಂಪು ದೀಪ ಪ್ರಶಸ್ತಿ, ದುಬೈನ ಕನ್ಸುಲೇಟ್ ಜನರಲ್ ಆಫ್ ಇಂಡಿಯಾ ಇವರಿಂದ ಸನ್ಮಾನ ಇತ್ಯಾದಿ.

ಶ್ರೀ ಕೆರೆಮನೆ ಶಿವಾನಂದ ಹೆಗಡೆ ಅವರು ಯಕ್ಷಗಾನ ಕ್ಷೇತ್ರಕ್ಕೆ ಸಲ್ಲಿಸಿರುವ ಅಪಾರ ಸೇವೆಗಳನ್ನು ಪರಿಗಣಿಸಿ ದೆಹಲಿ ಕರ್ನಾಟಕ ಸಂಘವು 2025ನೇ ಸಾಲಿನ ಡಾ. ಶಿವರಾಮ ಕಾರಂತ ಪ್ರಶಸ್ತಿಗೆ ಇವರನ್ನು ಆಯ್ಕೆ ಮಾಡಿದ್ದು ಇವರಿಗೆ ಸಮಸ್ತ ನಾಡಿನ ಮತ್ತು ದೆಹಲಿ ಕನ್ನಡಿಗರ ಪರವಾಗಿ ಹೃದಯ ಪೂರ್ವಕ ಶುಭಾಶಯಗಳು!.

(ದಿನಾಂಕ 08.02.2026ರಂದು ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಕಾರಣಾಂತರದಿಂದ ಇವರು ಬರಲಾಗದಿದ್ದರಿಂದ ಸಂಘದ ಮುಂದಿನ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿಯನ್ನು ಇವರಿಗೆ ನೀಡಲಾಗುವುದು.)


ದೆಹಲಿ ಕರ್ನಾಟಕ ಸಂಘದ
ಕ್ರೀಡೋತ್ಸವ-2026

# ಸಂಘದ 'ಕ್ರೀಡೋತ್ಸವ' ಅಂಗವಾಗಿ 2025-2026 ರ ವಾರ್ಷಿಕ ಕ್ರಿಕೆಟ್ ಪಂದ್ಯಾವಳಿಯ ಯಶಸ್ವಿ ಆಯೋಜನೆ



ಈ ಬಾರಿ 'ಕ್ರೀಡೋತ್ಸವ'ದ ಅಂಗವಾಗಿ ನವದೆಹಲಿಯ ಕರ್ನೈಲ್ ಸಿಂಗ್ ಸ್ಟೇಡಿಯಂನಲ್ಲಿ ಮೂರು ದಿನಗಳ ಕ್ರಿಕೆಟ್ ಪಂದ್ಯಾವಳಿಯನ್ನು ಸಂಘದ ವತಿಯಿಂದ ಅದ್ದೂರಿಯಾಗಿ ಆಯೋಜಿಸಲಾಗಿತ್ತು. ರೈಲ್ವೇ ಇಲಾಖೆಯು ಸ್ಟೇಡಿಯಂನಲ್ಲಿ ಪಂದ್ಯಾವಳಿ ನಡೆಸಲು ವಿಶೇಷವಾದ ಸಹಕಾರ ನೀಡಿತ್ತು. ಈ ವರ್ಷ ದಾಖಲೆಯ 23 ತಂಡಗಳು (345 ಕ್ರಿಕೆಟ್ ಆಟಗಾರರೊಂದಿಗೆ) ಸಂಘದ ವಾರ್ಷಿಕ ಕ್ರಿಕೆಟ್ ಟೂರ್ನಮೆಂಟ್‌ನಲ್ಲಿ ಸ್ಪರ್ಧಿಸಿದ್ದವು.

ದಿನಾಂಕ 21.02.2026 ರಂದು ಬೆಳಿಗ್ಗೆ 9.00 ಗಂಟೆಗೆ ಕೇಂದ್ರ ರೈಲ್ವೇ ಮತ್ತು ಜಲಶಕ್ತಿ ಇಲಾಖೆಗಳ ರಾಜ್ಯ ಮಂತ್ರಿಗಳಾದ ಶ್ರೀ ವಿ. ಸೋಮಣ್ಣನವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಕ್ರಿಕೆಟ್ ಪಂದ್ಯಾವಳಿಯನ್ನು ಉದ್ಘಾಟಿಸಿದರು. ಈ ಸಂದರ್ಭ ನವದೆಹಲಿಯ ಕರ್ಣಾಟಕ ಬ್ಯಾಂಕ್‌ನ ಡಿಜಿಎಂ ಶ್ರೀ ಬಸವರಾಜ ದೇಸಳ್ಳಿ, ಬ್ಯಾಂಕಿನ ಆರ್.ಕೆ. ಪುರಂ ಶಾಖಾ ಮ್ಯಾನೇಜರ್ ಶ್ರೀ ವಾದಿರಾಜ ಆಚಾರ್ಯ, ಶ್ರೀ ರವಿಕುಮಾರ್ ಡೈರೆಕ್ಟರ್, ಮದನಪಲ್ಲಿ ಇನ್ಸಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಸೈನ್ಸ್ (MITS), ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ, ಕ್ರೀಡಾ ಸಮಿತಿ ಅಧ್ಯಕ್ಷ ಶ್ರೀ ನಾರಾಯಣ ಬಿ., ಸಂಚಾಲಕ ಶ್ರೀ ನವೀನ್ ಕುಮಾರ್ ವಿ., ಇತರ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು ಮತ್ತು ಸದಸ್ಯರು, ಕ್ರಿಕೆಟ್ ತಂಡಗಳ ನಾಯಕರು, ಆಟಗಾರರು ಮತ್ತು ದೆಹಲಿ ಕನ್ನಡಿಗರು ಉಪಸ್ಥಿತರಿದ್ದರು. ಕಾರ್ಯಕ್ರಮ ಆಯೋಜನೆಯಲ್ಲಿ ಕರ್ಣಾಟಕ ಬ್ಯಾಂಕ್ ನವದೆಹಲಿ, MITS, ಮದನಪಲ್ಲಿ ಮತ್ತು ನವದೆಹಲಿ ನಾಡಪ್ರಭು ಕೆಂಪೇಗೌಡ ಫೌಂಡೇಷನ್ ಈ ಪಂದ್ಯಾವಳಿಗೆ ಪ್ರಾಯೋಜನೆ ಮಾಡುವುದರೊಂದಿಗೆ ಸಹಕಾರ ನೀಡಿದ್ದರು.

ಉದ್ಘಾಟನೆ ಮಾಡಿ ಮಾತನಾಡಿದ ಕೇಂದ್ರ ಸಚಿವರು ದೆಹಲಿಯಲ್ಲಿ ಇಂತಹ ಕ್ರೀಡೆಗಳನ್ನು ನಡೆಸಿ ಎಲ್ಲ ಕನ್ನಡಿಗರನ್ನು ಒಂದು ಕಡೆ ಸೇರಿಸುವಂತಹ ಕಾರ್ಯಕ್ರಮಗಳನ್ನು ಮಾಡುತ್ತಿರುವ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಅಭಿನಂದನೆ ಸಲ್ಲಿಸುತ್ತಾ ಎಲ್ಲ ಆಟಗಾರರು ಕ್ರೀಡಾ ಮನೋಭಾವದಿಂದ ಉತ್ತಮವಾಗಿ ಪಂದ್ಯಾವಳಿಯಲ್ಲಿ ಭಾಗವಹಿಸಬೇಕೆಂದು ಕರೆ ನೀಡಿ ಎಲ್ಲರಿಗೂ ಶುಭಾಶಯಗಳನ್ನು ತಿಳಿಸಿದರು.

ಸಂಘದ ಅಧ್ಯಕ್ಷರು ಕೇಂದ್ರ ಸಚಿವರಿಗೆ, ರೈಲ್ವೇ ಇಲಾಖೆಗೆ, ಪ್ರಾಯೋಜಕರಾದ ಕರ್ಣಾಟಕ ಬ್ಯಾಂಕ್‌ನ ಹಿರಿಯ ಅಧಿಕಾರಿಗಳಿಗೆ, MITS ಡೈರೆಕ್ಟರ್ ಶ್ರೀ ರವಿಕುಮಾರ್ ಅವರಿಗೆ, ನಾಡಪ್ರಭು ಕೆಂಪೇಗೌಡ ಫೌಂಡೇಷನ್‌ಗೆ ಮತ್ತು ಸ್ಪರ್ಧಿಸುತ್ತಿರುವ ಎಲ್ಲಾ ಕ್ರಿಕೆಟ್ ತಂಡದ ಆಟಗಾರರಿಗೆ, ವ್ಯವಸ್ಥಾಪಕರಿಗೆ ಶುಭ ಕೋರಿ ಧನ್ಯವಾದ ತಿಳಿಸಿದರು. ಭಾಗವಹಿಸಿದ ಪ್ರತಿಯೊಬ್ಬ ಆಟಗಾರರಿಗೆ ಆಕರ್ಷಕವಾದ ಸಮವಸ್ತ್ರ ಮತ್ತು ಹ್ಯಾಟ್‌ಗಳನ್ನು ಸಂಘದಿಂದ ನೀಡಲಾಗಿತ್ತು. ಉದ್ಘಾಟನೆಯ ನಂತರ ಮೊದಲನೇ ದಿನ ಏಳು ಪಂದ್ಯಗಳು, ಎರಡನೇ ದಿನ (ದಿ. 22.02.2026 ರಂದು) ಎಂಟು ಪಂದ್ಯಗಳು ಮತ್ತು ಅಂತಿಮ ದಿನ (ದಿ. 28.02.2026 ರಂದು) 5 (ಕ್ವಾರ್ಟರ್ ಫೈನಲ್, ಸೆಮಿಫೈನಲ್ ಮತ್ತು ಫೈನಲ್) ಪಂದ್ಯಗಳು ನಡೆದವು. ನಾಡಪ್ರಭು ಕೆಂಪೇಗೌಡ ಫೌಂಡೇಷನ್, ನವದೆಹಲಿ ವತಿಯಿಂದ ಪ್ರಥಮ ಬಹುಮಾನ, ದ್ವಿತೀಯ ಬಹುಮಾನ ಮತ್ತು ತೃತೀಯ



ಬಹುಮಾನಗಳನ್ನು ಪ್ರಾಯೋಜನೆ ಮಾಡಲಾಗಿತ್ತು.

ಲೀಗ್ ಹಂತದಲ್ಲಿ 17 ಪಂದ್ಯಗಳು, ಬೆಸ್ಟ್ ಆಫ್ ಥ್ರೀ ಸೆಮಿಫೈನಲ್ ಮತ್ತು ಅಂತಿಮ ಫೈನಲ್ ಪಂದ್ಯಗಳಲ್ಲಿ ಆಟಗಾರರು ಅತ್ಯಂತ ಉತ್ತಮ ಪ್ರದರ್ಶನ ನೀಡಿದರು. ಪ್ರತಿ ಪಂದ್ಯಗಳಲ್ಲಿ ಶ್ರೇಷ್ಠ ಪ್ರದರ್ಶನ ನೀಡಿದ ಆಟಗಾರರಿಗೆ ಪಂದ್ಯ ಪುರುಷೋತ್ತಮ ಬಹುಮಾನ ನೀಡಲಾಯಿತು.

ಸೆಮಿಫೈನಲ್ ಪಂದ್ಯಗಳಲ್ಲಿ ಕರ್ನಾಟಕ ಕಮಾಂಡೋಸ್ ಮತ್ತು ಮಯೂರ–ಕೆಎಸ್‌ಟಿಡಿಸಿ ನಡುವೆ ಹಾಗೂ ಮಯೂರ ಕೆಎಸ್‌ಟಿಡಿಸಿ ಮತ್ತು ಕನ್ನಡ ಗೆಳೆಯರು ನಡುವೆ ನಡೆದು ಕರ್ನಾಟಕ ಕಮಾಂಡೋಸ್ ಮತ್ತು ಕನ್ನಡ ಗೆಳೆಯರು ತಂಡಗಳು ವಿಜಯಿಗಳಾಗಿ ಫೈನಲ್ ತಲುಪಿದವು. ಫೈನಲ್ ಪಂದ್ಯದಲ್ಲಿ ಕರ್ನಾಟಕ ಕಮಾಂಡೋಸ್ ತಂಡ ಕನ್ನಡ ಗೆಳೆಯರು ತಂಡದ ವಿರುದ್ಧ ಜಯಗಳಿಸಿ ಈ ಬಾರಿಯ ಕ್ರಿಕೆಟ್ ಚಾಂಪಿಯನ್ ಆದರು.

2025ರ ಕ್ರಿಕೆಟ್ ಪಂದ್ಯಾವಳಿ ವಿಜೇತರು : ವಿನ್ನರ್ಸ್–ಕರ್ನಾಟಕ ಕಮಾಂಡೋಸ್, ರನ್ನರ್ ಅಪ್–ಕನ್ನಡ ಗೆಳೆಯರು, ಮೂರನೇ ಸ್ಥಾನ ಮಯೂರ ಕೆಎಸ್‌ಟಿಡಿಸಿ, ಫೈನಲ್ ಪಂದ್ಯ ಪುರುಷೋತ್ತಮ–ಶ್ರೀ ಸಿದ್ದಪ್ಪ ಕೆ.ಸಿ., ಬೆಸ್ಟ್ ಬೌಲರ್–ಶ್ರೀ ವಿನೋದ್ ಕೈಕಾಡೆ, ಪ್ಲೇಯರ್ ಆಫ್ ದಿ ಟೂರ್ನಮೆಂಟ್–ಶ್ರೀ ವಿನೋದ್ ಕೈಕಾಡೆ.

ಕೊನೆಯ ದಿನ ಸಂಜೆ ಫೈನಲ್ ಪಂದ್ಯದ ನಂತರ ವಿಜೇತ ತಂಡಗಳಿಗೆ ಟ್ರೋಫಿಗಳನ್ನು ಪ್ರದಾನ ಮಾಡಲಾಯಿತು. ಸಂಘದ ಕ್ರೀಡಾ ಸಮಿತಿ ಅಧ್ಯಕ್ಷ ಶ್ರೀ ನಾರಾಯಣ ಬಿ. ಅವರು ಸಂಘದ ಅಧ್ಯಕ್ಷರಿಗೆ, ಕಾರ್ಯದರ್ಶಿ ಮತ್ತು ಸಮಿತಿ ಪದಾಧಿಕಾರಿಗಳಿಗೆ, ಸಹಕಾರ ನೀಡಿದ ರೇಲ್ವೇ ಇಲಾಖೆಯ ಅಧಿಕಾರಿಗಳಿಗೆ, ಪ್ರಾಯೋಜಕರಿಗೆ, ಸಂಘದ ವ್ಯವಸ್ಥಾಪಕರಿಗೆ, ಸಿಬ್ಬಂದಿಗೆ, ಭಾಗವಹಿಸಿದ ಎಲ್ಲಾ ತಂಡಗಳ ಆಟಗಾರರಿಗೆ, ವೀಕ್ಷಕ ವಿವರಣೆ ನೀಡಿದವರಿಗೆ ಮತ್ತು ಸ್ಟೇಡಿಯಂಗೆ ಬಂದು ಕ್ರಿಕೆಟ್ ಪಂದ್ಯಗಳನ್ನು ಉತ್ಸಾಹದಿಂದ ವೀಕ್ಷಿಸಿ ಆಟಗಾರರಿಗೆ ಪ್ರೋತ್ಸಾಹ ನೀಡಿದ ಸದಸ್ಯರುಗಳಿಗೆ, ಸಂಘದ ಪರವಾಗಿ ಧನ್ಯವಾದಗಳನ್ನು ಮತ್ತು ಬಹುಮಾನ ವಿಜೇತರಿಗೆ ಅಭಿನಂದನೆಗಳನ್ನು ತಿಳಿಸಿದರು. ಇದರೊಂದಿಗೆ ಕ್ರೀಡೋತ್ಸವದ ಭಾಗವಾದ 2025–2026ರ ವಾರ್ಷಿಕ ಕ್ರಿಕೆಟ್ ಪಂದ್ಯಾವಳಿ ಅಭೂತಪೂರ್ವ ಯಶಸ್ಸಿನೊಂದಿಗೆ ಸಂಪನ್ನವಾಯಿತು. ❑

***ಕ್ರೀಡಾ ಸಮಿತಿ ಮತ್ತು***
***ಅಭಿಮತ ವರದಿ***















## ಭಾಗವಹಿಸಿದ 23 ತಂಡಗಳು

1. ಕೂರ್ಗ್ ವಾರಿಯರ್ಸ್, ದೆಹಲಿ
2. ಕರ್ನಾಟಕ ಕಮಾಂಡೋಸ್
3. ಜಿಎಸ್‌ಬಿ ಟೈಗರ್ಸ್
4. ಜೆಎಸ್‌ಎಸ್ ಚಾಲೆಂಜರ್ಸ್
5. ಜೆಎಸ್‌ಎಸ್ ಚಾಂಪಿಯನ್ಸ್
6. ಮಯೂರ–ಕೆಎಸ್‌ಟಿಡಿಸಿ
7. ಜಿಕೆಎಸ್ ಕ್ರಿಕೆಟ್ ತಂಡ
8. ಶಿವಸಾಯಿ ಸೀನಿಯರ್
9. ಶಿವ ಸಾಯಿ ಯಂಗ್‌ಸ್ಟರ್ಸ್
10. ಕೆನರಾ ಸಾಂಸ್ಕೃತಿಕ ಸಂಘ (ಕೆಸಿಎ)
11. ದೆಹಲಿ ತುಳು ಸಿರಿ
12. ನಾಡಪ್ರಭು ಕೆಂಪೇಗೌಡ ಫೌಂಡೇಶನ್
13. ರಾಯಣ್ಣ ಬ್ರಿಗೇಡ್
14. ಕರ್ನಾಟಕ ಭವನ ಕಾವೇರಿ
15. ಕರ್ನಾಟಕ ಭವನ ಸಿಸಿ
16. ಏರ್ ಸ್ಟ್ರೈಕರ್ಸ್ 'ಎ' ತಂಡ
17. ಏರ್ ಸ್ಟ್ರೈಕರ್ಸ್ 'ಬಿ' ತಂಡ
18. ಕನ್ನಡ ಗೆಳೆಯರು
19. ದೆಹಲಿ ಪವರ್ ಸ್ಟಾರ್ಸ್
20. ಶ್ರೀ ಗಣೇಶ ಮಿತ್ರ ಮಂಡಳಿ
21. ಕರ್ನಾಟಕ ಅಡ್ವೋಕೇಟ್ಸ್ ತಂಡ, ನವದೆಹಲಿ
22. ಜನಕಪುರಿ ಕನ್ನಡ ಕೂಟ
23. ಬೈಸನ್ ಬಾಯ್ಸ್





















# ಸಂಘದಲ್ಲಿ 'ಕ್ರೀಡೋತ್ಸವ': ಒಳಾಂಗಣ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು, ಹೊರಾಂಗಣ ಆಟೋಟಗಳು ಮತ್ತು ಕ್ರಿಕೆಟ್ ಪಂದ್ಯಾವಳಿಗೆ ಸದಸ್ಯರ ಜನಮನ್ನಣೆ



ಪ್ರತಿ ವರ್ಷದಂತೆ ಈ ಬಾರಿಯೂ ವಾರ್ಷಿಕ ಕ್ರೀಡೆಗಳು, ಆಟೋಟಗಳು, ಸಾಂಸ್ಕೃತಿಕ ಸ್ಪರ್ಧೆಗಳು ಮತ್ತು ಮೂರು ದಿನಗಳ ಕ್ರಿಕೆಟ್ ಪಂದ್ಯಾವಳಿಯನ್ನು ಸಂಘದ ಸದಸ್ಯರಿಗಾಗಿ ಹಮ್ಮಿಕೊಳ್ಳಲಾಗಿತ್ತು.

ದಿನಾಂಕ 24.01.2026 ರಂದು ನವದೆಹಲಿ ಆರ್. ಕೆ. ಪುರಂ, ಸೆಕ್ಟರ್–12ರಲ್ಲಿರುವ ಸಂಘದ ಸಾಂಸ್ಕೃತಿಕ ಸಮುಚ್ಚಯದಲ್ಲಿ ಸಂಘದ ಸದಸ್ಯರಿಗಾಗಿ ಚೆಸ್ ಮತ್ತು ಕೇರಂ ಆಟಗಳು, ರಂಗೋಲಿ, ಆಶುಭಾಷಣ (ಪಿಕ್ ಅಂಡ್ ಸ್ಪೀಕ್), ದೇಶ ಭಕ್ತಿಗೀತೆ, ಭಾವಗೀತೆ, ಜನಪದಗೀತೆಗಳ ಗಾಯನ ಸ್ಪರ್ಧೆ, ಶಾಸ್ತ್ರೀಯ ನೃತ್ಯ, ಮಕ್ಕಳಿಗಾಗಿ ಚಿತ್ರ ಬರೆಯುವ ಸ್ಪರ್ಧೆ, ಸ್ಮರಣಶಕ್ತಿ ಪರೀಕ್ಷೆ, ಕನ್ನಡ ರೈಮ್ಸ್, ಮುಂತಾದ ಒಳಾಂಗಣ ಕ್ರೀಡಾ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಹಾಗೆಯೇ ದಿನಾಂಕ : 17.01.2026 ರಂದು ಮತ್ತು 18.01.2026ರಂದು ದೆಹಲಿ ಕನ್ನಡದ ಶಾಲೆಯ ಮೈದಾನದಲ್ಲಿ ಥ್ರೋಬಾಲ್, ವಾಲಿಬಾಲ್, ಕಬಡ್ಡಿ, ಶಟಲ್ ಬ್ಯಾಡ್ಮಿಂಟನ್ ಮುಂತಾದ ಹೊರಾಂಗಣ ಕ್ರೀಡೆಗಳು ಮತ್ತು ವಿವಿಧ ಶ್ರೇಣಿ / ವಿಭಾಗದ ರನ್ನಿಂಗ್ ರೇಸ್, ರಿಲೇ, ಶಾಟ್‌ಪುಟ್, ಹಗ್ಗ ಜಗ್ಗಾಟ, ಬಾಲ್ ಇನ್ ಬಕೆಟ್ ಮುಂತಾದ ಹೊರಾಂಗಣ ಆಟೋಟ ಸ್ಪರ್ಧೆಗಳನ್ನು ವಿವಿಧ ವಯೋಮಿತಿಯಲ್ಲಿ ಪುರುಷರಿಗೆ, ಮಹಿಳೆಯರಿಗೆ ಮತ್ತು ಮಕ್ಕಳಿಗೆ ಏರ್ಪಡಿಸಲಾಗಿತ್ತು. ಸಂಘದ ಅಧ್ಯಕ್ಷರು, ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು, ಕ್ರೀಡಾ ಸಮಿತಿ ಅಧ್ಯಕ್ಷರು, ಸಂಚಾಲಕರು, ಸಂಘದ ಸದಸ್ಯರು, ವ್ಯವಸ್ಥಾಪಕರು, ಸಿಬ್ಬಂದಿ ಮತ್ತಿತರರು ಕ್ರೀಡೋತ್ಸವ ಚಟುವಟಿಕೆಗಳಲ್ಲಿ ಪಾಲ್ಗೊಂಡಿದ್ದರು.

**ವಿವಿಧ ಕ್ರೀಡೆಗಳು ಮತ್ತು ಆಟೋಟ ಸ್ಪರ್ಧೆಗಳ ವಿಜೇತರ ಪಟ್ಟಿ:**

**ಹಗ್ಗ ಜಗ್ಗಾಟ** (ಪುರುಷರು–17 ವರ್ಷ ಮೇಲ್ಪಟ್ಟವರು) : ಏರ್ ಸ್ಟ್ರೈಕರ್ಸ್–ಪ್ರಥಮ ಬಹುಮಾನ, ನಾಡಪ್ರಭು ಕೆಂಪೇಗೌಡ ಫೌಂಡೇಶನ್–ದ್ವಿತೀಯ ಬಹುಮಾನ, ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಸ್ಕೂಲ್–ತೃತೀಯ ಬಹುಮಾನ

**ಹಗ್ಗ ಜಗ್ಗಾಟ** (ಮಹಿಳೆಯರು–17 ವರ್ಷ ಮೇಲ್ಪಟ್ಟವರು): ನಾಡಪ್ರಭು ಕೆಂಪೇಗೌಡ ಫೌಂಡೇಶನ್–ಪ್ರಥಮ ಬಹುಮಾನ, ದೆಹಲಿ ಪೊಲೀಸ್ ಕನ್ನಡಿಗರ ಕಲ್ಯಾಣ ಸಮಿತಿ–ದ್ವಿತೀಯ ಬಹುಮಾನ, ಗುರುಗಾಂವ್ ಕನ್ನಡ ಸಂಘ–ತೃತೀಯ ಬಹುಮಾನ

**ಥ್ರೋಬಾಲ್** (ಮಹಿಳೆಯರು–17 ವರ್ಷ ಮೇಲ್ಪಟ್ಟವರು) : ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಸ್ಕೂಲ್–ಪ್ರಥಮ ಬಹುಮಾನ, ದೆಹಲಿ ಪೊಲೀಸ್ ಕನ್ನಡಿಗರ ವೆಲ್‌ಫೇರ್ ಅಸೋಸಿಯೇಷನ್–ದ್ವಿತೀಯ ಬಹುಮಾನ, ನಾಡಪ್ರಭು ಕೆಂಪೇಗೌಡ ಫೌಂಡೇಶನ್–ತೃತೀಯ ಬಹುಮಾನ

**ವಾಲಿಬಾಲ್** (ಪುರುಷರು) : ಕರ್ನಾಟಕ ಏರ್ ಸ್ಟ್ರೈಕರ್ಸ್–ಪ್ರಥಮ ಬಹುಮಾನ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘ–ದ್ವಿತೀಯ ಬಹುಮಾನ

**ಕಬಡ್ಡಿ** (ಪುರುಷರು) : ಶಿವ ಸಾಯಿ–ಪ್ರಥಮ ಬಹುಮಾನ, ಕನ್ನಡ ಗೆಳೆಯರು–ದ್ವಿತೀಯ ಬಹುಮಾನ

**ಶಟಲ್ ಬ್ಯಾಡ್ಮಿಂಟನ್ ಡಬಲ್ಸ್** (ಪುರುಷರು) : ಧರ್ಮ ಮತ್ತು ರಿಷಿ–ಪ್ರಥಮ ಬಹುಮಾನ, ಹರೀಶ್ ಮತ್ತು ದರ್ಶನ್ ಆರ್.–ದ್ವಿತೀಯ ಬಹುಮಾನ

**ಶಟಲ್ ಬ್ಯಾಡ್ಮಿಂಟನ್ ಡಬಲ್ಸ್** (ಮಹಿಳೆಯರು) : ಶ್ರುತಿ ಮತ್ತು ತೇಜಸ್ವಿನಿ–ಪ್ರಥಮ ಬಹುಮಾನ, ಲಿಖಿತಾ ಮತ್ತು ಅಶ್ವಿತಾ ಶೆಟ್ಟಿ–ದ್ವಿತೀಯ ಬಹುಮಾನ, ಮಮತಾ ಜಿಂಥೆ ಮತ್ತು ಪ್ರತಿಭಾ–ತೃತೀಯ ಬಹುಮಾನ

**50 ಮೀ ಓಟ** (3–5 ವರ್ಷ) : ರಾಜವರ್ಧನ್ ಮತ್ತು ಪಿಯೂಷ್–ಪ್ರಥಮ ಬಹುಮಾನ, ದೇವಾಂಶ್ ಮತ್ತು ಅನಿಶಾ–ದ್ವಿತೀಯ ಬಹುಮಾನ, ಫಯಾಜ್ ಮತ್ತು ಮೇಘನಾ–ತೃತೀಯ ಬಹುಮಾನ

**ಬಾಲ್ ಇನ್ ಬಕೆಟ್** (3–6 ವರ್ಷ) : ಅಥರ್ವ್–ಪ್ರಥಮ ಬಹುಮಾನ, ಏಕರ್ಷಿ–ದ್ವಿತೀಯ ಬಹುಮಾನ, ವಿರಾಜ್–ತೃತೀಯ ಬಹುಮಾನ

**50 ಮೀ ಓಟ** (ಹುಡುಗರು 6–10 ವರ್ಷ) : ಸಮರ್ಥ್–ಪ್ರಥಮ ಬಹುಮಾನ, ಮಿಥುನ್–ದ್ವಿತೀಯ ಬಹುಮಾನ, ಎಸ್. ಮಲ್ಲಿಕಾರ್ಜುನ–ತೃತೀಯ ಬಹುಮಾನ

**50 ಮೀ ಓಟ** (ಹುಡುಗಿಯರು 6–10 ವರ್ಷ) : ಶ್ರುತಿ ಮಿಥೇಶ್ ಶೆಟ್ಟಿ–ಪ್ರಥಮ ಬಹುಮಾನ, ಮೋನಿಷ್ಕಾ–ದ್ವಿತೀಯ ಬಹುಮಾನ, ಕೃತಿಕಾ ಮಂಜಪ್ಪ–ತೃತೀಯ ಬಹುಮಾನ

**ಬಾಲ್ ಇನ್ ಬಕೆಟ್** (6–10 ವರ್ಷ) : ವಿವೇನ್ ಕುಟ್ಟಯ್ಯ–ಪ್ರಥಮ ಬಹುಮಾನ, ಕೃತಿಕಾ–ದ್ವಿತೀಯ ಬಹುಮಾನ, ನಿಷ್ಕಾ ಪೂಜಾರಿ–ತೃತೀಯ ಬಹುಮಾನ

**ಮೂರು ಕಾಲಿನ ಓಟ** (ಹುಡುಗರು 8–12 ವರ್ಷ): ಸೋಹಮ್ ಮತ್ತು ನಿಖಿಲ್–ಪ್ರಥಮ ಬಹುಮಾನ, ಮಾನವ್ ಮತ್ತು ಆದಿತ್ಯ–ದ್ವಿತೀಯ ಬಹುಮಾನ, ವರ್ಣಿತ್ ಮತ್ತು ಸಮರ್ಥ್–ತೃತೀಯ ಬಹುಮಾನ

**ಮೂರು ಕಾಲಿನ ಓಟ** (ಹುಡುಗಿಯರು 8–12 ವರ್ಷ) : ಅಂಕಿತಾ ಬಿರಾದರ್ ಮತ್ತು ಕಲ್ಪನಾ–ಪ್ರಥಮ ಬಹುಮಾನ, ತನಿಯಾ ಮತ್ತು ಶರಣ್ಯ–ದ್ವಿತೀಯ ಬಹುಮಾನ, ಸಾನಿಧ್ಯ ಮತ್ತು ಸಾನ್ವಿಕಾ–ತೃತೀಯ ಬಹುಮಾನ

**100 ಮೀ ಓಟ** (ಹುಡುಗರು 11–16 ವರ್ಷ) : ಗಣೇಶ್ ಮತ್ತು ಸೋಹಮ್–ಪ್ರಥಮ ಬಹುಮಾನ, ರಾಜು ಮತ್ತು ಅರಾವ್–ದ್ವಿತೀಯ ಬಹುಮಾನ, ಮಾನವ್ ಮತ್ತು ಪ್ರಣವ್–ತೃತೀಯ ಬಹುಮಾನ

**100 ಮೀ ಓಟ** (ಹುಡುಗಿಯರು 11–16 ವರ್ಷ) : ಕಲ್ಪನಾ ಮತ್ತು ಸೃಷ್ಟಿ ಪೂಜಾರಿ–ಪ್ರಥಮ ಬಹುಮಾನ, ಸಾಕ್ಷಿ ಮತ್ತು ಶರಣ್ಯ–ದ್ವಿತೀಯ ಬಹುಮಾನ, ದಿವ್ಯ ಮತ್ತು ವಿಧಿ ಕೊಠಾರಿ–ತೃತೀಯ ಬಹುಮಾನ

**200 ಮೀ ಓಟ** (ಹುಡುಗರು 11–16 ವರ್ಷ) : ಗಣೇಶ್–ಪ್ರಥಮ ಬಹುಮಾನ, ರಾಜು– ದ್ವಿತೀಯ



ಬಹುಮಾನ, ವಿಧಾನ ಕೊಠಾರಿ–ತೃತೀಯ ಬಹುಮಾನ

**200 ಮೀ ಓಟ** (ಹುಡುಗಿಯರು 11–16 ವರ್ಷ) : ಸೃಷ್ಟಿ ಪೂಜಾರಿ–ಪ್ರಥಮ ಬಹುಮಾನ, ಕಲ್ಪನಾ–ದ್ವಿತೀಯ ಬಹುಮಾನ, ಶರಣ್ಯ–ತೃತೀಯ ಬಹುಮಾನ

**100 ಮೀ ಮೂರು ಕಾಲಿನ ಓಟ** (ಹುಡುಗಿಯರು 13–17 ವರ್ಷ) : ಕಾವೇರಿ ಮತ್ತು ಸಾಕ್ಷಿ–ಪ್ರಥಮ ಬಹುಮಾನ, ವಿಧಿ ಕೊಠಾರಿ ಮತ್ತು ಸೃಷ್ಟಿ ಪೂಜಾರಿ–ದ್ವಿತೀಯ ಬಹುಮಾನ, ಸಹನಾ ಮತ್ತು ಕೀರ್ತನ–ತೃತೀಯ ಬಹುಮಾನ

**4x100 ಮೀ ರಿಲೇ** (ಹುಡುಗರು 14–20 ವರ್ಷ) : ಶಿವ ಸಾಯಿ–ಪ್ರಥಮ ಬಹುಮಾನ, ಏರ್ ಫೋರ್ಸ್–ದ್ವಿತೀಯ ಬಹುಮಾನ, ನಾಡಪ್ರಭು ಕೆಂಪೇಗೌಡ ಫೌಂಡೇಶನ್–ತೃತೀಯ ಬಹುಮಾನ

**4x100 ಮೀ ರಿಲೇ** (ಹುಡುಗಿಯರು 14–20 ವರ್ಷ) : ಸೃಷ್ಟಿ ಪೂಜಾರಿ ತಂಡ–ಪ್ರಥಮ ಬಹುಮಾನ, ಕೀರ್ತನಾ ತಂಡ–ದ್ವಿತೀಯ ಬಹುಮಾನ, ಶಿವಮ್ಮ ತಂಡ–ತೃತೀಯ ಬಹುಮಾನ

**4x100 ಮೀ ರಿಲೇ** (21 ವರ್ಷ ಮೇಲ್ಪಟ್ಟ ಮಹಿಳೆಯರು) : ಲಿಖಿತಾ ಮತ್ತು ತಂಡ–ಪ್ರಥಮ ಬಹುಮಾನ, ಹರ್ಷಿತಾ ಮತ್ತು ತಂಡ–ದ್ವಿತೀಯ ಬಹುಮಾನ, ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಸ್ಕೂಲ್–ತೃತೀಯ ಬಹುಮಾನ

**100 ಮೀ ಓಟ** (17–24 ವರ್ಷ ಪುರುಷರು) : ದರ್ಶನ–ಪ್ರಥಮ ಬಹುಮಾನ, ಸಮೀರ್–ದ್ವಿತೀಯ ಬಹುಮಾನ, ಸಂದೀಪ್–ತೃತೀಯ ಬಹುಮಾನ

**100 ಮೀ ಓಟ** (25–40 ವರ್ಷ–ಪುರುಷರು) : ದರ್ಶನ ಗೌಡ–ಪ್ರಥಮ ಬಹುಮಾನ, ಯಲ್ಲಾಲಿಂಗ ಕೊಪ್ಪದ–ದ್ವಿತೀಯ ಬಹುಮಾನ, ಹೇಮಂತ್–ತೃತೀಯ ಬಹುಮಾನ

**100 ಮೀ ಓಟ** (41 ವರ್ಷ ಮೇಲ್ಪಟ್ಟ ಮಹಿಳೆಯರು) : ಶ್ರೀದೇವಿ–ಪ್ರಥಮ ಬಹುಮಾನ, ಅಂಜುಮ್–ದ್ವಿತೀಯ ಬಹುಮಾನ, ಶಾಂತಾ ಶ್ರೀನಿವಾಸ–ತೃತೀಯ ಬಹುಮಾನ

**100 ಮೀ ಓಟ** (41 ವರ್ಷ ಮೇಲ್ಪಟ್ಟ–ಪುರುಷರು) : ಮಂಜಪ್ಪ–ಪ್ರಥಮ ಬಹುಮಾನ, ಮಿತೇಶ್ ಶೆಟ್ಟಿ–



ದ್ವಿತೀಯ ಬಹುಮಾನ, ರೇವಣ ಸಿದ್ದಪ್ಪ–ತೃತೀಯ ಬಹುಮಾನ

**200 ಮೀ ಓಟ** (17–24 ವರ್ಷ–ಮಹಿಳೆಯರು) : ಹರ್ಷಿತಾ–ಪ್ರಥಮ ಬಹುಮಾನ, ಅಶ್ವಿತಾ ಶೆಟ್ಟಿ–ದ್ವಿತೀಯ ಬಹುಮಾನ, ಲಿಖಿತಾ–ತೃತೀಯ ಬಹುಮಾನ

**200 ಮೀ ಓಟ** (17–24 ವರ್ಷ– ಪುರುಷರು) : ದರ್ಶನ್ ಆರ್.–ಪ್ರಥಮ ಬಹುಮಾನ, ಸಮೀರ್–ದ್ವಿತೀಯ ಬಹುಮಾನ, ಸಂದೀಪ್–ತೃತೀಯ ಬಹುಮಾನ

**200 ಮೀ. ವೇಗ ನಡಿಗೆ** (45 ವರ್ಷ ಮೇಲ್ಪಟ್ಟ ಮಹಿಳೆಯರು) : ಆಶಾಲತಾ ಎಂ.–ಪ್ರಥಮ ಬಹುಮಾನ, ಭಾರ್ಗವಿ–ದ್ವಿತೀಯ ಬಹುಮಾನ, ಲಕ್ಷ್ಮೀ–ತೃತೀಯ ಬಹುಮಾನ

**200 ಮೀ. ವೇಗದ ನಡಿಗೆ** (50 ವರ್ಷ ಮೇಲ್ಪಟ್ಟ ಪುರುಷರು) : ಎಚ್.ಎಸ್. ತೇಲಿ–ಪ್ರಥಮ ಬಹುಮಾನ, ನಂಜುಂಡ–ದ್ವಿತೀಯ ಬಹುಮಾನ, ಚಂದ್ರಶೇಖರ ಮೂರ್ತಿ–ತೃತೀಯ ಬಹುಮಾನ

**400 ಮೀ ಓಟ** (ಪುರುಷರು) : ದರ್ಶನ– ಪ್ರಥಮ ಬಹುಮಾನ, ಪ್ರಸಾದ್–ದ್ವಿತೀಯ ಬಹುಮಾನ, ಸಿದ್ಧಾರ್ಥ–ತೃತೀಯ ಬಹುಮಾನ

**400 ಮೀ ಓಟ** (ಮಹಿಳೆಯರು–ಓಪನ್) : ಅಕಾಂಕ್ಷಾ–ಪ್ರಥಮ ಬಹುಮಾನ, ಅಶ್ವಿತಾ ಶೆಟ್ಟಿ–ದ್ವಿತೀಯ ಬಹುಮಾನ, ಲಿಖಿತಾಶ್ರೀ ಮತ್ತು ಪುಷ್ಪಾ ನವೀನ ತೃತೀಯ ಬಹುಮಾನ

**100 ಮೀ. ಮೂರು ಕಾಲಿನ ಓಟ** (17 ವರ್ಷ ಮೇಲ್ಪಟ್ಟ ಮಹಿಳೆಯರು) : ಶ್ರುತಿ ರಮೇಶ್ ಮತ್ತು ಲಿಖಿತಾಶ್ರೀ–ಪ್ರಥಮ ಬಹುಮಾನ, ಜ್ಯೋತಿ ಮತ್ತು ಮೀನಾ–ದ್ವಿತೀಯ ಬಹುಮಾನ, ಶಾಂತಾ ಮತ್ತು ಆಶಾಲತಾ ಎಂ–ತೃತೀಯ ಬಹುಮಾನ

**100 ಮೀ. ಲೆಮನ್ ಅಂಡ್ ಸ್ಪೂನ್** (21–36 ವರ್ಷ ಮಹಿಳೆಯರು) : ಶ್ರುತಿ ರಮೇಶ್–ಪ್ರಥಮ ಬಹುಮಾನ, ಲಕ್ಷ್ಮೀ ಬಡಗುಂಡಿ–ದ್ವಿತೀಯ ಬಹುಮಾನ, ಸುರೇಖಾ–ತೃತೀಯ ಬಹುಮಾನ

**100 ಮೀ. ಲೆಮನ್ ಅಂಡ್ ಸ್ಪೂನ್** (37 ವರ್ಷ ಮಹಿಳೆಯರು) : ಹೇಮಲತಾ–ಪ್ರಥಮ ಬಹುಮಾನ, ಪ್ರತಿಭಾ ಗೌಡ–ದ್ವಿತೀಯ ಬಹುಮಾನ. ಶ್ರೀದೇವಿ ಪೂಜಾರಿ–ತೃತೀಯ ಬಹುಮಾನ



**100 ಮೀ. ಲೆಮನ್ ಆ್ಯಂಡ್ ಸ್ಪೂನ್** (37 ವರ್ಷ ಮಹಿಳೆಯರು) : ಶೋಭಾ ಗೌಡ–ಪ್ರಥಮ ಬಹುಮಾನ, ಭಾರತೀ ತಿಮ್ಮಪ್ಪ–ದ್ವಿತೀಯ ಬಹುಮಾನ

**ಸೂಜಿಗೆ ದಾರ ಹಾಕುವುದು** (ಕಪಲ್ಸ್–45 ವರ್ಷಕ್ಕಿಂತ ಕೆಳಗಿನವರು) : ಯಲ್ಲಾಲಿಂಗ ಕೊಪ್ಪದ ಮತ್ತು ಲಿಖಿತಾಶ್ರೀ–ಪ್ರಥಮ ಬಹುಮಾನ, ನಾಗರಾಜ ಮತ್ತು ಸುರೇಖ–ದ್ವಿತೀಯ ಬಹುಮಾನ, ನವೀನ್ ಮತ್ತು ಪುಷ್ಪ–ತೃತೀಯ ಬಹುಮಾನ

**ಕೋನ್ ಬ್ಯಾಲೆನ್ಸಿಂಗ್** (20–35 ವರ್ಷ–ಮಹಿಳೆಯರು) : ಶ್ರುತಿ ರಮೇಶ್–ಪ್ರಥಮ ಬಹುಮಾನ, ಪುಷ್ಪ ನವೀನ್–ದ್ವಿತೀಯ ಬಹುಮಾನ, ವಿದ್ಯಾಶ್ರೀ ಕಾರ್ತಿಕ್–ತೃತೀಯ ಬಹುಮಾನ

**ಕೋನ್ ಬ್ಯಾಲೆನ್ಸಿಂಗ್** (35–50ವರ್ಷ–ಮಹಿಳೆಯರು) : ನಳಿನಾ ಚರ್ಮಣ್ಣ–ಪ್ರಥಮ ಬಹುಮಾನ, ಅಂಜುಮ್–ದ್ವಿತೀಯ ಬಹುಮಾನ, ಸಿ.ಪಿ. ಭಾರ್ಗವಿ–ತೃತೀಯ ಬಹುಮಾನ

**ಕೋನ್ ಬ್ಯಾಲೆನ್ಸಿಂಗ್** (35–50 ವರ್ಷ–ಮಹಿಳೆಯರು) : ದೀಪಾ–ಪ್ರಥಮ ಬಹುಮಾನ, ಶೋಭಾ ಗೌಡ–ದ್ವಿತೀಯ ಬಹುಮಾನ, ಹೇಮಲತಾ ನಂಜುಂಡ–ತೃತೀಯ ಬಹುಮಾನ

**ಕೋನ್ ಬ್ಯಾಲೆನ್ಸಿಂಗ್** (20–35 ವರ್ಷ–ಪುರುಷರು) : ನಾಗರಾಜ್–ಪ್ರಥಮ ಬಹುಮಾನ, ನವೀನ್ ಕುಮಾರ್ ವಿ.–ದ್ವಿತೀಯ ಬಹುಮಾನ, ಅಜಯ್ ಬಿರಾದಾರ–ತೃತೀಯ ಬಹುಮಾನ

**ಶಾಟ್ ಪುಟ್** (ಮಹಿಳೆಯರು Below 35 ವರ್ಷ) : ಶ್ರುತಿ ರಮೇಶ್–ಪ್ರಥಮ ಬಹುಮಾನ, ಲಿಖಿತಾಶ್ರೀ–ದ್ವಿತೀಯ ಬಹುಮಾನ, ಶಿಲ್ಪಾ ಜಿ–ತೃತೀಯ ಬಹುಮಾನ

**ಶಾಟ್ ಪುಟ್**–(ಪುರುಷರು Below 35 ವರ್ಷ) : ದರ್ಶನ್–ಪ್ರಥಮ ಬಹುಮಾನ, ಯಲ್ಲಾಲಿಂಗ ಕೊಪ್ಪದ–ದ್ವಿತೀಯ ಬಹುಮಾನ, ಭೀಮ–ತೃತೀಯ ಬಹುಮಾನ

**ಶಾಟ್ ಪುಟ್**–(ಮಹಿಳೆಯರು Below 36 ವರ್ಷ) : ಮಂಜುಳಾ ಜಕ್ಕಪ್ಪ–ಪ್ರಥಮ ಬಹುಮಾನ, ಶಾಂತಾ ಶ್ರೀನಿವಾಸ–ದ್ವಿತೀಯ ಬಹುಮಾನ, ಹೇಮಲತಾ ಪಿ.ಆರ್.–ತೃತೀಯ ಬಹುಮಾನ

**ಶಾಟ್ ಪುಟ್**–(ಪುರುಷರು above 36 ವರ್ಷ) : ಪರಸಪ್ಪ–ಪ್ರಥಮ ಬಹುಮಾನ, ಮಂಜುನಾಥ ಟಿ.–ದ್ವಿತೀಯ ಬಹುಮಾನ, ನಿತಿನ್–ತೃತೀಯ ಬಹುಮಾನ

**ಕೇರಂ ಸಿಂಗಲ್ಸ್** (15 ವರ್ಷ ಮೇಲ್ಪಟ್ಟ–ಪುರುಷರು): ತ್ಯಾಗೇಶ್ ಮೂರ್ತಿ–ಪ್ರಥಮ ಬಹುಮಾನ, ಅಂಬಾಶಂಕರ್–ದ್ವಿತೀಯ ಬಹುಮಾನ, ಎಂ.ಆರ್. ಸತೀಶ್–ತೃತೀಯ ಬಹುಮಾನ

**ಕೇರಂ ಸಿಂಗಲ್ಸ್** (15 ವರ್ಷ ಮೇಲ್ಪಟ್ಟ–ಮಹಿಳೆಯರು) : ಪುಷ್ಪಾ ಜಕ್ಕಪ್ಪ–ಪ್ರಥಮ ಬಹುಮಾನ, ಏಕತಾ ಮೂರ್ತಿ–ದ್ವಿತೀಯ ಬಹುಮಾನ, ಗಾಯತ್ರಿ–ತೃತೀಯ ಬಹುಮಾನ

**ಕೇರಂ ಮಿಕ್ಸ್ ಡಬಲ್ಸ್** (15 ವರ್ಷ ಮೇಲ್ಪಟ್ಟವರು) : ಮಮತಾ ಜಿಂಧೆ ಮತ್ತು ನಾಗರಾಜ–ಪ್ರಥಮ ಬಹುಮಾನ, ತ್ಯಾಗೇಶ್ ಮೂರ್ತಿ ಮತ್ತು ಏಕತಾ ಮೂರ್ತಿ–ದ್ವಿತೀಯ ಬಹುಮಾನ, ರಮೇಶ್ ಮತ್ತು ಎಂ.ಆರ್. ಸತೀಶ್–ತೃತೀಯ ಬಹುಮಾನ

**ಚೆಸ್** (10 ವರ್ಷ ಮೇಲ್ಪಟ್ಟವರು) : ಓಶೋ ಮುರಗೋಡ–ಪ್ರಥಮ ಬಹುಮಾನ, ರಿತ್ವಿಕ್ ನೆಲ್ಲಿ–ದ್ವಿತೀಯ ಬಹುಮಾನ, ಮಮತಾ ಜಿಂಧೆ– ತೃತೀಯ









ಬಹುಮಾನ

**ಗೀತೆ ಸ್ಪರ್ಧೆ** (8–13 ವರ್ಷ) : ಮೋನಿಷ್ಕಾ (ಜಾನಪದ ಗೀತೆ)–ಪ್ರಥಮ ಬಹುಮಾನ, ಸಾನಿಧ್ಯ (ಭಕ್ತಿ ಗೀತೆ)–ದ್ವಿತೀಯ ಬಹುಮಾನ, ಶರಣ್ಯ (ಭಕ್ತಿ ಗೀತೆ)–ತೃತೀಯ ಬಹುಮಾನ

**ಗೀತೆ ಸ್ಪರ್ಧೆ** (19 ವರ್ಷ ಮೇಲ್ಪಟ್ಟವರು) : ಮಮತಾ ಪ್ರವೀಣ್–ಪ್ರಥಮ ಬಹುಮಾನ, ನವೀನ್ ಕುಮಾರ್–ದ್ವಿತೀಯ ಬಹುಮಾನ, ಸುಜಾತ ಭಟ್ ಮತ್ತು ರೇಣುಕಾ ಸಾವಕಾರ–ತೃತೀಯ ಬಹುಮಾನ, ಸಮಧಾನಕರ ಬಹುಮಾನ–ವೀಣಾ ಕೊಠಾರಿ

**ಕನ್ನಡ ರೈಮ್ಸ್** (4–10 ವರ್ಷ): ಸಾನ್ವಿಕ– ಪ್ರಥಮ ಬಹುಮಾನ, ರಕ್ಷಾ–ದ್ವಿತೀಯ ಬಹುಮಾನ, ನಿಷ್ಠಾ–ತೃತೀಯ ಬಹುಮಾನ

**ಪಿಕ್ ಅಂಡ್ ಸ್ಪೀಕ್ ಕನ್ನಡ** (19 ವರ್ಷ ಮೇಲ್ಪಟ್ಟವರು) : ನಾರಾಯಣ ಬಿ.–ಪ್ರಥಮ ಬಹುಮಾನ, ಜಯಶೀಲ–ದ್ವಿತೀಯ ಬಹುಮಾನ, ಕೆ.ಎಸ್. ಮೂರ್ತಿ–ತೃತೀಯ ಬಹುಮಾನ

**ಸ್ಮರಣಶಕ್ತಿ ಪರೀಕ್ಷೆ** (11–14 ವರ್ಷ) : ವೈಷ್ಣವಿ ಮತ್ತು ಮೊನಿಷ್ಕಾ–ಪ್ರಥಮ ಬಹುಮಾನ, ಪ್ರಕೃತಿ ಮತ್ತು ಕಶ್ವಿ ಪೂಜಾರಿ–ದ್ವಿತೀಯ ಬಹುಮಾನ, ರಕ್ಷಾ ಅಗಸಿಮಣಿ ಮತ್ತು ಸನ್ನಿಧಿ–ತೃತೀಯ ಬಹುಮಾನ

**ಸ್ಮರಣಶಕ್ತಿ ಪರೀಕ್ಷೆ** (7–10 ವರ್ಷ) : ಹರ್ಷಿತಾ ಉಭಾಳೆ ಮತ್ತು ಸೃಷ್ಟಿ ಪೂಜಾರಿ–ಪ್ರಥಮ ಬಹುಮಾನ, ನಿಷ್ಠಾ ಪೂಜಾರಿ ಮತ್ತು ಕೃತಿಕಾ ಎಸ್. ಕೆ.–ದ್ವಿತೀಯ ಬಹುಮಾನ, ಅನರ್ಘ್ಯ, ಜೈನಬ್, ವಿಧಿ ಕೊಠಾರಿ ಮತ್ತು ರಜನಿ–ತೃತೀಯ ಬಹುಮಾನ

**ಚಿತ್ರ ಬರೆಯುವ ಸ್ಪರ್ಧೆ** (10 ವರ್ಷಕ್ಕಿಂತ ಕೆಳಗಿನ ಮಕ್ಕಳು) : ಮೋನಿಷ್ಕಾ–ಪ್ರಥಮ ಬಹುಮಾನ, ಸಾನ್ವಿಕ–ದ್ವಿತೀಯ ಬಹುಮಾನ, ರಾಜವರ್ಧನ್ ಮತ್ತು ವೈಷ್ಣವಿ–ತೃತೀಯ ಬಹುಮಾನ

**ಚಿತ್ರ ಬರೆಯುವ ಸ್ಪರ್ಧೆ** (10–18 ವರ್ಷದ ಮಕ್ಕಳು) ಕೀರ್ತನಾ ಕಟ್ಟಿಮನಿ–ಪ್ರಥಮ ಬಹುಮಾನ, ಕೃತಿಕಾ–ದ್ವಿತೀಯ ಬಹುಮಾನ, ರಜನಿ ಮತ್ತು ಶರಣ್ಯ ಎಂ.–ತೃತೀಯ ಬಹುಮಾನ

**ಶಾಸ್ತ್ರೀಯ ನೃತ್ಯ** (10–18 ವರ್ಷದ ಮಕ್ಕಳು) : ಕೀರ್ತನಾ ಕಟ್ಟಿಮಣಿ–ಪ್ರಥಮ ಬಹುಮಾನ, ವಿಧಿ ಕೊಠಾರಿ–ದ್ವಿತೀಯ ಬಹುಮಾನ, ಶರಣ್ಯ ಮತ್ತು ತಾನ್ಯ–ತೃತೀಯ ಬಹುಮಾನ

**ರಂಗೋಲಿ** (18 ವರ್ಷ ಮಹಿಳೆಯರು) : ಮೈಥಿಲಿ ಅಟ್ಟಾವರ್–ಪ್ರಥಮ ಬಹುಮಾನ, ವಿಮಲಾ ರಂಗನಾಥ್–ದ್ವಿತೀಯ ಬಹುಮಾನ, ಗಾಯತ್ರಿ ಬಾಪ್ರಿ ಮತ್ತು ಸುಮಾ ಜ್ಯೋತೆಪ್ಪ–ತೃತೀಯ ಬಹುಮಾನ

ಸಂಘದ ಸದಸ್ಯರು ಮತ್ತು ಕುಟುಂಬದವರು ಈ ಎಲ್ಲಾ ಕ್ರೀಡೆಗಳು ಮತ್ತು ಆಟೋಟ ಸ್ಪರ್ಧೆಗಳಲ್ಲಿ ಬಲು ಉತ್ಸಾಹದಿಂದ ಪಾಲ್ಗೊಂಡು ಯಶಸ್ವಿಗೊಳಿಸುವಲ್ಲಿ ಭಾಗಿಯಾದರು. ಕ್ರೀಡೋತ್ಸವದಲ್ಲಿ ಭಾಗವಹಿಸಿದ ಎಲ್ಲಾ ಸದಸ್ಯರಿಗೆ, ಅವರ ಕುಟುಂಬದವರಿಗೆ, ಬಹುಮಾನ ವಿಜೇತರಿಗೆ ಮತ್ತು ಸಹಕರಿಸಿದ ಎಲ್ಲರಿಗೂ ಸಂಘದ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ, ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರ ಪರವಾಗಿ ಹೃದಯಪೂರ್ವಕ ಕೃತಜ್ಞತೆಗಳು.❑

**ನಾರಾಯಣ ಬಿ.**
ಅಧ್ಯಕ್ಷರು,
**ನವೀನ್ ಕುಮಾರ್ ವಿ.**
ಸಂಚಾಲಕರು, ಕ್ರೀಡಾ ಸಮಿತಿ,
ದೆಹಲಿ ಕರ್ನಾಟಕ ಸಂಘ











ಕಲ್ಯಾಣ ಕರ್ನಾಟಕ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಟ್ರಸ್ಟ್, ರಾಯಚೂರು ಮತ್ತು ಕಲಾ ಸಂಕುಲ ಸಂಸ್ಥೆ, ರಾಯಚೂರು ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ ಮಾರ್ಚ್ 8, 2026ರಂದು ರಾಯಚೂರು ನಗರದ ರಂಗಮಂದಿರದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಖಜಾಂಚಿಗಳಾದ **ಶ್ರೀಮತಿ ಆಶಾಲತಾ ಎಂ.** ಅವರಿಗೆ ದೆಹಲಿ ಮೆಟ್ರೋ ಅನ್ನು ಚಲಾಯಿಸಿದ ಮೊದಲ ಕನ್ನಡತಿ ಎನ್ನುವುದನ್ನು ಹಾಗು ದೆಹಲಿಯಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಪ್ರಚಾರ ಮತ್ತು ಪ್ರಸರಿಸುತ್ತಿರುವುದನ್ನು ಪರಿಗಣಿಸಿ '2026ರ ರಾಷ್ಟ್ರೀಯ ಮಹಿಳಾ ಸಾಧಕಿ ಪ್ರಶಸ್ತಿ'ಯನ್ನು ನೀಡಿ ಪುರಸ್ಕರಿಸಿದೆ.

**ಶ್ರೀಮತಿ ಆಶಾಲತಾ ಎಂ. ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು!**


# ಶ್ರೀ ಎಂ. ಶಿವರಾಮ ರೈ

ಕುಂಬಳೆಯ ಮಣ್ಣಿನ ಶಕ್ತಿ ಅದ್ಭುತ. ಕುಂಬಳೆ ಎಂದಾಗ ಪಕ್ಕನೆ ನೆನಪಾಗುವುದು ಶತಕಗಳ ಹಿಂದಿನ ಯಕ್ಷಗಾನದ ಕವಿ ಪಾರ್ತಿ ಸುಬ್ಬ. ಮತ್ತೆ ನೆನಪಾಗುವುದು ದಶಕಗಳ ಹಿಂದಿನ ಕ್ರಿಕೆಟ್ ಪಟು ಅನಿಲ್ ಕುಂಬ್ಳೆ. ಕುಂಬಳೆ ದೇರಣ್ಣ ರೈ ಎಂಬವರು ಅರುವತ್ತು-ಎಪ್ಪತ್ತರ ದಶಕದಲ್ಲಿ ಪ್ರಸಿದ್ಧ ಚೆಂಡೆ ವಾದಕರು. ಅವರ ಮಗ ಮೀಂಜ ಮಂಜಲ್ತೋಡಿ ಪೈವಳಿಕೆಯಲ್ಲಿ ಜನಿಸಿದ ಎಂ. ಶಿವರಾಮ ರೈ ದೆಹಲಿಯ ವಿಶಿಷ್ಟ ಕ್ರಿಕೆಟ್ ಪಟು. ಶಿವರಾಮ ರೈಯವರು ಕ್ರಿಕೆಟ್ ಕ್ಷೇತ್ರದ ದೆಹಲಿಯ ವಿಶಿಷ್ಟ ಕನ್ನಡಿಗರೆಂದರೆ ತಪ್ಪಾಗಲಾರದು.

ಯಕ್ಷಗಾನ ಮೇಳದ ತಿರುಗಾಟದ ಕಷ್ಟ ಏನು ಎಂಬುದನ್ನು ತಮ್ಮ ತಂದೆಯ ಜೊತೆ ಹೋಗಿ ಒಂದೇ ದಿನದಲ್ಲಿ ನೋಡಿ ತಿಳಿದ ಶಿವರಾಮ ರೈಯವರು ನವೆಂಬರ್ 30, 1973ರಂದು ಭಾರತೀಯ ವಾಯು ಸೇನೆಗೆ ಸೇರಿದರು. ತಮಿಳುನಾಡಿನ ತಾಂಬರಮ್, ಪಂಜಾಬಿನ ಆದಂಪುರದಲ್ಲಿ ಸೇವೆ ಸಲ್ಲಿಸಿ ದೆಹಲಿಗೆ ಬಂದಾಗ ಅವರಿಗಿಷ್ಟವಾದ ಕ್ರಿಕೆಟ್‌ನಲ್ಲಿ ವೃತ್ತಿ ಜೀವನವನ್ನು ರೂಪಿಸಿಕೊಳ್ಳುವ ಅವಕಾಶಗಳು ದೊರೆತವು. ರಣಜೀ ಟ್ರೋಫಿ ಆಟಗಾರನಾಗಿ ಕಾಣಿಸಿಕೊಂಡ ಶಿವರಾಮ್ ರೈಯವರು ಸೇವಾ ನಿವೃತ್ತಿಯ ನಂತರ ಕ್ರಿಕೆಟ್ ತರಬೇತಿಯನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿಸಿ ಕಳೆದ ಮೂರು ದಶಕಗಳಿಂದ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ.

ಕ್ರಿಕೆಟ್ ತರಬೇತಿಯಲ್ಲಿ ಮೂವತ್ತು ವರ್ಷಗಳಿಂದ ತೊಡಗಿಸಿಕೊಂಡ ರಣಜೀ ಪಂದ್ಯದ ಆಟಗಾರ ಶಿವರಾಮ್ ರೈಯವರಿಂದ ತರಬೇತಿ ಪಡೆದ ಪ್ರಸಿದ್ಧರ ಪಟ್ಟಿ ಬಹು ದೊಡ್ಡದು. ಬಿಹಾರದ ಉಪಮುಖ್ಯಮಂತ್ರಿಯಾಗಿದ್ದ ತೇಜಸ್ವಿ ಯಾದವ್ ಅವರಿಗೂ 2008-2009ರಲ್ಲಿ ರೈಯವರು ಕ್ರಿಕೆಟ್ ತರಬೇತಿ ನೀಡಿದ್ದರು ಎಂಬುದು ಗಮನಾರ್ಹ. ಗರಿಮಾ ಸಿಂಗ್, ತಾನ್ಯಾ ಚತುರ್ವೇದಿ, ನಿಧಿ ಮಹತೋ, ಚೈತನ್ಯ ಬಿಶ್ನೋಯ್, ಆರ್ಯಮನ್ ಸೇನ್, ಅನುಜ್ ಜೈನ್, ಎಚ್.ಪಿ. ಶರ್ಮಾ, ಜೆ.ಪಿ. ಪಾಂಡೆ, ಬಾಬು ಶ್ರೀನಿವಾಸ್ ಹೀಗೆ ರಣಜೀ ಟ್ರೋಫಿ, ಅಂಡರ್ 19, ಅಥವಾ ಹರಿಯಾಣ, ದೆಹಲಿ, ಜಾರ್ಖಂಡ್ ಮುಂತಾದ ರಾಜ್ಯಗಳ ಪ್ರಸಿದ್ಧ ಕ್ರಿಕೆಟ್ ಕ್ರೀಡಾ ಪಟುಗಳ ಸಾಲಿಗೆ ಸೇರಿದ ನೂರಾರು ಆಟಗಾರರನ್ನು ತರಬೇತಿಗೊಳಿಸಿದ ಶಿವರಾಮ ರೈಯವರು ಎಲ್ಲರಿಗೂ ಅಚ್ಚುಮೆಚ್ಚು. ಶಾಲೆಗಳಲ್ಲಿ ಸಾಮಾನ್ಯವಾಗಿ ದೈಹಿಕ ಶಿಕ್ಷಣ ನೀಡುವ ಶಿಕ್ಷಕರೆಂದರೆ ಮಕ್ಕಳಿಗೆ ಪ್ರಾರಂಭದಲ್ಲಿ ಭಯವಾದರೂ, ನಂತರ ಹೆಚ್ಚು ಆತ್ಮೀಯರಾಗುವವರೂ ಅವರೇ! ಎಂತಹ ತುಂಟ ಮಕ್ಕಳನ್ನೂ ಪಳಗಿಸಿ, ಮಕ್ಕಳಿಂದ ಗಳಿಸಿದ ಹೆಚ್ಚಿನ ಪ್ರೀತಿಯೇ ಅವರ ನಿಜವಾದ ಆಸ್ತಿ.

1955 ರಲ್ಲಿ ಜನಿಸಿದ ಶಿವರಾಮ ರೈಯವರು



ಇದೀಗ 70 ವರ್ಷ ದಾಟಿದರೂ ಪಾವನ ಕ್ರಿಕೆಟ್ ಅಕಾಡೆಮಿಯಲ್ಲಿ ಹೆಡ್ ಕೋಚ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. 1995ರಲ್ಲಿ ದೆಹಲಿಯ ಪ್ರತಿಷ್ಠಿತ ವಿದ್ಯಾ ಸಂಸ್ಥೆಯಾದ ಡೆಲ್ಲಿ ಪಬ್ಲಿಕ್ ಸ್ಕೂಲ್ (DPS) ಸೇರಿದ ಶಿವರಾಮ ರೈಯವರು, ಸೇವಾ ನಿವೃತ್ತಿಯಾಗಿ ಮತ್ತೆರಡು ವರ್ಷಗಳ ತನಕ ದೆಹಲಿ ಪಬ್ಲಿಕ್ ಶಾಲೆಯಲ್ಲಿ ಕ್ರಿಕೆಟ್ ಕೋಚ್ ಆಗಿ ದುಡಿದು ಇನ್ನೂ 5 ವರ್ಷಗಳ ತನಕ, ಅಂದರೆ, 2022ರವರೆಗೂ ದೆಹಲಿ ಪಬ್ಲಿಕ್ ಶಾಲೆಯ ಹಾಸ್ಟೆಲ್ ವಾರ್ಡನ್ ಮತ್ತು ಕ್ರಿಕೆಟ್ ತರಬೇತುದಾರರಾಗಿಯೇ ಮುಂದುವರಿದರು.

1989ರಲ್ಲಿ ಭಾರತೀಯ ಕ್ರೀಡಾ ಪ್ರಾಧಿಕಾರ (SAI) ದಲ್ಲಿ ಎನ್ಐಎಸ್ ಡಿಪ್ಲೋಮಾ ಮುಗಿಸಿ, ತಮ್ಮ ಬ್ಯಾಚ್‌ನಲ್ಲೇ ಮೊದಲ ಸ್ಥಾನ ಪಡೆದು ಭಾರತೀಯ ವಾಯುಪಡೆ ಮತ್ತು ಸರ್ವಿಸಸ್ ಟೀಮ್‌ನ ಕೋಚ್ ಆಗಿ 1994ರ ತನಕ ದುಡಿದು, ನಂತರ ನವದೆಹಲಿಯ ಪ್ಲೇ ಮೇಕರ್ಸ್ ಕ್ರಿಕೆಟ್ ಅಕಾಡೆಮಿಯ ಕೋಚ್ ಆಗಿ ಕಾರ್ಯ ನಿರ್ವಹಿಸಿದರು.

2007-09ರಲ್ಲಿ ಡಿಡಿಸಿಎ U-16 ನ ಸೆಲೆಕ್ಟರ್, ಕೋಚ್, 2009ರಿಂದ 2012 ರವರೆಗೆ ಡಿಡಿಸಿಎ U-16 ಹೆಡ್ ಕೋಚ್, ಮತ್ತು 2012-13ರಲ್ಲಿ ಡಿಡಿಸಿಎ U-25 ಗೆ ಕೋಚ್ ಹೀಗೆ ನಿರಂತರತೆಯೊಂದಿಗೆ ತೊಡಗಿದ ಶಿವರಾಮ ರೈಯವರಿಂದ ತರಬೇತಿ ಪಡೆದ ತಂಡಗಳು ವಿಜಯ್ ಮರ್ಚೆಂಟ್ ಟ್ರೋಫಿ ಸೇರಿದಂತೆ ಹಲವಾರು ಪಂದ್ಯಾವಳಿಗಳಲ್ಲಿ ಗೆಲುವನ್ನು ಪಡೆದಿರುವುದರಿಂದಲೇ, ಈ ಕ್ಷೇತ್ರದಲ್ಲಿ ಶಿವರಾಮ ರೈಯವರ ಛಾಪು ಮುಂದುವರಿದಿದೆ. ಆದ್ದರಿಂದಲೇ ಬಿಸಿಸಿಐಯಿಂದ ಇವರಿಗೆ 2011ರಲ್ಲಿ ಲೆವೆಲ್ ಬಿ ಕೋಚ್ ಸರ್ಟಿಫಿಕೇಶನ್ ಲಭಿಸಿರುವುದು ಸಹಜವೇ ಆಗಿದೆ.

ಹೀಗೆ, ಸರ್ವಿಸಸ್, ವಾಯುಪಡೆ, ಡಿಡಿಸಿಎ, ಪ್ರತಿಷ್ಠಿತ ಶಾಲೆಗಳು ಹಾಗೂ ಉನ್ನತ ಕ್ರಿಕೆಟ್ ಅಕಾಡೆಮಿಗಳಲ್ಲಿ ತರಬೇತಿ, ಮಾರ್ಗದರ್ಶನ ಮತ್ತು ಪ್ರತಿಭಾ ವಿಕಸನದಲ್ಲಿ 30 ವರ್ಷಗಳಿಗೂ ಅಧಿಕ ಅನುಭವ ಹೊಂದಿರುವ, ಶಿವರಾಮ ರೈಯವರು, ತಮ್ಮ ಸಾಧನೆಗಳೊಂದಿಗೆ ವ್ಯಾಪಕವಾಗಿ ಗೌರವಿಸಲ್ಪಟ್ಟ ಕ್ರಿಕೆಟ್ ತರಬೇತುದಾರ. ರಣಜಿ ಟ್ರೋಫಿ, ರಾಜ್ಯ ಮಟ್ಟದ ತಂಡಗಳು, ವಿಜಯ್ ಹಜಾರೆ ಟ್ರೋಫಿ, ಬಿಸಿಸಿಐ (BCCI), ಎಸ್‌ಜಿಎಫ್ಐ (SGFI) ಮತ್ತು ಮಹಿಳಾ ಕ್ರಿಕೆಟ್‌ನಲ್ಲಿ ಪ್ರತಿನಿಧಿಸಿರುವ ಉನ್ನತ ಮಟ್ಟದ ಕ್ರಿಕೆಟಿಗರನ್ನು ರೂಪಿಸಿ ಪ್ರಸಿದ್ಧಿ ಪಡೆದವರು. ಶಿಸ್ತುಬದ್ಧ ತರಬೇತಿ ವಿಧಾನಗಳು, ತಾಂತ್ರಿಕ ಶ್ರೇಷ್ಠತೆ ಮತ್ತು ದೀರ್ಘಕಾಲೀನ ಆಟಗಾರ ಅಭಿವೃದ್ಧಿಗೆ ಇವರು ಖ್ಯಾತರಾಗಿದ್ದಾರೆ.

ಶ್ರೀ ಶಿವರಾಮ ರೈಯವರು ದೆಹಲಿ ಕರ್ನಾಟಕ ಸಂಘ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ, ದೆಹಲಿ ತುಳುಕೂಟ, ಜನಕಪುರಿ ಕನ್ನಡ ಕೂಟದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಿದ್ದರೂ, ಅರ್ಜುನನ ಬಾಣದ ಗುರಿಯಂತೆ ತಮ್ಮ ವೃತ್ತಿಯನ್ನೇ ಬದುಕಾಗಿಸಿದ ಕ್ರೀಡಾಳು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಬೋರ್ಡ್ ಮೆಂಬರ್ ಸ್ಥಾನಕ್ಕೆ ಸ್ಪರ್ಧಿಸುವಂತೆ ಒತ್ತಾಯಿಸಿದಾಗ ಒಲ್ಲದ ಮನಸ್ಸಿನಿಂದ ಒಪ್ಪಿದ ಶಿವರಾಮ ರೈಯವರು ಸ್ಪರ್ಧಿಸಿ ವಿಜಯಿಯಾದರು. ಒಬ್ಬ ಬೋರ್ಡ್ ಮೆಂಬರ್ ಆಗಿ ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಶಾಲೆಗೆ ಆಗಿನ್ನೂ ಸೇರಿದ್ದ ಡಾರೆಲ್ ಜೆಸ್ಸಿಕಾ ಮತ್ತು ಶಿವರಾಮ ಮಣಿಯಾಣಿ ಅವರಿಗೆ ಆಟೋಟಗಳಿಗೆ ಸಂಬಂಧಿಸಿದಂತೆ ಕೆಲವೊಂದು ಸಲಹೆಗಳನ್ನು ನೀಡಿದ್ದರು. ಸಂಪನ್ಮೂಲ ವ್ಯಕ್ತಿಗಳಿಂದ ಸಂಸ್ಥೆಗೆ ಪ್ರಯೋಜನ ಎಂಬುದಕ್ಕೆ ಶಿವರಾಮ ರೈಯವರು ನಿದರ್ಶನ. ದೆಹಲಿ ಕರ್ನಾಟಕ ಸಂಘದ ಕ್ರೀಡೋತ್ಸವಗಳ ಉಪಸಮಿತಿಗಳಲ್ಲಿ ಸದಸ್ಯರಾಗಿಯೂ ಈ ಹಿಂದೆ ಅವರು ಕೆಲಸ ಮಾಡಿದ್ದರು. ಒಳ್ಳೆಯ ಕೆಲಸಗಳನ್ನು ಮೆಚ್ಚುವ, ಸರಿಯಲ್ಲವೆಂದು ತೋರಿದ ವಿಷಯಗಳ ಕುರಿತು ನಿರ್ದಾಕ್ಷಿಣ್ಯವಾಗಿ ಮನ ಬಿಚ್ಚುವ ಅವರ ಗುಣವನ್ನು ಬಹಳವಾಗಿ ಮೆಚ್ಚಿಕೊಂಡಿದ್ದೇನೆ.

ಉತ್ತರ ಪ್ರದೇಶದ ಅಲೀಗಢದಲ್ಲಿ ಇನ್ನೂ ಉದ್ಯೋಗದಲ್ಲಿದ್ದರೂ ಅಪರೂಪವಾಗಿ ಸಂಘದ ವಿಶೇಷ ಕಾರ್ಯಕ್ರಮಗಳಲ್ಲಿ ಶಿವರಾಮ ರೈಯವರು, ಸದಾ ನಗುಮೊಗದ ಅವರ ಧರ್ಮಪತ್ನಿ ಮೋಹಿನಿ ಅಕ್ಕಾ, ಪುತ್ರಿ ವಂದನಾ, ಪುತ್ರ ಅಭಿಷೇಕ್ ಜೊತೆ ಕಾಣಸಿಗುತ್ತಾರೆ. ಅವರ ಅಳಿಯ ಶ್ರೀ ಪ್ರಕಾಶ್ ಶೆಟ್ಟಿ ಉಳೆಪಾಡಿಯಂತೂ ದೆಹಲಿಯ ವಿಶಿಷ್ಟ ಪ್ರತಿಭೆ.

ಸತ್ವಗುಣ ಸಂಪನ್ನರಾದ, ಶ್ರೀ ಶಿವರಾಮ ರೈಯವರು ದೆಹಲಿಯ ವಿಶಿಷ್ಟ ಕನ್ನಡಿಗ ಎಂಬುದಂತೂ ನಿರ್ವಿವಾದ. ತುಳುನಾಡಿನವರು ಎಂಬುದು ನಮ್ಮ ಹೆಮ್ಮೆ. ❑

ಲೇಖಕರು:

***ಸರವು ಕೃಷ್ಣ ಭಟ್***



# ದೆಹಲಿ ಕರ್ನಾಟಕ ಸಂಘದ

# ಆಹಾರೋತ್ಸವ-2026



# ಸಂಘದಲ್ಲಿ ಯಶಸ್ವಿ 'ಆಹಾರೋತ್ಸವ'-ದೆಹಲಿ ಕನ್ನಡಿಗರ ಬಹು ಜನಪ್ರಿಯ ಕೈರುಚಿ ಆಹಾರ ಮೇಳದಲ್ಲಿ ಕರ್ನಾಟಕ ಶೈಲಿಯ ತಿಂಡಿ ತಿನಿಸುಗಳ ರಸದೌತಣ



ದೆಹಲಿ ಕನ್ನಡಿಗರು ಪ್ರತಿ ವರ್ಷ ಬಹಳ ಕಾತುರದಿಂದ ಎದುರು ನೋಡುವ ಒಂದು ವಿಶಿಷ್ಟ ಕಾರ್ಯಕ್ರಮ ಕಳೆದ 9 ವರ್ಷಗಳಿಂದ ಆಯೋಜನೆಗೊಂಡು ಬಹಳ ಜನಪ್ರಿಯತೆ ಪಡೆದಿರುವ ಕೈರುಚಿ–ಆಹಾರ ಮೇಳ. ಅದರಂತೆ 10ನೇ ವರ್ಷದಲ್ಲಿ ದಿನಾಂಕ 11.01.2026 ರಂದು ಆಹಾರೋತ್ಸವ ಶೀರ್ಷಿಕೆಯಲ್ಲಿ ಈ ವರ್ಷದ ಆಹಾರ ಮೇಳವನ್ನು ಸದಸ್ಯರಿಗಾಗಿ ಆಯೋಜಿಸಲಾಗಿತ್ತು. ಈ ಸಲ ದಾಖಲೆ 31 ಆಹಾರ ಮಳಿಗೆಗಳನ್ನು ಹಾಕಲಾಗಿತ್ತು. ದೆಹಲಿ ಕನ್ನಡತಿಯರು ತಮ್ಮ ತಮ್ಮ ಮನೆಗಳಲ್ಲಿ ತಯಾರಿಸಿ ಕೊಂಡು ತಂದ ಕರ್ನಾಟಕದ ವಿವಿಧ ಜಿಲ್ಲೆಗಳ ಆಹಾರ ಪ್ರಕಾರಗಳ ತಿಂಡಿ ತಿನಿಸುಗಳನ್ನು ದೆಹಲಿಗರಿಗೆ ತಮ್ಮ ತಮ್ಮ ಆಹಾರ ಮಳಿಗೆಗಳಲ್ಲಿ ನೀಡಲು ಬಹಳ ಉತ್ಸುಕರಾಗಿ ಬಂದಿದ್ದರು. ಸಂಘದ ಪರವಾಗಿ ಪ್ಲೇಟ್, ಕಪ್, ಟಿಶ್ಯೂ ಪೇಪರ್, ಸ್ಪೂನ್ ಮುಂತಾದವುಗಳನ್ನು ಮತ್ತು ಆಹಾರ ಬಿಸಿ ಮಾಡುವ ವ್ಯವಸ್ಥೆಯನ್ನು ಉಚಿತವಾಗಿ ನೀಡಲಾಗಿತ್ತು. ಒಟ್ಟಾರೆ 31 (ಒಂದು ಕಿಡ್ಸ್ ಸ್ಪೆಷಲ್, 12 ಸಸ್ಯಾಹಾರ ಮತ್ತು 18 ನಾನ್‌ವೆಜ್) ಆಹಾರ ಮಳಿಗೆಗಳಲ್ಲಿ ಪಡ್ಡು (ಆಪೆ) ಮುದ್ದೆ, ವಡೆ, ದೋಸೆ, ರೋಟಿ, ಇಡ್ಲಿ, ಬೋಂಡಾ, ಚಿತ್ರಾನ್ನ, ವಿವಿಧ ಬಗೆಯ ಸ್ವೀಟ್ಸ್, ಹೋಳಿಗೆ, ಕಾಫಿ, ಟೀ, ಜ್ಯೂಸ್, ಮಿಲ್ಕ್‌ಶೇಕ್, ಚುರುಮುರಿ ಮುಂತಾದ ಸಸ್ಯಾಹಾರಿ ತಿನಿಸುಗಳು / ಪಾನೀಯಗಳು ಹಾಗು ಮೊಟ್ಟೆ, ಚಿಕನ್, ಮಟನ್, ಮೀನುಗಳಿಂದ ತಯಾರಿಸಿದ ಬಗೆ ಬಗೆಯ ನಾನ್‌ವೆಜ್ ಭಕ್ಷ್ಯಭೋಜ್ಯಗಳನ್ನು ಮುಂಗಡವಾಗಿ ಹಣ ಪಾವತಿ ಮಾಡಿ ಕೂಪನ್ ಖರೀದಿಸಿ ಆಯಾ ಮಳಿಗೆಗಳಲ್ಲಿ ವಿನಿಮಯ ಮಾಡಿಕೊಳ್ಳುವ ಮೂಲಕ ತಮಗೆ ಬೇಕಾದ ಆಹಾರ ಪದಾರ್ಥಗಳನ್ನು ಪಡೆದುಕೊಳ್ಳುವ ಅವಕಾಶವನ್ನು ಎಲ್ಲರಿಗೂ ಕಲ್ಪಿಸಲಾಗಿತ್ತು.

**ಆಹಾರೋತ್ಸವದಲ್ಲಿ ಆಯೋಜಿಸಲ್ಪಟ್ಟ ವಿವಿಧ ಆಹಾರ ಮಳಿಗೆಗಳು :**

1. ಶ್ರೀಮತಿ ಸುಮಿತಾ ಮುರಗೋಡ (ಕಿಡ್ಸ್ ಸ್ಪೆಷಲ್)
2. ಶ್ರೀಮತಿ ಶ್ರುತಿ ರಮೇಶ್ (ಚಿತ್ರದುರ್ಗ–ಸಸ್ಯಾಹಾರ)
3. ಶ್ರೀಮತಿ ರೂಪಶ್ರೀ ಎಸ್. (ಸಸ್ಯಾಹಾರ)
4. ಶ್ರೀಮತಿ ಸುಜಾತ ನಿಂಬಾಳ (ಕಲಬುರಗಿ ಸ್ಪೆಷಲ್–ಸಸ್ಯಾಹಾರ)
5. ಶ್ರೀಮತಿ ಪ್ರೇರಣಾ ವೆಂಕಟೇಶ್ (ಸಸ್ಯಾಹಾರ)
6. ಶ್ರೀಮತಿ ಲಕ್ಷ್ಮೀ ಕಿಣಿ (ಮಂಗಳೂರು ಕೊಂಕಣಿ ಸ್ಪೆಷಲ್–ಸಸ್ಯಾಹಾರ)
7. ಶ್ರೀಮತಿ ಗಾಯತ್ರಿ ಬಾಪ್ರಿ (ಸಸ್ಯಾಹಾರ)
8. ಶ್ರೀಮತಿ ಸುಜಾತ ನಾಯಕ್ (ಸಸ್ಯಾಹಾರ)
9. ಶ್ರೀಮತಿ ಉಷಾ ಬಿರಾದಾರ (ಕಲ್ಯಾಣ ಕರ್ನಾಟಕ ಸ್ಪೆಷಲ್–ಸಸ್ಯಾಹಾರ)
10. ಶ್ರೀಮತಿ ಸುಮಾ ಜ್ಯೋತೆಪ್ಪಾ ಹಾಗೂ ಶ್ರೀಮತಿ ಶಿವಾನಂದ ಗಾಳೆ (ಕಲ್ಯಾಣ ಕರ್ನಾಟಕ ಶೈಲಿ–ಸಸ್ಯಾಹಾರ)
11. ಶ್ರೀಮತಿ ಶಿಲ್ಪಾ ಮಂಜಪ್ಪ ಕಿತ್ತೂರು (ಸಸ್ಯಾಹಾರ)
12. ಶ್ರೀಮತಿ ಮಾಯಾ ರಾವ್ (ಸಸ್ಯಾಹಾರ)
13. ಶ್ರೀಮತಿ ಪಾರ್ವತಿ ಉಭಾಳೆ (ಸಸ್ಯಾಹಾರ)
14. ಶ್ರೀಮತಿ ಭಾರತಿ ತಿಮ್ಮಪ್ಪ (ಚಿಕ್ಕಮಗಳೂರು–ಮಲೆನಾಡು ಶೈಲಿ–ನಾನ್‌ವೆಜ್)
15. ಶ್ರೀಮತಿ ಆಶಾಲತಾ ಎಂ. (ಮಂಡ್ಯ ಸ್ಪೆಷಲ್–ನಾನ್‌ವೆಜ್)
16. ಶ್ರೀಮತಿ ಪ್ರಿಯದರ್ಶಿನಿ ಮರಿಬಸಪ್ಪ (ಗಣಿನಾಡು ಬಳ್ಳಾರಿ ಸ್ಪೆಷಲ್–ನಾನ್‌ವೆಜ್)
17. ಶ್ರೀಮತಿ ಕವಿತಾ ಲಕ್ಷ್ಮಣ ಕಟ್ಟಿಮನಿ (ವಿಜಯಪುರ ಸ್ಪೆಷಲ್–ನಾನ್‌ವೆಜ್)
18. ಶ್ರೀಮತಿ ಸುನಂದಾ ಸಾಬುದರ್ಗಾ (ವಿಜಯಪುರ ಸ್ಪೆಷಲ್–ನಾನ್‌ವೆಜ್)
19. ಶ್ರೀಮತಿ ಶಾಂತಾ ಶ್ರೀನಿವಾಸ್ (ನಾನ್‌ವೆಜ್)
20. ಶ್ರೀಮತಿ ಶ್ರೀಲಕ್ಷ್ಮೀ ಚಂದ್ರಶೇಖರ ಜೋಳದರಾಶಿ (ನಾನ್‌ವೆಜ್)
21. ಶ್ರೀಮತಿ ಸುನಿತಾ ತಲ್ವಾರ್ (ನಾನ್‌ವೆಜ್)
22. ಶ್ರೀ ನವೀನ್ ಶೆಣೈ ಮತ್ತು ತಂಡ (ಕರಾವಳಿ ಸ್ಪೆಷಲ್–ನಾನ್‌ವೆಜ್)
23. ಶ್ರೀಮತಿ ಲಿಖಿತಾಶ್ರೀ ವೈ ಕೊಪ್ಪದ (ನಾನ್‌ವೆಜ್)
24. ಶ್ರೀಮತಿ ಪುಷ್ಪ ನವೀನ್ ಕುಮಾರ್ (ನಾನ್‌ವೆಜ್)
25. ಶ್ರೀಮತಿ ಶಿಲ್ಪ ಪುರುಷೋತ್ತಮ್ (ಕೋಲಾರ ಸ್ಪೆಷಲ್–ನಾನ್‌ವೆಜ್)
26. ಶ್ರೀಮತಿ ವಿದ್ಯಾ ಕಾರ್ತಿಕ್ (ನಾನ್‌ವೆಜ್)
27. ಶ್ರೀ ನಟರಾಜ್ ಕರ್ನಾಟಕ ಭವನ (ನಾನ್‌ವೆಜ್)
28. ಶ್ರೀ ಹರಿಚರಣ್ ಕಾಮತ್ (ನಾನ್‌ವೆಜ್)
29. ಶ್ರೀ ಯು.ಜಿ. ಸುಧೀರ್ ಕುಮಾರ್ (ಕುಂದಾಪುರ ಸ್ಪೆಷಲ್–ಮೀನೂಟ)
30. ಶ್ರೀ ಮಾಧವ ಹಾಗೂ ಹರಿಪ್ರಿಯಾ ತಂಡ (ಕುಂದಾಪುರ ಸ್ಪೆಷಲ್–ನಾನ್‌ವೆಜ್)
31. ಶ್ರೀಮತಿ ಭಾಗ್ಯಶ್ರೀ ರವಿ (ನಾನ್‌ವೆಜ್)

ಬೆಳಿಗ್ಗೆ 1.00 ಗಂಟೆಗೆ ಮುಖ್ಯ ಅತಿಥಿಗಳಾದ ನವದೆಹಲಿ ರಾಜ್ಯಸಭಾ ಸೆಕ್ರೆಟರಿಯೇಟ್‌ನಲ್ಲಿ ಹೆಚ್ಚುವರಿ ಕಾರ್ಯದರ್ಶಿಗಳಾದ ಡಾ. ಕೆ.ಎಸ್. ಸೋಮಶೇಖರ್ ಅವರು ಕೇಕ್ ಕಟ್ ಮಾಡುವ ಮೂಲಕ ಕಾರ್ಯಕ್ರಮದ ಉದ್ಘಾಟನೆ ಮಾಡಿದರು. ಆ ಸಂದರ್ಭ ಅವರು ಮಾತನಾಡಿ ದೆಹಲಿಯಲ್ಲಿ ಇಂತಹ ವಿಶೇಷ ಕಾರ್ಯಕ್ರಮಕ್ಕೆ ತಾವು ಭಾಗಿಯಾಗಿರುವುದು ಹರ್ಷ ತಂದಿದೆ. ಇದನ್ನು ಆಯೋಜಿಸಿದ ಸಂಘದ ಅಧ್ಯಕ್ಷರು ಹಾಗು ಪದಾಧಿಕಾರಿಗಳಿಗೆ ಮತ್ತು ಆಹಾರ ಮಳಿಗೆಯಲ್ಲಿ ಭಾಗವಹಿಸುತ್ತಿರುವ ಎಲ್ಲರಿಗೂ ಹಾಗು ಅಪಾರ ಸಂಖ್ಯೆಯಲ್ಲಿ ಈ ಆಹಾರೋತ್ಸವದಲ್ಲಿ ಸೇರಿ ಪಾಲ್ಗೊಳ್ಳುತ್ತಿರುವ ದೆಹಲಿ ಕನ್ನಡಿಗರಿಗೆ ಅಭಿನಂದನೆಗಳು, ತಮ್ಮನ್ನು ಆಹಾರೋತ್ಸವಕ್ಕೆ ಆಹ್ವಾನಿಸಿದ್ದಕ್ಕಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದರು.

ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ

ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ ಮುಖ್ಯ ಅತಿಥಿಗಳಿಗೆ, ವಿಶೇಷವಾಗಿ ಆಹಾರ ಮಳಿಗೆ ಹಾಕಿರುವ ಸಂಘದ ಸದಸ್ಯರಿಗೆ ಕುಟುಂಬದವರಿಗೆ ಮತ್ತು ಆಗಮಿಸಿರುವ ಎಲ್ಲರಿಗೂ ಧನ್ಯವಾದ ಸಲ್ಲಿಸಿದರು. ನಂತರ ಮುಖ್ಯ ಅತಿಥಿಗಳಿಗೆ ಹೂಗುಚ್ಛ ನೀಡಿ ಗೌರವ ಅಭಿನಂದನೆ ನೀಡಲಾಯಿತು. ತರುವಾಯು ಸಂಘದ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ ಮತ್ತು ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳ ಜೊತೆ ಮುಖ್ಯ ಅತಿಥಿಗಳು ಪ್ರತಿಯೊಂದು ಮಳಿಗೆಗಳಿಗೆ ಭೇಟಿ ನೀಡಿ ವಿವಿಧ ತಿಂಡಿ ತಿನಿಸುಗಳ ರುಚಿಯನ್ನು ಸವಿದರು. ಸುಮಾರು 2500 ಕ್ಕೂ ಹೆಚ್ಚು ದೆಹಲಿ ಕನ್ನಡಿಗರು ಮತ್ತು ಸ್ಥಳೀಯರು ಭಾಗಿಯಾದ ಈ ಬಾರಿಯ ಆಹಾರೋತ್ಸವ ಬೆಳಗ್ಗಿನಿಂದ ಮಧ್ಯಾಹ್ನ ನಾಲ್ಕು ಗಂಟೆಯವರೆಗೆ ನಡೆದು ಅತ್ಯಂತ ಯಶಸ್ವಿಯಾಗಿ ಸಂಪನ್ನಗೊಂಡಿತು. ❑

***ಅಭಿಮತ ವರದಿ***












ದೆಹಲಿ ಕರ್ನಾಟಕ ಸಂಘದ
ನೃತ್ಯೋತ್ಸವ-2025

## ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಸಂಘದಲ್ಲಿ

# 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ಪ್ರದಾನ ಮತ್ತು 'ನೃತ್ಯೋತ್ಸವ' ಸಂಭ್ರಮ






ನವೆಂಬರ್ 1, 2025ರಂದು ಬೆಳಿಗ್ಗೆ ಸಂಘದ ಆವರಣದಲ್ಲಿ ಧ್ವಜಾರೋಹಣ ಮಾಡುವುದರ ಮೂಲಕ ನವೆಂಬರ್ ತಿಂಗಳ ಪ್ರತಿ ವಾರಾಂತ್ಯದಂದು 70ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ನಡೆಯುವ ವಿವಿಧ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗಿತ್ತು. ಈ ರಾಜ್ಯೋತ್ಸವ ಆಚರಣೆಯ ಕೊನೆಯ ಕಾರ್ಯಕ್ರಮವಾದ 'ನೃತ್ಯೋತ್ಸವ' ಮತ್ತು 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ಪ್ರದಾನ ಸಮಾರಂಭವನ್ನು ದಿನಾಂಕ 30ನೇ ನವೆಂಬರ್ 2025ರಂದು ಸಂಘದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಆರಂಭದಲ್ಲಿ 'ನೃತ್ಯೋತ್ಸವ'ದಲ್ಲಿ ಭಾಗವಹಿಸುತ್ತಿರುವ ಸುಮಾರು 100ಕ್ಕೂ ಹೆಚ್ಚು ಸ್ಥಳೀಯರು ಕಲಾವಿದರು ಜ್ಯೋತಿ ಬೆಳಗಿಸುವ ಮೂಲಕ ನೃತ್ಯೋತ್ಸವ ಕಾರ್ಯಕ್ರಮ ಆರಂಭಗೊಂಡಿತು. ದೆಹಲಿ ಕನ್ನಡತಿಯರ ತಂಡದ ನೃತ್ಯದೊಂದಿಗೆ ಪ್ರಾರಂಭವಾದ ಈ ನೃತ್ಯೋತ್ಸವದಲ್ಲಿ ದೆಹಲಿ ಕರುನಾಡ ಚಿಣ್ಣರ ಕೂಟ, ಜನಕಪುರಿ ಮಹಿಳಾ ಮಂಡಳಿ, ದೆಹಲಿ ಕನ್ನಡ ಕಲಾವಿದರ ಬಳಗ, ಗುರುಗಾಂವ್ ಕನ್ನಡ ಸಂಘ, ಡೆಲ್ಲಿ ಫ್ರೆಂಡ್ಸ್, ಗುರುಗ್ರಾಮ ತಂಡ, ದೆಹಲಿ ಕರುನಾಡ ಬಾಲೆಯವರ ಬಳಗ, ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆ, ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ತಂಡ, ದೆಹಲಿ ಕನ್ನಡ ಶಾಲೆಯ ಅಧ್ಯಾಪಕರ ತಂಡ ಮುಂತಾದ ಈ ಎಲ್ಲಾ ತಂಡಗಳ ಕಲಾವಿದರು ಸುಮಾರು ಒಂದು ಗಂಟೆಗೂ ಹೆಚ್ಚು ಕಾಲ ನೃತ್ಯ ಕಾರ್ಯಕ್ರಮವನ್ನು ನೀಡಿ ಸಭಿಕರನ್ನು ರಂಜಿಸಿದರು. ಈ ನೃತ್ಯೋತ್ಸವ ಕಾರ್ಯಕ್ರಮವನ್ನು ಸಂಘದ ಖಜಾಂಚಿ ಶ್ರೀಮತಿ ಆಶಾಲತಾ ಎಂ., ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಶ್ರೀಮತಿ ಮಾಲಿನಿ ಪ್ರಹ್ಲಾದ್, ಶ್ರೀಮತಿ ಜಯಶ್ರೀ ಬಸವರಾಜು, ಶ್ರೀ ನವೀನ್ ಕುಮಾರ್ ವಿ., ಶ್ರೀ ಅರುಣ್ ಕುಮಾರ್ ಸಿ.ಎಸ್., ಮತ್ತು ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್. ಅವರು ಪ್ರತೀ ನೃತ್ಯದ ಹಿಂದಿನ ಭಾವಾರ್ಥವನ್ನು ತಿಳಿಸುತ್ತಾ ಅಚ್ಚುಕಟ್ಟಾಗಿ ನಡೆಸಿಕೊಟ್ಟರು.

ನೃತ್ಯೋತ್ಸವ ಕಾರ್ಯಕ್ರಮದ ನಂತರ ಸಭಾ ಕಾರ್ಯಕ್ರಮವು ಸ್ಥಳೀಯ ಮಹಿಳೆಯರು ನಾಡಗೀತೆ ಹಾಡುವುದರೊಂದಿಗೆ ಪ್ರಾರಂಭವಾಯಿತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕೇಂದ್ರ ಜಲಶಕ್ತಿ ಹಾಗೂ ರೈಲ್ವೇ ಖಾತೆಯ ರಾಜ್ಯ ಸಚಿವರಾದ ಶ್ರೀ ವಿ. ಸೋಮಣ್ಣ ಹಾಗೂ ಈ ವರ್ಷದ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿಗೆ ಭಾಜನರಾದ ಶ್ರೀ ಅನಂತರಾಮ ಅರಳಿ, ಶ್ರೀಮತಿ ರೇಣುಕಾ ನಿಡಗುಂದಿ, ಶ್ರೀಮತಿ ಮೀತಾ ಮಿಶ್ರಾ ಅವರೊಂದಿಗೆ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಹಾಗೂ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಅವರನ್ನು ನಿರೂಪಕರಾದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಕೆ.ಎಸ್. ಮೂರ್ತಿ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡುತ್ತಾ ವೇದಿಕೆಗೆ ಬರಮಾಡಿಕೊಂಡರು. ನಂತರ ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ಪಿ.ರಾವ್ ಅವರು ಮೊದಲಿಗೆ ಸಂಸ್ಕೃತ ಶ್ಲೋಕವನ್ನು ಅರ್ಥೈಸುತ್ತಾ–ಶಬ್ಧ ಸಂಪತ್ತಿನಿಂದ, ಸಂಸ್ಕೃತಿಯ ಸಮೃದ್ಧಿಯಿಂದ ನಮ್ಮನ್ನು ಕಾಪಾಡುತ್ತಿರುವ ಕನ್ನಡ ಭಾರತೀ ತಾಯಿ ಭುವನೇಶ್ವರಿ ನಮಗೆಲ್ಲರಿಗೂ ಮಂಗಳಾನುಗ್ರಹವನ್ನು ನೀಡಲಿ, ಪವಿತ್ರವಾದಂತಹ ಕನ್ನಡ ನಾಡಿನವರಾದ ನಾವೆಲ್ಲರೂ ಇಂದು ತಾಯಿ ಭುವನೇಶ್ವರಿಯ ಕೃಪೆಯಿಂದ ಕರ್ನಾಟಕ ಸಂಘವೆಂಬ ಈ ದೇಗುಲದಲ್ಲಿ ರಾಜ್ಯೋತ್ಸವದ ಸಂಭ್ರಮಾಚರಣೆಗೆ ಸೇರಿದ್ದೇವೆ ಎಂದು ಹೇಳಿ ಜಗನ್ಮಾತೆಗೆ ವಂದಿಸುತ್ತಾ ತಮ್ಮ ಸ್ವಾಗತ ನುಡಿಯನ್ನು ಪ್ರಾರಂಭಿಸಿದರು. ಊರಿಗೆ ಅರಸನಾದರೂ ತಾಯಿಗೆ ಮಗ ಎಂಬ ನಾಣ್ಣುಡಿಯಂತೆ ದೇಶಕ್ಕೆ ಸಚಿವರಾದರೂ ನಮ್ಮ ಕನ್ನಡಿಗರ ಕರೆಗೆ ಸದಾ ಸ್ಪಂದಿಸುವಂತಹ ಮಹನೀಯರು, ಕಾಯಕಯೋಗಿ ಹಾಗೂ ವಚನಗಳನ್ನು ಅಕ್ಷರಶಃ ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಪಾಲಿಸುತ್ತಿರುವ ಕೇಂದ್ರ ಸಚಿವರು, ತುಮಕೂರು ಲೋಕಸಭಾ ಕ್ಷೇತ್ರದ ಜನಪ್ರಿಯ ಸಂಸದರು ಮತ್ತು ದೆಹಲಿ ಕನ್ನಡಿಗರನ್ನು ಸಂಘಟಿಸುವಂತಹ ಮಹತ್ತರವಾದ ಕಾರ್ಯವನ್ನು ಮಾಡುತ್ತಿರುವ ಶ್ರೀ ವಿ. ಸೋಮಣ್ಣನವರನ್ನು ಆತ್ಮೀಯವಾಗಿ ಸ್ವಾಗತಿಸಿದರು.

ವೃತ್ತಿ ಜೀವನಕ್ಕೆ ಆಧಾರವಾದರೆ, ಪ್ರವೃತ್ತಿ ಜೀವನಕ್ಕೆ ಆದರ್ಶ, ವೃತ್ತಿ ಜೀವನಕ್ಕೆ ಅಗತ್ಯವಾದರೆ, ಪ್ರವೃತ್ತಿ ಬದುಕಿನ ಆನಂದ, ಈ ಎರಡರ ನಡುವೆ ಸಮತೋಲನವನ್ನು ಕಾಪಾಡಿಕೊಂಡು ಬದುಕಲು ಅನಿವಾರ್ಯವಾದಂತಹ ವೃತ್ತಿಯೊಂದಿಗೆ ಈ ದೂರದ ದೆಹಲಿಯಲ್ಲಿ ತಮ್ಮ ಪ್ರವೃತ್ತಿಯ ಮೂಲಕ ಕನ್ನಡಿಗರ ಮನೆ ಮಾತಾಗಿರುವಂತಹ ಮೂರು ವಿಶಿಷ್ಟ ಕನ್ನಡಿಗರು ಇಂದು ಈ ವೇದಿಕೆಯ ಮೇಲೆ ಆಸೀನರಾಗಿದ್ದಾರೆ ಎನ್ನುತ್ತಾ, ಅವರಲ್ಲಿ ಭಾರತೀಯ ರಕ್ಷಣಾ ಸಚಿವಾಲಯದ ಏಜಿ ಬ್ರಾಂಚ್‌ನ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿರುವ ಹಾಗೂ ದೆಹಲಿ ಕರ್ನಾಟಕ ಸಂಘದ ಕಾವಲು ಸಮಿತಿಯ ಸದಸ್ಯರಾಗಿ, ಸಂಘದ ಚುನಾವಣೆಯ ಅಧಿಕಾರಿಯಾಗಿ, ಪ್ರಸ್ತುತ ದೆಹಲಿ ಒಕ್ಕಲಿಗ ಗೌಡ ಸಂಘದ ಅಧ್ಯಕ್ಷರಾಗಿರುವ ಶ್ರೀ ಅನಂತರಾಮ ಅರಳಿಯವರನ್ನು ಸ್ವಾಗತಿಸಿದರು. ನಂತರ, ಕವಯಿತ್ರಿ, ಬರಹಗಾರ್ತಿ, ಹಾಡುಗಾರ್ತಿ, ಕರ್ನಾಟಕ ಸಂಘದ ಜಂಟೀ ಕಾರ್ಯದರ್ಶಿಯಾಗಿ, ಸಂಘದ ಮುಖಪತ್ರಿಕೆ ಅಭಿಮತದ ಸಂಪಾದಕ





ಮಂಡಳಿಯ ಸದಸ್ಯರಾಗಿ, ಸಾಹಿತ್ಯ ಸಮಿತಿಯ ಸಂಚಾಲಕರಾಗಿ ಕಾರ್ಯನಿರ್ವಹಿಸಿರುವ ಶ್ರೀಮತಿ ರೇಣುಕಾ ನಿಡಗುಂದಿಯವರನ್ನು ಸ್ವಾಗತಿಸಿದರು. ಇನ್ನೋರ್ವ ವಿಶಿಷ್ಟ ಕನ್ನಡತಿ ಶ್ರೀಮತಿ ಮೀತಾ ಮಿಶ್ರ ಅವರನ್ನು ಸ್ವಾಗತಿಸುತ್ತಾ, ಇವರು ದೆಹಲಿಯ ಎಲ್ಲ ಕನ್ನಡಿಗರಿಗೆ ಚಿರಪರಿಚಿತರು ಹಾಗೂ ಜನಪ್ರಿಯರು, ದೆಹಲಿಯ ಎನ್.ಎಸ್.ಡಿಯ ಅಡ್ಮಿನಿಸ್ಟ್ರೇಷನ್ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ, ಇವರು ಸಂಘದ ಎಲ್ಲ ಚಟುವಟಿಕೆಗಳನ್ನು ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿರುವುದಲ್ಲದೇ ಇವರ ನಿರ್ದೇಶನದಲ್ಲಿ ಎರಡು ನಾಟಕಗಳು ಸಂಘದ ವೇದಿಕೆಯಲ್ಲಿ ಪ್ರಸ್ತುತಗೊಂಡಿವೆ ಎನ್ನುತ್ತಾ ಸಭಿಕರೆಲ್ಲರ ಪರವಾಗಿ ಆಪ್ಯಾಯಮಾನವಾದ ಸ್ವಾಗತವನ್ನು ಕೋರಿದರು. ಅನಂತರ ಯಾವುದೇ ಒಂದು ಕಾರ್ಯ ನಡೆಯಬೇಕಾದರೆ ಮಾಡುವವ ಮತ್ತು ಮಾಡಿಸುವವ ಹಾಗೆಯೇ ಪ್ರೇರಕ ಅಂದರೆ ಈ ಕಾರ್ಯಕ್ರಮವನ್ನು ನೋಡಿ ಕಾರ್ಯಕ್ರಮ ಚೆನ್ನಾಗಿದೆ ಎಂದು ನಮಗೆ ಉತ್ತೇಜನ ನೀಡುವಂತಹ ಪ್ರೇಕ್ಷಕ ಬಂಧುಗಳಿಗೆ ಸ್ವಾಗತವನ್ನು ಕೋರಿದರು.

ದೆಹಲಿ ಕರ್ನಾಟಕ ಸಂಘದಲ್ಲಿ ಇಷ್ಟೊಂದು ಒಳ್ಳೆಯ ಕಾರ್ಯಕ್ರಮಗಳು ನಡೆಯಬೇಕಿದ್ದರೆ ಕಾರ್ಯಕಾರಿ ಸಮಿತಿಯ ಜೊತೆಗೆ ಅದರ ರೂವಾರಿಗಳು ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರು ಎಂದು ಪ್ರಶಂಸನೀಯ ಮಾತುಗಳನ್ನಾಡುತ್ತಾ ಅವರಿಬ್ಬರಿಗೂ ಸ್ವಾಗತವನ್ನು ಕೋರಿದರು. ಹಾಗೆಯೇ ನೃತ್ಯೋತ್ಸವದಲ್ಲಿ ಕಾರ್ಯಕ್ರಮವನ್ನು ನೀಡಿದ ನೀಡುತ್ತಿರುವ ಎಲ್ಲ ಕಲಾವಿದರಿಗೂ ಆತ್ಮೀಯವಾದ ಸ್ವಾಗತವನ್ನು ಕೋರಿದರು. ರಾಜ್ಯೋತ್ಸವದ ಇಂದಿನ ಸಮಾರಂಭದಲ್ಲಿ ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ಸ್ವೀಕರಿಸಬೇಕಿದ್ದ ಶ್ರೀ ಡಿವಿಎಸ್. ಮೂರ್ತಿ ಮತ್ತು ಶ್ರೀ ಮನೋಜ್ ಕುಮಾರ್ ಅವರುಗಳು ಕಾರಣಾಂತರಗಳಿಂದ ಈ ಸಮಾರಂಭದಲ್ಲಿ ಉಪಸ್ಥಿತರಿಲ್ಲ ಎಂಬುದನ್ನು ತಿಳಿಸುತ್ತಾ ಅವರಿಗೂ ಎಲ್ಲರ ಪರವಾಗಿ ಸ್ವಾಗತವನ್ನು ಕೋರಿದರು. ಶ್ರೀಮತಿ ಶುಭಾದೇವಿಪ್ರಸಾದ್ ಅವರ 'ಶುಭಂ ಕರೋತಿ ದೀಪಂ' ಶ್ಲೋಕದೊಂದಿಗೆ ಸಾಂಕೇತಿಕವಾಗಿ ಮುಖ್ಯ ಅತಿಥಿಗಳು ಮತ್ತು ವಿಶಿಷ್ಟ ಕನ್ನಡಿಗರು ಕಾರ್ಯಕ್ರಮದ ಉದ್ಘಾಟನೆಯನ್ನು ದೀಪ ಪ್ರಜ್ವಲಿಸುವುದರ ಮೂಲಕ ಮಾಡಿದರು.

ನಂತರ 2025 ನೇ ಸಾಲಿನ ಸಂಘದ 'ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು' ಮುಖ್ಯ ಅತಿಥಿಗಳಿಂದ ವೇದಿಕೆ ಮೇಲೆ ಉಪಸ್ಥಿತರಿದ್ದ ಮೂರೂ ಸಾಧಕರಿಗೆ ಪ್ರದಾನ ಮಾಡಿ, ಗೌರವಿಸಿ ಅಭಿನಂದಿಸಲಾಯಿತು. ಪ್ರಶಸ್ತಿಗೆ ಭಾಜನರಾದ ಶ್ರೀ ಅನಂತರಾಮ ಅರಳಿ, ಶ್ರೀಮತಿ ರೇಣುಕಾ ನಿಡಗುಂದಿ ಹಾಗೂ ಶ್ರೀಮತಿ ಮೀತಾ ಮಿಶ್ರ ಅವರುಗಳ ಪರಿಚಯವನ್ನು ಕ್ರಮವಾಗಿ ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಶ್ರೀ ಪ್ರಭಾಕರ ಮಡ್ಡಿತೋಟ, ಶ್ರೀಮತಿ ಮಾಲಿನಿ ಪ್ರಹ್ಲಾದ್ ಹಾಗೂ ಶ್ರೀಮತಿ ಶುಭಾ ದೇವಿಪ್ರಸಾದ್ ಅವರು ಮಾಡಿಕೊಟ್ಟರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಶ್ರೀ ಅನಂತರಾಮ ಅರಳಿ ಅವರು ತಾವು ಮೊದಲು ದೆಹಲಿಗೆ ಬಂದಾಗ ಇಲ್ಲಿನ ಭಾಷೆಯಿಂದಾಗಿ ತಮಗಾದ ಕಷ್ಟ, ನಂತರದಲ್ಲಿ ದೆಹಲಿ ಕರ್ನಾಟಕ ಸಂಘದೊಂದಿಗಿನ ಸಂಪರ್ಕದಿಂದಾಗಿ ನಮ್ಮ ಕನ್ನಡಿಗರನ್ನು ಸಂಪರ್ಕಿಸಲು ಸಾಧ್ಯವಾಗಿ ಕ್ರಮೇಣವಾಗಿ ಭಾಷೆಯ ಕಷ್ಟ ಕೂಡ ದೂರವಾಯಿತು ಎಂದು ತಿಳಿಸಿದರು. ಕರ್ನಾಟಕದ ಕುಗ್ರಾಮದವರಾಗಿದ್ದು ಸಿವಿಲ್ ಸರ್ವೀಸ್ ಪರೀಕ್ಷೆಯನ್ನು ಬರೆಯಬೇಕಾದರೆ ಎಷ್ಟೊಂದು ಕಷ್ಟಗಳಿರುತ್ತವೆ










ಎಂಬುದನ್ನು ಮನಗಂಡಿದ್ದ ಅವರು ಹಾಗೇಯೇ ಆ ಸಮಯದಲ್ಲಿ ತಮಗೆ ಸಹಾಯ ಮಾಡಿದವರನ್ನು ನೆನೆಯುತ್ತಾ ತಾವೂ ಕೂಡಾ ಪ್ರತಿಫಲವಾಗಿ ಸ್ವಲ್ಪ ಸಹಾಯ ಮಾಡೋಣ ಎಂದು ದೆಹಲಿಯಲ್ಲಿ ಸಿವಿಲ್ ಸರ್ವೀಸ್ ಪರೀಕ್ಷೆಯನ್ನು ಬರೆಯಲು ಬರುವವರಿಗೆ ತಮ್ಮಿಂದ ಆದ ಮಾರ್ಗದರ್ಶನ ಮತ್ತು ಅನುಕೂಲಗಳ ಚಿಕ್ಕ ಸೇವೆಯನ್ನು ಮಾಡಿದ್ದೇನೆ ಎಂದು ತಿಳಿಸುತ್ತಾ ಇಂದು ದೆಹಲಿ ಕರ್ನಾಟಕ ಸಂಘ ತಮ್ಮನ್ನು ಗುರುತಿಸಿ ಪ್ರಶಸ್ತಿ ನೀಡಿದ್ದಕ್ಕಾಗಿ ತಮ್ಮ ಕೃತಜ್ಞತೆಗಳನ್ನು ಸಲ್ಲಿಸಿದರು.

ಪ್ರಶಸ್ತಿ ಸ್ವೀಕರಿಸಿದ ದೆಹಲಿ ಕನ್ನಡತಿ ಶ್ರೀಮತಿ ರೇಣುಕಾ ನಿಡಗುಂದಿ ಅವರು ಮಾತನಾಡಿ ಈ ಪ್ರಶಸ್ತಿಗೆ ನಾನು ಭಾಜನಳಾಗಲು ದೆಹಲಿ ಕರ್ನಾಟಕ ಸಂಘವೇ ಕಾರಣ, ದೂರದ ಕನ್ನಡ ನಾಡಿನಿಂದ ಬಂದ ನಮಗೆ ಇಲ್ಲಿ ಆತ್ಮೀಯತೆ ಸಿಗುವುದು ಕರ್ನಾಟಕ ಸಂಘದಲ್ಲಿ ಇಲ್ಲಿಯ ಕಾರ್ಯಕ್ರಮಗಳ ಮೂಲಕ. ಅನುವಾದ, ಚಿಕ್ಕಪುಟ್ಟ ಬರವಣಿಗೆ, ಅಭಿಮತಕ್ಕೆ ಕೆಲಸ ಮಾಡುವ ಅವಕಾಶ ಇವೆಲ್ಲವುಗಳಿಂದಾಗಿ ಮುಂದೆ ಬರಹಗಾರ್ತಿಯಾಗಲು ಒಳ್ಳೆಯ ವೇದಿಕೆಯಾಯಿತು ಎಂದು ಹೇಳಿ ಇಂದು ಅಭಿಮಾನದಿಂದ ತಮಗೆ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸಿದರು.

'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ಪುರಸ್ಕೃತ ಇನ್ನೋರ್ವ

ದೆಹಲಿ ಕನ್ನಡತಿ ಶ್ರೀಮತಿ ಮೀತಾ ಮಿಶ್ರಾ ಅವರು ಮಾತನಾಡಿ ಕರ್ನಾಟಕದಲ್ಲಿ ಜನಿಸಿರುವುದು ತಮ್ಮ ಸೌಭಾಗ್ಯ, ಅದಕ್ಕಿಂತ ಹೆಚ್ಚಿನ ಸೌಭಾಗ್ಯ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿರುವುದು. ಏಕೆಂದರೆ ಪ್ರತಿ ಬಾರಿ ದೆಹಲಿ ಕರ್ನಾಟಕ ಸಂಘಕ್ಕೆ ಬಂದಾಗ ನಾವು ನಮ್ಮ ಜೀವಕ್ಕೆ ಉಸಿರನ್ನು ತೆಗೆದುಕೊಂಡು ಹೋಗುತ್ತೇವೆ, ಕರ್ನಾಟಕದಲ್ಲಿರುವವರು ತಾವು ಇರುವ ಪರಿಸರದಲ್ಲಿ ಮಾತ್ರ ಜೀವಿಸುತ್ತಾರೆ. ನಾವು ಸಂಘಕ್ಕೆ ಬಂದಾಗ ಇಡೀ ಕರ್ನಾಟಕವನ್ನೇ ತೆಗೆದುಕೊಂಡು ಹೋಗುತ್ತೇವೆ. ದೆಹಲಿಗೆ 2000ನೇ ಇಸವಿಯಲ್ಲಿ ಬಂದಲ್ಲಿಂದ ಇಲ್ಲಿಯವರೆಗೂ ಕರ್ನಾಟಕ ಸಂಘದ ಎಲ್ಲಾ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುತ್ತಾ ಬಂದಿದ್ದೇನೆ, ಇಲ್ಲಿಗೆ ಬಂದಾಗ ನಮಗೆ ಒಂದು ರೀತಿಯ ಆಕ್ಸಿಜನ್ ದೊರೆಯುತ್ತದೆ ಎಂದು ಹೇಳಿ ಇದುವರೆಗಿನ ತಮ್ಮ ರಂಗಭೂಮಿಯಲ್ಲಿನ ಪಯಣದ ಯಶಸ್ಸಿಗೆ ಕಾರಣರಾದ ಎಲ್ಲರನ್ನು ಸ್ಮರಿಸಿ, ಸಂಘ ತಮಗೆ ನೀಡಿದ ಪುರಸ್ಕಾರಕ್ಕೆ ಆಭಾರ ವ್ಯಕ್ತಪಡಿಸಿದರು.




ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಕೇಂದ್ರ ಸಚಿವರಾದ ಶ್ರೀ ವಿ. ಸೋಮಣ್ಣನವರು ಮಾತನಾಡಿ ಸಂಘ ಇಂದು ಆಯೋಜಿಸಿರುವ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಒಂದು ವಿಶಿಷ್ಟವಾದ ಕಾರ್ಯಕ್ರಮ, ಪ್ರಶಸ್ತಿಯನ್ನು ಸ್ವೀಕರಿಸಿದ ಮೂವರೂ ಸಹಾ ಮಾತನಾಡುವಾಗ ತಮ್ಮ ಮಾತೃತ್ವದ ಭಾವನೆಗಳು, ಮಾತೃಭಾಷೆಯಿಂದ ಆಗಿರುವ ಪ್ರಯೋಜನದ ಬಗ್ಗೆ ದೊಡ್ಡ ಸಂದೇಶವನ್ನು ನಮಗೆಲ್ಲಾ ನೀಡಿದ್ದಾರೆ. ಪ್ರಶಸ್ತಿ ಸ್ವೀಕರಿಸಿದ ಶ್ರೀ ಅನಂತರಾಮ ಅರಳಿಯವರು ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಮಿಡಿಗೇಶಿ ಹೋಬಳಿಯವರು ಎಂಬ ಕುರಿತಾಗಿ ಹೇಳುತ್ತಾ ಆ ಊರಿನಲ್ಲಿ ಸಾವಿರಾರು ವರ್ಷಗಳ ಹಿಂದೆ ಚೋಳರ ಕಾಲದಲ್ಲಿ ಕಟ್ಟಿದ 101 ದೇವಾಲಯಗಳಿವೆ, ಆ ಭಾಗದಲ್ಲಿನ ಜನರ ಜೀವನ ಇಂದಿಗೂ ತುಂಬಾ ದುಸ್ತರವಾಗಿದೆ, ಇಂದಿಗೂ ಕೂಡಾ ಅಲ್ಲಿ ಬೋರ್‌ವೆಲ್‌ನಲ್ಲಿ ಫ್ಲೋರೈಡ್ ನೀರು ಬರುತ್ತದೆ. ಅಲ್ಲಿ ಬೋರ್‌ವೆಲ್‌ಗಾಗಿ ಎರಡು ಕೋಟಿ ರೂಗಳನ್ನು ಸಂಬಂಧಪಟ್ಟ ಇಲಾಖೆಯಿಂದ ಕೊಡಿಸಿದ್ದೇನೆ ಶ್ರೀ ಅರಳಿಯವರನ್ನು ಆ ಊರಿನಲ್ಲಿಯೇ ಮುಂದೆ ಸನ್ಮಾನ ಮಾಡಿಸುತ್ತೇನೆ ಎಂದು ತಿಳಿಸಿದರು. ಶ್ರೀಮತಿ ರೇಣುಕಾ ನಿಡಗುಂದಿ ಹಾಗೂ ಶ್ರೀಮತಿ ಮೀತಾ ಮಿಶ್ರಾ ಅವರೂ ಸಹಾ ತಮ್ಮ ಭಾವನೆಗಳನ್ನು ತುಂಬಾ ಚೆನ್ನಾಗಿ ವ್ಯಕ್ತಪಡಿಸಿದ್ದಾರೆ ಎಂದು ಅವರ ತಮ್ಮ ಮೆಚ್ಚುಗೆ ಸೂಚಿಸಿದರು.

ಮುಂದುವರಿದು ಮಾತನಾಡುತ್ತಾ, ನಾನು ಬೆಂಗಳೂರಿನವನು, ವಿಶ್ವದ ಭೂಪಟದ ಸಾಕಷ್ಟು ಜಾಗಗಳಲ್ಲಿ ಸುತ್ತಾಡಿದ್ದೇನೆ, ಕನ್ನಡ ನಮ್ಮ ಉಸಿರು, ಬೆಂಗಳೂರಿನಲ್ಲಿ ನಮ್ಮ ಎಲ್ಲಾ ವ್ಯವಸ್ಥೆಗಳು ಕನ್ನಡದಲ್ಲಿಯೇ ಇದ್ದುದರಿಂದ ಅದನ್ನು ಬಿಟ್ಟು ಬೇರೆ ಭಾಷೆಯನ್ನು ಕಲಿಯಬೇಕು ಎಂದು ಗೊತ್ತಾಗಲೇ ಇಲ್ಲ, ಬೇರೆ ಭಾಷೆಯನ್ನು ಕಲಿಯಬೇಕು ಎಂದು ಗೊತ್ತಾಗಿದ್ದು ದೆಹಲಿಗೆ ಬಂದ ಮೇಲೆ. ದೆಹಲಿಯಲ್ಲಿರುವ ನೀವೆಲ್ಲರೂ ನನಗಿಂತಲೂ ಒಂದು ಹೆಜ್ಜೆ ಮುಂದಿದ್ದೀರಿ, ದೆಹಲಿಯಲ್ಲಿ ಜೀವನವನ್ನು ರೂಪಿಸಿಕೊಳ್ಳುವುದು ಕಷ್ಟಕರವಾದ ಕೆಲಸ. ಕನ್ನಡ ಭಾಷೆ ನಮ್ಮ ತಾಯಿ ಇದ್ದ ಹಾಗೆ, ತಾಯಿಯನ್ನು ಮರೆಯಲು ಸಾಧ್ಯವಿಲ್ಲ ಎನ್ನುವುದಕ್ಕೆ ಒಂದು ದೊಡ್ಡ ಸಂದೇಶವನ್ನು ಕೊಟ್ಟವರು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜರವರು ಮತ್ತು ಪದಾಧಿಕಾರಿಗಳು. ಅವರುಗಳಿಗೆ ತಮ್ಮ ವೈಯಕ್ತಿಕ ಅಭಿನಂದನೆಯನ್ನು ಸಲ್ಲಿಸುತ್ತೇನೆ, ನಾವು ಎಲ್ಲಿಯೇ ಹೋದರೂ ಕೂಡಾ ನಮ್ಮ ನಮ್ಮ ಭಾಷೆಗಳನ್ನು ಆಡುವ ಅವಶ್ಯಕತೆಯಿದೆ ಎಂದರು.

ಇತ್ತೀಚೆಗೆ ತಾವು ದಕ್ಷಿಣ ಆಫ್ರಿಕಾಕ್ಕೆ ರಾಷ್ಟ್ರಪತಿಯವರ ಜೊತೆಗೆ ಹೋಗಿದ್ದನ್ನು ತಿಳಿಸುತ್ತಾ ಅಲ್ಲಿ ಬೇರೆ ಯಾವುದೇ ಭಾಷೆಯನ್ನು ಮಾತನಾಡುವುದನ್ನು ತಾವು ನೋಡಿಲ್ಲ, ನಾವು ಯಾವುದೇ ಭಾಷೆಯಲ್ಲಿ ಮಾತನಾಡಿದರೂ ಕೂಡಾ ಅದನ್ನು ಅವರ ಭಾಷೆಗೆ ಅನುವಾದ ಮಾಡುವ ವ್ಯವಸ್ಥೆಯನ್ನು ಎಲ್ಲಾ ರಾಷ್ಟ್ರ ಹಾಗೂ ರಾಜ್ಯ ಸರ್ಕಾರಗಳು ಮಾಡಿವೆ. ಹಾಗಾಗಿ ಭಾಷೆ ಮತ್ತು ಅದು ನಡೆದ ಬಂದ ದಾರಿಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವಂತಹ ಉತ್ತಮವಾದ ವ್ಯವಸ್ಥೆಯನ್ನು ದೆಹಲಿ ಕರ್ನಾಟಕ ಸಂಘದಿಂದ ಮಾಡಿದ್ದೀರಿ, 1948ರಲ್ಲಿ ಪ್ರಾರಂಭಗೊಂಡ ಈ ಸಂಸ್ಥೆಗೆ ಯಾರ್‍ಯಾರು ದುಡಿದ್ದಿದ್ದಾರೆ ಎನ್ನುವುದಕ್ಕಿಂತ ಹೆಚ್ಚಾಗಿ ಅವರದೇ ಆದ ಒಂದು ಹೆಜ್ಜೆ ಗುರುತನ್ನು ಬಿಟ್ಟು ಹೋಗಿರುತ್ತಾರೆ ಎಂಬುದು ಮುಖ್ಯವಾಗುತ್ತದೆ. ದೆಹಲಿಗೆ ಬಂದ ಮೇಲೆ ದೆಹಲಿ ಕರ್ನಾಟಕ ಸಂಘದ ಹಲವಾರು ಕಾರ್ಯಕ್ರಮಗಳಲ್ಲಿ ತಾವು ಭಾಗಿಯಾಗಿರುವುದಲ್ಲದೇ ಮುಂದಿನ ದಿನಗಳಲ್ಲಿಯೂ ಭಾಗಿಯಾಗುತ್ತೇನೆ ಎಂದು ತಿಳಿಸಿದರು. ಇದುವರೆಗೂ 86 ಜನರಿಗೆ ವಿಶಿಷ್ಟ ಕನ್ನಡಿಗ ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದೀರಿ, ನಮ್ಮ ಭಾಷೆ, ಭಾಷೆಗಿರುವಂತಹ ವೈಶಿಷ್ಟತೆ, ಆ ಭಾಷೆಯನ್ನು ವಿಶ್ವಕ್ಕೆ ಪರಿಚಯ ಮಾಡಿದ್ದರಿಂದ ಇವತ್ತು ರಾಷ್ಟ್ರದಲ್ಲಿಯೇ ಹೆಚ್ಚಿನ ಜ್ಞಾನಪೀಠ ಪ್ರಶಸ್ತಿ ಬಂದಿದೆ ಎಂದರೆ ಅದು ನಮ್ಮ ಕನ್ನಡಕ್ಕೆ ಎನ್ನುತ್ತಾ ಎಲ್ಲಾ ಜ್ಞಾನಪೀಠ ಪುರಸ್ಕೃತರನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಂಡರು.

ಕೇಂದ್ರ ಸರ್ಕಾರ ನಡೆಸುವಂತಹ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹಿಂದೀ ಅಥವಾ ಇಂಗ್ಲೀಷಿನಲ್ಲಿ ಪರೀಕ್ಷೆಗಳನ್ನು ಬರೆಯಬೇಕಾಗುತ್ತದೆ. ಕನ್ನಡದಲ್ಲಿ ಬರೆಯಲು ಅವಕಾಶ ಮಾಡಿಕೊಡಬೇಕೆಂದು ತಾವು ಪ್ರಧಾನ ಮಂತ್ರಿಯವರಲ್ಲಿ ಆಗ್ರಹ ಮಾಡಿದಾಗ ಅದಕ್ಕೆ ಅವರು ಒಪ್ಪಿ ಬರೀ ಕನ್ನಡವೊಂದೇ ಅಲ್ಲಾ, ಎಲ್ಲಾ ಇತರ 10 ಭಾಷೆಗಳಲ್ಲಿಯೂ ಅವಕಾಶ ಮಾಡಿಕೊಡಬೇಕು ಎಂದು ಹೇಳಿ ಮಾಡಿಸಿಕೊಟ್ಟಿದ್ದಾರೆ. ಹೀಗಾಗಿ ಕನ್ನಡದವನಾದ ತಾವು ಎಲ್ಲಿಯೋ ಒಂದು ಕಡೆ ಅದಕ್ಕೆ ಮೆಟ್ಟಿಲಾಗಿದ್ದೇನೆ ಎಂದು ಹೇಳಿದರು. ದೆಹಲಿಯ ಕೊರೆಯುವ ಚಳಿಯಲ್ಲಿ ವೇದಿಕೆ ಮೇಲೆ ತಮ್ಮ ಮುಂದೆ ಅದ್ಭುತ ಪ್ರದರ್ಶನ ನೀಡಿದ ಕನ್ನಡ ಮಕ್ಕಳ ನೃತ್ಯ ಕಾರ್ಯಕ್ರಮದ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಾ ಭಾಗವಹಿಸಿದ ಮಕ್ಕಳಿಗೆ ಅಭಿನಂದನೆಯನ್ನು ಸಲ್ಲಿಸಿ ಕೇಂದ್ರ ಸಚಿವರು ತಮ್ಮ ಮುಖ್ಯ ಅತಿಥಿ ಭಾಷಣವನ್ನು ಮುಕ್ತಾಯ ಮಾಡಿದರು. ಸಭಾ ಕಾರ್ಯಕ್ರಮದ ಉತ್ತಮ ನಿರೂಪಣೆ ಮಾಡಿದ ಶ್ರೀ ಕೆ.ಎಸ್. ಮೂರ್ತಿ ಶ್ರೀ ಸೋಮಣ್ಣನವರ ಪ್ರಮುಖ ಸಾಧನೆ ಕುರಿತು ವಿವರಗಳನ್ನು ಎಲ್ಲರಿಗೂ ತಿಳಿಸುತ್ತಾ ಅವರಿಗೆ ಧನ್ಯವಾದಗಳನ್ನು ಅರ್ಪಿಸಿದರು. ನಂತರ ದೆಹಲಿ ಕರ್ನಾಟಕ ಸಂಘದ ಪರವಾಗಿ ಕೇಂದ್ರ ಸಚಿವರಿಗೆ ಗೌರವ ಸಮರ್ಪಣೆ ನೀಡಲಾಯಿತು. ಸಭೆಯ ಕೊನೆಯಲ್ಲಿ ಸಂಘದ ಕಾರ್ಯಕಾರಿ ಸಮಿತಿ



ಸದಸ್ಯ ಶ್ರೀ ಶಶಿಕಾಂತ್ ಪಿ. ಪಾಟೀಲ್ ಎಲ್ಲರಿಗೂ ವಂದನೆಗಳನ್ನು ಅರ್ಪಿಸಿದರು.

ಸಭಾ ಕಾರ್ಯಕ್ರಮದ ನಂತರ ಮುಂದುವರಿದ ನೃತ್ಯೋತ್ಸವ ಸಾಂಸ್ಕೃತಿಕ ಕಾರ್ಯಕ್ರಮವನ್ನು ಸಂಘದ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು ಮತ್ತು ಸದಸ್ಯರು ನಡೆಸಿಕೊಟ್ಟರು. ಸಂಘದ ಖಜಾಂಚಿ ಶ್ರೀಮತಿ ಆಶಾಲತಾ ಎಂ. ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ಮಾಲಿನಿ ಪ್ರಹ್ಲಾದ್, ಶ್ರೀಮತಿ ಜಯಶ್ರೀ ಬಸವರಾಜು, ಶ್ರೀ ನವೀನ್ ಕುಮಾರ್ ವಿ. ಮತ್ತು ಶ್ರೀ ಅರುಣ್ ಸಿ.ಎಸ್. ಹಾಗು ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್. ಅವರುಗಳು ಈ ಕೆಳಗಿನ ಸ್ಥಳೀಯ ಕಲಾವಿದರ ತಂಡಗಳ ನೃತ್ಯ ಕಾರ್ಯಕ್ರಮವನ್ನು ಸರಣಿಯಾಗಿ ನಿರೂಪಿಸಿದರು.

1.ದೆಹಲಿ ಕನ್ನಡತಿಯರು (ವೈಜಯಂತಿ ಗಿರೀಶ್ ಮತ್ತು ತಂಡ)–ಬಂತು ಬಂತು ಸುಗ್ಗಿ ಹಾಡು

2.ದೆಹಲಿ ಕರುನಾಡ ಚಿಣ್ಣರ ಕೂಟ–ಜಕ್ಕಣಕ ಜೈ

3.ಜನಕಪುರಿ ಮಹಿಳಾ ಮಂಡಳಿ–ಹಾಡು : ಮಾತನಾಡ್ ಅಣ್ಣಯ್ಯ ಮಾತನಾಡು ಓ ಮುದ್ದು ಓ ಗಿಳಿಯೆ ಮಾತನಾಡು....

4. ದೆಹಲಿ ಕನ್ನಡ ಕಲಾವಿದರ ಬಳಗ : ಸಮೂಹ ನೃತ್ಯ

5. ಗುರುಗಾಂವ್ ಕನ್ನಡ ಸಂಘ–ಬಾರಯ್ಯ ಬಾರೋ ನನ್ನ ಸರದಾರ...

6.ಡೆಲ್ಲಿ ಫ್ರೆಂಡ್ಸ್–ಮೂಡಲ್ ಕುಣಿಗಲ್ ಕೆರೆ ನೋಡೋರಿಗ್ ಒಂದು ಐಭೋಗ...

7.ಗುರುಗ್ರಾಮ ತಂಡ (ಶಿವಲೀಲಾ ಮತ್ತು ತಂಡ) –ಮುಂಜಾನೆದ್ದು ಕುಂಬಾರಣ್ಣ ಮತ್ತು ಗಲ್ಲು ಗಲ್ಲೆನುತಾವ ಗೆಜ್ಜೆ ಗಲ್ಲುತಾದಿನಿತಾವ...

8.ದೆಹಲಿ ಕರುನಾಡ ಬಾಲೆಯರ ಬಳಗ–ಅಂದದ ಗಿರಿ ಚೆಂದ ನೋಡಿರೋ ನಮ್ಮ ಗಿರಿಯ ಗೋಪುರವ ನೋಡಿರೋ...

9. ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆ –ಏಳು ಮಲೆ ಮೇಲೇರಿ ಬಂದನಪ್ಪ ಮಹದೇವ.....

10.ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆ ಮಕ್ಕಳ ತಂಡ–2–ಹಾರಿಗಲ್ಲೆ ಕರಿಗಲ್ಲೇ ತಾವರೆಗಲ್ಲೇ....

11.ದೆಹಲಿ ಪೊಲೀಸ್ ಕನ್ನಡಿಗರ ಕಲ್ಯಾಣ ಸಮಿತಿ – ಎಲ್ಲಿ ಕಾಣ್ ಎಲ್ಲಿ ಕಾಣೆನೂ ಎಲ್ಲಮ್ಮನ...

12.ಗುರುಗ್ರಾಮ ಮಕ್ಕಳ ತಂಡ–ರಾಜ್ಯೋತ್ಸವ ವಿಶೇಷ ನೃತ್ಯ...

13. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆ ಮಕ್ಕಳ ತಂಡ–1–ಪಂಚಮಿ ಹಬ್ಬ ದಿನ ನಾಲ್ಕು, ಸೋಜುಗಾದ ಸೂಜಿ ಮಲ್ಲಿಗೆ...

14. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಅಧ್ಯಾಪಕರ ತಂಡ– ಎಲ್ಲೋ ಜೋಗಪ್ಪ ನಿನ್ನರಮನೆ ಮತ್ತು ಭಾಗ್ಯದ ಬಳೆಗಾರ...

ಈ ವರ್ಷದ ರಾಜ್ಯೋತ್ಸವ ಆಚರಣೆ ಅಂಗವಾಗಿ ಹಮ್ಮಿಕೊಂಡಿದ್ದ ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರಧಾನ ಸಮಾರಂಭ ಮತ್ತು ಇಂಪಾದ ಹಾಡುಗಳಿಗೆ ಸ್ಥಳೀಯ ಕಲಾವಿದರಿಂದ ಪ್ರಸ್ತುತಿಗೊಂಡ 'ನೃತ್ಯೋತ್ಸವ' ಕಾರ್ಯಕ್ರಮವನ್ನು ವೀಕ್ಷಿಸಿ ದೆಹಲಿ ಕನ್ನಡಿಗರು ಸಂಭ್ರಮಿಸಿದರು.❑

***ಅಭಿಮತ ವರದಿ***




ದೆಹಲಿಯಿಂದ ತಾಯ್ನಾಡಿಗೆ ತೆರಳುತ್ತಿರುವ ಸಂದರ್ಭದಲ್ಲಿ ಸಂಘದ ಆಜೀವ ಸದಸ್ಯರಾದ, ನವದೆಹಲಿ ವಾಯುಸೇನೆಯಲ್ಲಿ ಏರ್ ಕಮಾಡೋರ್ ಶ್ರೀ ಟಿ.ಎಂ. ಶ್ರೀನಾಥ್ ಹಾಗು ಮತ್ತು ಅವರ ಧರ್ಮಪತ್ನಿ ಶ್ರೀಮತಿ ಸುಮಾ ಶ್ರೀನಾಥ್ ಅವರನ್ನು ಸಂಘದಿಂದ ಅಭಿನಂದಿಸಿ ಆತ್ಮೀಯವಾಗಿ ಬೀಳ್ಕೊಡಲಾದ ಕ್ಷಣ.












# 2025ನೇ ಸಾಲಿನ ಸಂಘದ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ಪುರಸ್ಕೃತರು



## ಶ್ರೀ ಅನಂತ ರಾಮ ಅರಳಿ

ನವದೆಹಲಿಯ ಭಾರತೀಯ ರಕ್ಷಣಾ ಸಚಿವಾಲಯದ AG Branch ನಲ್ಲಿ ನಿರ್ದೇಶಕರಾಗಿರುವ ಶ್ರೀ ಅನಂತ ರಾಮ ಅರಳಿ ಅವರು ಮೂಲತಃ ತುಮಕೂರು ಜಿಲ್ಲೆಯ ಮಧುಗಿರಿ ತಾಲ್ಲೂಕಿನ ವೀರಾಪುರ ಗ್ರಾಮದಲ್ಲಿ ಶ್ರೀ ವಿ.ಆರ್. ದೊಡ್ಡರಾಮಣ್ಣ ಮತ್ತು ಶ್ರೀಮತಿ ನಾಗಮ್ಮನವರ ಸುಪುತ್ರನಾಗಿ ಕೃಷಿಕ ಕುಟುಂಬದಲ್ಲಿ 1969 ರಲ್ಲಿ ಜನಿಸಿದರು.

ತಮ್ಮ ಪ್ರೌಢ ಶಾಲೆಯವರೆಗಿನ ವಿದ್ಯಾಭ್ಯಾಸವನ್ನು ಮಧುಗಿರಿ ಮತ್ತು PUC ಯನ್ನು ತುಮಕೂರಿನಲ್ಲಿ ಪಡೆದ ನಂತರ ಬೆಂಗಳೂರಿನ ಕೃಷಿ ವಿಶ್ವವಿದ್ಯಾಲಯದಿಂದ 1990 ರಲ್ಲಿ ಬಿ.ಎಸ್ಸಿ. (ಫಾರೆಸ್ಟ್ರಿ) ಮತ್ತು 1992 ರಲ್ಲಿ ಎಂ.ಎಸ್ಸಿ. (ಅಗ್ರಿಕಲ್ಚರಲ್ ಎಂಟಮಾಲಜಿ) ಪದವಿಗಳನ್ನು ಗಳಿಸಿದರು. ಅನಂತರ ಎಂ.ಬಿ.ಎ. (Financial Management), ಎಂ.ಬಿ.ಎ. (HRM) ಮತ್ತು ಎಂ.ಫಿಲ್. ಪದವಿಗಳನ್ನು ಪಡೆದಿರುತ್ತಾರೆ. ಬೆಂಗಳೂರಿನ ಜೆಎಸ್‌ಎಸ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ ಫಾರ್ ಕಾಂಪಿಟೇಟಿವ್ ಎಕ್ಸಾಮಿನೇಷನ್ (JSSTICE) ನಿಂದ ತರಬೇತಿ ಪಡೆದು 1996ರಲ್ಲಿ ಸಶಸ್ತ್ರ ಪಡೆಗಳ ಕೇಂದ್ರ ಕಛೇರಿ (AFHQ) ನಾಗರಿಕ ಸೇವೆಗಳ ಪರೀಕ್ಷೆಯಲ್ಲಿ ಯಶಸ್ವಿಯಾಗಿ, 1998ರಿಂದ ಭಾರತೀಯ ರಕ್ಷಣಾ ಇಲಾಖೆಯಲ್ಲಿ ಸೇವೆಗೆ ಸೇರಿದ ಶ್ರೀ ಅರಳಿ ಅವರು ಇಲ್ಲಿಯವರೆಗೂ ದಕ್ಷತೆಯಿಂದ ವಿವಿಧ ಪ್ರಮುಖ ಹುದ್ದೆಗಳಲ್ಲಿ, ಕಾರ್ಯ ನಿರ್ವಹಿಸಿದ್ದಾರೆ. 2007 ರಿಂದ 2010 ರವರೆಗೆ ಬೆಂಗಳೂರಿನಲ್ಲಿ ಕೇಂದ್ರ ಹಣಕಾಸು ಸಚಿವಾಲಯದ DRT (ಸಾಲ ವಸೂಲಾತಿ ನ್ಯಾಯಾಧೀಕರಣ) ದಲ್ಲಿ ಸಹಾಯಕ ರಿಜಿಸ್ಟ್ರಾರ್/ ರಿಜಿಸ್ಟ್ರಾರ್ ಆಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ನವದೆಹಲಿಯಲ್ಲಿ ರಕ್ಷಣಾ ಇಲಾಖೆಯ Adjutant General ಬ್ರಾಂಚ್‌ನಲ್ಲಿ Director Coordination and Budget ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

**ಇವರ ಸಾಮಾಜಿಕ ಚಟುವಟಿಕೆಗಳು :** ಸಂಕಲ್ಪ ಸಂಸ್ಥೆಯ ಸದಸ್ಯರಾಗಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಣಕು ಸಂದರ್ಶನ ನಡೆಸುತ್ತಿದ್ದಾರೆ, ಕೃಷಿಕ್ ಸರ್ವೋದಯ ಪ್ರತಿಷ್ಠಾನದ ಮುಖ್ಯಸ್ಥರಾಗಿ, ದೆಹಲಿ ಶಾಖೆಯಲ್ಲಿ ದೆಹಲಿಯ ಹಿರಿಯ ನಾಗರಿಕರೊಂದಿಗೆ ಪ್ರೇರಣಾ ಗೋಷ್ಠಿ ಮತ್ತು ಸಂವಾದವನ್ನು ಆಯೋಜಿಸುತ್ತಿದ್ದು, ಕರ್ನಾಟಕದ ನಾಗರಿಕ ಸೇವಾ ಆಕಾಂಕ್ಷಿಗಳಿಗೆ ಪ್ರತ್ಯೇಕವಾಗಿ ಅಣಕು ಸಂದರ್ಶನಗಳನ್ನು ಸಹಾ ನಡೆಸುತ್ತಿದ್ದಾರೆ. ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಜೀವ ಸದಸ್ಯರಾಗಿರುವ ಇವರು ಸಂಘದ ಕಾರ್ಯಕಾರಿ ಸಮಿತಿ ಆಯ್ಕೆಯ ಚುನಾವಣಾ ಅಧಿಕಾರಿಯಾಗಿ ಮತ್ತು 2023 ರಿಂದ 2025 ರವರೆಗೆ ಕಾವಲು ಸಮಿತಿಯ ಸದಸ್ಯರಾಗಿ ಗಣನೀಯ ಸೇವೆಯನ್ನು ಸಲ್ಲಿಸಿರುತ್ತಾರೆ. ದೆಹಲಿ ಒಕ್ಕಲಿಗ ಗೌಡ ಸಂಘದ ಪ್ರಸ್ತುತ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ.

ಇವರ ಪ್ರಮುಖ ಹವ್ಯಾಸಗಳು–ಕನ್ನಡ ಸಂಸ್ಕೃತಿ, ಕಲೆ, ಸಾಹಿತ್ಯ, ವನ್ಯಜೀವಿ, ಪ್ರಕೃತಿ ಮತ್ತು ಕೃಷಿಯ ಕುರಿತು ನವ್ಯ ತಾಂತ್ರಿಕ ಜ್ಞಾನ ಮತ್ತು ಅನುಭವವನ್ನು ಹಂಚಿಕೊಳ್ಳುವುದು, ಚಾರಣ (Trekking) ಮತ್ತು ಪಕ್ಷಿ ಛಾಯಾಗ್ರಹಣ (Bird Photography) ಮುಂತಾದವು. ಇವರ ಧರ್ಮಪತ್ನಿ ಶ್ರೀಮತಿ ನಾಗರೇಖ ಒಬ್ಬ Architect, ಸುಪುತ್ರ ಶ್ರೀ ಅಭಿರಾಮ ಅರಳಿ ಎಂ.ಎ. ಇಂಗ್ಲಿಷ್ ಪದವಿಧರ ಹಾಗೂ ಸುಪುತ್ರಿ ಕು. ದೇವಿಕ ಅರಳಿ BE (ECE) ವ್ಯಾಸಂಗ ಮಾಡುತ್ತಿದ್ದಾಳೆ.

ಹಸನ್ಮುಖಿ, ಮಿತ ಭಾಷಿ, ಸಹೃದಯದ ವ್ಯಕ್ತಿ, ದಕ್ಷ ಅಧಿಕಾರಿ ಮತ್ತು ಅಪ್ಪಟ ಕನ್ನಡಿಗ ಶ್ರೀ ಅನಂತರಾಮ ಅರಳಿ ಅವರಿಗೆ, ಅವರು ಕನ್ನಡ ಭಾಷೆ, ನಾಡು, ನುಡಿ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ದೆಹಲಿ ಎನ್‌ಸಿಆರ್ ನ ಕನ್ನಡಪರ ಸಂಘ ಸಂಸ್ಥೆಗಳಿಗೆ ಅವರು ನೀಡುತ್ತಿರುವ ಅಪರಿಮಿತ ಸೇವೆಯನ್ನು ಪರಿಗಣಿಸಿ ದೆಹಲಿ ಕರ್ನಾಟಕ ಸಂಘವು ದಿನಾಂಕ 30.11.2025 ರಂದು ನಡೆದ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ 2025ನೇ ಸಾಲಿನ **'ವಿಶಿಷ್ಟ ಕನ್ನಡಿಗ'** ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.

---



## ಶ್ರೀಮತಿ ಮೀತಾ ಮಿಶ್ರ

ಶ್ರೀಮತಿ ಮೀತಾ ಮಿಶ್ರ ಅವರು ದಿನಾಂಕ 09.09.1973ರಂದು ಬೆಂಗಳೂರಿನಲ್ಲಿ ಜನಿಸಿದರು. ತಾಯಿ ಶ್ರೀಮತಿ ಶಾಂತ ಮಿಶ್ರ ಚಿತ್ರದುರ್ಗದವರು. ತಂದೆ ಶ್ರೀ ಡಾ. ಹರಿಪಾದ ಮಿಶ್ರ ಒರಿಸ್ಸಾ ರಾಜ್ಯದವರು. ಇವರಿಬ್ಬರೂ ಸೈಕಾಲಜಿಸ್ಟ್ (ಮನಃಶಾಸ್ತ್ರಜ್ಞರು.) ಇವರ ತಂದೆ ಬೆಂಗಳೂರಿನ ನಿಮ್ಹಾನ್ಸಿಂದ ಪ್ರೊಫೆಸರ್ ಆಗಿ ತಮ್ಮ ಸೇವಾ ನಿವೃತ್ತಿಯ ನಂತರ ಈಗ ಜಯನಗರದಲ್ಲಿ ವಾಸವಾಗಿದ್ದಾರೆ. ಇವರ ಪತಿ ಶ್ರೀ ಗೋವಿಂದ್ ಸಿಂಗ್ ಯಾದವ್ ಪ್ರಯಾಗರಾಜ್ ನಗರದವರು. ಇವರೂ ಸಹಾ ದೇಶದ ಗಣ್ಯ ರಂಗಕರ್ಮಿಯಾಗಿ ಗುರುತಿಸಿಕೊಂಡಿದ್ದು, ಈಗ ಲಕ್ನೋ ನಗರದ ನಾಟಕ ಶಾಲೆಯಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಇವರಿಬ್ಬರ ಸುಪುತ್ರ ಕು. ಪ್ರತ್ಯುಶ್ ಯಾದವ್ ಕನ್ನಡವನ್ನು ಇಷ್ಟ ಪಟ್ಟು ಬೆಂಗಳೂರಿನಲ್ಲಿ ಅಜ್ಜಿಯ ಜೊತೆ ಕನ್ನಡದಲ್ಲೇ ಮಾತನಾಡಿಕೊಂಡು ಅಲ್ಲೇ 11ನೇ ತರಗತಿಯಲ್ಲಿ ಓದುತ್ತಿದ್ದಾನೆ. ಮೀತಾ ಮಿಶ್ರ ಅವರ ಸಹೋದರ ಇಂಜಿನಿಯರ್ ಶ್ರೀ ಮಹೇಶ್ ಮಿಶ್ರ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ.

ಶ್ರೀಮತಿ ಮೀತಾ ಮಿಶ್ರ ಚಿಕ್ಕಂದಿನಲ್ಲೂ ಶಾಲಾ ಕಾಲೇಜಿನಲ್ಲಿ ನಾಟಕದಲ್ಲಿ ಭಾಗವಹಿಸುತ್ತಿದ್ದರು. 1994 ರಿಂದ 2001ರ ತನಕ ಬೆಂಗಳೂರಿನಲ್ಲಿ ನಾಟಕ, ಫಿಲಂ, ಟೀಚಿಂಗ್ ಇತ್ಯಾದಿ ಕೆಲಸಗಳನ್ನು ಮಾಡುತ್ತಿದ್ದರು. 2001 ರಿಂದ 2002ರವರೆಗೆ ನಾಟಕ ಕಲಿಯಲು ನಿನಾಸಂನಿಂದ ಶಿಕ್ಷಣ ಪಡೆದ ನಂತರ 2002–2005ರಲ್ಲಿ ಎನ್‌ಎಸ್‌ಡಿ (NSD), ದೆಹಲಿಯಿಂದ ನಾಟಕದಲ್ಲಿ ಪ್ರಶಿಕ್ಷಿತರಾದರು. 2005 ರಿಂದ 2025ರವರೆಗೆ ನಾಟಕ ಕ್ಷೇತ್ರಕ್ಕೆ, ರಂಗ ಭೂಮಿ ಚಟುವಟಿಕೆಗಳಿಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದಾರೆ. ಪ್ರಸ್ತುತ ನವದೆಹಲಿಯ ಎನ್‌ಎಸ್‌ಡಿ ಯ ಅಡ್ಮಿನಿಸ್ಟ್ರೇಷನ್ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರಿಗೆ ನಿರ್ದೇಶನಕ್ಕಾಗಿ ಬಿಸ್ಮಿಲ್ಲಾಹ್ ಖಾನ್ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

ಇವರು BBBUL ಜೈನ್ ವಿದ್ಯಾಲಯ ಬೆಂಗಳೂರು, ಕ್ರೈಸ್ಟ್ ಕಾಲೇಜು ಬೆಂಗಳೂರು, ರಂಗಾಯಣ ಮೈಸೂರು, LTG ಆಡಿಟೋರಿಯಂ ದೆಹಲಿ, NSD ದೆಹಲಿ ಮತ್ತು ಇತರ ಸಂಘ ಸಂಸ್ಥೆಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಕಾಸ್ಟ್ಯೂಮ್ ಡಿಸೈನ್, ಆಕ್ಟರ್ ಟ್ರೈನಿಂಗ್, ಫೆಸ್ಟಿವಲ್ ಆಯೋಜನೆ ಇವರ ಇಷ್ಟಾರ್ಥ ಕಾರ್ಯಗಳು. ಕಿರು ಸಿನೆಮಾ ನಿರ್ದೇಶನ, ಕಿರು ತೆರೆ ಫಿಲ್ಮ್ ಆಕ್ಟಿಂಗ್, ಮತ್ತು ನಾಟಕದಲ್ಲಿ ಪಾತ್ರವಹಿಸುವುದು ಇವರಿಗೆ ಬಹಳ ಇಷ್ಟ. ದೇಶಾದ್ಯಂತ ಹಾಗೂ ವಿದೇಶದಲ್ಲಿ ಸಾಕಷ್ಟು ಶೋಗಳನ್ನು ಮಾಡಿದ್ದಾರೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ.

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀಮತಿ ಮೀತಾ ಮಿಶ್ರ ಅವರು ಸಂಘದ ಎಲ್ಲಾ ಕಾರ್ಯ ಚಟುವಟಿಕೆಗಳಲ್ಲಿ, ಸಾಹಿತ್ಯಿಕ ಮತ್ತು ನೃತ್ಯ, ನಾಟಕ, ಸಂಗೀತ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಇವರ ನಿರ್ದೇಶನದ 'ಖಿಲ್ ಜಾ ಸಿಮ್ ಸಿಮ್' ಮತ್ತು 'ಗಣ–ಗಣ ರಾಜ್ಯ' ನಾಟಕಗಳು ಸಂಘದ ವೇದಿಕೆಯಲ್ಲಿ ಇತ್ತೀಚಿಗೆ ಅತ್ಯಂತ ಯಶಸ್ವಿಯಾಗಿ ಪ್ರದರ್ಶನಗೊಂಡಿವೆ. ಇವಲ್ಲದೆ ಸ್ಥಳೀಯ ಕಲಾವಿದರು ಅಭಿನಯಿಸಿದ ಹಲವಾರು ನಾಟಕಗಳಿಗೆ ಇವರು ತಮ್ಮ ಸಲಹೆ, ಮಾರ್ಗದರ್ಶನ ಮತ್ತು ಸಹಕಾರಗಳನ್ನು ನೀಡಿದ್ದಾರೆ. ಸಂಘದ ಸಭಾಂಗಣದಲ್ಲಿ ಹೊಸ ಧ್ವನಿ ಸಿಸ್ಟಮ್ ಅಳವಡಿಕೆಯಲ್ಲಿ ಎನ್‌ಎಸ್‌ಡಿ ನ ಧ್ವನಿ ಪರಿಣಿತರಿಂದ ಸಲಹೆ ಕೊಡಿಸುವಲ್ಲಿ ಇವರು ಪ್ರಮುಖ ಪಾತ್ರ ವಹಿಸಿದ್ದರು. ಅನೇಕ ನೃತ್ಯ, ಸಂಗೀತ ಮತ್ತು ನಾಟಕ ಕಾರ್ಯಾಗಾರಗಳಲ್ಲಿ ಸ್ಥಳೀಯ ಕನ್ನಡಿಗರಿಗೆ ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ ಮತ್ತು ಸೂಕ್ತ ಮಾರ್ಗದರ್ಶನ ಮಾಡಿದ್ದಾರೆ. ಸಂಘದ ಸದಸ್ಯರಿಗಾಗಿ ನಡೆಸುವ ವಾರ್ಷಿಕ ಸಾಂಸ್ಕೃತಿಕ ಸ್ಪರ್ಧೆಗಳ ತೀರ್ಪುಗಾರರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ.

ಮೃದು ಮತ್ತು ಸರಳ ವ್ಯಕ್ತಿತ್ವದ ಪ್ರತಿಭಾವಂತ ಕಲಾವಿದೆ, ನಾಟಕ ನಿರ್ದೇಶಕಿ ಶ್ರೀಮತಿ ಮೀತಾ ಮಿಶ್ರ ಅವರು ಕನ್ನಡ ನಾಡು, ನುಡಿ, ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ, ನಾಟಕ ಮತ್ತು ರಂಗಭೂಮಿ ಕ್ಷೇತ್ರದಲ್ಲಿ ನೀಡುತ್ತಿರುವ ಸೇವೆಯನ್ನು ಪರಿಗಣಿಸಿ ದೆಹಲಿ ಕರ್ನಾಟಕ ಸಂಘವು ದಿನಾಂಕ 30.11.2025 ರಂದು ನಡೆದ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ 2025ನೇ ಸಾಲಿನ **'ವಿಶಿಷ್ಟ ಕನ್ನಡಿಗ'** ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಹೃದಯಪೂರ್ವಕ ಅಭಿನಂದನೆಗಳು.



## ಶ್ರೀಮತಿ ರೇಣುಕಾ ನಿಡಗುಂದಿ

ದಿನಾಂಕ 24.09.1964 ರಲ್ಲಿ ಧಾರವಾಡದಲ್ಲಿ ಜನಿಸಿದ ಶ್ರೀಮತಿ ರೇಣುಕಾ ನಿಡಗುಂದಿ ಅವರು ತಮ್ಮ ಆರಂಭಿಕ ವಿದ್ಯಾಭ್ಯಾಸವನ್ನು ಧಾರವಾಡದಲ್ಲಿಯೇ ಪಡೆದು, ರಾಷ್ಟ್ರೀಯ ಹಿಂದಿ ಪ್ರಚಾರ ಸಭೆ ನಡೆಸುತ್ತಿದ್ದ ಹಿಂದೀ ಪರೀಕ್ಷೆಗಳಲ್ಲಿ ಮಾಧ್ಯಮ, ರಾಷ್ಟ್ರಭಾಷಾ ಸರ್ಟಿಫಿಕೇಟ್ ಕೋರ್ಸ್‌ಗಳಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿರುತ್ತಾರೆ.ಇವರ ತಂದೆ ದಿವಂಗತ ಶಂಕ್ರಪ್ಪ ಕರಡೀಗುಡ್ಡ ಅವರು ಖಾದಿ ಮತ್ತು ಗ್ರಾಮ ಇಂಡಸ್ಟ್ರೀಸ್ ಕಾರ್ಪೊರೇಶನ್‌ನಲ್ಲಿ ಕೆಲಸದಲ್ಲಿದ್ದರು. ದಿ. ಕಾಳಮ್ಮ ನೇಸರಗಿ ಉರ್ಫ ಧಾರವಾಡದಲ್ಲಿ ಕಸೂತಿ ಕಾಳಮ್ಮನೆಂದೇ ಪ್ರಸಿದ್ಧರಾಗಿದ್ದ ಇವರ ಅಜ್ಜಿ 1985 ರಲ್ಲಿ ಅಂದಿನ ರಾಷ್ಟ್ರಪತಿ ಗ್ಯಾನಿ ಜೈಲ್ ಸಿಂಗ್ ಅವರಿಂದ ರಾಷ್ಟ್ರೀಯ ಪುರಸ್ಕಾರ ಪಡೆದಿದ್ದು ಇವರ ಕುಟುಂಬಕ್ಕೆ ಸಂದ ಬಹುದೊಡ್ಡ ಸನ್ಮಾನವಾಗಿದೆ. ಶ್ರೀಮತಿ ನಿಡಗುಂದಿ ಅವರಿಗೆ ಓದುವ ಬರೆಯುವ ಆಸಕ್ತಿ ಬಾಲ್ಯದಲ್ಲಿಯೇ ಮೂಡಿದ್ದು. ಜೈಮಿನಿ ಭಾರತ, ವಚನ ಭಾರತ, ಶ್ರೀಕಾಂತ, ಶಿವರಾಮ ಕಾರಂತರ "ಮರಳಿ ಮಣ್ಣಿಗೆ" ಕಾದಂಬರಿ ಮುಂತಾದ ವುಗಳನ್ನು ಚಿಕ್ಕವಯಸ್ಸಿನಲ್ಲಿಯೇ ಓದುತ್ತಿದ್ದರು. ಏಳನೆ ತರಗತಿಯಲ್ಲಿರುವಾಗಲೇ ಇವರು ಮೊದಲ ಕವಿತೆ "ಕೋಗಿಲೆ" ಬರೆದಿದ್ದು ಶಾಲೆಯ ಕೈಬರಹದ ಮಾಗಜೀನ್‌ನಲ್ಲಿ ಪ್ರಕಟವಾಗಿತ್ತು.

ಬರ್ಜರ್ ಪೇಂಟ್ಸ್ ಸೋದರಿ ಕಂಪನಿಯ ಉಪಾಧ್ಯಕ್ಷರಿಗೆ ಆಪ್ತ ಕಾರ್ಯದರ್ಶಿಯಾಗಿ 29 ವರ್ಷ ಸೇವೆ ಸಲ್ಲಿಸಿ ಇತ್ತೀಚೆಗೆ ನಿವೃತ್ತರಾಗಿರುವ ಇವರು ನಾಲ್ಕು ದಶಕದಿಂದಲೂ ದೆಹಲಿಯಲ್ಲಿ ವಾಸವಾಗಿದ್ದಾರೆ. ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿರುವ ಅವರು ಸಂಘದ ಸಾಹಿತ್ಯಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರಲ್ಲದೆ, 2011–2013ರ ಅವಧಿಯ ಸಂಘದ ಕಾರ್ಯಕಾರಿ ಸಮಿತಿಯಲ್ಲಿ ಜಂಟಿ ಕಾರ್ಯದರ್ಶಿಯಾಗಿ ಮತ್ತು ಸಾಹಿತ್ಯ ಸಮಿತಿಯ ಸಂಚಾಲಕರಾಗಿಯೂ ಅತ್ಯುತ್ತಮವಾಗಿ ಸೇವೆ ಸಲ್ಲಿಸಿದ್ದಾರೆ. ಸಂಘದ ಮುಖವಾಣಿ ಅಭಿಮತ' ದ ಸಂಪಾದಕ ಮಂಡಳಿಯ ಸಕ್ರಿಯ ಸದಸ್ಯರಾಗಿ ಸುಮಾರು 10–12 ವರ್ಷಗಳ ಕಾಲ ಕಾರ್ಯ ನಿರ್ವಹಿಸಿದ್ದಾರೆ. ಆಯಾಕಾಲದ ಪ್ರಧಾನ ಸಂಪಾದಕರೊಂದಿಗೆ ಅಭಿಮತ ಮಾಸ ಪತ್ರಿಕೆ ಸುಂದರವಾಗಿ ಮತ್ತು ಸಮಗ್ರವಾಗಿ ಮೂಡಿ ಬರಲು ಇವರ ಕೊಡುಗೆ ಅಭಿನಂದನೀಯ.ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರಾಗಿ ಮತ್ತು ಪೇರೆಂಟ್ಸ್ ಟೀಚರ್ಸ್ ಆಸೋಸಿಯೇಶನ್‌ನ ಉಪಾಧ್ಯಕ್ಷೆಯಾಗಿಯೂ ಕಾರ್ಯ ನಿರ್ವಹಿಸಿರುತಾರೆ. ಇವರು ಸಂಘದ ಮಾಜಿ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆಯವರ ಸಂಪಾದಕತ್ವದಲ್ಲಿ "ರಾಜಧಾನಿಯಲ್ಲಿ ಕರ್ನಾಟಕ" ಪುಸ್ತಕವನ್ನು ಸಂಪಾದಿಸಿದ್ದು, ಇವರ ಅನೇಕ. ಕಥೆ, ಕವನ, ಲೇಖನಗಳು ನಾಡಿನ ಪ್ರಮುಖ ಪತ್ರಿಕೆಗಳಲ್ಲಿ, ಮಾಸಿಕಗಳಲ್ಲಿ ಪ್ರಕಟಗೊಂಡಿವೆ.

ಶ್ರೀಮತಿ ರೇಣುಕಾ ನಿಡಗುಂದಿ ಅವರ ಬಿಡುಗಡೆಯಾದ ಕೃತಿಗಳು–ಮೊದಲ ಕವನ ಸಂಕಲನ "ಕಣ್ಣ ಕಣಿವೆ" 2008 (ಪ್ರಗತಿ ಗ್ರಾಫಿಕ್), "ದಿಲ್ಲಿ ಡೈರಿಯ ಪುಟಗಳು" (ಪ್ರಬಂಧ ಬರಹ), "ಅಮೃತ ನೆನಪುಗಳು" ಅಮೃತಾ ಪ್ರೀತ್‌ಂರ ಜೀವನಗಾಥೆ ಇಮರೋಜ್ ಕಂಡಂತೆ (ಅಹರ್ನಿಶಿ ಪ್ರಕಾಶನ), "ನಮ್ಮಿಬ್ಬರ ನಡುವೆ" ಕವನ ಸಂಕಲನ (ದೆಹಲಿ ಕರ್ನಾಟಕ ಸಂಘ), "ಬಾ ಇಂದಾದರೂ ಮಾತಾಡೋಣ" ಅಮೃತಾ ಪ್ರೀತಮ್ ಆಯ್ದ ಕವಿತೆಗಳು, ಪಂಜಾಬಿ ಕಾದಂಬರಿಕಾರ್ತಿ, ಅಜೀತ್ ಕೌರ್ ಅವರ ಆತ್ಮಕಥನದ ಅನುವಾದ "ಅಲೆಮಾರಿಯೊಬ್ಬಳ ಆತ್ಮವೃತ್ತಾಂತ ಪ್ರಕಟವಾಗಿದೆ (ಅಹರ್ನಿಶಿ), ಸಂತಾಲಿ ಕವಯಿತ್ರಿ ನಿರ್ಮಲಾ ಪುತುಲ್ ಅವರ ಅನುವಾದಿತ ಕವಿತೆಗಳ ಸಂಕಲನ "ಯಾವ ವಿಳಾಸವೂ ಅವಳದಲ್ಲ" ಮಂಡ್ಯದ ಸಂಕಥನದಿಂದ ಪ್ರಕಟವಾಗಿದೆ ಹಾಗು ಡಾ. ಅಂಬೇಡ್ಕರ್ ಅವರ ಸಂಪಾದಕೀಯ ಬರಹಗಳ ಸಂಗ್ರಹ "ಮೂಕನಾಯಕ" ಅಹರ್ನಿಶಿ ಪ್ರಕಾಶನದಿಂದ ಪ್ರಕಟಿತವಾಗಿದೆ. ಇವರು 2018ರ ಪ್ರಜಾವಾಣಿ ಪ್ರಬಂಧ ಸ್ಪರ್ಧೆಯಲ್ಲಿ ಎರಡನೇ ಬಹುಮಾನ ಮತ್ತು ಪ್ರೇಮಪತ್ರ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದಿರುತ್ತಾರೆ. ಪ್ರಸ್ತುತ ಪ್ರಜಾವಾಣಿಗೆ ನುಡಿ ಬೆಳಗು ಅಂಕಣ ಮತ್ತು ಈ ದಿನ. ಡಾಟ್ ಕಾಮ್‌ಗೆ ಅಂಕಣ ಬರೆಯುತ್ತಿದ್ದಾರೆ. ಇದಲ್ಲದೇ ನಾಡಿನ ಪ್ರಮುಖ ಪತ್ರಿಕೆಗಳಾದ ವಾರ್ತಾ ಭಾರತಿ, ಆಂದೋಲನ, ಸುಧಾ ಮತ್ತಿತರ ಪತ್ರಿಕೆಗಳಲ್ಲಿ ಇವರ ಲೇಖನಗಳು ಪ್ರಕಟವಾಗುತ್ತಿರುತ್ತವೆ.

ಇವರ ಪತಿ ಶ್ರೀ ಶ್ಯಾಮ್ ಎಂ. ನಿಡಗುಂದಿ ಅವರು ಇಂಡಿಯನ್ ನೇವಿ ಪಡೆಯ ಮುಖ್ಯ ಕಚೇರಿಯ ಸಬ್ ಮರೀನ್ ಡಿಸೈನ್ ಗ್ರೂಪ್‌ನಲ್ಲಿ ಜೂನಿಯರ್ ಡಿಸೈನ್ ಆಫೀಸರ್ ಆಗಿ ಕಾರ್ಯ ನಿರ್ವಹಿಸಿ 2012 ರಲ್ಲಿ ನಿವೃತ್ತರಾದ ನಂತರ ಪತ್ನಿ ರೇಣುಕಾ ನಿಡಗುಂದಿ, ಚಿಕ್ಕ ಮಗ ಮತ್ತು ಸೊಸೆಯ ಜೊತೆ ನೋಯಿಡಾದಲ್ಲಿ ನೆಲಸಿದ್ದಾರೆ. ಇವರ ಇಬ್ಬರು ಮಕ್ಕಳೂ ದೆಹಲಿ ಕನ್ನಡ ಶಾಲೆಯಲ್ಲಿಯೇ ಓದಿದವರು. ದೊಡ್ಡ ಮಗ ಮತ್ತು ಸೊಸೆ ಬೆಂಗಳೂರಿನಲ್ಲಿ ವಾಸಿಸುತ್ತಿದ್ದಾರೆ.

ಪ್ರತಿಭಾವಂತ ಬರಹಗಾರ್ತಿ, ಸಾಹಿತಿ, ಕವಯಿತ್ರಿ ಮತ್ತು ಅಪ್ಪಟ ಕನ್ನಡತಿಯಾದ ಶ್ರೀಮತಿ ರೇಣುಕಾ ನಿಡಗುಂದಿ ಅವರು ದೆಹಲಿ ಎನ್‌ಸಿಆರ್ ನಲ್ಲಿ ಕನ್ನಡ ಭಾಷೆ, ನಾಡು, ನುಡಿ, ಕಲೆ, ಸಂಸ್ಕೃತಿ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ಮತ್ತು ಸಂಘ ಸಂಸ್ಥೆಗಳಿಗೆ ಮಾಡಿದ ಸೇವೆಯನ್ನು ಪರಿಗಣಿಸಿ ದೆಹಲಿ ಕರ್ನಾಟಕ ಸಂಘವು ದಿನಾಂಕ 30.11.2025ರಂದು ನಡೆದ ಕರ್ನಾಟಕ ರಾಜ್ಯೋತ್ಸವ ಸಮಾರಂಭದಲ್ಲಿ 2025ನೇ ಸಾಲಿನ **'ವಿಶಿಷ್ಟ ಕನ್ನಡಿಗ'** ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಪ್ರೀತಿ ಪೂರ್ವಕ ಅಭಿನಂದನೆಗಳು.



## ಶ್ರೀ ಡಿ.ವಿ. ಶ್ರೀನಿವಾಸ ಮೂರ್ತಿ

ಶ್ರೀ ಡಿ.ವಿ.ಎಸ್. ಮೂರ್ತಿ ಅವರು ಮೂಲತಃ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ದರಿನಾಯಕನ ಪಾಳ್ಯದಲ್ಲಿ ಶ್ರೀಮತಿ ಲಕ್ಷ್ಮೀದೇವಮ್ಮ ಮತ್ತು ಶ್ರೀ ಡಿ.ವಿ. ವೆಂಕಟರಾಮಯ್ಯ ಇವರ ಸುಪುತ್ರನಾಗಿ 9ನೇ ಮಾರ್ಚ್ 1959 ರಂದು ಜನಿಸಿದರು.

ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ಶಿಕ್ಷಣವನ್ನು ತಮ್ಮ ಹುಟ್ಟೂರಲ್ಲಿ ಮುಗಿಸಿ, ಚಿಕ್ಕಬಳ್ಳಾಪುರದಲ್ಲಿ ಪ್ರೌಢಶಾಲೆ ಮತ್ತು ಕಾಲೇಜು ಶಿಕ್ಷಣ ಪಡೆದ ನಂತರ ಮೈಸೂರಿನ ಮಾನಸಗಂಗೋತ್ರಿಯಲ್ಲಿ ಜರ್ನಲಿಸಂ ವಿಷಯದಲ್ಲಿ ಡಿಪ್ಲೊಮಾ ಅಧ್ಯಯನ ಮಾಡಿದ್ದು, ತದನಂತರ ಹರಿಯಾಣದ ಕುರುಕ್ಷೇತ್ರ ವಿಶ್ವವಿದ್ಯಾಲಯದಲ್ಲಿ ಉನ್ನತ ವಿದ್ಯಾಭ್ಯಾಸವನ್ನು ಮುಗಿಸಿದರು.

ಶ್ರೀ ಡಿ.ವಿ.ಎಸ್. ಮೂರ್ತಿ ಅವರ ಧರ್ಮಪತ್ನಿ ಶ್ರೀಮತಿ ರೇವತಿಯವರು ಕಲಾ ವಿಭಾಗದ ಪದವೀಧರರು. ಇವರಿಗೆ ಇಬ್ಬರು ಗಂಡು ಮಕ್ಕಳು. ಶ್ರೀ ಮೂರ್ತಿ ಅವರು 1977–78 ರಲ್ಲಿ ಜಿಲ್ಲೆಯ ದೈನಿಕ ವಾರ್ತೆ ಹಾಗು ಲೋಕವಾಣಿ ಪತ್ರಿಕೆಯ ವರದಿಗಾರರಾಗಿ ವೃತ್ತಿ ಬದುಕನ್ನು ಪ್ರಾರಂಭಿಸಿ, 1979ರಲ್ಲಿ ಭಾರತೀಯ ಸೇನೆಗೆ ಸೇರಿ 18 ವರ್ಷಗಳ ಸುಧೀರ್ಘ ಸೇವೆ ಸಲ್ಲಿಸಿರುತ್ತಾರೆ.

ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಲೇ ಉನ್ನತ ವ್ಯಾಸಂಗವನ್ನು ಮಾಡಿರುತ್ತಾರೆ. ಭಾರತ ಚೀನಾ ಗಡಿ ಪ್ರದೇಶದಲ್ಲಿ ಮೌಂಟೇನ್ ಬ್ರಿಗೇಡ್‌ನಲ್ಲಿ ಹಾಗೂ ಅಮೃತಸರ ಗೋಲ್ಡನ್ ಟೆಂಪಲ್‌ನಲ್ಲಿ ನಡೆದ ಬ್ಲೂ ಸ್ಟಾರ್ ಕಾರ್ಯಾಚರಣೆ ಮತ್ತು ಅರುಣಾಚಲ ಪ್ರದೇಶದ ತಾವಾಂಗ್‌ನಲ್ಲಿ ನಡೆದ ಫಾಲ್ಕನ್ ಕಾರ್ಯಾಚರಣೆಗಳಲ್ಲಿ ಇವರು ಭಾಗವಹಿಸಿರುವುದು ಹೆಮ್ಮೆಯ ವಿಷಯ. ಭಾರತೀಯ ಸೇನೆಯ ಸೇವಾವಧಿಯಲ್ಲಿ ಇವರ ಸೇವೆಯನ್ನು ಪರಿಗಣಿಸಿ ನೀಡಲಾದ ಸೇನಾ ಸೇವಾ ಪದಕ, ಜೆ ಅಂಡ್ ಕೆ ಪದಕ, ಹೈ ಅಲ್ಟಿಟ್ಯೂಡ್ ಮೆಡಲ್ ಮತ್ತು ದೀರ್ಘ ಸೇವಾವಧಿ ಸೇವಾ ಪದಕಗಳನ್ನು ತಮ್ಮ ಮುಡಿಗೇರಿಸಿಕೊಂಡಿರುವ ಇವರು 1995ರಲ್ಲಿ ಸ್ವಯಂ ನಿವೃತ್ತಿ ಪಡೆದರು.

ಅನಂತರ ಕೇಂದ್ರ ಸರ್ಕಾರದ ಇಎಸ್‌ಐಸಿ ನಲ್ಲಿ ಕೆಲವು ವರ್ಷ ಸೇವೆ ಸಲ್ಲಿಸಿ, ನಂತರ 1999ರಲ್ಲಿ ದೆಹಲಿಗೆ ಬಂದು ಖಾಸಗಿ ಕಂಪೆನಿಯಲ್ಲಿ ಕೆಲಸಕ್ಕೆ ಸೇರಿಕೊಂಡರು. ತದನಂತರ Lotus (International) Freight Export Private Limited ಎಂಬ ತಮ್ಮದೇ ಸ್ವಂತ ಸಂಸ್ಥೆಯನ್ನು ಪ್ರಾರಂಭಿಸಿ, ಸುಮಾರು ನೂರೈವತ್ತಕ್ಕೂ ಹೆಚ್ಚು ಕುಟುಂಬಗಳ ಪೋಷಕರಾಗಿರುತ್ತಾರೆ.

ಗುರುಗಾಂವ್ ಕನ್ನಡ ಸಂಘ ಮತ್ತು ಗುರುಗಾಂವ್ ಕನ್ನಡಿಗರೊಂದಿಗೆ ಸದಾ ಒಡನಾಟವನ್ನು ಇಟ್ಟುಕೊಂಡಿರುವ ಶ್ರೀ ಡಿ.ವಿ.ಎಸ್. ಮೂರ್ತಿಯವರು ಗುರುಗಾಂವ್ ಕನ್ನಡ ಸಂಘವನ್ನು ಆರಂಭಿಸುವಲ್ಲಿ ಮತ್ತು ಮುನ್ನಡೆಸುವಲ್ಲಿ ಪ್ರಮುಖ ಪಾತ್ರ ವಹಿಸಿರುತ್ತಾರೆ. ಅದರ ಹಿಂದಿನ ಅಧ್ಯಕ್ಷರಾಗಿ ಗಣನೀಯ ಸೇವೆ ಸಲ್ಲಿಸಿರುವುದಲ್ಲದೆ, ಇಂದಿನ ಕಾರ್ಯಕಾರಿಣಿ ಸಮಿತಿಗೆ ಸಲಹಾಗಾರರಾಗಿ ಮತ್ತು ಮಾರ್ಗದರ್ಶಕರಾಗಿ ಸದಾ ಕನ್ನಡ ಸೇವೆಗೆ ತಮ್ಮ ಸಮಯವನ್ನು ಮುಡಿಪಾಗಿಟ್ಟು ತನು–ಮನ–ಧನದಿಂದ ಗುರುಗಾಂವ್ ಕನ್ನಡ ಸಂಘಕ್ಕೆ ಬೆನ್ನೆಲುಬಾಗಿ ನಿಂತು ಸೇವೆ ಸಲ್ಲಿಸುತ್ತಾ ಬರುತ್ತಿರುವ ಅಪರೂಪದ ಕನ್ನಡಿಗರು. ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಇವರು 2023ರಲ್ಲಿ ನಡೆದ ಸಂಘದ ಕಾರ್ಯಕಾರಿ ಸಮಿತಿ ಆಯ್ಕೆಯ ಚುನಾವಣಾ ಅಧಿಕಾರಿಯಾಗಿ ಮತ್ತು 2021–23 ರ ಅವಧಿಗೆ ಕಾವಲು ಸಮಿತಿಯ ಸದಸ್ಯರಾಗಿ ಅತ್ಯುತ್ತಮ ಸೇವೆಯನ್ನು ಸಲ್ಲಿಸಿರುತ್ತಾರೆ. ದೆಹಲಿ ಕನ್ನಡಿಗರಿಗೆ ಮತ್ತು ದೆಹಲಿ ಕರ್ನಾಟಕ ಸಂಘಕ್ಕೆ

ಇವರು ನೀಡಿರುವ ಸಲಹೆ, ಸಹಕಾರ ಮತ್ತು ಮಾರ್ಗದರ್ಶನ ಶ್ಲಾಘನೀಯ. 2021ರಲ್ಲಿ ಗುರುಗಾಂವ್ ಕನ್ನಡ ಸಂಘವು **'ಗುರುಗಾಂವ್ ಕನ್ನಡ ಸೇವಾ'** ಪ್ರಶಸ್ತಿಯನ್ನು ಇವರಿಗೆ ನೀಡಿ ಗೌರವಿಸಿದೆ.

ಸರಳ ಸಜ್ಜನಿಕೆಯ ಸ್ವಭಾವದ ವ್ಯಕ್ತಿತ್ವವುಳ್ಳ ಶ್ರೀ ಡಿ.ವಿ. ಶ್ರೀನಿವಾಸಮೂರ್ತಿ ಅವರಿಗೆ ಹೊರನಾಡಿನಲ್ಲಿ ಕನ್ನಡ ಭಾಷೆ, ನುಡಿ, ಸಾಹಿತ್ಯ, ಕಲೆ ಸಂಸ್ಕೃತಿ ಮತ್ತು ಕನ್ನಡಪರ ಸಂಘ ಸಂಸ್ಥೆಗಳಿಗೆ ಅವರು ನೀಡುತ್ತಿರುವ ಸೇವೆಯನ್ನು ಪರಿಗಣಿಸಿ ದೆಹಲಿ ಕರ್ನಾಟಕ ಸಂಘವು 2025ನೇ ಸಾಲಿನ **'ವಿಶಿಷ್ಟ ಕನ್ನಡಿಗ'** ಪ್ರಶಸ್ತಿಗೆ ಆಯ್ಕೆ ಮಾಡಿದ್ದು, ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಶುಭಾಶಯಗಳು. (ದಿನಾಂಕ 30.11.2025ರ ಕಾರ್ಯಕ್ರಮದಲ್ಲಿ ಕಾರಣಾಂತರದಿಂದ ಶ್ರೀ ಡಿ.ವಿ.ಎಸ್. ಮೂರ್ತಿ ಅವರು ಬರಲಾಗದಿದ್ದರಿಂದ ಸಂಘದ ಮುಂದಿನ ಕಾರ್ಯಕ್ರಮವೊಂದರಲ್ಲಿ ಈ ಪ್ರಶಸ್ತಿಯನ್ನು ಅವರಿಗೆ ನೀಡಲಾಗುವುದು)



## ಶ್ರೀ ಮನೋಜ್ ಕುಮಾರ್ ಎನ್.ಎಸ್.

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ, ನಗರ್ಲೆ ಗ್ರಾಮದಲ್ಲಿ ಶ್ರೀಮತಿ ಮರಮ್ಮಣ್ಣಿ ಮತ್ತು ಶ್ರೀ ಎನ್.ಎಸ್. ನಾಗರಾಜಪ್ಪ ಅವರ ಸುಪುತ್ರರಾಗಿ ಶ್ರೀ ಮನೋಜ್ ಕುಮಾರ್ ಎನ್.ಎಸ್. ಅವರು ದಿನಾಂಕ 13.07.1971 ರಲ್ಲಿ ಜನಿಸಿದರು. ಪ್ರಾಥಮಿಕ ವಿದ್ಯಾಭ್ಯಾಸವನ್ನು ಸರಕಾರಿ ಪ್ರಾಥಮಿಕ ಶಾಲೆ, ನಗರ್ಲೆಯಲ್ಲಿ ಮುಗಿಸಿ, ಮಾಧ್ಯಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಣವನ್ನು ಸರಕಾರಿ ಶಾಲೆ, ಕೆ.ಆರ್. ನಗರದಿಂದ ಮತ್ತು ಪದವಿಪೂರ್ವ ಶಿಕ್ಷಣವನ್ನು ಜೆ.ಎಸ್.ಎಸ್. ಕಾಲೇಜು, ಚಾಮರಾಜನಗರದಿಂದ ಪಡೆದಿರುತ್ತಾರೆ. ನಂತರ ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಜೆ.ಎಸ್.ಎಸ್. ಕಾಲೇಜಿನಿಂದ 1993ರಲ್ಲಿ ಬಿ.ಕಾಂ. ಪದವಿಯನ್ನು ಹಾಗು 2004ರಲ್ಲಿ ಬುಂದೇಲ್‌ಖಂಡ್ ವಿಶ್ವವಿದ್ಯಾಲಯ, ಝಾನ್ಸಿಯಿಂದ ಎಂ.ಕಾಂ. ಸ್ನಾತಕೋತ್ತರ ಪದವಿ ಗಳಿಸಿದ್ದಾರೆ.

ಪದವಿ ಪಡೆದ ನಂತರ ಸುಮಾರು ಎರಡು ವರ್ಷಗಳ ಕಾಲ ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗ ಮಾಡಿರುತ್ತಾರೆ. 1995ರಲ್ಲಿ ಮೈಸೂರಿನ ಜೆ.ಎಸ್.ಎಸ್. ದಂತ ಮಹಾವಿದ್ಯಾಲಯದಲ್ಲಿ ನೌಕರಿಗೆ ಸೇರ್ಪಡೆಗೊಂಡು 2 ವರ್ಷಗಳ ಕಾಲ ಸೇವೆ ಮಾಡಿದ ನಂತರ 1998ರ ಏಪ್ರಿಲ್‌ನಲ್ಲಿ ಜೆ.ಎಸ್.ಎಸ್. ತಾಂತ್ರಿಕ ಮಹಾ ವಿದ್ಯಾಲಯ, ನೊಯಿಡಾಗೆ ವರ್ಗಾವಣೆಗೊಂಡು, ಅಲ್ಲಿಂದ ಇಲ್ಲಿಯವರೆಗೆ ಸತತ 28 ವರ್ಷಗಳಿಂದ ನೊಯಿಡಾದಲ್ಲಿ, ಸಹಾಯಕ ಲೆಕ್ಕಾಧಿಕಾರಿ, ಲೆಕ್ಕಾಧಿಕಾರಿಗಳಾಗಿ ಸೇವೆ ಸಲ್ಲಿಸಿ ಪ್ರಸ್ತುತ ಜೆ.ಎಸ್.ಎಸ್. ವಿಶ್ವವಿದ್ಯಾಲಯದಲ್ಲಿ (JSS University) ಹಣಕಾಸು ಅಧಿಕಾರಿ (Finance Officer)ಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವಿದ್ಯಾರ್ಥಿಯಾಗಿ ಹಾಗೂ ಸಾಮಾನ್ಯ ಸೇವಕನಾಗಿ ಸುಮಾರು 35 ವರ್ಷಗಳಿಂದ ಶ್ರೀ ಕ್ಷೇತ್ರ ಸುತ್ತೂರು ಮಠದೊಂದಿಗೆ ಒಡನಾಟವಿಟ್ಟುಕೊಂಡಿದ್ದಾರೆ ಮತ್ತು ಶ್ರೀ ಮಠದ ಎಲ್ಲಾ ಶೈಕ್ಷಣಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಕೊಡುಗೆ ನೀಡುತ್ತಿದ್ದಾರೆ.

ಸಮಾಜ ಸೇವೆ, ಸಾಹಿತ್ಯ ಮತ್ತು ಕ್ರೀಡೆ. ಶ್ರೀ ಮನೋಜ್ ಕುಮಾರ್ ಅವರ ಪ್ರಮುಖ ಹವ್ಯಾಸಗಳು ಮತ್ತು ಆಸಕ್ತಿಯ ವಿಷಯಗಳು: ಪ್ರಸ್ತುತ ನೋಯಿಡಾದಲ್ಲಿ ನೆಲೆಸಿದ್ದಾರೆ, ಇವರ ಪತ್ನಿ ಶ್ರೀಮತಿ ಚಂದ್ರಕಲಾ ಒಬ್ಬ ಆದರ್ಶ ಗೃಹಿಣಿ, ಸುಪುತ್ರಿ ಕು. ರಿದ್ಧಿ ಎಮ್ ನಗರ್ಲೆ ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದಾಳೆ. ಸುಪುತ್ರ ಕು. ಇಶಾನ್ ಎಮ್ ನಗರ್ಲೆ 11 ನೇ ತರಗತಿಯಲ್ಲಿ ಓದುತ್ತಿದ್ದಾನೆ.

1999ರಿಂದ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿರುವ ಶ್ರೀ ಮನೋಜ್ ಕುಮಾರ್ ಅವರು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಮತ್ತು ಇತರ ಸಂಘ ಸಂಸ್ಥೆಗಳ ಆಜೀವ ಸದಸ್ಯರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಇವರು ದೆಹಲಿ ಕನ್ನಡಿಗರಿಗೆ ಮತ್ತು ದೆಹಲಿ ಕರ್ನಾಟಕ ಸಂಘಕ್ಕೆ ಎಲೆ ಮರೆಕಾಯಿಯಂತೆ ತಮ್ಮದೇ ಆದ ಸಲಹೆ, ಸಹಕಾರ ಮತ್ತು ಬೆಂಬಲ ನೀಡುತ್ತಿರುವುದು ಮತ್ತು ಸಂಘದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಿರುತ್ತಿರುವುದು ಶ್ಲಾಘನೀಯ.

ಸರಳ ವ್ಯಕ್ತಿತ್ವ ಮತ್ತು ಸಹಕಾರ ಮನೋಭಾವ ಹೊಂದಿರುವ ಶ್ರೀ ಮನೋಜ್ ಕುಮಾರ್ ಎನ್.ಎಸ್. ಅವರಿಗೆ, ದೆಹಲಿ ಎನ್.ಸಿ.ಆರ್. ನಲ್ಲಿ ಕನ್ನಡ ಭಾಷೆ, ನಾಡು, ನುಡಿ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಸ್ಥಳೀಯ ಕನ್ನಡಪರ ಸಂಘ ಸಂಸ್ಥೆಗಳಿಗೆ ಅವರು ನೀಡುತ್ತಿರುವ ಸೇವೆಯನ್ನು ಪರಿಗಣಿಸಿ ದೆಹಲಿ ಕರ್ನಾಟಕ ಸಂಘವು 2025ನೇ ಸಾಲಿನ **'ವಿಶಿಷ್ಟ ಕನ್ನಡಿಗ'** ಪ್ರಶಸ್ತಿಯನ್ನು ನೀಡಿ ಗೌರವಿಸಲು ಆಯ್ಕೆ ಮಾಡಿದ್ದು, ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಶುಭಾಶಯಗಳು. (ದಿನಾಂಕ 30.11.2025 ರಂದು ನಡೆದ ಕಾರ್ಯಕ್ರಮದಲ್ಲಿ ಅನಿವಾರ್ಯ ಕಾರಣಗಳಿಂದ ಇವರು ಭಾಗಿಯಾಗಲು ಸಾಧ್ಯವಾಗದಿದ್ದ ಕಾರಣ ಸಂಘದ ಮುಂದೆ ನಡೆಯಲಿರುವ ಕಾರ್ಯಕ್ರಮದಲ್ಲಿ ಈ ಪ್ರಶಸ್ತಿಯನ್ನು ಇವರಿಗೆ ಪ್ರದಾನ ಮಾಡಲಾಗುವುದು)

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರು ಹಾಗು ಪ್ರಸಿದ್ಧ ಆಯುರ್ವೇದ ಪರಿಣಿತರಾದ ಅಪ್ಪಟ ಕನ್ನಡಿಗ **ಡಾ. ಭೀಮ ಭಟ್ಟ** ಅವರಿಗೆ 2025ರ ಸಾಲಿನ "ಧನ್ವಂತರಿ" ಪ್ರಶಸ್ತಿಯನ್ನು ದಿನಾಂಕ 12.10.2025 ರಂದು ಧನ್ವಂತರಿ ಜಯಂತಿಯ ದಿನ Integrated Medical Association (IMA-Ayush) ವತಿಯಿಂದ ನವದೆಹಲಿಯ ಎನ್‌ಡಿಎಮ್‌ಸಿ ಕನ್ವೆನ್ಷನ್ ಸೆಂಟರಿನಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನೀಡಿ ಗೌರವಿಸಲಾಗಿದೆ.

**ಡಾ. ಭೀಮ ಭಟ್ಟ** ಅವರು ಪ್ರಸ್ತುತ ಗುರುಗ್ರಾಮದ ಮೇದಾಂತ ಮೆಡಿಸಿಟಿಯ ಆಯುರ್‌ವೈದ್‌ನ ಮೆಡಿಕಲ್ ಡೈರೆಕ್ಟರ್ ಆಗಿ ಮತ್ತು ನವದೆಹಲಿಯ ಡಿಫೆನ್ಸ್ ಕಾಲೋನಿಯ ಮೆಡಿಕ್ಲಿನಿಕ್‌ನಲ್ಲಿ ಮೆಡಿಕಲ್ ಡೈರೆಕ್ಟರ್ ಆಗಿಯೂ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ದೆಹಲಿ ಕರ್ನಾಟಕ ಸಂಘದಲ್ಲಿ ಇಲ್ಲಿನ ಕನ್ನಡಿಗರಿಗೆ ಆಯುರ್ವೇದ ಸಂಬಂಧಿತ ಉಚಿತ ವೈದ್ಯಕೀಯ ಪರಾಮರ್ಷೆ ಹಾಗು ಆರೋಗ್ಯ ಸಲಹೆಗಳನ್ನು ಇವರು ನಿರಂತರವಾಗಿ ನೀಡಿರುತ್ತಾರೆ. **ಡಾ. ಭೀಮ ಭಟ್ಟ ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಅಭಿನಂದನೆಗಳು.** ❑






ತಾಲೂಕು ಮಂಡಳಿ ಹುಲಸೂರ ವತಿಯಿಂದ, ಕರ್ನಾಟಕ ರಾಜ್ಯೋತ್ಸವ ಗೌರವ ಸನ್ಮಾನಿತರಾದ ಹಿರಿಯ ದೆಹಲಿ ಕನ್ನಡಿಗ, ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಸಂಘದ ಅಧ್ಯಕ್ಷರಾದ **ಶ್ರೀ ವಿ.ವಿ. ಬಿರಾದಾರ** ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಗೌರವಪೂರ್ವಕ ಅಭಿನಂದನೆಗಳು.

# ರಾಷ್ಟ್ರ ರಾಜಧಾನಿಯಲ್ಲಿ ರಾಷ್ಟ್ರಕವಿ ಕುವೆಂಪು ಕುರಿತು ರಾಷ್ಟ್ರೀಯ ವಿಚಾರ ಸಂಕಿರಣ ಮತ್ತು ಅವರಿಗೆ ಭಾರತರತ್ನ ಪುರಸ್ಕಾರ ನೀಡಲು ಮನವಿ



ದೆಹಲಿ ಕರ್ನಾಟಕ ಸಂಘದ ಕಾರ್ಯಶೀಲ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿ ಯಶಸ್ವಿಯಾಗಿಸಿ ರಾಷ್ಟ್ರಮಟ್ಟದಲ್ಲಿ ಇತಿಹಾಸ ಸೃಷ್ಟಿಸಿದ್ದಾರೆ. ಇಂತಹದೇ ಒಂದು ಐತಿಹಾಸಿಕ ಕಾರ್ಯಕ್ರಮ ಮನುಜ ಮತ ವಿಶ್ವ ಪಥ ಎಂದು ಸಾರಿದ ಪದ್ಮವಿಭೂಷಣ ಹಾಗೂ ಜ್ಞಾನಪೀಠ ಪುರಸ್ಕೃತ ರಾಷ್ಟ್ರಕವಿ ಕುವೆಂಪು ಅವರ ಸಾಧನೆ ಮತ್ತು ಕೊಡುಗೆ ಕುರಿತು ಆಯೋಜನೆಗೊಂಡ ವಿಚಾರ ಸಂಕಿರಣ. ದಿನಾಂಕ 17.12.2025 ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದ ವೇದಿಕೆಯಲ್ಲಿ ಬಹು ಅರ್ಥಪೂರ್ಣವಾದ ಈ ರಾಷ್ಟ್ರಮಟ್ಟದ ಕಾರ್ಯಕ್ರಮವನ್ನು ಮೈಸೂರಿನ ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್ ಮತ್ತು ದೆಹಲಿ ಕರ್ನಾಟಕ ಸಂಘದ ಜಂಟಿ ಆಶ್ರಯದಲ್ಲಿ ರಾಷ್ಟ್ರಕವಿ ಕುವೆಂಪು ಅವರ ಶ್ರೇಷ್ಠ ಸಾಧನೆ ಮತ್ತು ಅತ್ಯುನ್ನತ ಕೊಡುಗೆಗಳಿಗಾಗಿ ಅವರಿಗೆ ಭಾರತ ರತ್ನ ಪ್ರಶಸ್ತಿ ನೀಡುವ ಬಗ್ಗೆ ಭಾರತ ಸರ್ಕಾರಕ್ಕೆ ಮನವಿ ಮಾಡುವ ಸದುದ್ದೇಶದಿಂದ ಹಮ್ಮಿಕೊಳ್ಳಲಾಗಿತ್ತು. ಸಭಾ ಕಾರ್ಯಕ್ರಮ ಶುರುವಾಗುವುದಕ್ಕೂ ಮೊದಲು ಸ್ಥಳೀಯ ಕನ್ನಡಿಗ ಮಹಿಳೆಯರಿಂದ ಕುವೆಂಪು ವಿರಚಿತ ನಾಡಗೀತೆಯನ್ನು ಹಾಡುವ ಮೂಲಕ ಕುವೆಂಪು ಅವರಿಗೆ ನುಡಿ ನಮನ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯವಹಿಸಿದ ಪೂಜ್ಯ ಸ್ವಾಮೀಜಿಗಳು ಮತ್ತು ಅತಿಥಿಗಣ್ಯರಿಂದ ಜ್ಯೋತಿಯನ್ನು ಪ್ರಜ್ವಲಿಸಲಾಯಿತು. ನಂತರ ಕುವೆಂಪು ಅವರ ಚಿತ್ರಪಟಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆ ನೀಡಲಾಯಿತು. ವೇದಿಕೆ ಮೇಲಿದ್ದ ಪರಮಪೂಜ್ಯರನ್ನು ಮತ್ತು ಅತಿಥಿ ಗಣ್ಯರನ್ನು ಮೈಸೂರಿನ ವಿಶ್ವ ಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಹೆಚ್.ಕೆ. ರಾಮು ಅವರು ಎಲ್ಲರ ಪರವಾಗಿ ಆತ್ಮೀಯವಾಗಿ ಸ್ವಾಗತಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಪ್ರಾಸ್ತಾವಿಕ ಮಾತನಾಡಿದರು. ಹಿರಿಯ ನಿವೃತ್ತ ಐಎಎಸ್ ಅಧಿಕಾರಿಗಳಾದ ಡಾ. ಸಿ. ಸೋಮಶೇಖರ್ ಆಶಯ ನುಡಿಗಳನ್ನಾಡಿದರು. ಕೇಂದ್ರ ಸರ್ಕಾರದ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಇಲಾಖೆ ಸಚಿವರಾದ ಸನ್ಮಾನ್ಯ ಶ್ರೀ ಗಜೇಂದ್ರ ಸಿಂಗ್ ಶೇಖಾವತ್ ಅವರು ಭಾರತ ಸರ್ಕಾರದ ಪರವಾಗಿ ರಾಷ್ಟ್ರಕವಿ ಕುವೆಂಪು ಅವರಿಗೆ ಭಾರತ ರತ್ನ ಪ್ರಶಸ್ತಿಯನ್ನು ನೀಡುವಂತೆ ಮಾಡಿದ ಮನವಿಯನ್ನು ಸ್ವೀಕರಿಸಿ ಮಾತನಾಡುತ್ತಾ ಕುವೆಂಪು ಅವರು ಕನ್ನಡ ಭಾಷೆಯನ್ನು ವಿಶ್ವದಾದ್ಯಂತ ಗೌರವ ಮೂಡುವಂತಹ ಕೆಲಸ ಮಾಡಿದ್ದಾರೆ ಈ ಕಾರ್ಯಕ್ರಮ ಕೇವಲ ಒಬ್ಬ ಕವಿ ಸಾಹಿತಿ ಬರಹಗಾರರಿಗಾಗಿ ಮಾಡಿದ ಔಪಚಾರಿಕ ಸ್ಮರಣ ಕಾರ್ಯಕ್ರಮವಲ್ಲ, ಬದಲಿಗೆ ಒಂದು ಗಂಭೀರವಾದ ಭೌತಿಕ ಸಂವಾದವನ್ನು 20ನೇ ಶತಮಾನದಲ್ಲಿ ಯಾವ ಕವಿ ತಮ್ಮ ಬರವಣಿಗೆಯಿಂದ ಕನ್ನಡ ಭಾಷೆಯನ್ನು ಉತ್ತುಂಗ ಸ್ಥಿತಿಗೆ ಕೊಂಡೊಯ್ದರೋ, ಕನ್ನಡ ಭಾಷೆಗೆ ಒಂದು ಹೊಸ ಚೈತನ್ಯ ಕೊಟ್ಟರೋ, ಆ ಮಹಾನ್ ಚೇತನವಾದ ರಾಷ್ಟ್ರಕವಿ ಕುವೆಂಪು ಅವರ ಸಾಧನೆ ತುಂಬಾ ದೊಡ್ಡದು ಅವರಿಗೆ ಭಾರತ ರತ್ನ ಪ್ರಶಸ್ತಿ ನೀಡುವಂತೆ ತಾವು ಸಹ ತಮ್ಮ ಇಲಾಖೆಯಿಂದ ಭಾರತ ಸರ್ಕಾರಕ್ಕೆ ಮನವಿ ಸಲ್ಲಿಸುವುದಾಗಿ ಆಶ್ವಾಸನೆ ನೀಡಿದರು.

ಭಾರತೀಯ ಜನತಾ ಪಾರ್ಟಿಯ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಯಾದ ಶ್ರೀ ಬಿ.ಎಲ್. ಸಂತೋಷ್ ಅವರು ಕನ್ನಡ, ಇಂಗ್ಲಿಷ್ ಮತ್ತು ಹಿಂದಿ ಈ ಮೂರು ಭಾಷೆಗಳಲ್ಲಿ ಕುವೆಂಪು ಕುರಿತಾದ ಲೇಖನಗಳನ್ನೊಳಗೊಂಡ 'ತ್ರಿರಂಗ' ಎಂಬ ಕೃತಿಯನ್ನು ಬಿಡುಗಡೆ ಮಾಡಿ ಮಾತನಾಡುತ್ತಾ ಕನ್ನಡ ನಾಡಿನಿಂದ ಬಹು ದೂರ ಇರುವ ದೆಹಲಿಯಲ್ಲಿ ಕನ್ನಡದ ಕಂಪನ್ನು, ಕನ್ನಡದ ಮಣ್ಣಿನ ಸೊಗಡನ್ನು ಆಗಾಗ ನೆನಪಿಸುವಂತಹ ಕಾರ್ಯಕ್ರಮಗಳನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಸಿ.ಎಂ. ನಾಗರಾಜ ಅವರ ನೇತೃತ್ವದಲ್ಲಿ ಮಾಡುತ್ತಲೇ ಬಂದಿದ್ದಾರೆ ಮತ್ತು ಈಗ ರಾಷ್ಟ್ರಕವಿ ಕುವೆಂಪು ಅವರ ಸಾಧನೆ ಕೊಡುಗೆ ಕುರಿತು ಈ ಕಾರ್ಯಕ್ರಮ ಆಯೋಜಿಸಲಾಗಿರುವುದು ಬಹಳ ಸಂತೋಷದ ಸಂಗತಿ ಎಂದರು. ಕುವೆಂಪು ಅವರು ಮಹಾ ಮಾನವತಾವಾದಿಗಳು, ಇಂದು ಅವರ ಸಂಸ್ಮರಣೆಯಲ್ಲಿ ನಾವೆಲ್ಲಾ ಸೇರಿದ್ದೇವೆ ಜಾತಿಯ ಅಂಧಾಭಿಮಾನ ತುಂಬಾ ಇರುವಂತ ಈ ಕಾಲದಲ್ಲಿ ಜಾತಿಯ ಅಭಿಮಾನಿಗಳು ಬಹಳ ಜನ ಸಿಗುತ್ತಾರೆ, ಆದರೆ ಹುಟ್ಟಿದ ಜಾತಿಗೆ ಸಮಾಜಕ್ಕೆ ಶ್ರೇಷ್ಠವಾದಂತವರು ಮಹಾಮಾನವತಾವಾದಿ ಕುವೆಂಪು ಅವರು. ತಮ್ಮ ಸ್ವಾರ್ಥಕ್ಕೆ ಆಸ್ತಿ ಮಾಡಿಕೊಳ್ಳುವಂತವರು ಅಸಂಖ್ಯಾವಾಗಿ ಸಿಗುತ್ತಾರೆ ಆದರೆ ಹುಟ್ಟಿದ ಊರಿಗಾಗಿ, ಹುಟ್ಟಿದ ನಾಡಿಗಾಗಿ, ನುಡಿಗಾಗಿ ಮತ್ತು ದೇಶಕ್ಕಾಗಿ ಆಸ್ತಿಯಾಗುವವರು ಕುವೆಂಪು ಅವರಂಥಹವರು ಮಾತ್ರ. ಭಾಷೆಯ ಅಂಧಾಭಿಮಾನ ಇಂದು ಪ್ರದೇಶವನ್ನೇ ವಿಭಜನೆ ಮಾಡುವಷ್ಟು ಮುಂದುವರಿದಿದೆ, ಈ ಸಂದರ್ಭಕ್ಕೆ ಹೋಲಿಸಿದರೆ ಹಿಂದಿನ ಕಾಲದಲ್ಲಿ ಅದ್ಯಾವುದೇ ಗೋಜಿಗೆ ಸಿಲುಕದೆ ಕುವೆಂಪು ಅವರು 75 ವರ್ಷದ ಹಿಂದೆಯೇ ಜಯ ಭಾರತ ಜನನಿಯ ತನುಜಾತೆ ಜಯ ಹೇ ಕರ್ನಾಟಕ ಮಾತೆ ಎಂದು ಬರೆದು ಸಹ ಬಾಳ್ವೆಯ ಸಹಜೀವನದ ಭಾವೈಕ್ಯತೆಯ ಸಂದೇಶವನ್ನು ಸಾರಿದಂತವರು. ಅಂತಹ ಮಹನೀಯರನ್ನು ನೆನಪು ಮಾಡಿಕೊಳ್ಳುವಂತಹ ಸದಾವಕಾಶ ಸಿಕ್ಕಿದ್ದು ನಮ್ಮ ಪುಣ್ಯ ಎಂದು ಕುವೆಂಪು ಅವರ ಹಲವಾರು ಕಾವ್ಯ, ಕಾದಂಬರಿ, ಕಥನಗಳನ್ನು ವ್ಯಾಖ್ಯಾನಿಸಿ ಕುವೆಂಪು ಅವರಿಗೆ ಭಾರತ ರತ್ನ ಪ್ರಶಸ್ತಿಯನ್ನು ಭಾರತ ಸರ್ಕಾರದಿಂದ ನೀಡುವಂತೆ ತಾವು ಸಹ ಹೃದಯಪೂರ್ವಕ ಮನವಿ ಮಾಡುವುದಾಗಿ ತಿಳಿಸಿದರು.

ಭಾರತ ಸರ್ಕಾರದ ಉಕ್ಕು ಮತ್ತು ಭಾರಿ ಕೈಗಾರಿಕೆಗಳ ಸಚಿವರಾದ ಸನ್ಮಾನ್ಯ ಶ್ರೀ ಎಚ್.ಡಿ. ಕುಮಾರಸ್ವಾಮಿ ಅವರು ಮಾತನಾಡುತ್ತಾ ಕುವೆಂಪು ಅವರ ಸಾಹಿತ್ಯವನ್ನು ಓದಿಕೊಂಡು ಬೆಳೆದವನು ನಾನು. ಅವರ ಸಾಧನೆ ಕೃತಿಗಳ ಬಗ್ಗೆ ದಾಖಲಿಸುತ್ತಾ ಕುವೆಂಪು ಅವರು ನಾನು ಮುಂದಿನ ಜನ್ಮದಲ್ಲಿ ಹುಟ್ಟಿದರೆ ಸಸ್ಯ ಕಾಶಿಯಲ್ಲಿ ಹುಟ್ಟುವ ಆಸೆ ಇದೆ ಎಂದು ಹೇಳಿದ್ದರು. ಹಿಂದಿನ ಕಾಲದಲ್ಲಿ ಮೂಲ ಸೌಕರ್ಯ ಸೌಲಭ್ಯಗಳಿಗೆ ಕೊರತೆ ಇತ್ತು ಆದರೆ ಮನುಷ್ಯನ ನೆಮ್ಮದಿಗೆ ಕೊರತೆ ಇರಲಿಲ್ಲ ಆದರೆ ಈಗ ಪ್ರತಿಯೊಂದು ಸೌಲಭ್ಯಗಳಿವೆ ಆದರೆ ನೆಮ್ಮದಿಯ ಕೊರತೆ ನಮ್ಮೆಲ್ಲರಿಗೂ ಇದೆ. ಆದ್ದರಿಂದ ನನಗೆ ಈ ಜನುಮದಲ್ಲಿಯೆ ಕುವೆಂಪು ಅವರು ಹೇಳಿದಂತೆ ಸಸ್ಯಕಾಶಿ ಕಾಡಿನಲ್ಲಿ ಎಲ್ಲಾ ಜಂಜಾಟಗಳನ್ನು ತೊರೆದು ನೆಮ್ಮದಿಯಾಗಿ ಕಾಡಿನಲ್ಲಿ ವಾಸಿಸಿದರೆ ನೆಮ್ಮದಿ ಸಿಗುತ್ತದೆ ಎಂಬ ತಮ್ಮ ಅಭಿಲಾಷೆಯನ್ನು ವ್ಯಕ್ತಪಡಿಸುತ್ತಾ ಕುವೆಂಪು ಅವರಿಗೆ ಭಾರತ ರತ್ನ




ಕೊಡುವಂತೆ ತಾವು ಸಹಾ ಪ್ರಾಮಾಣಿಕವಾಗಿ ಭಾರತ ಸರ್ಕಾರಕ್ಕೆ ಮನವಿ ಮಾಡುವೆ ಎಂದು ಆಶ್ವಾಸನೆ ನೀಡಿ ಕುವೆಂಪು ಅವರಿಗೆ ಭಾರತ ರತ್ನ ಪ್ರಶಸ್ತಿ ಸಿಕ್ಕರೆ ಅದು ಆ ಭಾರತ ರತ್ನ ಪ್ರಶಸ್ತಿಗೆ ಒಂದು ಕಳೆ ಬರುತ್ತದೆ ಎಂದು ಹೇಳಿದರು.

ಖ್ಯಾತ ಹೃದ್ರೋಗ ತಜ್ಞರು ಹಾಗೂ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದರಾದ ಡಾ. ಸಿ.ಎನ್. ಮಂಜುನಾಥ್ ಅವರು ಮಾತನಾಡುತ್ತಾ ವ್ಯಕ್ತಿಗಳು ಮನೆಮನೆಯಲ್ಲೂ ಹುಟ್ಟುತ್ತಾರೆ ಆದರೆ ಶ್ರೇಷ್ಠ ವ್ಯಕ್ತಿತ್ವ ಇರುವಂತಹವರು ತುಂಬಾ ವಿರಳ, ಅಂತಹವರಲ್ಲಿ ಒಬ್ಬರು ನಮ್ಮ ಕುವೆಂಪು. ಮಲೆನಾಡನ್ನು ಕರ್ನಾಟಕದ ಕಾಶ್ಮೀರ ಎಂದು ಕರೆದ ಅವರು ತಮ್ಮ ಸಾಹಿತ್ಯ ಕ್ಷೇತ್ರದಿಂದ ಜಗತ್ಪ್ರಸಿದ್ಧರಾಗಿದ್ದಾರೆ. ಉಸಿರು ಹೋದ ಮೇಲೆ ಹೆಸರಿರಬೇಕು ಮತ್ತು ಅವರ ಹೆಸರು ಹೇಳಿದರೆ ಯಾವುದೇ ಕೆಲಸವಾಗಬೇಕು ಅಂತಹ ಸಾಧನೆ ಕುವೆಂಪು ಅವರದು. ಅವರಿಗೆ ಭಾರತ ರತ್ನ ಈಗಾಗಲೇ ಬರಬೇಕಿತ್ತು, ಆದರೆ ಈಗಾದರೂ ಬರಲಿ ಎಂದರು. ಈಗಿನ ಪೀಳಿಗೆಯವರು ಆಧುನಿಕ ಜೀವನಕ್ಕೆ ಕಟ್ಟುಬಿದ್ದು ತಮ್ಮ ನೆಮ್ಮದಿಯನ್ನು ಹಾಳು ಮಾಡಿಕೊಳ್ಳುತ್ತಿದೆ ಮತ್ತು ನಿದ್ರೆಯನ್ನು ಸಮಯ ತಪ್ಪಿ ಪ್ರಕೃತಿಯ ನಿಯಮ ಮೀರಿ ಬಾಳುತ್ತಿದ್ದಾರೆ, ಇನ್ನೂ ದೊಡ್ಡ ವಿಚಾರವೆಂದರೆ ಈಗಿನ ಆಧುನಿಕ ಜೀವನದ ಶೈಲಿಯಲ್ಲಿ ಅವರು ಬೆಳಿಗ್ಗೆ 10 ಗಂಟೆಗೆ ನಿದ್ರೆಯಿಂದ ಎಚ್ಚರಗೊಳ್ಳಲು ಸಹಾ ಅಲಾರಾಂ ಹಾಕುವಂತಹ ಪರಿಸ್ಥಿತಿ ತಲುಪಿದ್ದಾರೆ ಎಂದು ನಯವಾಗಿ ಹಾಸ್ಯದ ಮೂಲಕವಾಗಿ ಎಲ್ಲರಿಗೂ ಎಚ್ಚರಿಸಿದರು.

ಕನ್ನಡಿಗ ಐ.ಆರ್.ಎಸ್. ಅಧಿಕಾರಿ ಆದಾಯ ತೆರಿಗೆ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಜಯರಾಮ್ ರಾಯಪುರ ಅವರು ತಮ್ಮ ಭಾಷಣದಲ್ಲಿ ಕುವೆಂಪು ಅವರು ಒಬ್ಬ ಶೂದ್ರ ಸಮುದಾಯದಲ್ಲಿ ಹುಟ್ಟಿದವರು.ಒಬ್ಬ ಶೂದ್ರನಿಂದ ಅತ್ಯುನ್ನತ ಮತ್ತು ಶ್ರೇಷ್ಠವಾದ ಸಾಹಿತ್ಯ ಸಾಧನೆ ಸಾಧ್ಯವಾಗುತ್ತದೆ ಎಂಬ ನಂಬಿಕೆ ಇಲ್ಲದಂತ ಕಾಲದಲ್ಲಿ ಅವರು ಅತ್ಯಂತ ಶ್ರೇಷ್ಠವಾದ ವಿಶಿಷ್ಟವಾದ ಉತ್ಕೃಷ್ಟವಾದ ಸಾಹಿತ್ಯವನ್ನು ಸೃಷ್ಟಿ ಮಾಡಿದ್ದಾರೆ ಅಲ್ಲದೆ ಇದರಿಂದ ಇಡೀ ಶೂದ್ರ ಸಮುದಾಯಕ್ಕೆ ಹಾಗೂ ತಳ ಸಮುದಾಯಕ್ಕೆ ಜಾಗೃತಿ ಮೂಡಿಸುವಂತಹ ಸಾಧನೆ ಅವರ ಬರವಣಿಗೆಯ ಮೂಲಕವೇ ಸ್ಪಷ್ಟವಾಗುತ್ತದೆ. ಭಾರತೀಯ ತತ್ವ ಮಿಮಾಂಸೆ ಮತ್ತು ಭಾರತೀಯ ಧರ್ಮಸಾರವನ್ನು ಕುವೆಂಪು ಅವರು ತಮ್ಮ ಎಲ್ಲಾ ಕೃತಿಗಳಲ್ಲಿ ಅತ್ಯಂತ ದಟ್ಟವಾಗಿ ಜಿನುಗುವಂತೆ ಸೃಷ್ಟಿಸಿಕೊಟ್ಟಿದ್ದಾರೆ. ಮಲೆಗಳಲ್ಲಿ ಮದುಮಗಳು ಕಾದಂಬರಿಯ ಮೂಲಕ ನಾಯಿಗುತ್ತಿ ಕಥೆ ಹೇಳುತ್ತಾ ಆಧುನಿಕವಾಗಿ ಬದಲಾವಣೆಯನ್ನು ಕಾಣಬಯಸುವ ಮೊಟ್ಟಮೊದಲ ಸಾಹಿತಿಯಾದ ಅವರು ಕಾವ್ಯ, ಕಾದಂಬರಿ, ನಾಟಕದಂತಹ ಮೂರೂ ಪ್ರಕಾರಗಳಲ್ಲಿ ವಿಶ್ವಕ್ಕೆ ಮಾದರಿಯಾಗುವಂತಹ ಸರ್ವ ಶ್ರೇಷ್ಠ ಸಾಹಿತ್ಯ ಕೃಷಿ ಮಾಡಿದ್ದಾರೆ. ಆದ್ದರಿಂದ ಅವರಿಗೆ ಭಾರತರತ್ನ ಪ್ರಶಸ್ತಿಯನ್ನು ನೀಡುವ ಮೂಲಕ ಭಾರತ ಸರ್ಕಾರವು ಅವರನ್ನು ಗೌರವಿಸಬೇಕು ಎಂದರು.

ಶ್ರೀ ಶಿವಾನುಭವ ಚರಮೂರ್ತಿ ಶಿವರುದ್ರ ಮಹಾಸ್ವಾಮಿಗಳು, ಶ್ರೀ ಬೇಲಿಮಠ ಬೆಂಗಳೂರು ಅವರು ಮಾತನಾಡುತ್ತಾ ರಾಷ್ಟ್ರಹಿತವನ್ನು, ರಾಜ್ಯ ಹಿತವನ್ನು ಮತ್ತು ಸಾಮಾಜಿಕ ಚಿಂತನೆಯನ್ನು ಯಾವತ್ತೂ ಬಿಟ್ಟುಕೊಡದಂತಹ ಅದ್ಭುತವಾದ ಅಭಿವ್ಯಕ್ತಿ ಕುವೆಂಪು ಅವರದು. ತಮ್ಮ ಬದುಕನ್ನೇ ಬೆಳಕಾಗಿಸಿಕೊಂಡು ಎಲ್ಲರೊಳಗೊಂದಾಗಿ, ಎಲ್ಲರಿಗೂ ಬೇಕಾಗಿ ಎಲ್ಲರ ಬಾಳ ಬದುಕಿನಲ್ಲಿ ಬೆಳಕಾಗಿರುವಂತಹ ಮಹಾನ್ ಚೇತನ ಕುವೆಂಪು. ಅವರ ಬರವಣಿಗೆಯಲ್ಲಿ ಅವರ ಹೃದಯದ ಮಿಡಿತವೇ ಆಕಾರಗೊಂಡು ಅಕ್ಷರ ರೂಪದಲ್ಲಿ ಕಾಣಿಸಿಕೊಳ್ಳುತ್ತದೆ, ಕುವೆಂಪು ಅವರಿಗೆ ಭಾರತರತ್ನ ಕೊಟ್ಟರೆ ಭಾರತ ರತ್ನದ ಪಾವಿತ್ರ್ಯತೆ ಅದರ ಬೆಳಕು ವಿಶ್ವದಾದ್ಯಂತ ಹೆಚ್ಚುತ್ತದೆ ಎಂದರು.

ಶ್ರೀ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಮಾದಾರಚೆನ್ನಯ್ಯ ಗುರುಪೀಠ, ಚಿತ್ರದುರ್ಗ ಅವರು ಮಾತನಾಡುತ್ತಾ ನಮಗೆ ಜಾಗೃತಿ ಎಂಬುದು ಈಗ ತಾನೇ ಬರುತ್ತಿದೆ ನಾವು ಕುವೆಂಪು ಅವರನ್ನು ಹಿಮಾಲಯದ ಎತ್ತರಕ್ಕೆ ಕೊಂಡೊಯ್ಯಬೇಕು, ವಿಶ್ವಮಾನವರಾಗಿ ವಿಶ್ವ ಭೂಪಟದಲ್ಲಿ ನಿಲ್ಲಿಸಬೇಕು. ಸಾಹಿತ್ಯ ಕ್ಷೇತ್ರದಲ್ಲಿ ಅನೇಕ ಸಾಹಿತಿಗಳನ್ನು ಕವಿಗಳನ್ನು ಮೀರಿಸಿದಂತಹ ಸಾಹಿತ್ಯ ಕೃಷಿ ಮಾಡಿದ ಹೆಮ್ಮೆಯ ಪುತ್ರ ನಮ್ಮ ನಾಡಿನ ಕುವೆಂಪು. ಬುದ್ಧ ದಯವೇ ಧರ್ಮದ ಮೂಲ ಎಂದರು. ಆದಿಕವಿ ಪಂಪನವರು ಮನುಷ್ಯ ಜಾತಿ ತಾನೊಂದೇ ವಲಂ ಎಂದರು ಹಾಗೆ ಕುವೆಂಪು ಮನುಜ ಮತ ವಿಶ್ವ ಪಥ ಎಂದು ಸಾರಿದರು ಅಂತಹ ವಿಶ್ವ ಮಾನವರಿಗೆ ಭಾರತರತ್ನ ನೀಡಿ ಗೌರವಿಸಬೇಕಾಗಿದೆ ಅವರಿಗೆ ಭಾರತ ರತ್ನ ಸಿಕ್ಕರೆ ಒಂದು ಶೋಷಿತ ವರ್ಗಕ್ಕೆ ಸಾಮಾಜಿಕ ನ್ಯಾಯ ಸಿಕ್ಕಂತಾಗುವುದು ಎಂದರು.

ಬೆಂಗಳೂರಿನ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಡಾ. ನಿಶ್ಚಲಾನಂದನಾಥ ಸ್ವಾಮಿ ಅವರು ಮಾತನಾಡುತ್ತಾ ಈ ಜಗತ್ತು ಕಂಡ ಅದ್ಭುತ ಸಂತ ಕವಿ ವಿಶ್ವಮಾನವ ಪ್ರಜ್ಞೆಯನ್ನು ಮೊದಲಿಗೆ ತಮ್ಮ ಸಾಹಿತ್ಯದಲ್ಲಿ ಪ್ರಕಟಿಸಿದ ಮಣ್ಣಿನ ಮಗ ಕುವೆಂಪು. ಶೂದ್ರ ಸಮುದಾಯದಲ್ಲಿ ಇಂತಹ ಒಂದು ವಿಸ್ಮಯವಾದ ಸಾಹಿತ್ಯವನ್ನು ಸೃಷ್ಟಿ ಮಾಡಬಹುದು ಎಂದು ಜಗತ್ತಿಗೆ ತೋರಿಸಿದಂತಹ ಶ್ರೇಷ್ಠ ಕವಿಯಾದ ಕುವೆಂಪು ಅವರಿಗೆ ಭಾರತರತ್ನ ನೀಡಿದ್ದೇ ಆದರೆ ಅದು ಕನ್ನಡಿಗರಿಗೆ ಅತ್ಯಂತ ಸಂತೋಷದ ಕ್ಷಣ ಮತ್ತು ಭಾರತ ಸರ್ಕಾರದಿಂದ ದ್ರಾವಿಡ ಭಾಷೆ ಕನ್ನಡಕ್ಕೆ ಕೊಟ್ಟ ದೊಡ್ಡ ಗೌರವ ಆಗಿರುತ್ತದೆ, ಕುವೆಂಪು ಅವರ ಸಾಹಿತ್ಯವು ಎಲ್ಲಾ ಭಾಷೆಗೆ ಅನುವಾದವಾಗಿದ್ದರೆ ನೋಬೆಲ್ ಪಾರಿತೋಷಕ ಪಡೆದ ಎರಡನೇ ಭಾರತೀಯರಾಗುತ್ತಿದ್ದರು.



ಕುವೆಂಪು ಈ ಜಗತ್ತಿಗೆ ಭಾರತೀಯ ಸಂಸ್ಕೃತಿಯನ್ನು ಪ್ರತಿನಿಧಿಸಿದಂತ, ಭಾರತೀಯ ಸಂಸ್ಕೃತಿಯ ಘನತೆಯಾದಂತ ವೇದಗಳು ಉಪನಿಷತ್ತುಗಳು ಮತ್ತು ಭಗವದ್ಗೀತೆಯಂತಹ ಶ್ರೇಷ್ಠ ದರ್ಶನವನ್ನು ಜಗತ್ತಿಗೆ ಮಾಡಿಕೊಟ್ಟ ಸ್ವಾಮಿ ವಿವೇಕಾನಂದರ ಮತ್ತೊಂದು ಅವತಾರ. ಇಂತಹ ಶ್ರೇಷ್ಠ ಕವಿ ಸಂತನಿಗೆ ಭಾರತರತ್ನ ಸಿಕ್ಕರೆ ಭಾರತ ರತ್ನದ ತೂಕ ಹೆಚ್ಚಾಗುತ್ತದೆ ಎಂದರು.

ಸ್ಫಟಿಕಪುರಿ ಮಹಾಸಂಸ್ಥಾನ ಮಠದ ಶ್ರೀ ಡಾ. ನಂಜಾವಧೂತ ಮಹಾಸ್ವಾಮೀಜಿ ಅವರು ಮಾತನಾಡುತ್ತಾ ನಾಡಿಗೆ ಒಳಿತಾಗುವುದಾದರೆ, ದೇಶಕ್ಕೆ ಒಳಿತಾಗುವುದಾದರೆ ಸನ್ಮಾನ್ಯ ಎಚ್.ಡಿ. ಕುಮಾರಸ್ವಾಮಿ ಅವರು ನೊಂದವರ ಪರವಾಗಿ ನಿಲ್ಲುವ ಹೃದಯ ವೈಶಾಲ್ಯತೆ ಇರುವ ರಾಜಕಾರಣಿ ಎಂದರು. ದೆಹಲಿಯಂತಹ ನಗರದಲ್ಲಿ ನಮ್ಮಂತ ಎಲ್ಲ ಕನ್ನಡಿಗರಿಗೆ ದೊಡ್ಡ ಭರವಸೆ ಎಂದರೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಅವರು ಎಂತೆಂತಹ ದೊಡ್ಡ ದೊಡ್ಡವರನ್ನು ಕರೆಯಿಸಿ ಇಂತಹ ದೊಡ್ಡ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿದ್ದಾರೆ, ಸನ್ಮಾನ್ಯ ಪ್ರಧಾನಿ ನರೇಂದ್ರ ಮೋದಿಯವರನ್ನು ಕರೆಸಿ ಸಂಘದ ಅಮೃತ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿದರು, ಹಾಗೆ ನಾಡಪ್ರಭು ಕೆಂಪೇಗೌಡ ಫೌಂಡೇಶನ್‌ನಿಂದ ಕಾರ್ಯಕ್ರಮವನ್ನು ಮಾಡಿ ಅಂದಿನ ರಾಷ್ಟ್ರಪತಿ ಪ್ರಣಬ್ ಮುಖರ್ಜಿಯವರನ್ನು ಕರೆಯಿಸಿದ್ದರು, ಎಂದು ಶ್ಲಾಘಿಸಿದರು. ಕುವೆಂಪು ಅವರು ಸುಲಭವಾಗಿ ಅರ್ಥೈಸಿಕೊಳ್ಳಲಾಗದ ದೊಡ್ಡ ಪ್ರತಿಭೆ ಮತ್ತು ಎಲ್ಲಾ ವಿಧವಾದ ಸಾಹಿತ್ಯವನ್ನು ಬರೆದವರು, ಅವರಿಗೆ ಭಾರತರತ್ನ ಸಿಗಲೇಬೇಕು, ನಮ್ಮ ದೊಡ್ಡ ದೊಡ್ಡ ರಾಜಕಾರಣಿಗಳು, ಮಂತ್ರಿಗಳು ಎಲ್ಲಾ ಹಿರಿಯ ಸಾಹಿತಿಗಳು, ಬರಹಗಾರರು ಸೇರಿ ಭಾರತ ಸರ್ಕಾರಕ್ಕೆ ಮನವಿ ಮಾಡಿ ಕುವೆಂಪು ಅವರಿಗೆ ಭಾರತ ರತ್ನ ಪ್ರಶಸ್ತಿ ಸಿಗಲು ಪ್ರಯತ್ನಿಸಬೇಕು ಎಂದರು.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ ಅವರು ಮಾತನಾಡುತ್ತಾ ಕಳೆದ 5000 ವರ್ಷಗಳ ಹಿಂದಿನ ಭಾರತ ಕೇವಲ 3 ವರ್ಣಗಳಿಗೆ ಸೀಮಿತವಾಗಿತ್ತು ಇನ್ನು ಮುಂದಿನ ಭವಿಷ್ಯದ ಭಾರತ ನಿರ್ಮಾಣವಾಗಬೇಕೆಂದರೆ ಪಾದದಳಿತವಾಗಿರುವಂತಹ ಮತ್ತು ಅವಗಣನೆಗೆ ಒಳಗಾಗಿರುವಂತಹ ಒಂದು ಸಮುದಾಯ ಮೇಲೆದ್ದು ಕೆಲಸ ಮಾಡದೇ ಹೋದರೆ, ಅವರನ್ನು ಮೇಲಕ್ಕೆ ಎತ್ತದೆ ಹೋದರೆ ಯಾವುದೇ ಕಾರಣಕ್ಕೂ ಭಾರತ ಮೇಲಕ್ಕೇರಲು ಸಾಧ್ಯವಿಲ್ಲ. ಬಹು ಪಾಲು ಸಂಖ್ಯೆಯಲ್ಲಿರುವ ಈ ಶೂದ್ರವರ್ಗವನ್ನು ಮೇಲಕ್ಕೆ ಎತ್ತದೇ ಹೋದರೆ ಮತ್ತು ಶೂದ್ರ ತಾನು ಮೈಕೊಡವಿಕೊಂಡು ಮೇಲೇಳದೇ ಹೋದರೆ ಈ ದೇಶ ಮೇಲೆ ಬರದು ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದನ್ನು ನೆನಪಿಸಿದರು. ಕುವೆಂಪು ಅವರು ಮನದಾಳದಿಂದ ಬರೆದ ಕವಿತೆಗಳ ಶುದ್ಧತೆಯನ್ನು ರಾಮಾಯಣ ದರ್ಶನಂನಲ್ಲಿನ ಆಳವಾದ ಅರ್ಥವನ್ನು ತಿಳಿಸುತ್ತಾ ಎಲ್ಲರಿಗೂ ರೋಮಾಂಚನವಾಗುವಂತೆ ಮಾಡಿದರು.

ಮುಂದುವರಿದು, ಕುವೆಂಪು ಅವರು ವೈಜ್ಞಾನಿಕ ದಾರ್ಶನಿಕ ಮತ್ತು ಸಮಾಜದ ನ್ಯೂನತೆಗಳನ್ನು ತಿದ್ದುವಂತಹ ಸಾಹಿತ್ಯವನ್ನು ರಚಿಸಿ ಯುಗದ ಕವಿ ಆಗಿದ್ದಾರೆ ಎಂದರು. ವಿಲಿಯಂ ಬ್ಲೇಕ್ ಅವರ ಕವಿತೆಯನ್ನು ಕುವೆಂಪು ಅವರು ತಮ್ಮ ಶೈಲಿಯಲ್ಲಿ ಭಾಷಾಂತರ ಮಾಡಿದ "ಮರಳಕಣ ಒಂದರಲ್ಲಿ ಜಗವ ಕಾಂಬುವಾಸೆ । ಅರಳಿರುವ ವನಸುಮದಿ ಸಗ್ಗವನ್ನು ಕಾಂಬುವಾಸೆ । ಪರಿಮಿತಿಗೆ ಎಟುಕದನ್ನು ಅಂಗೈಯಲ್ಲಿ ಹಿಡಿವಾಸೆ । ಅರೆ ಗಳಿಗೆಯಲ್ಲಿ ನಿತ್ಯ ಸತ್ಯವನ್ನು ಅರಿವಾಸೆ" ಎಂಬುವ ಕವಿತೆಯನ್ನು ವಾಚಿಸಿ ಎಲ್ಲರನ್ನು ಮಂತ್ರಮುಗ್ಧರನ್ನಾಗಿಸಿದರು. ಕುವೆಂಪು ಅವರು ಯುಗದ ಚಿಂತನೆಯನ್ನು ಬದಲಿಸಿದಂತವರು, ವಿಶ್ವಮಾನವ ಪ್ರಜ್ಞೆಯನ್ನು ಎಲ್ಲರಲ್ಲೂ ಬಿತ್ತಿದವರು, ಅಂತಹ ಮಹಾನ್ ಕವಿಗೆ ಭಾರತರತ್ನ ಬೇಕಿಲ್ಲ ಆದರೆ ಅವರಿಗೆ ಆ ಪುರಸ್ಕಾರ ಕೊಡುವ ಮೂಲಕ ನಮ್ಮ ಕನ್ನಡ ಸಾಹಿತ್ಯಕ್ಕೆ, ತಾಯಿ ಭುವನೇಶ್ವರಿಗೆ ಒಂದು ಗೌರವ ಪದವಿಯನ್ನು ಕೊಟ್ಟಂತಾಗುತ್ತದೆ ಎಂದು ತಮ್ಮ ಸುದೀರ್ಘ ಆಶೀರ್ವಚನ ಭಾಷಣದಲ್ಲಿ ತಮ್ಮ ಅಗಾಧ ಜ್ಞಾನ ಭಂಡಾರದಿಂದ ಎಲ್ಲರನ್ನೂ ತನ್ಮಯರನ್ನಾಗಿಸಿದರು. ಹಾಗೆಯೇ ಎಂತೆಂತಹ ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಸಿ.ಎಂ ನಾಗರಾಜ ಅವರ ಸಾಧನೆ ಒಂದು ವಿಸ್ಮಯ ಎಂದು ಅವರ ಬಗ್ಗೆ ಶ್ಲಾಘನೆ ಮಾಡಿದರು.

ಈ ಕಾರ್ಯಕ್ರಮದಲ್ಲಿ ಮೈಸೂರಿನ ಶ್ರೀ ರಾಮಕೃಷ್ಣ ಆಶ್ರಮದ ಶ್ರೀ ಮುಕ್ತಿದಾನಂದ ಸ್ವಾಮಿಗಳು ಮತ್ತು ಕೇಂದ್ರ ಸಚಿವರಾದ ಸನ್ಮಾನ್ಯ ಶ್ರೀ ವಿ. ಸೋಮಣ್ಣನವರು ಮತ್ತು ಕರ್ನಾಟಕ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿ ಶ್ರೀ ಟಿ.ಬಿ. ಜಯಚಂದ್ರ ಹಾಗೂ ಕೇಂದ್ರ ಸಚಿವೆ ಸನ್ಮಾನ್ಯ ಸುಶ್ರೀ ಶೋಭಾ ಕರಂದ್ಲಾಜೆ. ಮಹಾಕವಯಿತ್ರಿ ಡಾ. ಲತಾ ರಾಜಶೇಖರ್, ಶ್ರೀ ಕೆ.ಎಸ್. ರಂಗಪ್ಪ, ವಿಶ್ರಾಂತ ಕುಲಪತಿಗಳು, ಮೈಸೂರು ವಿ.ವಿ., ಡಾ. ಎಂ.ಎ. ಶೇಖರ್ ವಿಶ್ರಾಂತ ಉಪಕುಲಪತಿಗಳು, ಶ್ರೀ ಆದಿಚುಂಚನಗಿರಿ ವಿ.ವಿ., ಪ್ರೊ. ಜಯಪ್ರಕಾಶ್ ಗೌಡ, ಅಧ್ಯಕ್ಷರು, ಕರ್ನಾಟಕ ಸಂಘ, ಮಂಡ್ಯ ಅವರು ಮತ್ತು ಇತರ ಗಣ್ಯರು ಭಾಗವಹಿಸಿ ಕಾರ್ಯಕ್ರಮದ ಬಗ್ಗೆ ಅಚ್ಚುಮೆಚ್ಚಿನ ಮಾತಾಡಿ ಕುವೆಂಪು ಅವರಿಗೆ ಭಾರತ ರತ್ನ ಪ್ರಶಸ್ತಿಯನ್ನು ಪ್ರದಾನ ಮಾಡಲು ತಾವೆಲ್ಲರೂ ಭಾರತ ಸರ್ಕಾರಕ್ಕೆ ಮನವಿ ಮಾಡುವುದಾಗಿ ಭರವಸೆ ನೀಡಿದರು. ಕಾರ್ಯಕ್ರಮದ ನಡುವೆ ರಾಷ್ಟ್ರಕವಿ ಕುವೆಂಪು ಅವರ ಸಾಧನೆ ಮತ್ತು ಕೊಡುಗೆ ಬಗ್ಗೆ ಒಂದು ಕಿರು ಚಿತ್ರವನ್ನು ಹಾಗೂ ಸಾಹಿತಿ ಚದುರಂಗರವರು ರಚಿಸಿ ನಿರ್ದೇಶಿಸಿದಂತ ಒಂದು ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲಾಯಿತು. ಕಾರ್ಯಕ್ರಮದ ನಡುವೆ ಮೈಸೂರು ವಿ.ವಿ.ಯ ಪಬ್ಲಿಕೇಷನ್ ವಿಭಾಗದ ಪೂರ್ವ ನಿರ್ದೇಶಕರೂ ಹಾಗು ಇಂಗ್ಲಿಷ್ ಪ್ರಾಧ್ಯಾಪಕರಾದ ಪ್ರೊ. ಸಿ. ನಾಗಣ್ಣ ಇಂಗ್ಲಿಷ್‌ನಲ್ಲಿ ಮತ್ತು ಬೆಂಗಳೂರು ವಿ.ವಿ. ಯ ಹಿಂದಿ ಪ್ರಾಧ್ಯಾಪಕರಾದ ಪ್ರೊ. ಪ್ರಭಾಶಂಕರ್ ಹಿಂದಿಯಲ್ಲಿ ಕುವೆಂಪು ಅವರ ಸಾಧನೆ ಮತ್ತು ಕೊಡುಗೆ ಕುರಿತು ವಿಚಾರ ಮಂಡನೆ ಮಾಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕದ ಮೈಸೂರು, ಬೆಂಗಳೂರು, ಚಿಕ್ಕಮಗಳೂರು, ಚಿತ್ರದುರ್ಗ, ಬಳ್ಳಾರಿ, ಮಂಡ್ಯದಿಂದ ಬಂದಂತಹ ಕನ್ನಡಪ್ರಿಯರು ಮತ್ತು ದೆಹಲಿಯ ಸ್ಥಳೀಯ ಕನ್ನಡಿಗರು ಅಪಾರ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು. ಈ ಕಾರ್ಯಕ್ರಮವನ್ನು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್ ಮೈಸೂರು ಹಾಗೂ ದೆಹಲಿ ಕರ್ನಾಟಕ ಸಂಘದ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿತ್ತು. ಅವಿರತ ಶ್ರಮಿಸಿ ಕಾರ್ಯಕ್ರಮವು ಅಚ್ಚುಕಟ್ಟಾಗಿ ನಡೆಯಲು ಎಲ್ಲರನ್ನೂ ಒಗ್ಗೂಡಿಸಿ ಈ ಕಾರ್ಯಕ್ರಮದ ಯಶಸ್ಸಿಗೆ ಕಾರಣಕರ್ತರಾದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಿಗೆ ಮತ್ತು ಪದಾಧಿಕಾರಿಗಳಿಗೆ ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ಹೆಚ್.ಕೆ. ರಾಮುರವರು ಎಲ್ಲರ ಪರವಾಗಿ ಕೃತಜ್ಞತೆ ಸಲ್ಲಿಸಿದರು. ಈ ಕಾರ್ಯಕ್ರಮದ ನಿರೂಪಣೆಯನ್ನು ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಕೆ.ಎಸ್. ಮೂರ್ತಿ ಮತ್ತು ಮೈಸೂರಿನ ಕುವೆಂಪು ವಿಶ್ವಮಾನವ ಕ್ಷೇಮಾಭಿವೃದ್ಧಿ ಟ್ರಸ್ಟ್‌ನ ಪ್ರೊ. ಪಿ. ನಾಗಣ್ಣ ಅವರು ಜಂಟಿಯಾಗಿ ನಡೆಸಿಕೊಟ್ಟರು. ಆಗಮಿಸಿದ್ದ ಎಲ್ಲಾ ಪರಮಪೂಜ್ಯ ಸ್ವಾಮೀಜಿಗಳಿಗೆ, ಅತಿಥಿ ಗಣ್ಯರಿಗೆ ವೇದಿಕೆ ಮೇಲೆ ಗೌರವಾರ್ಪಣೆ ಸಲ್ಲಿಸಲಾಯಿತು. ಕೊನೆಯಲ್ಲಿ ಭಾಗಿಯಾದ ಎಲ್ಲರಿಗೂ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಮಡ್ಡಿಕೆರೆ ಗೋಪಾಲ್ ಮತ್ತು ಕುವೆಂಪು ವಿಶ್ವಮಾನವ ಟ್ರಸ್ಟ್‌ನ ಗೌರವಾಧ್ಯಕ್ಷರಾದ ಶ್ರೀ ಕೆ.ಟಿ. ವೀರಪ್ಪ ಅವರು ವಂದನಾರ್ಪಣೆ ಮಾಡಿದರು.

ಭಕ್ತಿ ಪೂರ್ವಕವಾಗಿ ಮಾಡಿದ ತಪಸ್ಸಿಗೆ ದೇವರು ಒಲಿಯುವಂತೆ ಶ್ರದ್ಧೆಯಿಂದ ಮಾಡಿದ ಕೆಲಸಕ್ಕೆ ಪ್ರತಿಫಲ ಸಿಗುವಂತೆ ಒಳ್ಳೆಯ ಮನಸ್ಸಿನಿಂದ ಮಾಡಿದ ಕಾರ್ಯಕ್ಕೆ ಒಳ್ಳೆಯದೇ ಆಗುವಂತೆ ಮುತುವರ್ಜಿಯಿಂದ ನೀರುಣಿಸಿ ನೆಟ್ಟ ಸಸಿಯು ಹೆಮ್ಮರವಾಗಿ ಬೆಳೆಯುವಂತೆ ಆದಷ್ಟು ಬೇಗ ನಮ್ಮ ರಾಷ್ಟ್ರಕವಿ ಕುವೆಂಪು ಅವರಿಗೆ ಭಾರತರತ್ನ ಸಿಗುವ ಮೂಲಕ ಈ ಕಾರ್ಯಕ್ರಮದ ಯಶಸ್ಸು ಸಿಗಲೆಂದು ಆಶಿಸುತ್ತೇನೆ. ❑

**ವೆಂಕಟೇಶ ಹೆಚ್. ಚಿತ್ರದುರ್ಗ**
ಪೋಲೀಸ್ ಉಪ ನಿರೀಕ್ಷಕರು
ಸಿ.ಆರ್.ಪಿ.ಎಫ್., ನವದೆಹಲಿ



# ಕೇಂದ್ರ ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ರಾಣಿ ಚೆನ್ನಮ್ಮ ಅವರ ಕಿತ್ತೂರು ಯುದ್ಧದಲ್ಲಿ ಬ್ರಿಟೀಷ್ ವಿರುದ್ಧದ ವಿಜಯದ ಸ್ಮರಣಾರ್ಥ 200ನೇ ವಾರ್ಷಿಕೋತ್ಸವ ಕಾರ್ಯಕ್ರಮ



ನವದೆಹಲಿಯ ಅಗಸ್ಟ್‌ಕ್ರಾಂತಿ ಮಾರ್ಗದಲ್ಲಿರುವ ಸಿರಿಫೋರ್ಟ್ ಆಡಿಟೋರಿಯಂನಲ್ಲಿ 1998 ರಲ್ಲಿ ನಡೆದ ದೆಹಲಿ ಕರ್ನಾಟಕ ಸಂಘದ ಐತಿಹಾಸಿಕ ಸುವರ್ಣ ಮಹೋತ್ಸವ ಸಮಾರಂಭ, ಸಂಘದ ಹೊಸ ಕಟ್ಟಡ ನೀಲಿ ನಕಾಶೆ ಅನಾವರಣ ಮತ್ತು ವರನಟ ಪದ್ಮಭೂಷಣ ಡಾ. ರಾಜಕುಮಾರ್ ಸಂಗೀತ ಸಂಜೆ ಕಾರ್ಯಕ್ರಮಗಳ ನೆನಪು ದೆಹಲಿ ಕನ್ನಡಿಗರ ಮನಃಪಟಲದಲ್ಲಿ ಇನ್ನೂ ಹಚ್ಚ ಹಸಿರಾಗಿ ಉಳಿದಿದೆ. ಸಾವಿರಾರು ಕನ್ನಡಿಗರು ಸಾಕ್ಷಿಯಾದ ಆ ಅಭೂತಪೂರ್ವ ಕಾರ್ಯಕ್ರಮ ಸಂಘದ ಇತಿಹಾಸದಲ್ಲಿ ಒಂದು ಪ್ರಮುಖ ಮೈಲಿಗಲ್ಲಾಗಿದೆ.

ಅದೇ ಆಯಾಮದಲ್ಲಿ ಸಿರಿಫೋರ್ಟ್ ಸಭಾಂಗಣದ ವೇದಿಕೆಯಲ್ಲಿ ದಿನಾಂಕ 24.10.2025 ರಂದು ಕೇಂದ್ರ ಸಂಸ್ಕೃತಿ ಇಲಾಖೆ, ಭಾರತ ಸರ್ಕಾರ ಮತ್ತು ದೆಹಲಿ ಕರ್ನಾಟಕ ಸಂಘ ಜಂಟಿಯಾಗಿ ಆಯೋಜಿಸಿದ ವೀರ ರಾಣಿ ಚೆನ್ನಮ್ಮನವರ 1824ರ ಬ್ರಿಟಿಷರ ವಿರುದ್ಧ ಕಿತ್ತೂರು ಯುದ್ಧದ ವಿಜಯೋತ್ಸವದ ದ್ವಿಶತಮಾನೋತ್ಸವ ದಿನಾಚರಣೆ ಸುಮಾರು ಒಂದು ಸಾವಿರಕ್ಕೂ ಹೆಚ್ಚು ಸೇರಿದ ದೆಹಲಿ ಕನ್ನಡಿಗರ ಭಾಗವಹಿಸುವಿಕೆಯಿಂದ ಅಪಾರ ಜನಮನ್ನಣೆಯೊಂದಿಗೆ ಅತ್ಯಂತ ಯಶಸ್ವಿಯಾಯಿತು.

ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಮಂತ್ರಿಗಳಾದ ಸನ್ಮಾನ್ಯ ಶ್ರೀ ಗಜೇಂದ್ರ ಸಿಂಗ್ ಶೇಖಾವತ್ ಅವರು ಆಗಮಿಸಿದ್ದರು. ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ಶ್ರೀ ವಚನಾನಂದ ಸ್ವಾಮೀಜಿ ಅವರ ದಿವ್ಯ ಸಾನಿಧ್ಯದಲ್ಲಿ, ರಾಜ್ಯಸಭಾ ಸದಸ್ಯರಾದ ಶ್ರೀ ನಾರಾಯಣಸ ಕೆ. ಭಾಂಡಗೆ ಅವರು ಗೌರವ ಉಪಸ್ಥಿತರಿದ್ದರು. ಕೇಂದ್ರ ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಶ್ರೀ ವಿವೇಕ್ ಅಗರ್ವಾಲ್, ಜಂಟಿ ಕಾರ್ಯದರ್ಶಿ ಶ್ರೀ ಸಮನ್ ನಂದ ಮತ್ತು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಅವರು ವೇದಿಕೆ ಮೇಲಿದ್ದರು. ಮುಖ್ಯ ಅತಿಥಿಗಳು ಸಭಾಂಗಣಕ್ಕೆ ಬರುವ ಮುನ್ನ ಮುಂಬದಿಯ ಗ್ಯಾಲರಿಯಲ್ಲಿ ಏರ್ಪಡಿಸಿದ್ದ ರಾಣಿ ಚೆನ್ನಮ್ಮ ಅವರ ಜೀವನ ಚರಿತ್ರೆ, ಸಾಧನೆ, ಬ್ರಿಟಿಷ್ ವಿರುದ್ಧ ಹೋರಾಟದಲ್ಲಿ ತೋರಿದ ಶೌರ್ಯ ಪರಾಕ್ರಮಗಳ ದೃಶ್ಯಾವಳಿಗಳ ಪ್ರದರ್ಶಿನಿಯನ್ನು ಮಾನ್ಯ ಸಚಿವರು ವೀಕ್ಷಿಸಿ ಹರ್ಷಪಟ್ಟರು.

ಮೊದಲಿಗೆ ನೂರಕ್ಕೂ ಹೆಚ್ಚು ದೆಹಲಿ ಕನ್ನಡತಿಯರು ಮತ್ತು ಸಂಘದ ಸದಸ್ಯರು ಒಟ್ಟಾಗಿ ವೇದಿಕೆ ಮೇಲೆ ನಾಡಗೀತೆ ಹಾಡುವುದರೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಸಭಾಂಗಣದಲ್ಲಿ ಸ್ಥಳೀಯ ಕಲಾವಿದರ ಕೆಲವು ಸಾಂಸ್ಕೃತಿಕ ಕಾರ್ಯಕ್ರಮ ಪ್ರಸ್ತುತಿ ವೀಕ್ಷಿಸಿದ ಕೇಂದ್ರ ಸಚಿವರು ತಮ್ಮ ಮೆಚ್ಚುಗೆ ಸೂಚಿಸಿದರು.

ವೇದಿಕೆ ಮೇಲೆ ಅತಿಥಿಗಣ್ಯರ ಜೊತೆ ಕೇಂದ್ರ ಸಚಿವರು ದೀಪ ಪ್ರಜ್ವಲನೆ ಮತ್ತು ರಾಣಿ ಚೆನ್ನಮ್ಮ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಸಭಾ ಕಾರ್ಯಕ್ರಮ ಆರಂಭಗೊಂಡಿತು. ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಆಗಮಿಸಿದ್ದ ಕೇಂದ್ರ ಸಚಿವರನ್ನ, ಪೂಜ್ಯ ಸ್ವಾಮೀಜಿಯವರನ್ನ,



ಅತಿಥಿ ಗಣ್ಯರನ್ನು ಹಾಗೂ ಸಭಾಂಗಣದಲ್ಲಿ ನೆರೆದಿದ್ದ ಸಭಿಕರನ್ನ ಸಂಘದ ಪರವಾಗಿ ಆತ್ಮೀಯವಾಗಿ ಸ್ವಾಗತಿಸಿದರು. ನಂತರ ಪ್ರಾಸ್ತಾವಿಕವಾಗಿ ಮಾತನಾಡಿದ ಅವರು ದೆಹಲಿ ಕರ್ನಾಟಕ ಸಂಘ ಹಮ್ಮಿಕೊಳ್ಳುತ್ತಿರುವ ಕಾರ್ಯಕ್ರಮಗಳ ಕುರಿತು ಮತ್ತು ಮುಂದೆ ಮಾಡಲು ಯೋಚಿಸುತ್ತಿರುವ ಕಾರ್ಯ ಯೋಜನೆಗಳ ಬಗ್ಗೆ ಮಾಹಿತಿ ನೀಡುತ್ತಾ ಕಾರ್ಯಕ್ರಮಕ್ಕೆ ಆಗಮಿಸಿ ಶೋಭೆಯನ್ನು ಹೆಚ್ಚಿಸಿದ ಕೇಂದ್ರ ಸಚಿವರಿಗೆ, ಪೂಜ್ಯ ಸ್ವಾಮೀಜಿ ಮತ್ತು ಸಂಸದರಿಗೆ, ಸಹಕಾರ ನೀಡಿದ ಕೇಂದ್ರ ಸಂಸ್ಕೃತಿ ಇಲಾಖೆಗೆ ಮತ್ತು ಅಪಾರ ಸಂಖ್ಯೆಯಲ್ಲಿ ಭಾಗಿಯಾದ ದೆಹಲಿ ಎನ್‌ಸಿಆರ್ ನ ಕನ್ನಡಿಗರು ಮತ್ತು ದೆಹಲಿಯ ಜನತೆಗೆ ಕೃತಜ್ಞತೆಗಳನ್ನು ಸಲ್ಲಿಸಿದರು.



ಕಾರ್ಯಕ್ರಮದಲ್ಲಿ ಕಿತ್ತೂರು ರಾಣಿ ಚೆನ್ನಮ್ಮನವರ ವಿಜಯದ 200ನೇ ವರ್ಷಾಚರಣೆ ಸ್ಮರಣಾರ್ಥ ರೂ. 200 ಮೌಲ್ಯದ ವಿಶೇಷ ನಾಣ್ಯವನ್ನು ಕೇಂದ್ರ ಸಚಿವ ಶ್ರೀ ಗಜೇಂದ್ರ ಸಿಂಗ್ ಶೆಖಾವತ್ ಅವರು ಎಲ್ಲರ ಸಮ್ಮುಖದಲ್ಲಿ ಬಿಡುಗಡೆ ಮಾಡಿದರು. ನಂತರ ಮಾತನಾಡಿದ ಸಚಿವರು ಕಿತ್ತೂರು ರಾಣಿ ಚೆನ್ನಮ್ಮನವರ ಬಾಲ್ಯ ಜೀವನ, ವಿದ್ಯಾಭ್ಯಾಸ, ಪೋಷಕರ ಪ್ರೋತ್ಸಾಹ ದಿಂದ ಯುದ್ಧ ತರಬೇತಿ ಪಡೆದು ವೀರರಾಣಿಯಾಗಿ ಮಾರ್ಪಟ್ಟ ಬಗೆ, ಮುಂದಿನ ಬದುಕಲ್ಲಿ ಪಟ್ಟ ಭವಣೆ ನಂತರ ಬ್ರಿಟಿಷರ ವಿರುದ್ಧದ ಯುದ್ಧದಲ್ಲಿ ಮಾಡಿದ ಹೋರಾಟ ಮತ್ತು ಗೆಲುವಿನ ಸಾಧನೆ ನೀಡಿದ ತ್ಯಾಗ ಬಲಿದಾನಗಳನ್ನು ಸ್ಮರಿಸಿಕೊಂಡು, ಇಂತಹ ಅದ್ಭುತ ಕಾರ್ಯಕ್ರಮ ಆಯೋಜನೆ ಮಾಡಲು ಕೈಜೋಡಿಸಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ, ಕೇಂದ್ರ ಸಂಸ್ಕೃತಿ ಇಲಾಖೆ ಅಧಿಕಾರಿಗಳಿಗೆ ಹಾಗು ಸಾಕ್ಷಿಯಾದ ಪೂಜ್ಯ ಸ್ವಾಮೀಜಿ ಅವರಿಗೆ, ಸಂಸದರಿಗೆ ಹಾಗು ಪ್ರದರ್ಶನ ನೀಡುತ್ತಿರುವ ಕಲಾವಿದರಿಗೆ ಮತ್ತು ಕಿಕ್ಕಿರಿದು ನೆರೆದಿದ್ದ ಎಲ್ಲಾ ಸಭಿಕರಿಗೆ ಅಭಿನಂದನೆ ಸಲ್ಲಿಸಿದರು.



ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಶ್ರೀ ವಿನಯ್ ಅಗರ್ವಾಲ್ ಮಾತನಾಡಿ ಕಾರ್ಯಕ್ರಮದ ಬಗ್ಗೆ ತಮ್ಮ ಮೆಚ್ಚುಗೆ ವ್ಯಕ್ತಪಡಿಸಿದರು ಹಾಗು ಕೇಂದ್ರ ಸಚಿವರಿಗೆ ಮತ್ತು ದೆಹಲಿ ಕರ್ನಾಟಕ ಸಂಘಕ್ಕೆ ಕೃತಜ್ಞತೆ ಸಲ್ಲಿಸಿದರು. ಶ್ರೀ ವಚನಾನಂದ ಸ್ವಾಮೀಜಿ ಅವರು ತಮ್ಮ ಆಶೀರ್ವಚನ ನೀಡುತ್ತಾ ಕಿತ್ತೂರು ಚೆನ್ನಮ್ಮ ನವರ ಜೀವನ ಸಾಧನೆ ಮತ್ತು ಪರಾಕ್ರಮವನ್ನು ಕೊಂಡಾಡಿದರು. ಇತ್ತೀಚಿಗಷ್ಟೇ ಸಂಸತ್ ಭವನದ ಬಳಿ ಪ್ರೇರಣಾ ಸ್ಥಳದಲ್ಲಿರುವ ರಾಣಿ ಚೆನ್ನಮ್ಮನವರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ ಗೌರವ ನೀಡಿದ ಬಗ್ಗೆ ಸ್ಮರಿಸಿಕೊಂಡ ಅವರು ರಾಣಿ ಚೆನ್ನಮ್ಮ ನವರ ಸ್ಮರಣಾರ್ಥ ಇಂತಹ ಕಾರ್ಯಕ್ರಮವನ್ನು ದೆಹಲಿಯಲ್ಲಿ ಇಷ್ಟೊಂದು ಅದ್ದೂರಿಯಾಗಿ ಆಯೋಜಿಸಿದ ಕೇಂದ್ರ ಸಂಸ್ಕೃತಿ ಇಲಾಖೆಗೆ ಮತ್ತು ದೆಹಲಿ ಕರ್ನಾಟಕ ಸಂಘಕ್ಕೆ ತಮ್ಮ ಅಭಿನಂದನೆಗಳನ್ನು ತಿಳಿಸಿದರು.

ನಂತರ ಕೇಂದ್ರ ಸಚಿವರಿಗೆ, ಪೂಜ್ಯ ಸ್ವಾಮೀಜಿಯವರಿಗೆ, ಮಾನ್ಯ ಸಂಸದರಿಗೆ ಹಾಗೂ ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಮತ್ತು ಜಂಟಿ ಕಾರ್ಯದರ್ಶಿಯವರಿಗೆ ಸಂಘದ ಪರವಾಗಿ ಗೌರವ ಸಮರ್ಪಣೆ ನೀಡಲಾಯಿತು. ವೇದಿಕೆಯಲ್ಲಿ ಆಸೀನರಾಗಿದ್ದ ಅತಿಥಿ ಗಣ್ಯರ ಜೊತೆಗೆ ಸಂಘದ ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು ಮತ್ತು ಸದಸ್ಯರೊಂದಿಗೆ ಒಂದು ಸಮೂಹ ಫೋಟೋ ಪಡೆಯಲಾಯಿತು. ಸಭಾ ಕಾರ್ಯಕ್ರಮವನ್ನು ದೂರದರ್ಶನದ ಪ್ರಸಿದ್ಧ ನಿರೂಪಕರಾದ ಶ್ರೀ ಜ್ಞಾನೇಂದ್ರರವರು ಬಹಳ ಸುಂದರವಾಗಿ ನಿರೂಪಿಸಿದರು. ಕೊನೆಯಲ್ಲಿ ಸಂಸ್ಕೃತಿ ಇಲಾಖೆಯ ಜಂಟಿ ಕಾರ್ಯದರ್ಶಿ ಶ್ರೀ ಸುಮನ್ ನಂದ ಎಲ್ಲರಿಗೂ ವಂದನಾರ್ಪಣೆ ಸಲ್ಲಿಸಿದರು.

ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು



ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ಪಿ. ರಾವ್ ಅವರು ನಿರೂಪಿಸಿದರು. ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀಮತಿ ಶುಭಾ ಧನಂಜಯ ಅವರು ಕಾರ್ಯಕ್ರಮ ನಿರ್ವಹಣೆಯಲ್ಲಿ ಸಹಕರಿಸಿದರು.

ವೇದಿಕೆ ಮೇಲೆ ಪ್ರಸ್ತುತಗೊಂಡ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಇಂತಿವೆ : ರಾಣಿ ಚೆನ್ನಮ್ಮ ನೃತ್ಯ ವೈಭವ–ಶ್ರೀ ಜಯನಾಟ್ಯ ಕಲಾ ಅಕಾಡೆಮಿ, ತಂಡದಿಂದ, ಶಾಸ್ತ್ರೀಯ ನೃತ್ಯ–ಕು. ಆಮಿನಿ ಮತ್ತು ತಂಡದಿಂದ, ಭರತನಾಟ್ಯ– ಬಸವ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್ ದ್ವಾರಕ, ನವದೆಹಲಿ ವಿದ್ಯಾರ್ಥಿಗಳಿಂದ, ನಾಟ್ಯಾಂತರಂಗ ಅರ್ಪಿಸಿದ ಬೆಳ್ಳಿಚುಕ್ಕಿ ಕಿತ್ತೂರ ರಾಣಿ ಚೆನ್ನಮ್ಮ ನೃತ್ಯರೂಪಕ, ಕುಂದಾಪುರದ ಪಾರಂಪರಿಕ ಹುಲಿವೇಷ ನರ್ತನ–ಕಲಾಕ್ಷೇತ್ರ ಕುಂದಾಪುರ ಟ್ರಸ್ಟ್‌ನ ಕಲಾವಿದರಿಂದ, ಬೇಡರ ವೇಷ–ಶ್ರೀ ಮಹೇಶ್ ಕುಮಾರ್ ತಂಡ, ಪೂಜಾ ಕುಣಿತ : ಶ್ರೀ ಮಹೇಂದ್ರ ಮತ್ತು ತಂಡ, ಡೊಳ್ಳು ಕುಣಿತ : ಶ್ರೀ ಚೇತನ್ ಮತ್ತು ತಂಡ, ವೀರಗಾಸೆ / ಅಗೋರಿ : ಶ್ರೀ ರುದ್ರೇಶ್, ಶ್ರೀ ಸಂದೀಪ್ ಮತ್ತು ತಂಡ, ಸಂಯೋಜನೆ–ಶ್ರೀ ಕೆ. ನಾಗರಾಜ, ಅಧ್ಯಕ್ಷರು, ಕರ್ನಾಟಕ ಜಾನಪದ ಕಲಾವಿದರ ಒಕ್ಕೂಟ, ಪೃಥ್ವಿ ಕೆ. ಭಟ್ ಮತ್ತು ಶ್ರೀ ಸುಬ್ರಮಣಿ ವಿ. ಸರಿಗಮಪ ಖ್ಯಾತಿಯ ಕಲಾವಿದರಿಂದ ಸುಮಧುರವಾದ ಸಂಗೀತ ಕಾರ್ಯಕ್ರಮಗಳು ನಡೆದವು. ವೈವಿಧ್ಯಮಯ ಸಾಂಸ್ಕೃತಿಕ ವೈಭವ ಕಾರ್ಯಕ್ರಮವನ್ನು ವೀಕ್ಷಿಸಿದ ಎಲ್ಲಾ ಕನ್ನಡಿಗರು ಸಂಭ್ರಮಪಟ್ಟರು. ❑

**ಅಭಿಮತ ವರದಿ**




















## ನವದೆಹಲಿ ಸಂಸದ್ ಭವನದ ಬಳಿ ವೀರರಾಣಿ ಕಿತ್ತೂರು ಚೆನ್ನಮ್ಮ ಪ್ರತಿಮೆಗೆ ಪುಷ್ಪಾರ್ಚನೆ– ಬ್ರಿಟಿಷ್ ವಿರುದ್ಧ ಹೋರಾಟದಲ್ಲಿ ಗಳಿಸಿದ ವಿಜಯದ 201ನೇ ವರ್ಷಾಚರಣೆ

ದಿನಾಂಕ 23.10.2025ರಂದು ಬೆಳಿಗ್ಗೆ 9.00 ಗಂಟೆಗೆ ಭಾರತದ ಸಂಸದ್ ಭವನದ ಅವರಣದಲ್ಲಿರುವ ಪ್ರೇರಣಾ ಸ್ಥಳದಲ್ಲಿ ಕಿತ್ತೂರು ಚೆನ್ನಮ್ಮ ಪ್ರತಿಮೆಗೆ ಕೇಂದ್ರ ಸರ್ಕಾರದ ರೈಲ್ವೆ ಮತ್ತು ಜಲಶಕ್ತಿ ಇಲಾಖೆಯ ರಾಜ್ಯಮಂತ್ರಿಗಳಾದ ಶ್ರೀ ವಿ. ಸೋಮಣ್ಣರವರು ಪುಷ್ಪ ನಮನ ಸಲ್ಲಿಸುವುರೊಂದಿಗೆ ಬ್ರಿಟಿಷ್ ವಿರುದ್ಧ ಹೋರಾಟದಲ್ಲಿ ರಾಣಿ ಚೆನ್ನಮ್ಮನವರ ಕಿತ್ತೂರು ವಿಜಯೋತ್ಸವದ 201ನೇ ವರ್ಷಾಚರಣೆಯನ್ನು ನೆರೆದಿದ್ದ ಗುರು ಹಿರಿಯರ ದಿವ್ಯ ಸಾನಿಧ್ಯದಲ್ಲಿ ಮತ್ತು ಅಪಾರ ಸಂಖ್ಯೆಯಲ್ಲಿ ಭಾಗಿಯಾಗಿದ್ದ ಕನ್ನಡಿಗರ ಸಮ್ಮುಖದಲ್ಲಿ ಬಹಳ ಸಂಭ್ರಮದಿಂದ ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಕೂಡಲಸಂಗಮ ಪೀಠದ ಶ್ರೀ ಬಸವ ಜಯ ಮೃತ್ಯುಂಜಯ ಸ್ವಾಮೀಜಿ, ಹರಿಹರ ಪೀಠದ ಶ್ರೀ ವಚನಾನಂದ ಸ್ವಾಮೀಜಿ, ಬೆಳಗಾವಿ ಲೋಕ ಸಭಾ ಕ್ಷೇತ್ರದ ಸಂಸದರೂ ಮತ್ತು ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ ಶೆಟ್ಟರ್, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಮತ್ತು ಪದಾಧಿಕಾರಿಗಳು, ಸಂಘದ ಸದಸ್ಯರುಗಳು ಮತ್ತು ದೆಹಲಿ ಕನ್ನಡಿಗರು ಉಪಸ್ಥಿತರಿದ್ದರು.

ಶ್ರೀ ವಿ. ಸೋಮಣ್ಣನವರು ಮಾತನಾಡಿ ಕಿತ್ತೂರು ವಿಜಯೋತ್ಸವದ ಹಿನ್ನೆಲೆ ವಿವರಿಸುತ್ತಾ ರಾಣಿ ಚೆನ್ನಮ್ಮನವರ ಬ್ರಿಟಿಷ್ ವಿರುದ್ಧ ಹೋರಾಟ ಮತ್ತು ತೋರಿದ ಪರಾಕ್ರಮವನ್ನು ಕೊಂಡಾಡಿದರು. ಹಾಗೆಯೇ ಆ ಕಿತ್ತೂರು ವಿಜಯದ 201ನೇ ವರ್ಷವನ್ನು ಅರ್ಥಪೂರ್ಣವಾಗಿ ಆಚರಿಸಲು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪೂಜ್ಯ ಸ್ವಾಮೀಜಿಗಳಿಗೆ, ಎಲ್ಲಾ ದೆಹಲಿ ಕನ್ನಡಿಗರಿಗೆ ಶುಭಾಶಯಗಳನ್ನು ತಿಳಿಸುತ್ತಾ, ಕಾರ್ಯಕ್ರಮ ಆಯೋಜನೆಯಲ್ಲಿ ಸಹಕರಿಸಿ ಯಶಸ್ಸಿನಲ್ಲಿ ಭಾಗಿಯಾದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಮತ್ತು ಸದಸ್ಯರಿಗೆ ಧನ್ಯವಾದಗಳನ್ನು ತಿಳಿಸಿದರು.









## ದೆಹಲಿ ಕರ್ನಾಟಕ ಸಂಘದ

# ಆರೋಗ್ಯೋತ್ಸವ-2025

# ಸಂಘದಲ್ಲಿ ಯಶಸ್ವಿ 'ಆರೋಗ್ಯೋತ್ಸವ' ಮತ್ತು ಉಚಿತ ರಕ್ತ ಪರೀಕ್ಷಾ ಶಿಬಿರ



ದಿನಾಂಕ 09.11.2025ರಂದು ಸಂಘದ ಸಾಂಸ್ಕೃತಿಕ ಸಮುಚ್ಚಯದಲ್ಲಿ ಈ ವರ್ಷದ ಆರೋಗ್ಯೋತ್ಸವ ಮತ್ತು ರಕ್ತ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿತ್ತು.

ಈ ಬಾರಿ ದೆಹಲಿಯಲ್ಲಿನ ಕನ್ನಡಿಗ ವೈದ್ಯರಾದ ಡಾ. ಸುರೇಶ್ ಸಿಂಘ್ವಿ, ಸಹ ನಿರ್ದೇಶಕರು, ಯಕೃತ್ತು ಕಸಿ ಮತ್ತು ಎಚ್‌ಪಿಬಿ ಸರ್ಜರಿ ವಿಭಾಗ, ಫೆಲೋಶಿಫ್ ಇನ್ ಲಿವರ್ ಟ್ರಾನ್ಸ್‌ಪ್ಲಾಂಟ್, ಸರ್ ಗಂಗಾರಾಮ್ ಆಸ್ಪತ್ರೆ, ನವದೆಹಲಿ, ಡಾ. ನಿರಂಜನ್ ನಾಯ್ಕ್, ಕ್ಯಾನ್ಸರ್ ತಜ್ಞರು, ಡಾ. ವಾಗೇಶ್ ಬಿ.ಜಿ., ಶಸ್ತ್ರ ಚಿಕಿತ್ಸಕರು– ಗ್ಯಾಸ್ಟ್ರೋ ಎಂಟರಾಲಜಿ, ಡಾ. ಆಶೀಶ್ ಶೆಟ್ಟಿ, ಜಿಐ ಸರ್ಜರಿ, ಡಾ. ಪ್ರತೀಶ್, ಜಿಐ ಸರ್ಜರಿ, ಡಾ. ವಿಶಾಲ್, ಜಿಐ ಸರ್ಜರಿ, ಡಾ. ಅನೀಶ್, ಜಿಐ ಸರ್ಜರಿ, ಡಾ. ಗುರುರಾಜ್ ಸಂಗೊಂದಿಮಠ ಬೆನ್ನುಮೂಳೆ ಶಸ್ತ್ರ ಚಿಕಿತ್ಸಕರು, ಡಾ. ಲಿಖಿತಾಶ್ರೀ ಕೊಪ್ಪದ, ಫಿಜಿಯೋಥೆರಪಿಸ್ಟ್, ಭಾಗವಹಿಸಿದ್ದರು. ಡಾ. ಅಶ್ವಿನಿ ವೈ.ಬಿ. ಅವರ ಮುಂದಾಳತ್ವದಲ್ಲಿ ಡಾ. ಮಣಿಂದರ್–ಸೀನಿಯರ್ ರೆಸಿಡೆಂಟ್ ಅವರಿಂದ ದಂತ ತಪಸಣಾ ಶಿಬಿರ, ಡಾ. ರಶ್ಮಿ, ಡಾ. ಮೆಹಕ್, ಡಾ. ಶಾಹಿದ್ ಹಾಗೂ ಶ್ರೀ ತರುಣ್ ವ್ಯಾಸ್ ಅವರ ನೇತೃತ್ವದಲ್ಲಿ ರಕ್ತ ಪರೀಕ್ಷಾ ಶಿಬಿರ ನಡೆಯಿತು.



ಬೆಳಿಗ್ಗೆ 9.00 ಗಂಟೆಗೆ ಆಗಮಿಸಿದ್ದ ವಿವಿಧ ವೈದ್ಯಕೀಯ ವಿಭಾಗಗಳ ತಜ್ಞ ವೈದ್ಯರು, ಸಹಾಯಕ ವರ್ಗ, ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಪದಾಧಿಕಾರಿಗಳು ಮತ್ತು ಸದಸ್ಯರ ಸಮ್ಮುಖದಲ್ಲಿ ದೀಪ ಪ್ರಜ್ವಲನೆ ಮಾಡುವುದರೊಂದಿಗೆ ಆರೋಗ್ಯೋತ್ಸವದ ಉದ್ಘಾಟನೆ ಮಾಡಲಾಯಿತು. ಈ ಸಂದರ್ಭ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ ತಮ್ಮ ಅಮೂಲ್ಯ ಸಮಯ ನೀಡಿ ಇಲ್ಲಿನ ಕನ್ನಡಿಗರಿಗೆ ಉಚಿತ ವೈದ್ಯಕೀಯ ತಪಾಸಣೆ ಮತ್ತು ಸಲಹೆ ಮಾರ್ಗದರ್ಶನ ನೀಡಲು ಬಂದಿರುವ ದೆಹಲಿಯ ಎಲ್ಲಾ ಕನ್ನಡಿಗ ವೈದ್ಯರಿಗೆ ಮತ್ತು ಭಾಗಿಯಾಗಿರುವ ದೆಹಲಿ ಕನ್ನಡಿಗರಿಗೆ ಕೃತಜ್ಞತೆ ಮತ್ತು ಅಭಿನಂದನೆಗಳನ್ನು ತಿಳಿಸಿದರು.









ಸುಮಾರು 100ಕ್ಕೂ ಹೆಚ್ಚು ದೆಹಲಿ ಕನ್ನಡಿಗರು ಮತ್ತು ಕುಟುಂಬದವರು ನುರಿತ ವೈದ್ಯರೊಂದಿಗೆ ಪರಾಮರ್ಶೆ ಮಾಡಿಕೊಂಡು ಅವಶ್ಯಕ ಆರೋಗ್ಯ ಸಂಬಂಧಿತ ಸಲಹೆಗಳನ್ನು ಪಡೆದುಕೊಂಡರು. ಕೆಲವರು ದಂತ ತಪಾಸಣೆ ಮಾಡಿಸಿಕೊಂಡರೆ, ಇನ್ನು ಕೆಲವರು ಫಿಜಿಯೋಥೆರಪಿ ಟ್ರೀಟ್ಮೆಂಟ್ ಪಡೆದರು. ಹಲವರು ಉಚಿತವಾಗಿ ಏರ್ಪಡಿಸಲಾಗಿದ್ದ ರಕ್ತ ಪರೀಕ್ಷೆ ಮಾಡಿಸಿಕೊಂಡರು.

ಕೊನೆಯಲ್ಲಿ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಆರೋಗ್ಯೋತ್ಸವದಲ್ಲಿ ಪಾಲ್ಗೊಂಡ ಎಲ್ಲಾ ವೈದ್ಯರಿಗೆ, ಸಹಾಯಕ ಸಿಬ್ಬಂದಿ ವರ್ಗ ದವರಿಗೆ ಗೌರವ ಅಭಿನಂದನೆ ಸಲ್ಲಿಸಿದರು. ❑

**ಅಭಿಮತ ವರದಿ**



# ಬೇಸಿಗೆಯ ಆರೋಗ್ಯ ಸಂರಕ್ಷಣೆಗಾಗಿ ಆಯುರ್ವೇದ ಗ್ರೀಷ್ಮ ಋತುಚರ್ಯೆ






ಲೇಖಕರು:
ಡಾ. ರಮೇಶ್ ಕುಮಾರ್ ಕೆ.ಎಲ್.
ಸಹ ಪ್ರಾಧ್ಯಾಪಕರು
ಅಖಿಲ ಭಾರತೀಯ ಆಯುರ್ವೇದ ಸಂಸ್ಥೆ (AIIA), ನವದೆಹಲಿ
(ಮೊ ): 9574941685
ಇಮೇಲ್ :
dr.ramesh.mysore@gmail.com


'ಋತುಚರ್ಯೆ' ಪ್ರಾಚೀನ ಆಯುರ್ವೇದ ವಿಜ್ಞಾನದ ಅತ್ಯಂತ ಪ್ರಮುಖ ಸೈದ್ಧಾಂತಿಕ ಹಾಗು ಚಿಕಿತ್ಸಾ ಕ್ರಮದ ಭಾಗವಾಗಿದೆ. ಇದು ಎರಡು ಪದಗಳಿಂದ ಕೂಡಿದೆ–"ಋತು" ಎಂದರೆ ಋತು/ಹಂಗಾಮು (season) ಮತ್ತು "ಚರ್ಯೆ" ಎಂದರೆ ನಿಯಮಿತ ಜೀವನಶೈಲಿ ಅಥವಾ ಶಿಸ್ತುಬದ್ಧ ನಿಯಮಗಳ ಅಳವಡಿಕೆ. ಋತುಚರ್ಯೆಯೂ ಕಾಲಕಾಲಕ್ಕೆ ಸಂಭವಿಸುವ ಋತು ಬದಲಾವಣೆಯಿಂದ ದೇಹ ಮತ್ತು ಮನಸ್ಸಿನ ಮೇಲೆ ಉಂಟಾಗುವ ಪರಿಣಾಮಗಳನ್ನು ಎದುರಿಸಲು ಆಯುರ್ವೇದವು ಶಿಫಾರಸು ಮಾಡುವ ಜೀವನಶೈಲಿ ಹಾಗೂ ಆಹಾರ ಕ್ರಮಗಳನ್ನು ಒಳಗೊಂಡಿರುತ್ತವೆ. ಋತುಚರ್ಯೆ ನಮ್ಮ ದೈಹಿಕ ಶಕ್ತಿ ಮತ್ತು ಮಾನಸಿಕ ಸಾಮರ್ಥ್ಯವನ್ನು ಬದಲಾಗುವ ವಾತಾವರಣದ ಗುಣಲಕ್ಷಣಗಳಿಗೆ ಅನುಗುಣವಾಗಿ ಸೂಕ್ತವಾದ ಜೀವನ ಹಾಗೂ ಚಿಕಿತ್ಸಾ ಕ್ರಮವನ್ನು ಅಳವಡಿಸಿಕೊಳ್ಳುವುದರ ಮೂಲಕ, ಋತುಬದಲಾವಣೆಯಿಂದ ಉಂಟಾಗಬಹುದಾದ ರೋಗಗಳನ್ನು ಎದುರಿಸಲು ಸಹಾಯ ಮಾಡುವುದಲ್ಲದೆ ದೇಹದ ಬಲವನ್ನು ಹೆಚ್ಚಿಸಿ ಸಮತೋಲನ ಕಾಯ್ದುಕೊಳ್ಳುವುದರಲ್ಲಿ ಸಹಕಾರಿಯಾಗಿದೆ. ಇದಲ್ಲದೆ, ಇದು ದೇಹದಲ್ಲಿರುವ ಮೂರು ದೋಷಗಳನ್ನು ಸಮತೋಲನಗೊಳಿಸಿ, ವರ್ಷಪೂರ್ತಿ ನಮ್ಮನ್ನು ಆರೋಗ್ಯವಾಗಿಯೂ ತಾಕತ್ತಿನಿಂದಲೂ ಇಡುತ್ತದೆ.

ಆಯುರ್ವೇದದ ಪ್ರಕಾರ 6 ಋತುಗಳು, ಒಂದು ವರ್ಷವನ್ನು ಎರಡು ಅಯನಗಳಾಗಿ (ಕಾಲಾವಧಿಗಳು) ವಿಭಜಿಸಲಾಗಿದೆ. ಪ್ರತಿಯೊಂದು ಅಯನದಲ್ಲಿ ಮೂರು ಋತುಗಳು ಸೇರಿದ್ದು, ಒಟ್ಟು ವರ್ಷದಲ್ಲಿ ಆರು ಋತುಗಳು ಇರುತ್ತವೆ. ಪ್ರತಿಯೊಂದು ಋತು ಎರಡು ತಿಂಗಳುಗಳ ಕಾಲ ಇರುತ್ತದೆ. ಈ ಋತುಗಳ ವಿನ್ಯಾಸ ಭಾರತೀಯ ಉಪಖಂಡದಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ.

**ಆದಾನ ಕಾಲ / ಉತ್ತರಾಯಣ** / Northern Solstice (ಅಂದಾಜು ಜನವರಿ ಮಧ್ಯಭಾಗದಿಂದ ಜುಲೈ ಮಧ್ಯದವರೆಗೆ) ಈ ಅವಧಿಯಲ್ಲಿ ಸೂರ್ಯ ಮತ್ತು ಗಾಳಿ ಅತ್ಯಂತ ಪ್ರಬಲವಾಗಿರುತ್ತವೆ. ಸೂರ್ಯನು ಭೂಮಿಯ ತಂಪಿನ ಗುಣಗಳನ್ನು ಹಾಗೂ ಮನುಷ್ಯರ ಶಕ್ತಿ ಮತ್ತು ಉತ್ಸಾಹವನ್ನು ಹೀರಿಕೊಳ್ಳುತ್ತಾನೆ. ತೀವ್ರ ಬಿಸಿಲು ಸಸ್ಯಗಳು ಮತ್ತು ಮನುಷ್ಯರಲ್ಲಿ ಒಣತನ ಹಾಗೂ ಬಿಸಿತನವನ್ನು ಉಂಟುಮಾಡುತ್ತದೆ. ಇದರಿಂದ ವ್ಯಕ್ತಿಗಳ ಶಕ್ತಿ ಕಡಿಮೆಯಾಗುತ್ತದೆ. ಈ ಅವಧಿಯಲ್ಲಿ ಉಷ್ಣತೆಯು ಕ್ರಮೇಣವಾಗಿ ಹೆಚ್ಚುತ್ತಾ ಗ್ರೀಷ್ಮ ಋತುವಿನಲ್ಲಿ ಉಚ್ಛ್ರಾಯ ಸ್ಥಿತಿಗೆ ತಲುಪುತ್ತದೆ.

- ❑**ಶಿಶಿರ ಋತು (ಚಳಿಗಾಲ)**–ಜನವರಿ ಮಧ್ಯಭಾಗದಿಂದ ಮಾರ್ಚ್ ಮಧ್ಯಭಾಗದವರೆಗೆ
- ❑**ವಸಂತ ಋತು (ವಸಂತ ಕಾಲ)**–ಮಾರ್ಚ್ ಮಧ್ಯಭಾಗದಿಂದ ಮೇ ಮಧ್ಯಭಾಗದವರೆಗೆ
- ❑**ಗ್ರೀಷ್ಮ ಋತು (ಬೇಸಿಗೆ ಕಾಲ)**–ಮೇ ಮಧ್ಯಭಾಗದಿಂದ ಜುಲೈ ಮಧ್ಯಭಾಗದವರೆಗೆ

**ವಿಸರ್ಗ ಕಾಲ / ದಕ್ಷಿಣಾಯಣ / Southern Solstice** (ಅಂದಾಜು ಜುಲೈ ಮಧ್ಯಭಾಗದಿಂದ ಜನವರಿ ಮಧ್ಯಭಾಗದವರೆಗೆ) ಈ ಅವಧಿಯಲ್ಲಿ ಸೂರ್ಯನು ಭೂಮಿಯಿಂದ ದೂರ ಸಾಗುತ್ತಾನೆ. ಇದರಿಂದ ಹವಾಮಾನ ಹೆಚ್ಚು ತಂಪಾಗುತ್ತದೆ. ಈ ಸಮಯದಲ್ಲಿ ಮನುಷ್ಯರು ಮತ್ತು ಪ್ರಾಣಿಗಳು ಹೆಚ್ಚು ಉತ್ಸಾಹಭರಿತರಾಗಿದ್ದು, ಶಕ್ತಿಶಾಲಿಗಳಾಗಿರುತ್ತಾರೆ.

- ❑**ವರ್ಷಾ ಋತು (ಮುಂಗಾರು /ಮಳೆಗಾಲ)**–ಜುಲೈ ಮಧ್ಯಭಾಗದಿಂದ ಸೆಪ್ಟೆಂಬರ್ ಮಧ್ಯಭಾಗದವರೆಗೆ
- ❑**ಶರದ ಋತು (ಶರತ್ಕಾಲ)**–ಸೆಪ್ಟೆಂಬರ್ ಮಧ್ಯಭಾಗದಿಂದ ನವೆಂಬರ್ ಮಧ್ಯಭಾಗದವರೆಗೆ
- ❑**ಹೇಮಂತ ಋತು (ಹಿಂಗಾರು/ಪೂರ್ವ ಚಳಿಗಾಲ)**–ನವೆಂಬರ್ ಮಧ್ಯಭಾಗದಿಂದ ಜನವರಿ ಮಧ್ಯಭಾಗದವರೆಗೆ

**ಗ್ರೀಷ್ಮ ಋತು ಮತ್ತು ಅತ್ಯುಷ್ಣ ವಾತಾವರಣದ ಮಹತ್ವ** : ಇತ್ತೀಚಿನ ದಿನಗಳಲ್ಲಿ ಭಾರತದಲ್ಲಿ ಹವಾಮಾನ ಬದಲಾವಣೆಯ ಪರಿಣಾಮ ದಿನದಿಂದ ದಿನಕ್ಕೆ ಸ್ಪಷ್ಟವಾಗಿ ಕಾಣಿಸುತ್ತಿದೆ. ಜಾಗತಿಕ ತಾಪಮಾನ ಏರಿಕೆಯಿಂದ ಬೇಸಿಗೆ ಋತುವಿನ ಉಷ್ಣತೆ ಹೆಚ್ಚುತ್ತಿದ್ದು, ದೀರ್ಘಕಾಲ ಮುಂದುವರಿಯುವ ತಾಪ ಅಲೆಗಳು ಜನಜೀವನವನ್ನು ಸಂಕಷ್ಟಕ್ಕೀಡಾಗಿಸುತ್ತಿವೆ. ವಿಶೇಷವಾಗಿ ದೆಹಲಿ, ರಾಜಸ್ಥಾನ, ಉತ್ತರ ಪ್ರದೇಶ, ಹರಿಯಾಣ ಮತ್ತು ಪಂಜಾಬ್ ಪ್ರದೇಶಗಳಲ್ಲಿ ಉಷ್ಣಾಂಶವು ಸಾಮಾನ್ಯ ಮಟ್ಟಕ್ಕಿಂತ ಹೆಚ್ಚಾಗಿ ದಾಖಲಾಗುತ್ತಿದೆ. ಇದರಿಂದ ನೀರಿನ ಕೊರತೆ, ಬೆಳೆ ಹಾನಿ, ವಿದ್ಯುತ್ ಬಳಕೆಯ ಏರಿಕೆ ಹಾಗೂ ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿವೆ. ವೃದ್ಧರು, ಮಕ್ಕಳು ಮತ್ತು ಹೊರಾಂಗಣದಲ್ಲಿ ಕೆಲಸ ಮಾಡುವವರು ಹೆಚ್ಚು ಅಪಾಯಕ್ಕೆ ಒಳಗಾಗುತ್ತಾರೆ. ಹವಾಮಾನ ಬದಲಾವಣೆಯನ್ನು ನಿಯಂತ್ರಿಸಲು ಮರ ನೆಡುವುದು, ಇಂಧನದ ಅತಿಯಾದ ಬಳಕೆಯನ್ನು ಕಡಿಮೆ ಮಾಡುವುದು, ನವೀಕರಿಸಬಹುದಾದ ಶಕ್ತಿಯನ್ನು ಬಳಸುವುದು ಹಾಗೂ ಪರಿಸರ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ. ಪ್ರಕೃತಿಯನ್ನು ಕಾಪಾಡಿದಾಗ ಮಾತ್ರ ಭವಿಷ್ಯದ ತಾಪ ಅಲೆಗಳನ್ನು ತಗ್ಗಿಸಲು ಸಾಧ್ಯ. ಇದರೊಂದಿಗೆ ಅತ್ಯಂತ ಪ್ರಮುಖವಾಗಿ ದೀರ್ಘಾವಧಿಯ ತಾಪದಾ ಅಲೆಗಳಿಂದ ನಮ್ಮ ಆರೋಗ್ಯದ ಮೇಲಾಗಬಹುದಾದ ಪರಿಣಾಮಗಳಿಂದ ಸಂರಕ್ಷಿಸಿಕೊಳ್ಳುವುದು ಅತ್ಯಂತ ಅವಶ್ಯಕವಾಗಿದೆ.




ಭಾರತದ ವೈವಿಧ್ಯಮಯ ಭೌಗೋಳಿಕ, ಸಾಂಸ್ಕೃತಿಕ ಪರಂಪರೆಯು ಋತುಗಳಿಗೆ ಅನುಗುಣವಾಗಿ ಆಚರಿಸಲ್ಪಡುವ ಜೀವನಶೈಲಿಗಳನ್ನು ಪಾಲಿಸಿಕೊಂಡು ಬಂದಿದೆ, ಅಂತೆಯೇ ಭಾರತದ ಸಂಸ್ಕೃತಿಯ ಪ್ರತೀಕವಾಗಿರುವಂತಹ ನಮ್ಮ ಪಾರಂಪರಿಕ ವೈದ್ಯ ವಿಜ್ಞಾನ ಆಯುರ್ವೇದ ಪ್ರತಿಋತುವಿಗೆ ಅನುಗುಣವಾಗಿ ಅಳವಡಿಸಿಕೊಳ್ಳಬೇಕಾದ ಜೀವನಶೈಲಿ, ಆಹಾರ. ಉಡುಗೆ, ಮತ್ತು ಇತರ ಆಚರಣೆಗಳ ಬಗ್ಗೆ ವಿವರವಾದ ಮಾಹಿತಿಯನ್ನು ಒದಗಿಸಿದೆ, ತತ್ಸಂಭಂದವಾಗಿ ಈ ಲೇಖನವನ್ನು ಓದುವಂತ ಸಕಲರಿಗೂ ಆಯುರ್ವೇದದ ಈ

ಪ್ರಮುಖ ಮಾಹಿತಿಯನ್ನು ಒದಗಿಸುವ ಸಲುವಾಗಿ ಈ ಲೇಖನವನ್ನು ಪ್ರಸ್ತುತಪಡಿಸಲಾಗಿದೆ.

**ಗ್ರೀಷ್ಮ ಋತುಚರ್ಯೆ :** ಗ್ರೀಷ್ಮ ಎಂಬುದು ಸಂಸ್ಕೃತ ಪದವಾಗಿದ್ದು, ಅದರ ಅರ್ಥ ಬೇಸಿಗೆ ಅಥವಾ ತಾಪ ಅಥವಾ ಉಷ್ಣ ಎಂಬುದಾಗಿದೆ. ಋತು ಎಂದರೆ ಋತು/ ಹಂಗಾಮು/ ಕಾಲ, ಚರ್ಯೆ ಎಂದರೆ ಆ ಋತುವಿನಲ್ಲಿ ಅನುಸರಿಸಬೇಕಾದ ಜೀವನಶೈಲಿ ಅಥವಾ ಸ್ವಯಂ ಆರೈಕೆ ಕ್ರಮ. ಆಯುರ್ವೇದವು ಪ್ರತಿಯೊಂದು ಋತುವಿಗೂ ಕ್ರಮಬದ್ಧ ಜೀವನಶೈಲಿಯನ್ನು ಶಿಫಾರಸು ಮಾಡುತ್ತದೆ.

**ಗ್ರೀಷ್ಮ ಋತುವಿನ ಭೌತಿಕ ಲಕ್ಷಣಗಳು ಮತ್ತು ಮನುಷ್ಯನ ದೇಹದ ಮೇಲಾಗುವ ಪರಿಣಾಮ :** ಇದು ಆದಾನ ಕಾಲದ ಕೊನೆಯ ಋತುವಾಗಿದೆ ಮತ್ತು ಈಗಾಗಲೇ ತಿಳಿಸಿರುವಂತೆ ಈ ಋತುವಿನಲ್ಲಿ ವಾತಾವರಣವು ಅತೀ ಹೆಚ್ಚು ಉಷ್ಣತೆ ಮತ್ತು ಒಣ ಹವೆಯಿಂದ ಕೂಡಿರುತ್ತದೆ. ಈ ಅವಧಿಯಲ್ಲಿ ಸೂರ್ಯನು ಉತ್ತರ ಗೋಳಾರ್ಧದತ್ತ ಮೇಲ್ಮುಖವಾಗಿ ಸಾಗುತ್ತಾನೆ. ಸೂರ್ಯನ ಕಿರಣಗಳ ತೀವ್ರತೆ ಅತೀ ಹೆಚ್ಚು ಇರುವುದರಿಂದ ವಾತಾವರಣದಲ್ಲಿನ ತೇವಾಂಶ, ಮನುಷ್ಯನ ದೇಹದಲ್ಲಿನ ಸೌಮ್ಯ ಅಂಶ ಮತ್ತು ತಂಪಿನ ಗುಣಗಳು ಕಡಿಮೆಯಾಗುತ್ತವೆ. ಇದು ಮಾನವ ದೇಹದ ಮೇಲೆ ಪರಿಣಾಮ ಬೀರಿದ್ದು, ಆಂತರಿಕವಾಗಿ ದೇಹದಲ್ಲಿ ಉಷ್ಣತೆ ಮತ್ತು ಒಣತನ ಹೆಚ್ಚಾಗುತ್ತದೆ. ಗ್ರೀಷ್ಮ ಋತುವಿನಲ್ಲಿ ಅಗ್ನಿ ತತ್ತ್ವ ಪ್ರಬಲವಾಗಿರುವ ಕಾರಣ ದೇಹದ ಶಕ್ತಿಯನ್ನು ಕುಗ್ಗಿಸಿ, ಮಂದತನ ಮತ್ತು ಆಲಸ್ಯವನ್ನುಂಟುಮಾಡುತ್ತದೆ. ದೇಹದಲ್ಲಿನ ಅತಿಯಾದ ಉಷ್ಣತೆಯ ಪರಿಣಾಮ ಹಾಗು ನಿರ್ಜಲೀಕರಣದಿಂದ ಸಹಜವಾಗಿ ಜಠರಾಗ್ನಿ ಅಥವಾ ಜೀರ್ಣಶಕ್ತಿ ಕಡಿಮೆಯಾಗುತ್ತದೆ. ಆದ್ದರಿಂದ ಸುಲಭವಾಗಿ ಜೀರ್ಣವಾಗುವ, ಹಗುರವಾದ ಆಹಾರವನ್ನು ಕಡಿಮೆ ಪ್ರಮಾಣದಲ್ಲಿ ಸೇವಿಸಬೇಕು, ಹೆಚ್ಚಿದ ಬಿಸಿಯಿಂದ ದೇಹಕ್ಕೆ ಹೆಚ್ಚಿನ ದ್ರವ ಅಗತ್ಯವಿರುತ್ತದೆ, ಆದ್ದರಿಂದ ಸಾಕಷ್ಟು ನೀರು ಕುಡಿಯಬೇಕು, ಸಿಹಿ ಹಣ್ಣುಗಳನ್ನು ಹೇರಳವಾಗಿ ಸೇವಿಸಬೇಕು, ತಂಪನ್ನು ನೀಡಬಲ್ಲ ಹಾಗು ಸುಲಭವಾಗಿ ಜೀರ್ಣವಾಗಬಲ್ಲ ತರಕಾರಿಗಳನ್ನೂ ಸೇವಿಸಬೇಕು. ಪ್ರತಿಯೊಬ್ಬರೂ ತಮ್ಮ ಜೀರ್ಣಶಕ್ತಿಗೆ ಅನುಗುಣವಾಗಿ ಅಥವಾ ಜಠರಾಗ್ನಿಯನ್ನು ಗಮನಿಸಿ, ಹಸಿವಾದಾಗ ಮಾತ್ರ ಸೂಕ್ತ ಪ್ರಮಾಣದಲ್ಲಿ ಊಟ ಮಾಡಬೇಕು.

ಈ ಋತುವಿನಲ್ಲಿ ಸಂಭವಿಸಬಹುದಾದಂತಹ ಇತರೆ ಸಾಮಾನ್ಯ ಸಮಸ್ಯೆಗಳು : ಈ ಋತುವಿನಲ್ಲಿ ನಾವು ಕೆಳಗಿನ ಸಮಸ್ಯೆಗಳಿಗೆ ಹೆಚ್ಚು ಒಳಗಾಗುವ ಸಾಧ್ಯತೆ ಇದೆ :

- ದೇಹದ ನೀರಿನ ಕೊರತೆ (ಡಿಹೈಡ್ರೇಶನ್)
- ದಣಿವು
- ಆಲಸ್ಯ
- ದೇಹದಲ್ಲಿ ಒಣತನ
- ಶಕ್ತಿಯ ಕೊರತೆ

ಆದ್ದರಿಂದ ಆಯುರ್ವೇದವು ಈ ಕಾಲದಲ್ಲಿ ಹಗುರವಾದ ಆಹಾರ ಸೇವನೆ ಮತ್ತು ಕಡಿಮೆ ದೈಹಿಕ ಚಟುವಟಿಕೆಗಳನ್ನು ಶಿಫಾರಸು ಮಾಡುತ್ತದೆ, ಇದರಿಂದ ದೇಹದ ಶಕ್ತಿ ಮತ್ತು ಆರೋಗ್ಯ ಸಮತೋಲನದಲ್ಲಿರುತ್ತದೆ. ಇದರಿಂದ ದೇಹದ ಸಾಮಾನ್ಯ ಶಕ್ತಿ ಮಟ್ಟವನ್ನು ಕಾಪಾಡಿಕೊಳ್ಳಬಹುದು ಮತ್ತು ಆರೋಗ್ಯವನ್ನು ಸುಸ್ಥಿತಿಯಲ್ಲಿ ಉಳಿಸಿಕೊಳ್ಳಬಹುದು.




**ಗ್ರೀಷ್ಮ ಋತುವಿನಲ್ಲಿ ಆಹಾರ ಮತ್ತು ಜೀವನಶೈಲಿ ಶಿಫಾರಸುಗಳು :** ಅತೀವ ತಾಪಮಾನದ ಅಲೆಯ ಪರಿಣಾಮದಿಂದ ದುರ್ಬಲವಾಗಿರುವ ದೇಹವನ್ನು ಸಂರಕ್ಷಿಸುವುದರೊಂದಿಗೆ, ತಾಪಮಾನದ ದುಷ್ಪರಿಣಾಮಗಳಿಂದ ಸಂರಕ್ಷಿಸಿಕೊಳ್ಳುವ ಸಲುವಾಗಿ ಆಯುರ್ವೇದದಲ್ಲಿ ಈ ಕೆಳಕಂಡ ಹಿತಕರ ಆಹಾರಗಳನ್ನು ಅನುಸರಿಸಬಹುದಾಗಿದೆ, ಕೆಂಪು ಅಕ್ಕಿ, ಕುದಿಸಲು ಅಕ್ಕಿ (boiled rice), ಹಸಿರು ಬೇಳೆ, ಬಸಳೆ ಸೊಪ್ಪು, ಗಣಕೆ ಸೊಪ್ಪು, ಕೀರೆ ಸೊಪ್ಪು, ಮಜ್ಜಿಗೆ, ಅನ್ನ ಬಸಿದ ಗಂಜಿ. ಅನ್ನವನ್ನು ಮಜ್ಜಿಗೆಯಲ್ಲಿ ನೆನೆಸಿ ಸೇವನೆ, ದನಿಯ ಅಥವಾ ಕೊತ್ತಂಬರಿ ಸೊಪ್ಪು, ಕರಿಬೇವಿನ ಸೊಪ್ಪು, ಮೊದಲಾದವುಗಳನ್ನು ಆಹಾರದಲ್ಲಿ ನಿಯಮಿತವಾಗಿ ಸೇವಿಸುವುದು.

ಮಧುರ (ಸಿಹಿ), ಲಘು (ಹಗುರ), ದ್ರವ (ದ್ರವಸ್ವರೂಪ) ಗುಣಗಳಿರುವ ಆಹಾರಗಳನ್ನು ಯಥೇಚ್ಛವಾಗಿ ಸೇವಿಸುವುದು ಉತ್ತಮ. ಅಡುಗೆಯಲ್ಲಿ ಘೃತ (ತುಪ್ಪ) ಬಳಕೆ ಆರೋಗ್ಯಕರವೆಂದು ಪರಿಗಣಿಸಲಾಗಿದೆ, ಹೆಚ್ಚಿನ ಪ್ರಮಾಣದಲ್ಲಿ ದ್ರವಪದಾರ್ಥಗಳನ್ನು ಸೇವಿಸಬೇಕು. ಉದಾಹರಣೆಗೆ: ಜಲ–ತಾಜಾ ನೀರು ಮುಂತಾದವು, ಪಾನಕ–ಸೊಗದೆ ಬೇರಿನ/ ಅನಂತ ಮೂಲ ಪಾನಕ, ನಿಂಬೆ ಹಣ್ಣಿನ ಪಾನಕ, ಉಶೀರಾ/ ಲಾವಂಚದ ಲೆಮನ್ ಗ್ರಾಸ್‌ನ ಪಾನಕ, ಮಸ್ಕ್ ಮೆಲೊನ್ (ತರ್ಬುಜ), ಪಾನಕ, ಮುಂತಾದವು. ಮಾವು, ದ್ರಾಕ್ಷಿ, ದಾಳಿಂಬೆ ಮೊದಲಾದ ರಸಪೂರ್ಣ ಹಣ್ಣುಗಳಿಂದ ತಯಾರಿಸಿದ ತಾಜಾ ಹಣ್ಣಿನ ರಸ, ಶುಂಠಿ, ಏಲಕ್ಕಿ, ಕಬ್ಬು ರಸ ಸೇರಿಸಿದ ಹಣ್ಣು ಪಾನೀಯಗಳು, ಎಳನೀರು (ತೆಂಗಿನ ಕಾಯಿ ನೀರು), ಮಂಥ–ಒಣದ್ರಾಕ್ಷಿ, ಅಂಜೂರ, ಖರ್ಜೂರಗಳನ್ನು ತಣ್ಣೀರಿನಲ್ಲಿ ಒಂದು ಗಂಟೆ ನೆನೆಸಿ ನಂತರ ಚೆನ್ನಾಗಿ ಕಡೆದು ಮಿಶ್ರಣ ಮಾಡಿ ತಯಾರಿಸುವ ತಂಪು ಪಾನೀಯ. ಔಷಧೀಯ ಮೂಲಿಕೆಗಳಾದ ಶ್ರೀಗಂಧ ಮತ್ತು ಇತರೆ ಶೀತ ಗುಣಗಳುಳ್ಳ ದ್ರವ್ಯಗಳಿಂದ ಸಿದ್ಧಪಡಿಸಿದ ದ್ರವ ಪಾನೀಯಗಳು ಅಥವಾ ಇವುಗಳಿಂದ ಸಿರಪ್ ತಯಾರಿಸಿ ನೀರಿನಲ್ಲಿ ಬೆರೆಸಿ ಅಗತ್ಯವಿದ್ದಾಗ ಸೇವಿಸಬಹುದು.

ಇವಲ್ಲದೇ, ಗುಲ್ಕಂದದ ಸೇವನೆ, ಗುಲ್ಕಂದವನ್ನು ಗುಲಾಬಿ ಹೂವಿನ ರೆಂಬೆಗಳು ಮತ್ತು ಸಕ್ಕರೆಯಿಂದ ತಯಾರಿಸಲಾಗುತ್ತದೆ. ಇದು ಅತ್ಯುತ್ತಮ ಶರೀರವನ್ನು ತಂಪಾಗಿಡಬಲ್ಲ ಔಷಧಿಯಾಗಿದೆ, ಇದನ್ನು ಖಾಲಿ ಹೊಟ್ಟೆಯಲ್ಲಿ 1 ರಿಂದ 2 ಟೀ ಸ್ಪೂನ್ ಹಾಲಿನೊಂದಿಗೆ ಅಥವಾ ಹಾಗೆಯೇ ಸೇವಿಸಬಹುದು ಅಥವಾ ಗುಲ್ಕನ್, ಬೆಣ್ಣೆ ಮತ್ತು ಚೆನ್ನಾಗಿ ಹಣ್ಣಾಗಿರುವ ಬಾಳೆಹಣ್ಣನ್ನು ಮಿಶ್ರಣ ಮಾಡಿ ಸೇವಿಸಬಹುದು. ಇದರಿಂದ, ದೇಹದಲ್ಲಿ ಉರಿ, ಕಣ್ಣುಗಳಲ್ಲಿ ಉರಿ, ಮಲವಿಸರ್ಜನೆ ಮಾಡುವಾಗ ಉರಿ, ಕೈಗಳ ಹಾಗೂ ಪಾದಗಳ ಉರಿ, ಬಿಸಿಯಿಂದ ತಲೆ ಸುತ್ತು, ಚರ್ಮದಲ್ಲಿ ಕರಕರೆ, ಜೀರ್ಣಕ್ರಿಯೆಯ ಅಸಮತೋಲನ, ಅಜೀರ್ಣ, ಅತಿಯಾದ ಆಸಿಡ್ ಸಮಸ್ಯೆಗಳಿಂದ ಉಪಶಮನ ಸಿಗುತ್ತದೆ.

**ತಪ್ಪಿಸಬೇಕಾದ ಆಹಾರಗಳು :**

ಗ್ರೀಷ್ಮ ಋತುವಿನಲ್ಲಿ ಕೆಳಗಿನ ಆಹಾರಗಳನ್ನು ಕಡಿಮೆ ಬಳಸುವುದು ಅಥವಾ ತಪ್ಪಿಸುವುದು ಉತ್ತಮ: ತೀವ್ರವಾಗಿ ಎಣ್ಣೆಯಲ್ಲಿ ಫ್ರೈ ಮಾಡಿದ ಪದಾರ್ಥಗಳು, ಬಿಸಿ ಬಿಸಿ ಆಹಾರಗಳು, ಹೆಚ್ಚು ಖಾರವಾದ ಪದಾರ್ಥಗಳು, ಹೆಚ್ಚು ಉಪ್ಪಿನ ಆಹಾರಗಳು, ಹುಳಿ ಪದಾರ್ಥಗಳು, ಹಾಲು ಮತ್ತು ಹಣ್ಣುಗಳನ್ನು ಸೇರಿಸಿದ ಸ್ಮೂಥಿಗಳು, ಹೆಚ್ಚು ಹುಳಿ ಬಂದಿರುವ ಮೊಸರು ಇತ್ಯಾದಿ ಹಾಗು ಮದ್ಯಪಾನವನ್ನು ಪ್ರಮುಖವಾಗಿ ತ್ಯಜಿಸಬೇಕು ಅಥವಾ ತಪ್ಪಿಸಬೇಕು, ಏಕೆಂದರೆ ಅದು ದೇಹದಲ್ಲಿ ಉಷ್ಣತೆ ಮತ್ತು ಒಣತನವನ್ನು ಹೆಚ್ಚಿಸಿ ದೌರ್ಬಲ್ಯ ಉಂಟುಮಾಡುತ್ತದೆ. ಒಂದು ವೇಳೆ ಮದ್ಯಪಾನ ಸೇವನೆ ಮಾಡಲೇ ಬೇಕಾದರೆ ಅತೀ ಹೆಚ್ಚು ನೀರಿನೊಂದಿಗೆ ಮಿಶ್ರಣ ಮಾಡಿಕೊಂಡು ಸೇವಿಸಬೇಕು.

**ಹಿತಕರ ಜೀವನಶೈಲಿ ಮತ್ತು ದಿನಚರಿ ಸಲಹೆಗಳು** : ಬೇಸಿಗೆಯಲ್ಲಿ ದೇಹದ ದಣಿವನ್ನು ತಪ್ಪಿಸಲು ಆಯುರ್ವೇದವು ಕೆಲವು ಸರಳ ಸಲಹೆಗಳನ್ನು ನೀಡುತ್ತದೆ. ತಂಪಾದ ಸ್ಥಳದಲ್ಲಿ ಸ್ವಲ್ಪ ಸಮಯ ಹಗಲು ನಿದ್ರೆ ಮಾಡಬಹುದು, ಬೇಸಿಗೆಯಲ್ಲಿ ರಾತ್ರಿ ಸಮಯ ಚಿಕ್ಕದಾಗಿರುವುದರಿಂದ ಹಾಗೂ ಬಿಸಿಯಿಂದ ದಣಿವು ಹೆಚ್ಚಾಗುವುದರಿಂದ ಇದು ಉಪಯುಕ್ತ, ದೇಹಕ್ಕೆ ಚಂದನ ಲೇಪನ ಹಚ್ಚಿ ನಂತರ ತಣ್ಣೀರಿನಿಂದ ಸ್ನಾನ ಮಾಡಬಹುದು, ಸಾಧ್ಯವಾದಷ್ಟು ಮನೆಯೊಳಗೆಯೇ ಇರಿ, ತೀವ್ರ ಸೂರ್ಯಕಿರಣಗಳಿಂದ ದೂರವಿರಿ, ತೆಳ್ಳಗಿನ, ಹಗುರವಾದ ಬಟ್ಟೆ ಧರಿಸಿ, ಹೂವಿನ ಪರಿಮಳ ಹೊಂದಿದ ತಂಪು ಸುಗಂಧಗಳನ್ನು ಬಳಸಿ , ಹಾಗು ಅತಿಯಾದ ಶ್ರಮ ಮತ್ತು ಕಠಿಣ ವ್ಯಾಯಾಮ ಮಾಡದಿರಿ.

**ಆಯುರ್ವೇದದ ಮುಖ್ಯ ಸಂದೇಶ:**

ಬೇಸಿಗೆಯ ತಿಂಗಳುಗಳಲ್ಲಿ ದೇಹವನ್ನು ಸಮತೋಲನದಲ್ಲಿಡಲು ಆಯುರ್ವೇದವು ತಂಪು ನೀಡುವ, ದಾಹ ಶಮನ ಮಾಡುವ, ದೇಹಕ್ಕೆ ಚೈತನ್ಯ ನೀಡಬಲ್ಲ ಆಹಾರ ಮತ್ತು ಸೂಕ್ತ ಜೀವನಶೈಲಿಯನ್ನು ಅನುಸರಿಸಲು ಸಲಹೆ ನೀಡುತ್ತದೆ. ಇದರಿಂದ ಈ ಕಠಿಣ ಋತುವಿನಲ್ಲಿಯೂ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಮತ್ತು ಅನಿರೀಕ್ಷಿತವಾಗಿ ಎದುರಾಗಬಲ್ಲ ಆರೋಗ್ಯದ ವೈಪರೀತ್ಯಗಳನ್ನು ತಡೆಯಬಹುದಾಗಿದೆ.❑

**#ಮದ್ದಲ್ಲ#ಕಷಾಯ**

## ‘ಬೊಜ್ಜು ಬಲವಲ್ಲ, ಭೌತಿಕ ಫಿಟ್ನೆಸ್ ನಂಬಲಾರ್ಹ ಆರೋಗ್ಯ ಲಕ್ಷಣ ಅಲ್ಲವೇ ಅಲ್ಲ’



25–30 ವರ್ಷಗಳು ಆದ ಮೇಲೆ ಬರಿ ಜಿಮ್, ವಾಕ್, ಇವೆಲ್ಲಾ ದೇಹದ ನೈಜ ಆರೋಗ್ಯ ಹೆಚ್ಚಿಸುವ, ಹಾರ್ಟ್ ಅಟ್ಯಾಕ್, ಸ್ಟ್ರೋಕ್‌ಗಳನ್ನ ತಡೆಯುವ ನಿಖರ ವಿಧಾನಗಳಲ್ಲ ಎಂಬುದನ್ನ ಅರಿಯಲೇ ಬೇಕು. ಸ್ನಾಯು ಮೂಳೆಗಳ ಬೆಳವಣಿಗೆ ಹಂತ ಕುಂಠಿತವಾದ ಮೇಲೆ, ಅವುಗಳ ಮೇಲೆ ಅನಾವಶ್ಯಕ ಒತ್ತಡ ಹಾಕಿ hypertrophy ಮಾಡುವುದು ಸರಿಯಲ್ಲ. ಸ್ಮಾರ್ಟ್ ಯಾಂತ್ರಿಕ ಸಾಮಗ್ರಿಗಳಿಗೆ ಜೋತು ಬೀಳದೆ, ಅವುಗಳನ್ನೇ ಜೀವ ಉಳಿಸುವ ಸಂಜೀವಿನಿ ಅಂತ ನಂಬದೇ, ಆರೋಗ್ಯದ ವೈಪರೀತ್ಯ ಇರುವವರು ತಜ್ಞ ವೈದ್ಯರ ನಿಯಮಿತ ತಪಾಸಣೆ, ಸಲಹೆ ಪಡೆದು, ನಿಯಮಿತ ಚಟುವಟಿಕೆಯುಕ್ತ, ಶ್ರಮ ಆಧಾರಿತ, ಶುದ್ಧ ಬದ್ಧ ಆಹಾರ ಕ್ರಮದ ಬದುಕಿನಿಂದಲೇ ನಮ್ಮ ಹಿರಿಯರು ಮಾಗಿದ ಬದುಕನ್ನ ಬದುಕಿ ತೋರಿಸಿದಂತೆ ಬದುಕಲು ಪ್ರಯತ್ನ ಮಾಡಬೇಕು. ಅದೇ ಯಶಸ್ವಿ ಆರೋಗ್ಯ ಪೂರ್ಣ ಬದುಕಿಗೆ ಸೂತ್ರ ಹಾಗು ಬುನಾದಿ.


ಎಲ್ಲಕ್ಕೂ ಮೊದಲು ಮನಸ್ಸಿಗೆ ವ್ಯಾಯಾಮ ಬೇಕು. ಮನಸ್ಸು ಸರಿ ಇಲ್ಲದೇ ಯಾಂತ್ರಿಕ ಜಿಮ್, ಯಾಂತ್ರಿಕ ಎಕ್ಸರ್ಸೈಜ್, ಒತ್ತಾಯದ ಲೈಫ್ ಸ್ಟೈಲ್ modification ಸರಿಯಲ್ಲ. ಅದೆಲ್ಲ ಬರಿ ಜಳ್ಳು. ಈ ಟೊಳ್ಳು ತೋರಿಕೆಯ ಫ್ಯಾಷನ್ ಬದುಕುಗಳ ದಿನಚರಿಗಳು ಬರಿ ಬೊಜ್ಜುಗಳು ಅವು ಬಲವಲ್ಲ.

Despite of all other good habits, if our stress management and sleeping habits are not good, I feel they will become the biggest cause for unexpected deaths.

Especially sleep deprivation/disturbed sleep between 11pm to 5 am. Unexpected deaths are due to multi factorial reasons.

But chronic stress is increasingly becoming a lead factor now…

Fitness ಅನ್ನುವಾಗ ನಾವು “ಮನಸ್ಸಿ”ನ ಬಗ್ಗೆ ಯೋಚಿಸಲ್ಲ, ನಿದ್ದೆ ಬಗ್ಗೆ ಯೋಚಿಸಲ್ಲ–ಅದು ಕೂಡಾ ಒಂದು ದೊಡ್ಡ ಸಮಸ್ಯೆ...ಫಿಟ್ನೆಸ್ ಅಂದ್ರೆ ಬರೀ ದೇಹಕ್ಕೆ ಮಾತ್ರ ಅಲ್ಲವೇ ಅಲ್ಲ. Fitness means, It is physical, mental, physiological, economical, social, psychological and spiritual fitness, not just mere absence of disease. ಆಂತರಿಕವಾಗಿ ಕೊರಗುತ್ತಾ ಸೊರಗುತ್ತಾ, ಭೌತಿಕವಾಗಿ ತೋರಿಕೆಯ ಫಿಟ್ನೆಸ್ ಎಂಬ ಬೊಜ್ಜು ಖಂಡಿತಾ ಬಲವಲ್ಲ. ❑




**ಲೇಖಕರು**

**ಡಾ. ಎಂ. ಅಣ್ಣಯ್ಯ ಕುಲಾಲ್ ಉಳ್ತೂರು**

Bsc, MBBS Fellowship in Palliative Medicine
& Family Medicine, Occuptional Health
MBA (Health & Hospital Management)
Dip. in Diabetes.
HOD. Dept. of Pain and Palliative Medicine.
Govt., WENLOCK Dist. Hospital Mangalore.
State Vice President IMC
Karnataka State Chapter

(ಮೊ.): 91-94480 12028

ಇಮೇಲ್ :
drkulalannayya@gmail.com


# ಸಂಘದಲ್ಲಿ ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಧ್ವಜಾರೋಹಣ ಕಾರ್ಯಕ್ರಮ

ದಿನಾಂಕ 01.11.2025 ರಂದು ಬೆಳಿಗ್ಗೆ 9.30 ಗಂಟೆಗೆ 70ನೇ ಕರ್ನಾಟಕ ರಾಜ್ಯೋತ್ಸವ ಆಚರಣೆ ಸಂದರ್ಭ ಸಂಘದ ಆವರಣದಲ್ಲಿ ಧ್ವಜಾರೋಹಣ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಬೆಳಗಾವಿ ಲೋಕಸಭಾ ಕ್ಷೇತ್ರದ ಸಂಸದರು ಮತ್ತು ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಶೆಟ್ಟರ್ ಮತ್ತು ಅವರ ಧರ್ಮಪತ್ನಿ ಶ್ರೀಮತಿ ಶಿಲ್ಪಾ ಶೆಟ್ಟರ್ ಆಗಮಿಸಿದ್ದರು. ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಮುಖ್ಯ ಅತಿಥಿಗಳಿಗೆ ಹಾಗು ನೆರೆದಿದ್ದ ಎಲ್ಲಾ ದೆಹಲಿ ಕನ್ನಡಿಗರಿಗೆ ಸ್ವಾಗತ ಕೋರಿ, 70ನೇ ಕರ್ನಾಟಕ ರಾಜ್ಯೋತ್ಸವದ ಶುಭಾಶಯ ತಿಳಿಸಿದರು. ಮುಖ್ಯ ಅತಿಥಿಗಳು ಧ್ವಜಾರೋಹಣ ನಡೆಸಿಕೊಟ್ಟ ತರುವಾಯ ಎಲ್ಲರೂ ರಾಷ್ಟ್ರ ಧ್ವಜಕ್ಕೆ ವಂದನೆ ಸಲ್ಲಿಸಿ ರಾಷ್ಟ್ರಗೀತೆ ಮತ್ತು ನಾಡಗೀತೆ ಹಾಡಿದರು. ಶ್ರೀ ಜಗದೀಶ ಶೆಟ್ಟರು ಮಾತನಾಡಿ ತಮ್ಮನ್ನು ಧ್ವಜಾರೋಹಣ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದಕ್ಕೆ ಧನ್ಯವಾದ ತಿಳಿಸಿ ಇಷ್ಟೊಂದು ದೆಹಲಿ ಕನ್ನಡಿಗರನ್ನು ಭೇಟಿ ಮಾಡಿದ್ದರ ಬಗ್ಗೆ ಹರ್ಷ ವ್ಯಕ್ತಪಡಿಸುತ್ತಾ ಎಲ್ಲರಿಗೂ ರಾಜ್ಯೋತ್ಸವ ಆಚರಣೆ ಮಹತ್ವ ತಿಳಿಸಿ ನಾಡಿನ ಸಮಸ್ತ ಕನ್ನಡ ಜನತೆಯ ಪರವಾಗಿ ಶುಭಾಶಯ ತಿಳಿಸಿದರು. ಕೊನೆಯಲ್ಲಿ ಸಂಘದ ಖಜಾಂಚಿ ಶ್ರೀಮತಿ ಆಶಾಲತಾ ಎಂ. ಎಲ್ಲರಿಗೂ ವಂದನೆಗಳನ್ನು ತಿಳಿಸಿದರು.❑




ದೆಹಲಿ ಕರ್ನಾಟಕ ಸಂಘದ
ಗೀತೋತ್ಸವ-2025

# ಸಂಘದ ವೇದಿಕೆಯಲ್ಲಿ ಯಶಸ್ವಿಯಾಗಿ ಜರುಗಿದ ಸಂಗೀತಮಯ 'ಗೀತೋತ್ಸವ'




ಕರ್ನಾಟಕ ರಾಜ್ಯೋತ್ಸವ ಅಂಗವಾಗಿ ಸಂಘದ ಸಭಾಂಗಣದಲ್ಲಿ ದಿನಾಂಕ 02.11.2025ರಂದು ಶ್ರೀ ಹೊನ್ನಪ್ಪ ಭಾಗವತರ್, ಶ್ರೀ ಹುಣಸೂರು ಕೃಷ್ಣಮೂರ್ತಿ, ಶ್ರೀ ಕು.ರಾ. ಸೀತಾರಾಮ ಶಾಸ್ತ್ರಿ, ಶ್ರೀ ವಿಜಯ ನಾರಸಿಂಹ, ಶ್ರೀ ಆರ್.ಎನ್. ಜಯಗೋಪಾಲ್, ಶ್ರೀ ಚಿ. ಉದಯಶಂಕರ್, ಡಾ. ದೊಡ್ಡರಂಗೇಗೌಡ, ಡಾ. ಹಂಸಲೇಖ, ಶ್ರೀ ವಿ. ಮನೋಹರ್, ಶ್ರೀ ಕಲ್ಯಾಣ್, ಶ್ರೀ ಕವಿರಾಜ್, ಶ್ರೀ ಯೋಗರಾಜ್ ಭಟ್, ಡಾ. ಜಯಂತ್ ಕಾಯ್ಕಿಣಿ, ಶ್ರೀ ಎಸ್. ನಾರಾಯಣ್, ಡಾ. ಎಚ್.ಎಸ್. ವೆಂಕಟೇಶ್ ಮೂರ್ತಿ ಮತ್ತು ಶ್ರೀ ಬಿ.ಆರ್. ಲಕ್ಷ್ಮಣ್ ರಾವ್ ಮುಂತಾದ ಪ್ರಸಿದ್ಧ ಗೀತಕಾರರ, ಸಂಗೀತಕಾರರ, ಕವಿಗಳ ಭಾವಗೀತೆ, ಚಲನಚಿತ್ರಗೀತೆಗಳ ಸಂಗಮದ ಪ್ರತೀಕ 'ಗೀತೋತ್ಸವ' ಕಾರ್ಯಕ್ರಮವನ್ನು ಸ್ಥಳೀಯ ಕಲಾವಿದರಿಂದ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ವಹಿಸಿದ್ದರು. ಸ್ಥಳೀಯ ಕಲಾವಿದರಿಂದ ದೀಪವನ್ನು ಪ್ರಜ್ವಲಿಸುವ ಮೂಲಕ ಶ್ರೀಮತಿ ಮಮತಾ ಪ್ರವೀಣ್ ಅವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಮತ್ತು ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಪ್ರಸಿದ್ಧ ಕವಿಗಳ ಮತ್ತು ಸಾಹಿತಿಗಳ ಜನಪ್ರಿಯ ಗೀತೆಗಳನ್ನು ಹಾಡುವ ಮೂಲಕ ದೆಹಲಿ ಕನ್ನಡಿಗರನ್ನು ರಂಜಿಸಿದ ಸ್ಥಳೀಯ ಕಲಾವಿದರು: **ಶ್ರೀಮತಿ ಎಂ. ಪುಷ್ಪಲತಾ**–ಇಂದು ಎನಗೆ ಗೋವಿಂದ, **ಶ್ರೀಮತಿ ಆಶಾಲತಾ ಎಂ**–ಹೂವಂತ ಹೃದಯವನ್ನು ಹಿಂಡುವಿರೇಕೆ, **ಶ್ರೀಮತಿ ಉಮಾ ಶ್ರೀನಿವಾಸ**–ಓ ಮಲ್ಲಿಗೆಯೇ ಹರಸಿ ಹಾಡುವೆ, **ಶ್ರೀಮತಿ ಮಮತಾ ಜಿಂಧೆ**–ಬಾನಲ್ಲು ನೀನೆ ಭುವಿಯಲ್ಲು ನೀನೆ, **ಶ್ರೀಮತಿ ಮಮತಾ ಶಿವರಾಮ್**–ಕೃಷ್ಣ ನೀ ಬೇಗನೇ ಬಾರೋ, **ಶ್ರೀ ಮಹದೇವ ಆರ್**–ಆಲ್ಬೇಡ್ಕನೇ ಸುಂಕಿರೆ ನನ್ನ ಮುದ್ದಿನ ರಾಣಿ, **ಶ್ರೀ ಎಚ್.ಜಿ. ಶಿವರಾಮ್**–ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ, **ಶ್ರೀ ನವೀನ್ ಕುಮಾರ್ ಜಿ**–ಮೇಘಮಾಲೆ ಮೇಘಮಾಲೆ, **ಶ್ರೀ ಆರ್. ಸತೀಶ್**–ಪ್ರೇಮಲೋಕದ ಪಾರಿಜಾತವೆ, **ಶ್ರೀಮತಿ ಚೈತ್ರಾ ತೋಳ್ಪಾಡಿ**–ಒಲವೇ ಮೌನವೇ, **ಶ್ರೀ ನವೀನ್ ಕುಮಾರ್ ವಿ.**–ಮಿಂಚಾಗಿ ನೀನು ಬರಲು, **ಶ್ರೀಮತಿ ಜಯಶ್ರೀ ಬಸವರಾಜು**–ಅಮ್ಮ ನಿನ್ನ ತೋಳಿನಲ್ಲಿ ಕಂದ ನಾನು, **ಶ್ರೀ ರವಿ ಮೂಡಬಿದಿರೆ**–ಅನಾಥ ಮಗುವಾದೆ, **ಕು. ಜೆನಿತಾ ಉಮೇಶ್**–ತುಂತುರು ಅಲ್ಲಿ ನೀರ, **ಶ್ರೀ ಎಸ್. ಸಂಜಯ್ ಕುಮಾರ್**–ಜೊತೆ ಜೊತೆಯಲಿ, **ಶ್ರೀ ನಟರಾಜ ಸಿ.**–ನನ್ನ ಪ್ರೀತಿಯ ದೇವತೆಯೂ ಬಳಿ ಬಂದಳು, **ಶ್ರೀಮತಿ ವಾಣಿಶ್ರೀ ವಿಜಯ್**–ರಾಮಚಾರಿ ಹಾಡುವ ಲಾಲಿ ಹಾಡು ಕೇಳವ, **ಶ್ರೀಮತಿ ವೈಜಯಂತಿ ಗಿರೀಶ್**–ಸಂಜೆಯ ಕೆಂಪು ಮೂಡಿತು, **ಶ್ರೀ ಕೃಷ್ಣಪ್ಪ ಎಂ.**–ಹೃದಯ ಸಮುದ್ರ ಕಲಕಿ, **ಶ್ರೀ ಗಿರೀಶ್ ಎಸ್.**–ಮರಿಯಾ ಮೈ ಡಾರ್ಲಿಂಗ್, **ಶ್ರೀಮತಿ ಶಿಲ್ಪಾ ಪುರುಷೋತ್ತಮ್**–ಅರಳುವ ಹೂವುಗಳೇ ಆಲಿಸಿರಿ, **ಶ್ರೀಮತಿ ನಳಿನ ಬಸವರಾಜು**–ಮಧುಮಾಸ ಚಂದ್ರಮ ನೈದಿಲೆಗೆ ಸಂಭ್ರಮ, **ಶ್ರೀ ಎಸ್. ರಮೇಶ್**–ಹಾಡೊಂದು ಹಾಡಬೇಕು, **ಶ್ರೀಮತಿ ರಚನಾ ಗೋವಿಂದರಾಜು**–ಆಕಾಶ ನೀನೆ, **ಶ್ರೀಮತಿ ಮಮತಾ ಪ್ರವೀಣ್**–ಬಾನು ಕೆಂಪಾದಂತೆ, **ನಾಡಪ್ರಭು ಕೆಂಪೇಗೌಡ ಫೌಂಡೇಷನ್ (ರಂಗ ತರಂಗ) ತಂಡ ಶ್ರೀ ಅರುಣ್ ಸಿ.ಎಸ್.**–ಮಾತಿನಲ್ಲಿ ಹೇಳಲಾರೆನು, **ಶ್ರೀ ವೆಂಕಟೇಶ್ ಆರ್.ವಿ.**–ಶುಭ ಭಟ್ಟರ ಮಗಳೆ ಇದೆಲ್ಲ ನಿಂದೆ ತಗೊಳ್ಳೆ, **ನಾಡಪ್ರಭು ಕೆಂಪೇಗೌಡ ಫೌಂಡೇಷನ್ (ರಂಗ ತರಂಗ) ತಂಡ ಶ್ರೀ ಶ್ರೀನಿವಾಸಯ್ಯ**–ನಮ್ಮೂರ ಮಂದಾರ ಹೂವೆ, **ಕು. ಅಭಿಷೇಕ್ ಉಭಾಳೆ**–ರೇ ರೇ ಭಜರಂಗಿ, **ಕು. ಋಷಿ ಗೌಡ**–ತಣ್ಣನೇ ಬೀಸೋ ಗಾಳಿ, **ದೆಹಲಿ ಕನ್ನಡತಿಯರು** (ಶ್ರೀಮತಿ ಮಾಲಿನಿ ಪ್ರಹ್ಲಾದ್, ವೈಜಯಂತಿ ಗಿರೀಶ್, ವಾಣಿಶ್ರೀ ವಿಜಯ್)–ಮಲೆನಾಡಿನ ಮೂಲೆನಾಗೆ, **ನಾಡಪ್ರಭು ಕೆಂಪೇಗೌಡ ಫೌಂಡೇಷನ್ (ರಂಗ ತರಂಗ) ತಂಡ**–ಶ್ರೀಮತಿ ಶೋಭಾ ನಾಗರಾಜ, ಶ್ರೀಮತಿ ಭಾರ್ಗವಿ ಸತೀಶ್, ಶ್ರೀಮತಿ ರೂಪಶ್ರೀ ನರಸಿಂಹಮೂರ್ತಿ, ಶ್ರೀಮತಿ ಶ್ರುತಿ ರಮೇಶ್, ಶ್ರೀಮತಿ ಛಾಯಾ ಶ್ರೀನಿವಾಸ, ಶ್ರೀಮತಿ ಶಿಲ್ಪಾ ಪುರುಷೋತ್ತಮ–ಹಿಂದೂಸ್ತಾನವು ಎಂದೂ ಮರೆಯದ, **ಶ್ರೀ ವೆಂಕಟೇಶ್ ಎಂ.ವಿ** ಮತ್ತು **ಶ್ರೀಮತಿ ಪ್ರೇರಣಾ ವೆಂಕಟೇಶ್**–ಅರಳುತಿದೆ ಮೋಹ, **ನಾಡಪ್ರಭು ಕೆಂಪೇಗೌಡ ಫೌಂಡೇಷನ್ (ರಂಗ ತರಂಗ) ತಂಡ**–ಶ್ರೀ ಅರುಣ್ ಸಿ.ಎಸ್., ಕಲ್ಲಾದರೆ ನಾನು, ಎಸ್. ನಾರಾಯಣ, ಶ್ರೀಮತಿ ರಚನಾ ಗೋವಿಂದರಾಜು–ಆಹಾ ಎಂತ ಆಕ್ಷಣ ನೆನೆದರೆ ತಲ್ಲಣ, **ಶ್ರೀ ಗಿರೀಶ್ ಎಸ್.**–ಅಂಬರವೇರಿ ಅಂಬರವೇರಿ, **ಶ್ರೀಮತಿ ಎಂ. ಪುಷ್ಪಲತಾ**–ಪೂಜಿಸಲೆಂದೆ ಹೂವುಗಳ ತಂದೆ, **ಶ್ರೀ ಎಸ್. ರಮೇಶ್**–ಲಾಲಿ ಸುವ್ವಾಲಿ ಹಾಡೆಲ್ಲ ಲಾಲಿ, **ಶ್ರೀಮತಿ ಜಯಶ್ರೀ ಬಸವರಾಜು ಮತ್ತು ಶ್ರೀ ಎಚ್.ಎಸ್. ತೇಲಿ**–ಎಂದೆಂದು ನಿನ್ನನು ಮರೆತು ಬದುಕಿರಲಾರೆ, **ಶ್ರೀ ನವೀನ್ ಕುಮಾರ್ ವಿ. ಮತ್ತು ಶ್ರೀಮತಿ ಆಶಾಲತಾ**

ಎಂ.–ಮಡಿಕೇರಿ ಸಿಪಾಯಿ, ಶ್ರೀಮತಿ ಚೈತ್ರಾ ತೋಳ್ಪಾಡಿ ಮತ್ತು ಶ್ರೀ ರವಿ ಮೂಡಬಿದಿರೆ–ನಗುವ ನಯನ ಮಧುರಾ ಮೌನ, ಶ್ರೀ ಆರ್. ಸತೀಶ್ ಮತ್ತು ಶ್ರೀಮತಿ ಭಾರ್ಗವಿ ಸತೀಶ್–ನೀಲಾ ಮೇಘ ಗಾಳಿ ಬೀಸಿ ದೂರಾದ ಹಾಗೆ, ಶ್ರೀ ಎಚ್.ಜಿ. ಶಿವರಾಮ್ ಮತ್ತು ಮಮತಾ ಶಿವರಾಮ್–ನನ್ನಾ ಮನದಲಿ ಆತುರ ನಿನ್ನ ಕಣ್ಣಲಿ ಕಾತರ, ಶ್ರೀಮತಿ ಮಮತಾ ಜಿಂಥೆ ಮತ್ತು ಶ್ರೀ ಎಚ್.ಎಸ್. ತೇಲಿ–ಭೂಮಿತಾಯಾಣೆ ನೀ ಇಷ್ಟ ಕಣೆ, ಶ್ರೀ ಹರಿಪ್ರಿಯ ಎಸ್, ಶ್ರೀ ಗಿರೀಶ್ ಕುಮಾರ್ ಎಸ್.–ಇಲ್ಲೇ ಸ್ವರ್ಗ ಇಲ್ಲೇ ನರಕ, ಗುರುಗ್ರಾಮ ಕನ್ನಡ ಸಂಘದ ಶ್ರೀಮತಿ ಭಾರತಿ ತಿಮ್ಮಪ್ಪ, ಶ್ರೀಮತಿ ಕವಿತಾ ಲಕ್ಷ್ಮಣ ಕಟ್ಟಿಮನಿ, ಶ್ರೀಮತಿ ಸುನಂದ ಸಾಬುದರ್ಗಾ–ಮೂಡುತ ರವಿ, ಶ್ರೀಮತಿ ಮೈಥಿಲಿ ಅಟ್ಟಾವರ್, ಶ್ರೀಮತಿ ಉಮಾ ಶ್ರೀನಿವಾಸ, ಶ್ರೀಮತಿ ಪವಿತ್ರ ತಮಣ್ಕರ್, ಶ್ರೀಮತಿ ಅಶ್ವಿನಿ ಬಿ.ಎಸ್., ಶ್ರೀ ವೆಂಕಟೇಶ್ ಆರ್.ವಿ., ಶ್ರೀ ಗಿರೀಶ್ ಕುಮಾರ್ ಎಸ್.–ಕನ್ನಡ ರವಿ ಮೂಡಿ ಬಂದ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಶಿಕ್ಷಕ ವೃಂದ ಶ್ರೀಮತಿ ಪೂರ್ಣಿಮಾ ಅಡಿಗ, ಶ್ರೀಮತಿ ವೀಣಾ ಕೊಠಾರಿ, ಶ್ರೀಮತಿ ಪ್ರತಿಭಾ ಗೌಡ, ಶ್ರೀಮತಿ ರೇಣುಕಾ, ಶ್ರೀಮತಿ ಕವಿತ, ಶ್ರೀಮತಿ ಚೈತ್ರ–ನಾನೊಂದು ಜೀವ ನದಿ ಹೆಣ್ಣು ನನ್ನ ಹೆಸರು.

ಈ ಎಲ್ಲಾ ದೆಹಲಿಯ ಸ್ಥಳೀಯ ಕಲಾವಿದರು ಮತ್ತು ಗಾಯಕರು ವಿವಿಧ ಗೀತೆಗಳ ತಮ್ಮ ಸುಶ್ರಾವ್ಯ ಹಾಡುಗಾರಿಕೆಯಿಂದ ನೆರೆದಿದ್ದ ಸಭಿಕರ ಮನಸೂರೆಗೊಂಡರು. ❑

***ಅಭಿಮತ ವರದಿ***































# ಜನಕಪುರಿ ಮಹಿಳಾ ಮಂಡಳಿಯ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಹೊಸ ಸಮಿತಿಯ ರಚನೆ





ಜನಕಪುರಿ ಮಹಿಳಾ ಮಂಡಳಿಯ ಮಾಸಿಕ ಸಭೆ ದಿನಾಂಕ 28.03.2026 ರಂದು ದೆಹಲಿ ಕರ್ನಾಟಕ ಸಂಘದ ಸೆಮಿನಾರ್ ಹಾಲ್‌ನಲ್ಲಿ ನಡೆಯಿತು. ಇದೇ ಸಂದರ್ಭದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನೂ ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಗುರುಗ್ರಾಮದ ಫ್ಯಾಕಲ್ಟಿ ಆಫ್ ಇಂಡಿಯನ್ ಮೆಡಿಕಲ್ ಸಿಸ್ಟಮ್, ಎಸ್.ಜಿ.ಟಿ. ಯುನಿವರ್ಸಿಟಿಯ ಅಸೋಸಿಯೇಟ್ ಡೀನ್ ಆದ ಡಾ. ವಿದ್ಯಾವತಿ ಹಿರೇಮಠ್ ಅವರನ್ನು ಆಹ್ವಾನಿಸಿದ್ದೆವು. ಅವರು ಮಹಿಳೆಯರಿಗೆ ನಿತ್ಯ ಜೀವನದಲ್ಲಿ ಆರೋಗ್ಯ ಕಾಪಾಡಿಕೊಳ್ಳಲು ಹಾಗೂ ಮನಸ್ಸನ್ನು ಶಾಂತವಾಗಿ ಇಡಲು ಹಲವು ಸಲಹೆ ಮತ್ತು ಕ್ರಮಗಳನ್ನು ಹೇಳಿಕೊಟ್ಟರು. ಈ ಕಾರ್ಯಕ್ರಮವನ್ನು ಅಂದಿನ ಜನಕಪುರಿ ಮಹಿಳಾ ಮಂಡಳಿಯ ಅಧ್ಯಕ್ಷರಾದ ಶ್ರೀಮತಿ ನಯನಾ ಮಾನಕಾಪುರೆ ಹಾಗೂ ಕಾರ್ಯದರ್ಶಿ ಶ್ರೀಮತಿ ರೇಣುಕಾ ಸಾವಕಾರ್ ನಡೆಸಿಕೊಟ್ಟರು. ತದನಂತರ ಮಹಿಳೆಯರಿಂದ ಪ್ರತಿಭಾ ಪ್ರದರ್ಶನ ಕಾರ್ಯಕ್ರಮಗಳೂ ನಡೆದವು. ಜ.ಮ. ಮಂಡಳಿಯ ಎಲ್ಲಾ ಸದಸ್ಯೆಯರಿಗೆ ಅತಿಥಿಯವರಿಂದ ಉಡುಗೊರೆಯನ್ನು ಕೊಡಿಸಲಾಯಿತು. ಮಂಡಳಿಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ವಿದ್ಯಾವತಿಯವರನ್ನು ಹೂಗುಚ್ಛ ನೀಡಿ ಶಾಲು ಹೊದಿಸಿ ಸನ್ಮಾನಿಸಿದರು.

ಇದೇ ಸಂದರ್ಭದಲ್ಲಿ ಹೊಸ ಕಾರ್ಯಕಾರಿ ಸಮಿತಿಯನ್ನೂ ಸರ್ವಾನುಮತದಿಂದ ರಚಿಸಲಾಯಿತು. ಹೊಸ ಕಾರ್ಯಕಾರಿ ಸಮಿತಿಯ (2026 ಎಪ್ರಿಲ್ ರಿಂದ 2028 ಮಾರ್ಚ್ ವರೆಗಿನ) ಪದಾಧಿಕಾರಿಗಳ ಪರಿಚಯ ಇಂತಿದೆ:

ಅಧ್ಯಕ್ಷರು: ಶ್ರೀಮತಿ ಡಾ. ರೂಪಶ್ರೀ, ಕಾರ್ಯದರ್ಶಿ: ಶ್ರೀಮತಿ ಪವಿತ್ರಾ ತಾಮ್ಹಣ್ಕರ್, ಖಜಾಂಚಿ: ಶ್ರೀಮತಿ ಎಂ.ಎಸ್. ಲಾವಣ್ಯ ಬಸವರಾಜ್, ಸಹ ಕಾರ್ಯದರ್ಶಿಯಾಗಿ ಶ್ರೀಮತಿ ವೈಜಯಂತಿ ಗಿರೀಶ್ ಅವರನ್ನು ಆರಿಸಲಾಯಿತು. ಕೊನೆಯಲ್ಲಿ ವಂದನಾರ್ಪಣೆಯನ್ನು ಶ್ರೀಮತಿ ಪವಿತ್ರಾ ತಾಮ್ಹಣ್ಕರ್ ಅವರು ನಡೆಸಿಕೊಟ್ಟರು. ❑

**ಪವಿತ್ರಾ ತಾಮ್ಹಣ್ಕರ್**

# ಜನಕಪುರಿ ಮಹಿಳಾ ಮಂಡಳಿಯ ರಾಜ್ಯೋತ್ಸವದ ಸಂಭ್ರಮ

ಜನಕಪುರಿ ಮಹಿಳಾ ಮಂಡಳಿಯ ನವೆಂಬರ್ ತಿಂಗಳ ಮಾಸಿಕ ಸಭೆಯು ಶ್ರೀಮತಿ ಅಶ್ವಿನಿ ಹಣಮಸಾಗರ್ ಅವರ ಮನೆಯಲ್ಲಿ 'ಕನ್ನಡ ರಾಜ್ಯೋತ್ಸವ' ಹಾಗೂ 'ಕಿತ್ತೂರ ರಾಣಿ ಚೆನ್ನಮ್ಮನವರ' 201 ನೇ ಜನ್ಮದಿನವನ್ನು ಅತ್ಯಂತ ಸಂಭ್ರಮದಿಂದ ಆಚರಿಸಲಾಯಿತು.






ಹೊಸದಾಗಿ ದೆಹಲಿಗೆ ಆಗಮಿಸಿದ, ಆಯುರ್ವೇದ ಪಂಚಕರ್ಮ ಶಾಖೆಯ ಪ್ರಾಧ್ಯಾಪಕಿ ಡಾ. ಶ್ರುತಿ ಜೋಶಿ ಅವರನ್ನು ಅತಿಥಿಯರನ್ನಾಗಿ ಆಮಂತ್ರಿಸಲಾಗಿತ್ತು. ಅವರು ರಾಜ್ಯೋತ್ಸವದ ಉದ್ಘಾಟನೆಯನ್ನು ಕನ್ನಡ ಧ್ವಜ ಹಾರಿಸಿ ನೆರವೇರಿಸಿದರು. ಎಲ್ಲ ಸದಸ್ಯೆಯರು ನಾಡಗೀತೆ ಹಾಡುವುದರೊಂದಿಗೆ ತಾಯಿ ಭುವನೇಶ್ವರಿಯನ್ನು ವಂದಿಸಿದರು. ಅತಿಥಿ ಡಾ. ಶ್ರುತಿ ಜೋಶಿ ಅವರನ್ನು ಅಧ್ಯಕ್ಷೆ ಶ್ರೀಮತಿ ನಯನಾ ಮಾನಕಾಪುರೆ, ಕಾರ್ಯದರ್ಶಿ ಶ್ರೀಮತಿ ರೇಣುಕಾ ಸಾವಕಾರ್, ಖಜಾಂಚಿ ಶ್ರೀಮತಿ ಸವಿತಾ ನಾರಾಯಣ ಭಟ್ ಮತ್ತು ಹಿರಿಯ ಸಲಹೆಗಾರರಾದ ಶ್ರೀಮತಿ ಅಶ್ವಿನಿ ಹಣಮಸಾಗರ ಅವರು ಶಾಲು ಹೊದಿಸಿ, ಹೂಗುಚ್ಛ ನೀಡಿ ಸನ್ಮಾನಿಸಿದರು. ಡಾ. ಶ್ರುತಿ ಜೋಶಿ ಅವರು ತಮ್ಮ ಭಾಷಣದಲ್ಲಿ ಆಯುರ್ವೇದದ ಮೂಲ ಉದ್ದೇಶ ಹಾಗೂ ಮಹಿಳೆಯರ ಆರೋಗ್ಯದ ಕುರಿತು ಜಾಗೃತಿ ಮೂಡಿಸಿದರು. ಆಧುನಿಕ ಕಾಲದಲ್ಲಿ ಮಹಿಳೆಯರ ಸಾಮಾಜಿಕ ಮೌಲ್ಯದಲ್ಲಿ ಸಕಾರಾತ್ಮಕ ಬದಲಾವಣೆ ವೃದ್ಧಿಸುತ್ತಿರುವುದನ್ನು ಕಂಡು ಸಂತೋಷ ವ್ಯಕ್ತಪಡಿಸಿದರು. ಕನ್ನಡ ಭಾಷೆಯ ಬಗ್ಗೆ ದೇಶದ ಯುವ ಪೀಳಿಗೆಯೂ ಅಭಿಮಾನ ಬೆಳೆಸಿಕೊಳ್ಳಬೇಕೆಂದು

ಉಪದೇಶಿಸಿದರು. ಹೊರರಾಜ್ಯದಲ್ಲಿ ಕನ್ನಡ ಭಾಷೆಯ ಏಳ್ಗೆಗಾಗಿ ದೆಹಲಿಯ ಹೆಮ್ಮೆಯ ಕನ್ನಡತಿಯರ ಭಾಷೆ, ಕಲೆ ಹಾಗೂ ಸಂಸ್ಕೃತಿಗಾಗಿಯೇ ಇರುವ ಮಹಿಳಾ ಮಂಡಳಿಯ ಉತ್ಸಾಹವನ್ನು ಕಂಡು ಹೆಮ್ಮೆಪಟ್ಟರು. 2025ರ ಅಕ್ಟೋಬರ್ ತಿಂಗಳಿನಲ್ಲಿ ನಡೆದ ದೆಹಲಿ ಕರ್ನಾಟಕ ಸಂಘದ ನಾಟಕೋತ್ಸವದಲ್ಲಿ ಮಹಿಳಾ ಮಂಡಳಿಯ ಕಲಾವಿದರ ಸಮರ್ಪಣೆ ಹಾಗೂ ಪರಿಶ್ರಮದಿಂದ ಗಳಿಸಿದ ಸಾಧನೆ ಕುರಿತು ತಮ್ಮ ಕುತೂಹಲವನ್ನು ವ್ಯಕ್ತಪಡಿಸಿ ಮತ್ತಷ್ಟು ಹುರಿದುಂಬಿಸಿದರು.

ಶ್ರೀಮತಿ ನಯನಾ ಮಾನಕಾಪುರೆಯವರ ಅಧ್ಯಕ್ಷತೆಯಲ್ಲಿ ಇಟ್ಟ ಪ್ರಸ್ತಾವನೆಯನ್ನು ಸ್ವೀಕರಿಸಿ, ತಮ್ಮ ಕಲ್ಪನೆಯ ಕಥೆಯನ್ನು ದೃಢಸಂಕಲ್ಪದೊಂದಿಗೆ ನಾಟಕವನ್ನು ರಚಿಸಿ ಹಾಗೂ ನಿರ್ದೇಶಿಸಿ, ಈ ಬಾರಿಯ ನಾಟಕೋತ್ಸವದಲ್ಲಿ 'ದ್ವಿತೀಯ ಬಹುಮಾನ' ಗಳಿಸಿಕೊಡುವ ಗೌರವದ ಹಾಗೂ ಯಶದ ಕಳಸ ಎತ್ತಿಹಿಡಿಯುವ ಶ್ರೇಯ 'ಕಿತ್ತೂರಿನ ಕಿರಣ' ನಾಟಕದ ನಿರ್ದೇಶಕಿ, ಲೇಖಕಿ, ಸಂಗೀತ ಸಂಯೋಜಕಿ, ಉತ್ತಮ ನಟಿ ಹಾಗೂ ಉತ್ತಮ ಮಹಿಳಾ ನಿರ್ದೇಶಕಿ ಪುರಸ್ಕಾರ ಪಡೆದ, ದೆಹಲಿಯ ವಿಶಿಷ್ಟ ಕನ್ನಡತಿ ಶ್ರೀಮತಿ ಸವಿತಾ ಇನಾಮದಾರ್ ಅವರನ್ನು ಅತಿಥಿಗಳು ತಮ್ಮ ಕರಕಮಲ ಹಸ್ತದಿಂದ ಶಾಲು ಹೊದಿಸಿ ಗೌರವಿಸಿದರು. ಐತಿಹಾಸಿಕ ನಾಟಕದ ಸೂಕ್ಷ್ಮತೆಯ ಅರಿವನ್ನು ನಾಟಕದ ಎಲ್ಲಾ ಕಲಾವಿದೆಯರಿಗೆ ಅತ್ಯಂತ ನಿಷ್ಠೆಯಿಂದ, ವಿವರಣೆ ನೀಡುವುದರ ಜೊತೆಗೆ ತಾಳ್ಮೆಯಿಂದ ಅಭಿನಯಿಸಲು ಕಲಿಸಿ ಕೊಟ್ಟ ಕಾರಣ ನಾಟಕವು ಜಯಭೇರಿ ಬಾರಿಸಿತು. ಕಲಾಮಣಿಗಳಾದ ಶ್ರೀಮತಿ ಸವಿತಾ ಭಂಡಾರಕರ್, ಶ್ರೀಮತಿ ನಯನಾ ಮಾನಕಾಪುರೆ, ಶ್ರೀಮತಿ ರೇಣುಕಾ ಸಾವಕಾರ, ಶ್ರೀಮತಿ ಜಯಶ್ರೀ ಬಸವರಾಜು, ಶ್ರೀಮತಿ ಸವಿತಾ ಭಟ್, ಶ್ರೀಮತಿ ಮಾಲಿನಿ ಪ್ರಲ್ಹಾದ, ಶ್ರೀಮತಿ ಪುಷ್ಪಲತಾ ಎಂ., ಶ್ರೀಮತಿ ವಾಣಿಶ್ರೀ ವಿಜಯ, ಕು. ವೈಷ್ಣವಿ ಸಾವಕಾರ ಹಾಗೂ ಮಹಿಳಾ ಮಂಡಳಿ ಪರವಾಗಿ ಸಹಾಯ ನೀಡಿದ ಶ್ರೀಮತಿ ವಾಣಿಶ್ರೀ ಆರ್., ಶ್ರೀಮತಿ ವಿನುತಾ ನಾಗರಾಜ್ ಮತ್ತು ಶ್ರೀಮತಿ ವೈಜಯಂತಿ ಗಿರೀಶ್ ಇವರು ಗುರುವಂದನಾ ಕಾಣಿಕೆಯೊಂದಿಗೆ ಗೌರವಿಸಿ ಧನ್ಯವಾದಗಳನ್ನು ಸಲ್ಲಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶ್ರೀಮತಿ ಸವಿತಾ ಇನಾಮದಾರ್ ಅವರು ರಾಗ ಸಂಯೋಜಿಸಿದ ಸ್ವರಚಿತ ಗೀತೆಯನ್ನು ಎಲ್ಲರೂ ಜೊತೆಗೂಡಿ ಹಾಡಿ ನಾಡಹಬ್ಬದ ಸಂಭ್ರಮವನ್ನು ಆಚರಿಸುತ್ತ ಕಾರ್ಯಕ್ರಮದ ಶೋಭೆಯನ್ನು ಹೆಚ್ಚಿಸಿದರು.

ಒಟ್ಟಾರೆ ಈ ಬಾರಿಯೂ ರಾಜ್ಯೋತ್ಸವದ ಕಾರ್ಯಕ್ರಮವು ಬಹಳ ವಿಜೃಂಭಣೆಯಿಂದ, ತುಂಬಾ ಅಚ್ಚುಕಟ್ಟಾಗಿ ಹಾಗೂ ಯಶಸ್ವಿಯಾಗಿ ಜರುಗಲು ಸಹಕರಿಸಿದ ಎಲ್ಲ ಸದಸ್ಯೆಯರಿಗೆ, ಸತತ ಕಾರ್ಯ ನಿರ್ವಹಣೆಗೆ ತತ್ಪರರಾಗಿರುವ ಕಾರ್ಯಕಾರಿ ಸಮಿತಿಯ ಸದಸ್ಯೆಯರಿಗೆ ಜೊತೆಗೆ ಜನಕಪುರಿ ಕನ್ನಡ ಕೂಟದಿಂದ ಆಗಮಿಸಿದ ಖಜಾಂಚಿ ಶ್ರೀ ಎಂ.ವಿ. ವೆಂಕಟೇಶ್ ಹಾಗೂ ಹಿರಿಯ ಸದಸ್ಯರಾದ ಶ್ರೀಯುತ ಅಶೋಕ್ ಹಣಮಸಾಗರ ಇವರುಗಳ ಉಪಸ್ಥಿತಿಯಿಂದಾಗಿ ನಮ್ಮ ಮಹಿಳಾ ಮಂಡಳಿಯ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತು.

ಮಾಸಿಕ ಸಭೆಯನ್ನು ಅಚ್ಚುಕಟ್ಟಾಗಿ ನಡೆಸಿಕೊಟ್ಟ ಶ್ರೀಮತಿ ಅಶ್ವಿನಿ ಹಣಮಸಾಗರ ಅವರು ಎಲ್ಲರನ್ನೂ ಆದರಾತಿಥ್ಯದೊಂದಿಗೆ ಬೀಳ್ಕೊಟ್ಟರು.

ಜೈ ಕನ್ನಡಾಂಬೆ, ಜೈ ಭಾರತಾಂಬೆ ❑

***ನಯನಾ ಮಾನಕಾಪುರೆ***

# ಕರ್ನಾಟಕ ಭವನ ನವದೆಹಲಿ ವತಿಯಿಂದ ಸಂಭ್ರಮದ ಕರ್ನಾಟಕ ರಾಜ್ಯೋತ್ಸವ ಆಚರಣೆ





ನವದೆಹಲಿಯ ಕರ್ನಾಟಕ ಭವನದಲ್ಲಿ 70ನೇ ಕರ್ನಾಟಕ ರಾಜ್ಯೋತ್ಸವವನ್ನು ದಿನಾಂಕ: 01.11.2025 ರಂದು ಬೆಳಿಗ್ಗೆ 9:00 ಗಂಟೆಗೆ ಧ್ವಜಾರೋಹಣ ನೆರವೇರಿಸಿ ದೇವಿ ಭುವನೇಶ್ವರಿಗೆ ಪುಷ್ಪಾರ್ಚನೆ ಪೂಜೆ ಮಾಡುವುದರ ಮೂಲಕ ಸಂಭ್ರಮಪೂರ್ಣವಾಗಿ ಆಚರಿಸಲಾಯಿತು. ಅದೇ ದಿನ ಸಂಜೆ 4.00 ಗಂಟೆಗೆ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳು ಅದ್ದೂರಿಯಾಗಿ ಮೂಡಿ ಬಂದವು. ಈ ಸುಸಂದರ್ಭದಲ್ಲಿ ಕರ್ನಾಟಕ ಸರ್ಕಾರದ ನವದೆಹಲಿಯ ವಿಶೇಷ ಪ್ರತಿನಿಧಿಗಳಾದ ಶ್ರೀ ಟಿ.ಬಿ. ಜಯಚಂದ್ರರವರು, ಕರ್ನಾಟಕ ಭವನದ ನಿವಾಸಿ ಆಯುಕ್ತರಾದ ಶ್ರೀಮತಿ ಇಮ್‌ಕೊಂಗ್ಲಾ ಜಮೀರ್, ಐ.ಎ.ಎಸ್, ಅಪರ ನಿವಾಸಿ ಆಯುಕ್ತರಾದ ಶ್ರೀಮತಿ ಆಕೃತಿ ಬನ್ಸಲ್ ಐ.ಎ.ಎಸ್. ಮತ್ತು ಸಹಾಯಕ ನಿವಾಸಿ ಆಯುಕ್ತರು ಹಾಗು ಮಾನ್ಯ ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿಯಾದ ಶ್ರೀ ಸಿ. ಮೋಹನ್ ಕುಮಾರ್‌ರವರು, ಕರ್ನಾಟಕ ಭವನ ನವದೆಹಲಿಯ ಸಿಬ್ಬಂದಿಗಳು ಮತ್ತು ಉತ್ತಮ ಸಂಖ್ಯೆಯಲ್ಲಿ ದೆಹಲಿ ಕನ್ನಡಿಗರು ಹಾಜರಿದ್ದರು. ಈ ಬಾರಿಯ ಕಾರ್ಯಕ್ರಮಗಳಲ್ಲಿ ಮಕ್ಕಳಿಂದ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ವತಿಯಿಂದ ನಿಯೋಜಿಸಲಾಗಿರುವ ಸಾಂಸ್ಕೃತಿಕ ಸಂಯೋಜಕರಾದ ಶ್ರೀ ಡಿಕ್ಸನ್ ಡಿ'ಸೋಜ ನೇತೃತ್ವದ ಶ್ರೀ ದುರ್ಗಪ್ಪ ಗುಡಿಗಾರ ಮೆಮೋರಿಯಲ್ ಯಕ್ಷಗಾನ ಆರ್ಟ್ಸ್ ಅಕಾಡೆಮಿ ಚಾರಿಟೇಬಲ್ ಟ್ರಸ್ಟ್ (ರಿ), ಭಟ್ಕಳ, ಮತ್ತು ಶ್ರೀ ಧಾರೇಶ್ವರ ಯಕ್ಷ ಬಳಗ ಚಾರಿಟೇಬಲ್ ಟ್ರಸ್ಟ್ (ರಿ), ಉಡುಪಿ ಇದರಲ್ಲಿ ಜೂನಿಯರ್ ಶಂಕರ್‌ನಾಗ್, ಜೂನಿಯರ್ ಅಂಬರೀಶ್, ಜೂನಿಯರ್ ರವಿಚಂದ್ರನ್ ಇವರುಗಳ ಪಾತ್ರ ವಿಶೇಷವಾಗಿತ್ತು. ಮುಖ್ಯವಾಗಿ ಭವನದ ಸಿಬ್ಬಂದಿ ಹಾಗೂ ಮಕ್ಕಳಿಂದ ವಿಶೇಷವಾಗಿ ನವದುರ್ಗೆಯರ ನೃತ್ಯ ಸಭಾಂಗಣದಲ್ಲಿ ಸೇರಿದ್ದ ಎಲ್ಲಾ ಕನ್ನಡ ಬಂಧುಗಳ ಮನಸೂರೆಗೊಂಡಿತು. ನವ ದುರ್ಗೆಯರ ನೃತ್ಯ ತಂಡದ ದೇವತೆಯಾಗಿ ಕರ್ನಾಟಕ ಭವನದ ವ್ಯವಸ್ಥಾಪಕರಾದ ಶ್ರೀಮತಿ ಭಾರ್ಗವಿ ಸತೀಶ್, ಮಹಿಷಾಸುರನ ಪಾತ್ರದಲ್ಲಿ ಶ್ರೀ ವೈ.ಎಂ. ಹರೀಶ್ ಹಾಗೂ ಅಷ್ಟ ದೇವತೆಗಳಾಗಿ ಕು॥ ರಮ್ಯಾ, ಕುಟಟ ವರಲಕ್ಷ್ಮಿ, ಕು॥ ಅಪೇಕ್ಷ, ಕು॥ ಮುಸ್ಕಾನ್, ಕು॥ ಎಂ.ಜಿ. ಸಾನಿಧ್ಯ, ಕು॥ ಎಸ್. ಸಾನಿಧ್ಯ, ಕು॥ ಖುಷಿ, ಕು॥ ಶರಣ್ಯ, ನೃತ್ಯ ಸಂಯೋಜಕರು ಹಾಗು ಸಹಾಯಕ ನೃತ್ಯ ಸಂಯೋಜಕರಾಗಿ ಡಿ.ಕೆ.ಡಿಯಲ್ಲಿ ಖ್ಯಾತಿಪಡೆದ ಶ್ರೀ ರೋಷನ್, ವೇಷಭೂಷಣ ಮಾಡಿದ ಶ್ರೀ ಎಸ್. ರಮೇಶ ಹಾಗೂ ಕರ್ನಾಟಕ ಭವನದ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕರ್ನಾಟಕ ಭವನದ ಆಟೋಟ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದವರಿಗೆ ಈ ಸಂದರ್ಭ ಬಹುಮಾನ ವಿತರಣೆ ಮಾಡಲಾಯಿತು.ಕರ್ನಾಟಕ ಭವನದ ಕಲಾವಿದರು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿ ಪ್ರೇಕ್ಷಕರ ಮನ ಗೆದ್ದರು. ಈ ಕಾರ್ಯಕ್ರಮದ ಸ್ವಾಗತ ಭಾಷಣವನ್ನು ಕರ್ನಾಟಕ ಭವನದ ಸಮನ್ವಯ ಅಧಿಕಾರಿಗಳಾದ ಶ್ರೀ ಎಲ್. ದಿವಾಕರ್ ಅವರು ಮಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಕೇಂದ್ರ ಉಕ್ಕು ಮತ್ತು ಭಾರಿ ಕೈಗಾರಿಕಾ ಸಚಿವರ ಆಪ್ತ ಸಹಾಯಕರಾದ ಶ್ರೀ ನಾರಾಯಣ ಬಿ. ಅವರು ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಕೊನೆಯಲ್ಲಿ ವಂದನಾರ್ಪಣೆಯನ್ನು ವ್ಯವಸ್ಥಾಪಕರಾದ ಶ್ರೀ ಬಿ.ವಿ. ರಾಘವೇಂದ್ರ ಅವರು ನೆರವೇರಿಸಿಕೊಟ್ಟರು. ರಾತ್ರಿ 9:30ಕ್ಕೆ ಭೋಜನ ವ್ಯವಸ್ಥೆಯನ್ನು ಶ್ರೀ ನಟರಾಜ್‌ರವರ ಮುಂದಾಳತ್ವದಲ್ಲಿ ಮೈಸೂರಿನಿಂದ ಬಂದಿದ್ದ ನುರಿತ 10 ಅಡುಗೆ ತಂಡದ ಸದಸ್ಯರುಗಳಿಂದ ತಯಾರಿಸಲ್ಪಟ್ಟ ಮೈಸೂರು ಶೈಲಿಯ ವಿಶೇಷ ಅಡುಗೆಯನ್ನು ನೆರೆದಿದ್ದ ಎಲ್ಲಾ ಸದಸ್ಯರು ರುಚಿಕರವಾಗಿ ಸವಿದಿದ್ದನ್ನು ನೆನಪಿಸಿಕೊಳ್ಳಬಹುದು.

ಎಲ್ಲರಿಗೂ 70 ನೇ ಕರ್ನಾಟಕ ರಾಜ್ಯೋತ್ಸವದ ಹಾರ್ದಿಕ ಶುಭಾಶಯಗಳು!❑

***ರಮೇಶ ಎಸ್.***
ಕರ್ನಾಟಕ ಭವನ

# ಗುರುಗ್ರಾಮದಲ್ಲಿ ಕರ್ನಾಟಕ ರಾಜ್ಯೋತ್ಸವ ಆಚರಣೆ-2025





ಗುರುಗಾಂವ್ ಕನ್ನಡ ಸಂಘದ ವತಿಯಿಂದ ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ ದಿನಾಂಕ 16.11.2025 ರಂದು ಭಾನುವಾರ ಗುರುಗ್ರಾಮದ Excelsior American ಸ್ಕೂಲ್‌ನ ಸಭಾಂಗಣದಲ್ಲಿ 70ನೇ ಕರ್ನಾಟಕ ರಾಜ್ಯೋತ್ಸವ ಸಂಭ್ರಮ ಕಾರ್ಯಕ್ರಮವನ್ನು ತುಂಬಾ ವಿಜೃಂಭಣೆಯಿಂದ ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಎಲ್ಲ ಕನ್ನಡಿಗರನ್ನು ಅಕ್ಕರೆಯಿಂದ ಸ್ವಾಗತಿಸುತ್ತಿದ್ದ ಕುಮಾರಿ ಕೀರ್ತನ ಲಕ್ಷ್ಮಣ್ ಕಟ್ಟೀಮನಿ ಅವರು ಘಮಘಮಿಸುವ ಹೂವುಗಳಿಂದ ಮತ್ತು ರಂಗು ರಂಗಿನ ರಂಗೋಲಿಯಿಂದ ಬಿಡಿಸಿದ ಶ್ರೀ ಗಣೇಶನ ಭಾವಚಿತ್ರವು ಎಲ್ಲ ಕನ್ನಡಿಗರಿಗೂ ತಮ್ಮನ್ನು ಆಶೀರ್ವದಿಸಿ ಸಭಾಂಗಣದೊಳಗೆ ಸ್ವಾಗತಿಸುವಂತೆ ಕಾಣುತ್ತಿತ್ತು.

ಹಬ್ಬದ ಸಡಗರದಲ್ಲಿ ತುಂಬು ಕುಟುಂಬದ ಸಹೋದರ ಸಹೋದರಿಯರು ಮನೆಗೆ ಬರುವ ಅತಿಥಿ ಗಣ್ಯರನ್ನು, ಹಿರಿಯರನ್ನು ಸ್ವಾಗತಿಸುವಂತೆ ಗುರುಗ್ರಾಮ ಕನ್ನಡ ಸಂಘದ ಪದಾಧಿಕಾರಿಗಳು, ಸದಸ್ಯರು ಹಾಗು ಕನ್ನಡ ಅಭಿಮಾನಿಗಳು ಸಭಾಂಗಣವನ್ನು ಹೂವಿನಿಂದ ಅಲಂಕರಿಸಿ ಪ್ರೇಕ್ಷಕರಿಗೆ ಸುಂದರವಾಗಿ ಕಾಣುವಂತೆ ಮಾಡಿದರು.ಈ ನಮ್ಮ ಕನ್ನಡ ರಾಜ್ಯೋತ್ಸವದ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಹಿರಿಯ ಐ.ಪಿ.ಎಸ್. ಅಧಿಕಾರಿಗಳಾದ ಶ್ರೀ ರಾಜಶೇಖರ ಎನ್. ಅವರು ಆಗಮಿಸಿದ್ದರು. ಕಾರ್ಯಕ್ರಮದ ಉದ್ಘಾಟಕರಾಗಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಮತ್ತು ನಮ್ಮೊಂದಿಗೆ ಕೇಂದ್ರ ಮಂತ್ರಿ ಶ್ರೀ ಪ್ರಹ್ಲಾದ ಜೋಶಿ ಅವರ OSD ಆದ ಶ್ರೀ ಗುರುಪ್ರಸಾದ್, ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ, ಗುರುಗ್ರಾಮ ಕನ್ನಡ ಸಂಘದ ಮಾಜಿ ಅಧ್ಯಕ್ಷರು ಮತ್ತು ಮಾರ್ಗದರ್ಶಿಗಳಾದ ಶ್ರೀ ಡಿ.ವಿ.ಎಸ್. ಮೂರ್ತಿ ಅವರು ವೇದಿಕೆಯಲ್ಲಿ ಆಸೀನರಾಗಿದ್ದರು. ಗುರುಗ್ರಾಮ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಶಾಂತ ಕುಮಾರ ವೀರಣ್ಣ ನಿಂಬಾಳ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು.

ಗುರುಗಾಂವ್ ಕನ್ನಡ ಸಂಘದ ಕ್ರಿಯಾಶೀಲ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ತಿಮ್ಮಪ್ಪ ಜಿ.ಆರ್. ಅವರು ವೇದಿಕೆ ಮೇಲಿದ್ದ ಅತಿಥಿ ಗಣ್ಯರನ್ನು, ಉದ್ಘಾಟಕರನ್ನು, ಹಾಸ್ಯ ಕಲಾವಿದರನ್ನು, ಗುರುಗ್ರಾಮ ಹಾಗು ದೆಹಲಿಯಿಂದ ಆಗಮಿಸಿದ್ದ ಸ್ಥಳೀಯ ಕಲಾವಿದರನ್ನು, ಹಿರಿಯ ಕನ್ನಡಿಗರನ್ನು, ಪುಟಾಣಿಗಳನ್ನು, ಸಹೋದರ ಸಹೋದರಿಯರನ್ನು ಮತ್ತು ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸಮಸ್ತ ಪದಾಧಿಕಾರಿಗಳನ್ನು ಪ್ರೀತಿಪೂರ್ವಕವಾಗಿ ಸ್ವಾಗತಿಸಿದರು.

ನಂತರ ಕಾರ್ಯಕ್ರಮದ ಉದ್ಘಾಟಕರಾದ ಶ್ರೀ ಸಿ.ಎಂ. ನಾಗರಾಜ ಅವರೊಂದಿಗೆ ಎಲ್ಲ ಅತಿಥಿ ಗಣ್ಯರು ಒಟ್ಟಾಗಿ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ವಿದ್ಯುಕ್ತ ಚಾಲನೆ ನೀಡಲಾಯಿತು. ಗುರುಗಾಂವ್ ಕನ್ನಡ ಸಂಘದ ಜಂಟಿ ಕಾರ್ಯದರ್ಶಿಗಳಾದ ಶ್ರೀ ಲಕ್ಷ್ಮಣ್ ಕಟ್ಟೀಮನಿ ಅವರು ವೇದಿಕೆ ಮೇಲೆ ಉಪಸ್ಥಿತರಿದ್ದ ಅತಿಥಿ ಗಣ್ಯರ ಪರಿಚಯ ಮಾಡಿಸುವ ಮೂಲಕ ಸಭಾ ಕಾರ್ಯಕ್ರಮವನ್ನು ತುಂಬಾ ಅಚ್ಚುಕಟ್ಟಾಗಿ ನಡೆಸಿಕೊಟ್ಟರು.

ಕಾರ್ಯಕ್ರಮದ ಉದ್ಘಾಟಕರಾದ ಶ್ರೀ ಸಿ.ಎಂ. ನಾಗರಾಜ ಮಾತನಾಡಿ ನಮ್ಮ ದೆಹಲಿ ಕರ್ನಾಟಕ ಸಂಘ ಗುರುಗಾಂವ್ ಕನ್ನಡ ಸಂಘಕ್ಕೆ ಸದಾ ಸಹಕಾರ ನೀಡುತ್ತಾ ಬರುತ್ತಿದೆ. ಹಲವಾರು ಉತ್ತಮ ಕಾರ್ಯಕ್ರಮಗಳನ್ನು ಇಲ್ಲಿನ ಕನ್ನಡಿಗರು ಮಾಡುತ್ತಿದ್ದಾರೆ. ಮುಂದೆಯೂ ಹೆಚ್ಚಿನ ಸಹಕಾರವನ್ನು ಮಾತೃ ಸ್ಥಾನದಲ್ಲಿ ನಮ್ಮ ಸಂಘ ಅವರಿಗೆ ನೀಡಲಿದೆ, ಎಲ್ಲರಿಗೂ ರಾಜ್ಯೋತ್ಸವದ ಶುಭಾಶಯಗಳು ಎಂದರು.

ಮುಖ್ಯ ಅತಿಥಿಗಳಾದ ನವದೆಹಲಿ ಬಿ.ಡಿ.ಆ.ಡಿ.ಓ.ನ ಹಿರಿಯ ಐ.ಎ.ಎಸ್. ಅಧಿಕಾರಿ ಶ್ರೀ ರಾಜಶೇಖರ್ ಎನ್. ಅವರು ಮಾತನಾಡಿ ಗುರುಗ್ರಾಮದಲ್ಲಿ ಇಷ್ಟೊಂದು ಕನ್ನಡಿಗರನ್ನು ನೋಡಿ ತುಂಬಾ ಸಂತೋಷವಾಗುತ್ತಿದೆ. ಇಲ್ಲಿನ ಸ್ಥಳೀಯ ಮಕ್ಕಳು ಮತ್ತು ಮಹಿಳೆಯರು ತುಂಬಾ ಉತ್ತಮವಾಗಿ ಸಾಂಸ್ಕೃತಿಕ ಕಾರ್ಯಕ್ರಮ ನೀಡಿದ್ದಾರೆ. ಕರ್ನಾಟಕ ರಾಜ್ಯೋತ್ಸವ ಕನ್ನಡಿಗರು ಎಲ್ಲೇ ಇರಲಿ ಸಂಭ್ರಮಿಸುವ ಒಂದು ವಿಶೇಷವಾದ ಸಂದರ್ಭ. ಗುರುಗಾಂವ್ ಕನ್ನಡ ಸಂಘ ಮತ್ತು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು, ಕಾರ್ಯದರ್ಶಿಗಳು ಎಲ್ಲಾ ಪದಾಧಿಕಾರಿಗಳಿಗೆ ಮತ್ತು ನೆರೆದಿರುವ ಎಲ್ಲಾ ಕನ್ನಡಿಗರಿಗೆ ಅಭಿನಂದನೆಗಳು ಎಂದು ಹೇಳಿದರು.

ಇನ್ನೋರ್ವ ಅತಿಥಿ ಶ್ರೀ ಗುರುಪ್ರಸಾದ್ ಅವರು ಮಾತನಾಡುತ್ತಾ ಈ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಿರುವುದು ಬಹಳ ಸಂತೋಷ ತಂದಿದೆ ಎಲ್ಲರಿಗೂ ಶುಭವಾಗಲಿ ಎಂಧರು.

ಗುರುಗಾಂವ್ ಕನ್ನಡ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಡಿ.ವಿ.ಎಸ್. ಮೂರ್ತಿಯವರು ಮಾತನಾಡಿ ಗುರುಗಾಂವ್ ಕನ್ನಡ ಸಂಘ ಬೆಳದು ಬಂದ ದಾರಿಯನ್ನು ವಿಶ್ಲೇಷಿಸಿ, ಇಲ್ಲಿನ ಕನ್ನಡಿಗರು ಬಹಳ ಉತ್ತಮ ಕೆಲಸಗಳನ್ನು ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ. ಈ ಸಂಘವು ಮುಂದೆಯೂ ಇನ್ನೂ ಎತ್ತರಕ್ಕೆ ಬೆಳೆಯಲಿ ಎಂದು ಶುಭ ಹಾರೈಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷರಾದ ಶ್ರೀ ಶಾಂತಕುಮಾರ ವೀರಣ್ಣ ನಿಂಬಾಳ ಅವರು ಮಾತನಾಡಿ ತಮ್ಮ ಸಂಘವು ಆಯೋಜಿಸುತ್ತಿರುವ ಹಲವಾರು



ಕಾರ್ಯಕ್ರಮಗಳ ಸಂಕ್ಷಿಪ್ತ ವಿವರ ನೀಡುತ್ತಾ ದೆಹಲಿ ಕರ್ನಾಟಕ ಸಂಘವು ಗುರುಗಾಂವ್ ಕನ್ನಡ ಸಂಘದ ಎರಡು ಮೂರು ಕಾರ್ಯಕ್ರಮಗಳಿಗೆ ಸಂಪೂರ್ಣ ಸಹಕಾರಕೊಡಬೇಕೆಂದು ಹಾಗು ಇಲ್ಲಿನ ಸಂಘಕ್ಕೆ ತನ್ನದೇ ಆದ ಒಂದು ಜಾಗ ಪಡೆದುಕೊಳ್ಳುವ ತಮ್ಮ ಯೋಚನೆಗೆ ಮುಂದೆ ಸೂಕ್ತ ಮಾರ್ಗದರ್ಶನ ಮತ್ತು ಸಹಕಾರ ನೀಡಬೇಕೆಂದು ವಿನಂತಿಸಿಕೊಂಡು ಎಲ್ಲರಿಗೂ ಕರ್ನಾಟಕ ರಾಜ್ಯೋತ್ಸವದ ಶುಭಾಶಯವನ್ನು ತಿಳಿಸಿದರು.

ಕಳೆದ ಶೈಕ್ಷಣಿಕ ವರ್ಷದಲ್ಲಿ 10ನೇ ಮತ್ತು 12ನೇ ತರಗತಿಯಲ್ಲಿ ಶೇಕಡಾ 90 ಕ್ಕಿಂತ ಹೆಚ್ಚು ಅಂಕ ಪಡೆದು ಉತ್ತೀರ್ಣರಾದ ಗುರುಗ್ರಾಮದ ಕನ್ನಡ ವಿದ್ಯಾರ್ಥಿಗಳಿಗೆ (ಸಂಘದ ಆಜೀವ ಸದಸ್ಯರ ಮಕ್ಕಳು) ಗೌರವ ಪುರಸ್ಕಾರ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ನಂತರ ನಡೆದ ಸ್ಥಳೀಯ ಕಲಾವಿದರ ಸಾಂಸ್ಕೃತಿಕ ಕಾರ್ಯಕ್ರಮದ ನಿರೂಪಣೆಯನ್ನು ಸಂಘದ ಉಪಾಧ್ಯಕ್ಷೆ ಶ್ರೀಮತಿ ಸುನಂದಾ ದರ್ಗಾ ಹಾಗು ಸದಸ್ಯರಾದ ಶ್ರೀಮತಿ ವಿನುತಾ ಗೌಡೂರ ಅವರು ತುಂಬಾ ಚೆನ್ನಾಗಿ ನಡೆಸಿಕೊಟ್ಟರು. ಪ್ರದರ್ಶನ ನೀಡಿದ ಕಲಾವಿದರಿಗೆ ಸುಂದರವಾದ ಉಡುಗೊರೆಯನ್ನು ನೀಡಿ ಪ್ರೋತ್ಸಾಹಿಸಲಾಯಿತು.

ದೆಹಲಿ ಹಾಗು ಗುರುಗ್ರಾಮ ಕನ್ನಡಿಗರು ಒಂದು ಪ್ರೀತಿ ವಾತ್ಸಲ್ಯದಿಂದ ಬೆರೆತು ಕರ್ನಾಟಕ ರಾಜ್ಯೋತ್ಸವವನ್ನು ಆಚರಿಸಿದ್ದು ಕನ್ನಡ ನುಡಿ ಸಂಭ್ರಮಕ್ಕೆ ಮತ್ತೊಂದು ಮೆರುಗು ಬಂದಿತ್ತು. ದೆಹಲಿ ಹಾಗು ಗುರುಗ್ರಾಮ ಸ್ಥಳೀಯ ಕಲಾವಿದರಿಂದ ಮೂಡಿ ಬಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಒಂದಕ್ಕಿಂತ ಒಂದು ಅದ್ಭುತವಾಗಿದ್ದವು. ದೆಹಲಿ ಕನ್ನಡ ಮಕ್ಕಳಿಂದ ಮತ್ತು ಗುರುಗ್ರಾಮ ಕನ್ನಡ ಮಕ್ಕಳಿಂದ ಮೂಡಿ ಬಂದ ಸಮೂಹ ನೃತ್ಯಗಳು ಅತೀ ಹೆಚ್ಚು ಮನರಂಜನೆಯಿಂದ ಕೂಡಿದ್ದು ಕಾರ್ಯಕ್ರಮದಲ್ಲಿ ಸೇರಿದ್ದ ಕನ್ನಡಿಗರ ಮನಸ್ಸನ್ನು ಗೆಲ್ಲುವಲ್ಲಿ ಯಶಸ್ವಿಯಾದವು. ದೆಹಲಿ, ಗುರುಗ್ರಾಮದ ಕನ್ನಡ ಮಕ್ಕಳಲ್ಲಿ ಅನೇಕ ಪ್ರತಿಭಾವಂತ ಮಕ್ಕಳಿದ್ದಾರೆ ಅವರನ್ನು ಗುರುತಿಸಿ ಪ್ರೋತ್ಸಾಹ ನೀಡುತ್ತಿರುವ ದೆಹಲಿ ಕರ್ನಾಟಕ ಸಂಘಕ್ಕೆ ನಮ್ಮ ಸಂಘದ ಪರವಾಗಿ ತುಂಬು ಹೃದಯದ ಧನ್ಯವಾದಗಳು.

ಸಭಾಂಗಣದಲ್ಲಿ ನೆರೆದಿದ್ದ ಎಲ್ಲಾ ಸಭಿಕರನ್ನು ನಗೆಗಡಲಲ್ಲಿ ತೇಲಾಡಿಸಿದ ಕರುನಾಡಿನ ಗಿಚ್ಚಿ ಗಿಲಿಗಿಲಿ ತಂಡದ ಫೇಮಸ್ ಕಲಾವಿದರಿಂದ ಮೂಡಿ ಬಂದ ಹಾಸ್ಯ ಸಂಜೆಯ ಸ್ಕಿಟ್‌ಗಳಿಂದ ಕನ್ನಡಿಗರು ತುಂಬಾ ಆನಂದ ಪಟ್ಟರು. ಇಂತಹ ಅದ್ಭುತವಾದ ಕಲಾವಿದರು ನಮ್ಮ ಗುರುಗ್ರಾಮ ಕನ್ನಡ ಸಂಘದ ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮಕ್ಕೆ ಬರಲು ಕಾರಣಕರ್ತರಾದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಿಗೆ ತುಂಬು ಹೃದಯದ ಧನ್ಯವಾದಗಳು.

ನೂರಾರು ಕಾರ್ಯಕ್ರಮ, ಸಾವಿರಾರು ಕಲಾವಿದರನ್ನು ಕರೆಸಿ ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿ ಕಾರ್ಯಕ್ರಮವನ್ನು ನಡೆಸುವ ಅಧ್ಯಕ್ಷರಿಗೆ ಈ ಎಲ್ಲ ಕೆಲಸಗಳು ತುಂಬಾ ಸುಲಭ, ಅಪರೂಪಕ್ಕೊಂದು ಇಂತಹ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವ ನಮಗೆ ಸ್ವಲ್ಪ ಕಷ್ಟ, ಆದರೆ ಅವರು ನಮಗೆ ಸ್ಫೂರ್ತಿ ತುಂಬಿ ನಿಮ್ಮ ಜೊತೆ ನಾವಿದ್ದೇವೆ, ಗುರುಗ್ರಾಮ ಮತ್ತು ದೆಹಲಿ ಕರ್ನಾಟಕ ಸಂಘ ಜೊತೆಗೂಡಿ ಕಾರ್ಯಕ್ರಮ ಮಾಡುತ್ತಿರುವುದರಿಂದ ಯಾವುದೇ ತೊಂದರೆಗಳು ಆಗದಂತೆ ಕಾರ್ಯಕ್ರಮ ನಡೆಯಬೇಕು, ನಮ್ಮೆಲ್ಲರ ಉದ್ದೇಶ ಕಾರ್ಯಕ್ರಮದ ಯಶಸ್ವಿ, ಇದಕ್ಕೆ ಬೇಕಾದ ಸಲಹೆಗಳನ್ನು ನೀಡುವುದರ ಜೊತೆಗೆ ದೆಹಲಿ ಕರ್ನಾಟಕ ಸಂಘದ ವತಿಯಿಂದ ಸಹಕಾರ ಸಹಯೋಗವನ್ನು ನೀಡಿರುವ ಅದರ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ ಹಾಗು ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರಿಗೆ ಗುರುಗ್ರಾಮ ಕನ್ನಡಿಗರ ಪರವಾಗಿ ಗುರುಗ್ರಾಮ ಕನ್ನಡ ಸಂಘದ ಸಮಸ್ತ ಪದಾಧಿಕಾರಿಗಳು ಹಾಗು ಸದಸ್ಯರಿಂದ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇವೆ.

ಇದರ ಜೊತೆ ಗುರುಗ್ರಾಮ ಕನ್ನಡ ಸಂಘದ ಕಾರ್ಯಕ್ರಮದ ಯಶಸ್ವಿಗೆ ಎಷ್ಟೇ ಬ್ಯುಸಿ ಇದ್ದರೂ ಸಹ ಕಾರ್ಯಕ್ರಮದ ತಯಾರಿಗೆ ಸಲಹೆಗಳನ್ನು ನೀಡುತ್ತಾ ನಮ್ಮ ಸಂಪರ್ಕದಲ್ಲಿದ್ದು, ಮಾರ್ಗದರ್ಶನ, ಸಲಹೆಗಳನ್ನು ನೀಡುತ್ತಾ ಗುರುಗ್ರಾಮ ಕನ್ನಡಿಗರಿಗೆ ಸ್ಫೂರ್ತಿ ತುಂಬುವ ಜೊತೆಗೆ ಸಹಕಾರ ಮತ್ತು ಸಹಯೋಗವನ್ನು ನೀಡುತ್ತಾ ಬರುತ್ತಿರುವ ನಮ್ಮ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಡಿ.ವಿ.ಎಸ್. ಮೂರ್ತಿ ಅವರಿಗೂ ಗುರುಗ್ರಾಮ ಕನ್ನಡ ಸಂಘದ ವತಿಯಿಂದ ಹಾರ್ದಿಕ ಧನ್ಯವಾದಗಳು.

ಸಭಾ ಕಾರ್ಯಕ್ರಮದ ಕೊನೆಯಲ್ಲಿ ಅತಿಥಿ ಗಣ್ಯರಿಗೆ ಗೌರವ ಸಮರ್ಪಣೆ ನೀಡಲಾಯಿತು. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಅರುಣ್ ಸಿ.ಎಸ್. ಅವರು ಗುರುಗಾಂವ್ ಕನ್ನಡ ಸಂಘವು ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ ಆಚರಿಸಿದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾದ ಮುಖ್ಯ ಅತಿಥಿಗಳಿಗೆ, ದೆಹಲಿ ಕರ್ನಾಟಕ ಸಂಘ ಮತ್ತು ಗುರುಗ್ರಾಮ ಕನ್ನಡ ಸಂಘದ ಪದಾಧಿಕಾರಿಗಳಿಗೆ, ಸದಸ್ಯರಿಗೆ ಮತ್ತು ಕಾರ್ಯಕ್ರಮದ ಯಶಸ್ವಿಗೆ ಪ್ರತ್ಯಕ್ಷವಾಗಿ ಹಾಗು ಪರೋಕ್ಷವಾಗಿ ಸಹಕರಿಸಿದ ನಮ್ಮ ಎಲ್ಲಾ ಪ್ರೀತಿಯ ದೆಹಲಿ ಮತ್ತು ಗುರುಗ್ರಾಮ ಕನ್ನಡಿಗರಿಗೆಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು.

ವಿಶೇಷವಾಗಿ ಈ ಕಾರ್ಯಕ್ರಮದಲ್ಲಿ ಎಲ್ಲರ ಮನ ಗೆದ್ದ ಗುರುಗ್ರಾಮ ಕನ್ನಡ ಸಂಘದ ಕಲಿಕಾ ಕೇಂದ್ರದ ಮಕ್ಕಳಿಗೆ ಸಮೂಹ ನೃತ್ಯ ತರಬೇತಿ ನೀಡಿದ, ಮಕ್ಕಳ ಸಾಹಿತ್ಯ ಪರಿಷತ್ತು ದೆಹಲಿ ಘಟಕದ ಅಧ್ಯಕ್ಷರಾಗಿರುವ, ಯುವ ತರುಣ ಶ್ರೀ ಅರುಣ್ ಸಿ.ಎಸ್. ಅವರಿಗೆ ಗುರುಗ್ರಾಮ ಕನ್ನಡಿಗರು ಮತ್ತು ಸಂಘದ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು.

ನಾವು ಹೊರನಾಡ ಕನ್ನಡಿಗರು, ಕರುನಾಡಿನಿಂದ ಸಾವಿರಾರು ಮೈಲಿ ದೂರದ ದೆಹಲಿ ಎನ್‌ಸಿಆರ್ ನಲ್ಲಿರುವವರು, ನಮ್ಮ ಕಷ್ಟ ಸುಖದಲ್ಲಿ ನಮ್ಮ ಸಂಬಂಧಿಗಳಿಗಿಂತ ಮೊದಲು ಭಾಗಿಯಾಗುವವರು ಇಲ್ಲಿನ ನಮ್ಮ ಕನ್ನಡಿಗರು, ಇಲ್ಲಿ ಯಾವುದೇ ಜಾತಿ, ಪ್ರಾಂತ್ಯಗಳಿಗೆ ಹೆಚ್ಚು ಆದ್ಯತೆ ನೀಡದೇ ನಾವೆಲ್ಲರೂ ಮೊದಲು ಕನ್ನಡಿಗರಾಗಿ, ಒಗ್ಗಟ್ಟಾಗಿ ನಮ್ಮ ನಾಡು, ನುಡಿ, ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಡೆ ಗಮನ ಹರಿಸಿ ನಮ್ಮ ಕನ್ನಡ ತೇರನ್ನು ಎಳೆಯೋಣ ಬನ್ನಿ...,

ಗುರುಗ್ರಾಮ ಕನ್ನಡ ಸಂಘದ ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮಕ್ಕೆ ಬಂದು ಯಶಸ್ವಿಗೊಳಿಸಿದ ಎಲ್ಲಾ ಕನ್ನಡಿಗರಿಗೂ ಕೃತಜ್ಞತೆಗಳು.❑

**ತಿಮ್ಮಪ್ಪ ಜಿ.ಆರ್.**
ಪ್ರಧಾನ ಕಾರ್ಯದರ್ಶಿ







## ದೆಹಲಿ ಕರ್ನಾಟಕ ಸಂಘದ

# ನಾಟಕೋತ್ಸವ-2025



# ಸಂಘದಲ್ಲಿ ನಡೆದ ನಾಟಕೋತ್ಸವದಲ್ಲಿ
# ಸ್ಥಳೀಯ ಕಲಾತಂಡಗಳಿಂದ ಏಳು ಅಮೋಘ ನಾಟಕಗಳ ಪ್ರಸ್ತುತಿ




ಏಕಾಂಕ ನಾಟಕ ಸ್ಪರ್ಧೆಗಳು ಈ ಹಿಂದೆ ಸಂಘದಲ್ಲಿ ನಿರಂತರವಾಗಿ ನಡೆಯುತ್ತಿದ್ದು ಕೆಲಕಾಲ ನಾಟಕ ಚಟುವಟಿಕೆಗಳು ಗಣನೀಯವಾಗಿ ಕಡಿಮೆಯಾಗಿ ಕೇವಲ ವರ್ಷಕ್ಕೊಮ್ಮೆ ಕಾರ್ಯಕ್ರಮಗಳಾಗಿದ್ದವು. 2023ರ ಫೆಬ್ರವರಿಯಲ್ಲಿ ರಾಜ್ಯದ 5 ಕಲಾ ತಂಡಗಳಿಂದ ನಾಟಕೋತ್ಸವವು ಪ್ರಸ್ತುತಿಯಾಗಿದ್ದು, ಫೆಬ್ರವರಿ 2025ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಸಹಯೋಗದಲ್ಲಿ ಆಯೋಜನೆಗೊಂಡ ಹೊರನಾಡ ಕನ್ನಡ ನಾಟಕೋತ್ಸವದಲ್ಲಿ 2 ನಾಟಕಗಳು ಅದ್ಭುತ ಪ್ರದರ್ಶನಗೊಂಡಿದ್ದವು.

ದೆಹಲಿ ಕರ್ನಾಟಕ ಸಂಘದಿಂದ ಇತ್ತೀಚೆಗೆ ಇನ್ನೊಮ್ಮೆ ಹಮ್ಮಿಕೊಂಡಿದ್ದ 'ನಾಟಕೋತ್ಸವದಲ್ಲಿ' ದೆಹಲಿಯ ಮತ್ತು ಸ್ಥಳೀಯರಿಗಾಗಿ ಏಳು ಕಲಾ ತಂಡಗಳು ಭಾಗವಹಿಸಿ ವಿಭಿನ್ನ ಪ್ರಕಾರಗಳ ನಾಟಕಗಳನ್ನು ಪ್ರಸ್ತುತ ಪಡಿಸಿದವು. ಎರಡು ದಿನಗಳಲ್ಲಿ ಏರ್ಪಡಿಸಲಾದ ಈ ನಾಟಕೋತ್ಸವದಲ್ಲಿ ಮೊದಲನೇ ದಿನ ಮೂರು ನಾಟಕಗಳು ಮತ್ತು ಎರಡನೇ ದಿನ ಉಳಿದ ನಾಲ್ಕು ನಾಟಕಗಳು ಅಮೋಘವಾಗಿ ಪ್ರದರ್ಶನಗೊಂಡವು.

ದಿನಾಂಕ 12.10.2025 ರಂದು ನಾಟಕೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರ ಜೊತೆ ಏಳೂ ನಾಟಕ ತಂಡಗಳ ನಿರ್ದೇಶಕರು ಸೇರಿದಂತೆ ಅತಿಥಿಗಳು ಮತ್ತು ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ, ನಾಟಕ ಸಮಿತಿಯ ಸಂಚಾಲಕ ಶ್ರೀ ಎನ್.ಆರ್. ಶ್ರೀನಾಥ್ ಅವರು ವೇದಿಕೆ ಮೇಲೆ ಉಪಸ್ಥಿತರಿದ್ದು ಒಟ್ಟಾಗಿ ದೀಪ ಪ್ರಜ್ವಲನೆ ಮಾಡುವುದರೊಂದಿಗೆ ನಾಟಕೋತ್ಸವಕ್ಕೆ ಔಪಚಾರಿಕ ಚಾಲನೆ ನೀಡಲಾಯಿತು. ನಾಟಕೋತ್ಸವದಲ್ಲಿ ಸ್ಪರ್ಧಿಸಿದ ಪ್ರತಿ ನಾಟಕ ತಂಡಗಳಿಗೆ ಗರಿಷ್ಠ ಒಂದು ಗಂಟೆಯ ಸಮಯ (ಆರಂಭದಿಂದ ಅಂತ್ಯದವರೆಗೆ) ನಿಗದಿಪಡಿಸಲಾಗಿತ್ತು. ಶ್ರೀ ಎನ್.ಆರ್. ಶ್ರೀನಾಥ್ ಎಲ್ಲರನ್ನು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿ ನಾಟಕೋತ್ಸವ ಆಯೋಜನೆ ಹಿನ್ನೆಲೆ ಮತ್ತು ಉದ್ದೇಶ ತಿಳಿಸಿದರು. ಶ್ರೀ ಸಿ.ಎಂ. ನಾಗರಾಜ ಮಾತನಾಡಿ ಸಂಘದಲ್ಲಿ ನಾಟಕೋತ್ಸವ ನಡೆಯುತ್ತಿರುವ ಬಗ್ಗೆ ಹರ್ಷ ವ್ಯಕ್ತಪಡಿಸುತ್ತಾ ಇದರಲ್ಲಿ ಪಾಲ್ಗೊಳ್ಳುತ್ತಿರುವ ಎಲ್ಲಾ ತಂಡದ ಕಲಾವಿದರಿಗೆ, ತಾಂತ್ರಿಕ ವರ್ಗದವರಿಗೆ ಮತ್ತು ನಿರ್ದೇಶಕರಿಗೆ ಶುಭ ಕೋರಿದರು.

ಉದ್ಘಾಟನೆಯ ನಂತರ ಪ್ರಸ್ತುತಗೊಂಡ ನಾಟಕಗಳು :

**ಮೊದಲನೇ ನಾಟಕ :** 'ಗಣ-ಗಣ-ರಾಜ್ಯ', ಪ್ರಸ್ತುತಿ : ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್, ನಿರ್ದೇಶನ : ಶ್ರೀಮತಿ ಮೀತಾ ಮಿಶ್ರ

**ಎರಡನೇ ನಾಟಕ :** 'ನಮ್ಮನೆಲ-ಜೀವ ಜಲ', ಪ್ರಸ್ತುತಿ : ನಾಡಪ್ರಭು ಕೆಂಪೇಗೌಡ ಫೌಂಡೇಷನ್‌ನ ಸಾಂಸ್ಕೃತಿಕ ವಿಭಾಗ 'ರಂಗ ತರಂಗ' ತಂಡದಿಂದ, ರಚನೆ ಮತ್ತು ನಿರ್ದೇಶನ : ಶ್ರೀ ನ.ಮೂ. ಶ್ರೀರಾಮ್

**ಮೂರನೇ ನಾಟಕ :** 'ಹಗ್ಗದ ಕೊನೆ', ಪ್ರಸ್ತುತಿ : ಡೆಲ್ಲಿ ಫ್ರೆಂಡ್ಸ್, ನಿರ್ದೇಶನ : ಶ್ರೀ ಮೈಲಾರಪ್ಪ ತಾವರೆಕೆರೆ

ಈ ಮೂರೂ ನಾಟಕಗಳು ಪ್ರೇಕ್ಷಕರ ಅಪಾರ ಮೆಚ್ಚುಗೆಗೆ ಪಾತ್ರವಾದವು.

ನಾಟಕೋತ್ಸವದ ಮುಂದುವರಿದ ಭಾಗವಾಗಿ ದಿನಾಂಕ 18.10.2025 ರಂದು ಸಂಜೆ ಉಳಿದ ನಾಲ್ಕು ನಾಟಕಗಳು ಪ್ರದರ್ಶನಗೊಂಡವು.

**ನಾಲ್ಕನೇ ನಾಟಕ :** 'ಕಿತ್ತೂರಿನ ಕಿರಣ' ಪ್ರಸ್ತುತಿ : ಜನಕಪುರಿ ಮಹಿಳಾ ಮಂಡಳಿ, ನಿರ್ದೇಶನ : ಶ್ರೀಮತಿ ಸವಿತಾ ಇನಾಮದಾರ್

**ಐದನೇ ನಾಟಕ :** 'ಶೂನ್ಯ' ಪ್ರಸ್ತುತಿ : ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘ, ನವದೆಹಲಿ. ನಿರ್ದೇಶನ : ಶ್ರೀ ಹರಿಪ್ರಿಯ ಎಸ್.

**ಆರನೇ ನಾಟಕ :** 'ಚಾರಿಟಿಯಾನ್ ಮೈಮ್' ಪ್ರಸ್ತುತಿ : ದೆಹಲಿ ತುಳು ಸಿರಿ, ರಚನೆ ಮತ್ತು ನಿರ್ದೇಶನ : ಶ್ರೀ ಪ್ರಕಾಶ್ ಶೆಟ್ಟಿ ಉಳೆಪಾಡಿ

**ಏಳನೇ ಮತ್ತು ಕೊನೆಯ ನಾಟಕ :** 'ಶ್ರೀ ರಾಮೇಶ್ವರಮ್' ಪ್ರಸ್ತುತಿ : ಜನಕಪುರಿ ಕನ್ನಡ ಕೂಟ, ನಿರ್ದೇಶನ : ಡಾ. ಎಸ್.ಎಲ್. ಭಂಡಾರಕರ್

ಅದೇ ದಿನ ಸಂಜೆ ನಾಟಕೋತ್ಸವದ ಸಮಾರೋಪ ಸಮಾರಂಭವನ್ನು ಆಯೋಜಿಸಲಾಗಿತ್ತು. ಪರಮಪೂಜ್ಯ ಶ್ರೀ ಡಾ. ನಿಶ್ಚಲಾನಂದನಾಥ ಸ್ವಾಮೀಜಿ, ಪೀಠಾಧ್ಯಕ್ಷರು ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠ, ಕೆಂಗೇರಿ, ಬೆಂಗಳೂರು ಇವರು ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯವನ್ನು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಎಚ್. ರಾಜೇಶ್ ಪ್ರಸಾದ್ ಐಎಎಸ್., ಮುಖ್ಯ ಕಾರ್ಯದರ್ಶಿ, ಚಂಡೀಗಢ ಮತ್ತು ಡಾ. ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಅವರು ಆಗಮಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ವಹಿಸಿದ್ದರು.ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಹಾಗು ನಾಟಕದ ತೀರ್ಪುಗಾರರಾದ ಶ್ರೀ ರಮೇಶ್ ಅರೋಳಿ ಮತ್ತು ಡಾ. ಕನ್ನಪ್ಪ ಶೆಟ್ಟಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಕೆ.ಎಸ್. ಮೂರ್ತಿ ಅವರು ಪೂಜ್ಯ ಸ್ವಾಮೀಜಿಗಳಿಗೆ, ಅತಿಥಿ ಗಣ್ಯರಿಗೆ ಮತ್ತು ಸಭಿಕರಿಗೆ ಆತ್ಮೀಯ ಸ್ವಾಗತ ಕೋರಿದರು. ಸಮಿತಿ ಸದಸ್ಯರಾದ ಶ್ರೀ ಎನ್. ಆರ್. ಶ್ರೀನಾಥ್ ಕಾರ್ಯಕ್ರಮವನ್ನು ನಿರೂಪಿಸಿದರು.

ಸಭೆಯನ್ನುದ್ದೇಶಿಸಿ ಮಾತನಾಡಿದ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರು ಹಿಂದೆ ನಿರಂತರವಾಗಿ ಸಂಘದಲ್ಲಿ ನಡೆಯುತ್ತಿದ್ದ ನಾಟಕೋತ್ಸವವನ್ನು ಮತ್ತೆ ಪ್ರಾರಂಭ ಮಾಡಲಾಗಿದ್ದು ಈ ಬಾರಿ ಏಳು ಸ್ಥಳೀಯ ತಂಡಗಳು ಭಾಗಿಯಾಗಿದ್ದು ಪ್ರತಿ ನಾಟಕಗಳೂ ಅದ್ಭುತವಾಗಿ ಮೂಡಿ ಬಂದಿವೆ. ಭಾಗವಹಿಸಿದ ಎಲ್ಲಾ ಕಲಾವಿದರಿಗೆ, ನಾಟಕ ನಿರ್ದೇಶಕರಿಗೆ ಹಾಗು ನಾಟಕದ ವೀಕ್ಷಕರಿಗೆ ಅಭಿನಂದನೆಗಳು ಎಂದರು.

ಶ್ರೀ ಡಾ. ನಿಶ್ಚಲಾನಂದನಾಥ ಸ್ವಾಮೀಜಿ ಅವರು ದೆಹಲಿ ಕರ್ನಾಟಕ ಸಂಘದ ಕಾರ್ಯಗಳನ್ನು ಶ್ಲಾಘಿಸುತ್ತಾ ಈ ನಾಟಕೋತ್ಸವದ ಕಾರ್ಯಕ್ರಮದಲ್ಲಿ ತಾವು ಭಾಗಿಯಾಗಿದ್ದಕ್ಕೆ ಸಂತಸ ತಿಳಿಸುತ್ತಾ ಎಲ್ಲರಿಗೂ ತಮ್ಮ ಆಶೀರ್ವಚನ ನೀಡಿದರು.

ಡಾ. ಪುರುಷೋತ್ತಮ ಬಿಳಿಮಲೆ ಮಾತನಾಡಿ ದೆಹಲಿ ಕರ್ನಾಟಕ ಸಂಘದಲ್ಲಿ ನಾಟಕಗಳನ್ನು ಈ ಹಿಂದೆ ನಿರಂತರವಾಗಿ ಪ್ರದರ್ಶಿಸಲಾಗುತ್ತಿತ್ತು, ಈಗ ಮತ್ತೆ ನಾಟಕೋತ್ಸವ ಆರಂಭವಾಗಿರುವುದು ಬಹಳ ಸಂತೋಷದ ಸಂಗತಿ. ಇದಕ್ಕಾಗಿ ನಾನು ಸಂಘದ ಪ್ರಸ್ತುತ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ, ಎಲ್ಲರಿಗೂ ಶುಭವಾಗಲಿ ಎಂದರು.

ಕನ್ನಡಿಗ ಐಎಎಸ್ ಅಧಿಕಾರಿ ಶ್ರೀ ಎಚ್. ರಾಜೇಶ್ ಪ್ರಸಾದ್ ಮಾತನಾಡಿ, ಹೊರನಾಡಿನಲ್ಲಿ ಅತಿ ಹೆಚ್ಚು ಕನ್ನಡಪರ ಕಾರ್ಯಕ್ರಮಗಳನ್ನ ದೆಹಲಿ ಕರ್ನಾಟಕ ಸಂಘ ಆಯೋಜನೆ ಮಾಡುತ್ತಾ ಬಂದಿದೆ, ತಾವು ಸಹಾ ಈ ಹಿಂದೆ ಸಂಘದ ಹಲವಾರು ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದೇನೆ. ಜಮ್ಮು ಕಾಶ್ಮೀರದಲ್ಲಿ ಇದ್ದಾಗಲೂ ಸಹಾ ಕೆಲವು ಕನ್ನಡದ ಕಾರ್ಯಕ್ರಮಗಳನ್ನು ಅಲ್ಲಿ ನಡೆಸಲು ಅನುವು ಮಾಡಿ ಕೊಡಲಾಗಿತ್ತು, ಈಗ ಚಂಡಿಗಡದಲ್ಲಿಯೂ ಕನ್ನಡದ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡುತ್ತಿದ್ದೇನೆ, ದೆಹಲಿಯಲ್ಲಿಯೂ ಮುಂದೆ ಇಲ್ಲಿನ ಕನ್ನಡಿಗರೆಲ್ಲಾ ಹೀಗೆ ಒಟ್ಟು ಸೇರಿ ಈ

## ನಾಟಕೋತ್ಸವದಲ್ಲಿ ಸಂಘದ ವತಿಯಿಂದ ಘೋಷಿಸಲಾದ ಬಹುಮಾನಗಳಿಗೆ ತೀರ್ಪುಗಾರರಿಂದ ಆಯ್ಕೆಯಾದ ನಾಟಕಗಳು, ನಿರ್ದೇಶಕರ, ನಟ, ನಟಿಯರ ಪಟ್ಟಿ

ಅತ್ಯುತ್ತಮ ನಾಟಕ–ಪ್ರಥಮ ಬಹುಮಾನ : **ಚಾರಿಟಿಯಾನ್ ಮೈಮ್**–ಪ್ರಸ್ತುತಿ : ದೆಹಲಿ ತುಳು ಸಿರಿ

ಉತ್ತಮ ನಾಟಕ–ದ್ವಿತೀಯ ಬಹುಮಾನ : **ಕಿತ್ತೂರಿನ ಕಿರಣ**–ಪ್ರಸ್ತುತಿ : ಜನಕಪುರಿ ಮಹಿಳಾ ಮಂಡಳಿ.

ಸಮಧಾನಕರ ನಾಟಕ–ತೃತೀಯ ಬಹುಮಾನ : **ನಮ್ಮನೆಲ–ಜೀವ ಜಲ**–ಪ್ರಸ್ತುತಿ : ನಾಡಪ್ರಭು ಕೆಂಪೇಗೌಡ ಫೌಂಡೇಷನ್‌ನ ಸಾಂಸ್ಕೃತಿಕ ವಿಭಾಗ 'ರಂಗ ತರಂಗ' ತಂಡ

ಅತ್ಯುತ್ತಮ ನಿರ್ದೇಶಕ : **ಡಾ. ಎಸ್.ಎಲ್. ಭಂಡಾರ್‌ಕರ್,** ನಾಟಕ : ಶ್ರೀ ರಾಮೇಶ್ವರಮ್, (ಪ್ರಸ್ತುತಿ : ಜನಕಪುರಿ ಕನ್ನಡ ಕೂಟ)

ಅತ್ಯುತ್ತಮ ರಂಗ ಸಜ್ಜಿಕೆ : ನಾಟಕ : **ನಮ್ಮ ನೆಲ–ಜೀವ ಜಲ** (ಪ್ರಸ್ತುತಿ : ನಾಡಪ್ರಭು ಕೆಂಪೇಗೌಡ ಫೌಂಡೇಷನ್‌ನ ಸಾಂಸ್ಕೃತಿಕ ವಿಭಾಗ 'ರಂಗ ತರಂಗ' ತಂಡ)

ಅತ್ಯುತ್ತಮ ಪ್ರಸಾದನ : ನಾಟಕ : **ಶ್ರೀ ರಾಮೇಶ್ವರಮ್,** (ಪ್ರಸ್ತುತಿ : ಜನಕಪುರಿ ಕನ್ನಡ ಕೂಟ)

ಅತ್ಯುತ್ತಮ ಬೆಳಕು : ನಾಟಕ : **ಗಣ–ಗಣ–ರಾಜ್ಯ** (ಪ್ರಸ್ತುತಿ : ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್)

ಅತ್ಯುತ್ತಮ ವಿಶೇಷ ಪರಿಣಾಮ : ನಾಟಕ : **ಚಾರಿಟಿಯಾನ್ ಮೈಮ್** (ಪ್ರಸ್ತುತಿ : ದೆಹಲಿ ತುಳು ಸಿರಿ)

ಅತ್ಯುತ್ತಮ ವಸ್ತ್ರ ವಿನ್ಯಾಸ : ನಾಟಕ–**ಶೂನ್ಯ** (ಅನಂತದ ಆರಂಭ) (ಪ್ರಸ್ತುತಿ : ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘ)

**ಅತ್ಯುತ್ತಮ ನಟ / ನಟಿ**

ನಾಟಕ : ಗಣ–ಗಣ–ರಾಜ್ಯ, ನಟ : ಶ್ರೀಮತಿ ಅಶ್ವಿನಿ ಬಿ.ಎಸ್. ಮತ್ತು ನಟಿ : ಶ್ರೀಮತಿ ರಾಧಾ ಕೌಜಲಗಿ

ನಾಟಕ : ನಮ್ಮ ನೆಲ–ಜೀವ ಜಲ, ನಟಿ : ಶ್ರೀಮತಿ ಶೋಭಾ ನಾಗರಾಜ ಮತ್ತು ನಟ : ಶ್ರೀ ಅರುಣ್ ಸಿ.ಎಸ್.

ನಾಟಕ : ಹಗ್ಗದ ಕೊನೆ, ನಟಿ : ಶ್ರೀಮತಿ ಮಮತಾ ಜಿಂಥೆ ಮತ್ತು ನಟ : ಶ್ರೀ ರಮೇಶ್ ಎಸ್.

ನಾಟಕ : ಕಿತ್ತೂರಿನ ಕಿರಣ, ನಟ : ಶ್ರೀಮತಿ ಮಾಲಿನಿ ಪ್ರಹ್ಲಾದ್ ಮತ್ತು ನಟಿ : ಶ್ರೀಮತಿ ಸವಿತಾ ಇನಾಮದಾರ್

ನಾಟಕ : ಶೂನ್ಯ, ನಟಿ : ಶ್ರೀಮತಿ ಮಂಜುಳಾ ನಾಗರಾಜ ಮತ್ತು ನಟಿ : ಶ್ರೀ ಹರಿಪ್ರಿಯ ಎಸ್.

ನಾಟಕ : ಚಾರಿಟಿಯಾನ್ ಮೈಮ್, ನಟಿ : ಹರ್ಷಿತಾ ಕುಶಾಲಪ್ಪ, ನಟ : ಶ್ರೀ ಸತ್ಯನಾರಾಯಣ ನಾಯಕ್

ನಾಟಕ : ಶ್ರೀರಾಮೇಶ್ವರಮ್ : ನಟಿ : ಶ್ರೀಮತಿ ಸವಿತಾ ನೆಲ್ಲಿ ಮತ್ತು ಶ್ರೀ ನಟ : ಸಂಜೀವ ದೇಶಪಾಂಡೆ

**ಇವಲ್ಲದೇ ದಿವಂಗತ ಶ್ರೀಮತಿ ಜಮುನಾ ಸಿ. ಮಠದ ಅವರ ಸ್ಮರಣಾರ್ಥ ಅವರ ಪತಿ ಶ್ರೀ ಚೆನ್ನು ಎಸ್. ಮಠದ ಅವರಿಂದ ಘೋಷಿಸಲ್ಪಟ್ಟ ಬಹುಮಾನಗಳು :**

ಶ್ರೇಷ್ಠ ರಂಗ ನಿರ್ದೇಶಕಿ : ಶ್ರೀಮತಿ ಸವಿತಾ ಇನಾಮದಾರ್ (ನಾಟಕ : ಕಿತ್ತೂರಿನ ಕಿರಣ, ಪ್ರಸ್ತುತಿ : ಜನಕಪುರಿ ಮಹಿಳಾ ಮಂಡಳಿ)

ಶ್ರೇಷ್ಠ ನಟಿ : ಶ್ರೀಮತಿ ಚೈತ್ರಾ ತೋಳ್ವಾಡಿ (ನಾಟಕ : ಚಾರಿಟಿಯಾನ್ ಮೈಮ್, ಪ್ರಸ್ತುತಿ : ದೆಹಲಿ ತುಳು ಸಿರಿ)



ರೀತಿಯಾದ ಕಾರ್ಯಕ್ರಮಗಳು ನಡೆಯುತ್ತಾ ಇರಲಿ, ಎಲ್ಲರಿಗೂ ಅಭಿನಂದನೆಗಳು ಎಂದರು.

ನಾಟಕದ ತೀರ್ಪುಗಾರರ ಪರವಾಗಿ ಶ್ರೀ ರಮೇಶ್ ಅರೋಳಿ ಅವರು ಮಾತನಾಡಿದರು. ಒಂದಕ್ಕೊಂದು ನಾಟಕಗಳು ಉತ್ತಮವಾಗಿ ಪ್ರದರ್ಶನಗೊಂಡಿದ್ದು, ನಾಟಕ ಸ್ಪರ್ಧೆಯಲ್ಲಿ ಬಹುಮಾನಗಳನ್ನ ನಿರ್ಧರಿಸುವ ಪ್ರಕ್ರಿಯೆ ಸುಲಭವಾಗಿರಲಿಲ್ಲ. ಆದರೂ ಪೂರ್ವ ನಿರ್ಧಾರಿತ ಕೆಲವು ಮಾನದಂಡಗಳ ಮೇಲೆ ನಾವು ಅತ್ಯುತ್ತಮ ನಾಟಕಗಳನ್ನು, ಉತ್ತಮ ನಿರ್ದೇಶಕ ಮತ್ತು ಬೆಸ್ಟ್ ನಟ ನಟಿಯವರನ್ನು ಆಯ್ಕೆ ಮಾಡಿದ್ದೇವೆ ಇದನ್ನು ನೀವೆಲ್ಲ ಒಪ್ಪಿಕೊಳ್ಳುವಿರೆಂದು ಎಂದು ನಂಬಿದ್ದೇವೆ ಎಂದು ಹೇಳಿ ಮೊದಲನೇ ಎರಡನೇ ಮತ್ತು ಮೂರನೇ ಬಹುಮಾನ ವಿಜೇತೆ ನಾಟಕಗಳನ್ನು ಮತ್ತು ವಿಜೇತರ ಹೆಸರುಗಳನ್ನು ಘೋಷಿಸಿದರು.

ಸಭಾ ಕಾರ್ಯಕ್ರಮದ ನಡುವೆ ದೆಹಲಿ ಪೋಲಿಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ತಾಯ್ನಾಡಿಗೆ ತೆರಳುತ್ತಿರುವ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀ ನಾಗರಾಜು ವಿ. ಮತ್ತು ಶ್ರೀಮತಿ ಮಂಜುಳಾ ನಾಗರಾಜು ಅವರನ್ನು ಸನ್ಮಾನಿಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು.

ಅನಂತರ ವೇದಿಕೆ ಮೇಲಿದ್ದ ಪೂಜ್ಯ ಸ್ವಾಮೀಜಿಗೆ, ಅತಿಥಿಗಣ್ಯರಿಗೆ ಮತ್ತು ತೀರ್ಪುಗಾರರಿಗೆ ಗೌರವ ಸಮರ್ಪಣೆ ನೀಡಲಾಯಿತು. ಕೊನೆಯಲ್ಲಿ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಅರುಣ್ ಸಿ.ಎಸ್. ಎಲ್ಲರಿಗೂ ವಂದನೆಗಳನ್ನು ಅರ್ಪಿಸುವುದರೊಂದಿಗೆ ಯಶಸ್ವಿಯಾಗಿ ಪ್ರದರ್ಶನಗೊಂಡ ನಾಟಕೋತ್ಸವದ ಸಮಾರೋಪ ಸಮಾರಂಭ ಮುಕ್ತಾಯಗೊಂಡಿತು. ❑

**ಅಭಿಮತ ವರದಿ**












**ದೆಹಲಿ ಪೋಲಿಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿ ತರುವಾಯ ತಾಯ್ನಾಡಿಗೆ ತೆರಳುತ್ತಿರುವ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀ ನಾಗರಾಜು ವಿ. ಮತ್ತು ಶ್ರೀಮತಿ ಮಂಜುಳಾ ನಾಗರಾಜ್ ಅವರನ್ನು ನಾಟಕೋತ್ಸವ ಸಮಾರೋಪ ಸಮಾರಂಭದಲ್ಲಿ ಸನ್ಮಾನಿಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು.**

# ‘ನಾಟಕೋತ್ಸವ’ ಒಂದು ಚೇತೋಹಾರಿ ಕಾರ್ಯಕ್ರಮ

ಕಲೆ ಸಾಂಸ್ಕೃತಿಕ ಉತ್ಸವಗಳಲ್ಲಿ ವಿಶಿಷ್ಟವಾದ ಸ್ಥಾನಮಾನ ಪಡೆದಿರುವ ಸಾಹಿತ್ಯ ಪ್ರಕಾರವೆಂದರೆ ನಾಟಕ. ದೃಶ್ಯ ಮಾಧ್ಯಮಗಳ ಸಮೂಹ ನಾಟಕ. ಸಾಹಿತ್ಯ ಪ್ರಕಾರಗಳಲ್ಲಿ ವಿಭಿನ್ನವಾಗಿ ಮೂಡಿ ಜನಸಾಮಾನ್ಯರಿಗೆ ನೇರವಾಗಿ ಮನಮುಟ್ಟುವಂತೆ ಅಭಿನಯದ ಮೂಲಕ ಸಂದೇಶವನ್ನು ತಮ್ಮ ವಾಕ್‌ಚಾತುರ್ಯತೆಯಿಂದ ತಲುಪಿಸುತ್ತದೆ. ನಾಟಕದಲ್ಲಿ ಹಲವಾರು ಬಗೆಯ ನಾಟಕಗಳನ್ನು ಕಾಣಬಹುದು ಸಾಮಾಜಿಕ, ಪೌರಾಣಿಕ ಹಾಗೆಯೇ ಬೀದಿ ನಾಟಕ ಮುಂತಾದವುಗಳನ್ನು ಕಾಣಬಹುದು. ಆಧುನಿಕ ಯುಗದಲ್ಲಿ ಬೀದಿ ನಾಟಕಗಳು ಮತ್ತು ಹವ್ಯಾಸಿ ರಂಗಭೂಮಿ ನಾಟಕಗಳು, ನಾಟಕದ ಜೀವಂತಿಕೆಯನ್ನು ಮೆರೆಯುತ್ತಿವೆ. ನಾಟಕದಲ್ಲಿನ ನಟರು ಅಭಿನಯಿಸುವಲ್ಲಿ ಪರಕಾಯ ಪ್ರವೇಶ ಮಾಡುವುದು ಅದ್ಭುತವೆನಿಸುತ್ತದೆ. ಉದಾಹರಣೆಗೆ ಕನ್ನಡದ ಅದ್ಭುತ, ಮೇರು ನಟಿ, ಕಲಾವಿದೆ ಉಮಾಶ್ರೀ ಅವರು ವಯಸ್ಸಾದ ಮುದುಕಿಯ ವೇಷವನ್ನು ತಮ್ಮ ಮನೋಜ್ಞ ಅಭಿನಯದಿಂದ ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸಿದ್ದರು. ಅವರ ಅಭಿನಯವನ್ನು ಮತ್ತೆ ಮತ್ತೆ ನೋಡಬೇಕೆನಿಸುತ್ತದೆ.



ಒಟ್ಟಾರೆ ನಾಟಕವೆಂಬುದು ಎಲ್ಲರನ್ನೂ ಆಕರ್ಷಿಸುವ ವಿದ್ಯುತ್ ಚಾಲಿತ ಕ್ರಿಯಾಶೀಲತೆಯುಳ್ಳ ಒಂದು ಸಂಸ್ಕೃತಿಯಾಗಿದೆ. ಬಣ್ಣ ಹಚ್ಚುವುದು ಎಲ್ಲರಿಗೂ ಸಾಧ್ಯವಾಗುವ ಕಲೆಯಲ್ಲ, ಅಂದಮಾತ್ರಕ್ಕೆ ಈ ಕಲೆಯನ್ನು ಕರತಲಾಮಲಕ ಮಾಡಿದರೆ ಒಲಿಯದ ವಿದ್ಯೆ ಏನು ಅಲ್ಲ, ಎಂಬುದನ್ನು ಸತ್ಯ ಮಾಡಲು ನಮ್ಮ ದೆಹಲಿ ಕರ್ನಾಟಕ ಸಂಘದ ನಾಟಕೋತ್ಸವದಲ್ಲಿ ಭಾಗಿಯಾಗಿದ್ದ ಬಹುತೇಕ ಸುಪ್ತ ಪ್ರತಿಭೆಗಳು ಹೇಗೆ ಪರಿಣಿತಿ ಇಲ್ಲದ ಅನಾನುಭವಿಗಳು ತಮ್ಮ ಕೇವಲ ಕಠಿಣ ಪರಿಶ್ರಮದ ಅಭ್ಯಾಸದಿಂದಾಗಿ ತರಬೇತಿ ಪಡೆದು ಸುಮಾರು ಏಳು ನಾಟಕಗಳನ್ನು ಪ್ರಸ್ತುತಪಡಿಸಿದ್ದರು. ಕೆಲವು ಸಾಮಾಜಿಕ ನಾಟಕ, ಪೌರಾಣಿಕ ನಾಟಕ, ವಸ್ತು ಕೇಂದ್ರದ ನಾಟಕ, ನೃತ್ಯ ಕೇಂದ್ರಿತ ನಾಟಕ, ಜ್ವಲಂತ ಪರಿಸ್ಥಿತಿ ಬಗ್ಗೆ ನಾಟಕ ಹೀಗೆ ವಿಭಿನ್ನ ಬಗೆಯ ಕಥಾವಸ್ತುಗಳನ್ನು ಆಧರಿಸಿಕೊಂಡು ಸುಂದರವಾದ ಕಥಾ ಹಂದರದಲ್ಲಿ ಹೆಣೆದ ಕಥೆಗಳು ನಾಟಕದ ರೂಪದಲ್ಲಿ ಹೊರಹೊಮ್ಮಿದ್ದು ಪ್ರೇಕ್ಷಕರಿಗೆ ಬಹಳ ಸಂತೋಷವನ್ನು ಕಲಾ ಪ್ರೇಮಿಗಳಿಗೆ ಆನಂದಮಯ ಕ್ಷಣವನ್ನು ತಂದೊದಗಿಸಿತು. ಯಾವುದೇ ರಂಗಕರ್ಮಿಗಳಿಗೆ ಕಡಿಮೆ ಇಲ್ಲದ ಮನೋಜ್ಞವಾಗಿ ಅಭಿನಯಿಸುವುದರ ಮೂಲಕ ನಮ್ಮ ಹೊರನಾಡ ಕನ್ನಡಿಗರು ಕನ್ನಡದ ಕಲಾ ಸೊಬಗನ್ನು ಹೆಚ್ಚಿಸಿದ್ದರು. ನಮ್ಮಲ್ಲಿ ಜಾಗೃತ ಪ್ರಜ್ಞೆ ಹೆಚ್ಚು. ನಾವು ಕನ್ನಡತನವನ್ನು ಬೆಳೆಸಿ ನಮ್ಮ ಮುಂದಿನ ಪೀಳಿಗೆಯವರಿಗೆ ದಾರಿದೀಪವಾಗಬೇಕು ಎಂಬ ಮಹತ್ವಾಕಾಂಕ್ಷೆಯಿಂದ ನಮ್ಮ ನಾಡಿನ ಕಲೆ, ಸಂಸ್ಕೃತಿ, ಭಾಷೆಯ ಸೊಗಡನ್ನು ನಾಟಕ, ಸಂಗೀತ, ನೃತ್ಯ ಪ್ರದರ್ಶನಗಳನ್ನು ನೀಡುತ್ತಾ ಬಂದಿದ್ದೇವೆ. ಹಾಗೆಯೇ ಮಕ್ಕಳು ಕೂಡ ಹಲವಾರು ಸ್ಪರ್ಧೆಗಳಲ್ಲಿ ಭಾಗವಹಿಸಿ ನಮ್ಮ ನಾಡಿನ ವೈಶಿಷ್ಟ್ಯತೆ ಬಗ್ಗೆ ತಿಳಿಯುತ್ತಿದ್ದಾರೆ.

ಬೆಂಗಳೂರು, ಮಂಗಳೂರು, ಮಂಡ್ಯ, ಬಳ್ಳಾರಿ, ಉತ್ತರ ಕರ್ನಾಟಕ ಹೀಗೆ ಕನ್ನಡ ಪ್ರಾದೇಶಿಕ ಭಾಷೆಗಳ ಉತ್ಕೃಷ್ಟತೆಯನ್ನು ಎತ್ತಿ ತೋರಿಸುವ ಪೈಪೋಟಿ ಶ್ರೀಗಂಧದೊಡನೆ ಗುದ್ದಾಡಿದಂತಿರುತ್ತದೆ, ಎಷ್ಟೆಷ್ಟು ಎರಚಾಡಿದರೂ ಶ್ರೀಗಂಧದ ಪರಿಮಳ ಹೆಚ್ಚುತ್ತದೆ. ಹಾಗೆ ಭಾಷೆಯ ನಡುವಿನ ಉತ್ತಮತೆಯತ್ತ ಸಾಗುವಲ್ಲಿ ತೋರುವ ವಾದ ಸಂವಾದಗಳು ಕೂಡ ನಮ್ಮ ಭಾಷಾ ಸಮೃದ್ಧತೆಯ ಆಳವನ್ನು ಪ್ರತಿಬಿಂಬಿಸುತ್ತದೆ. ಇಷ್ಟೆಲ್ಲಾ ಹೇಳುವುದರ ಕಾರಣ 2025ರ ಅಕ್ಟೋಬರ್ ತಿಂಗಳಿನಲ್ಲಿ ಜರುಗಿದ ನಾಟಕೋತ್ಸವದಲ್ಲಿ ಪ್ರದರ್ಶನ ನೀಡಿದ ಪ್ರತಿ ನಾಟಕವು ಒಂದೊಂದು ಪ್ರಾದೇಶಿಕತೆಯನ್ನು ಎತ್ತಿ ತೋರುತ್ತಿತ್ತು. ನಾಡು, ನುಡಿ ಪ್ರಾದೇಶಿಕತೆಯ ಸೊಗಡು ಉಡುಗೆ, ತೊಡುಗೆಗಳು ವೇದಿಕೆಯ ಶೋಭೆಯನ್ನು ಹೆಚ್ಚಿಸುತ್ತಿತ್ತು.

ಮೊದಲಿಗೆ ಪ್ರದರ್ಶನಗೊಂಡ ನಾಟಕ “ಗಣ-ಗಣ-ರಾಜ್ಯ”ದಲ್ಲಿನ ಪೌರಾಣಿಕ ಹಾಗೂ ಸಾಮಾಜಿಕತೆಯ ತಾಳೆ ಹಾಕುವುದು, “ನಮ್ಮ ನೆಲ-ಜೀವಜಲ “ನಾಟಕದ ಜ್ವಲಂತ ಪರಿಸ್ಥಿತಿಯ ಸಾಮಾಜಿಕ ತೊಂದರೆಗಳು ರಾಜಕೀಯದಲ್ಲಿ ತಳುಕು ಹಾಕಿಕೊಂಡಿರುವುದು, “ಹಗ್ಗದ ಕೊನೆ” ನಾಟಕದಲ್ಲಿ ಅಪರಾಧ ಒಬ್ಬ ಮಾಡಿದರೆ ಕುಟುಂಬಕ್ಕೆ ಶಿಕ್ಷೆ ಒದಗುತ್ತದೆ ಎಂಬ ಸಾಮಾಜಿಕ ಕಾಳಜಿ, “ಕಿತ್ತೂರಿನ ಕಿರಣ” ದಲ್ಲಿನ ರಾಣಿ ಚೆನ್ನಮ್ಮಳ ಸಾಹಸ ವೀರಗಾಥೆ, “ಶೂನ್ಯ” ನಾಟಕದ ಸ್ವಾರಸ್ಯಕರ ಕಥಾಹಂದರ, “ಚಾರಿಟಿಯಾನ್ ಮೈಮ್” ವಿಶಿಷ್ಟವಾದ ನೃತ್ಯ ರೂಪಕ ನಾಟಕ, “ರಾಮೇಶ್ವರಮ್” ನಾಟಕದಲ್ಲಿನ ರಾಮೇಶ್ವರ ಪುಣ್ಯ ಕ್ಷೇತ್ರದ ಸ್ಥಳ ಮಹತ್ವದ ಕಥೆ ಹೀಗೆ ಒಂದಕ್ಕಿಂತ ಒಂದು ಸುಂದರವಾದ ನಾಟಕಗಳು ಪ್ರೇಕ್ಷಕರನ್ನು ಆಕರ್ಷಿಸಿದವು.

ಪ್ರದರ್ಶನಗೊಂಡ ಎಲ್ಲಾ ನಾಟಕಗಳು ವಿಭಿನ್ನ ಶೈಲಿಯಲ್ಲಿ ತಮ್ಮದೇ ಆದ ವೈಶಿಷ್ಟ್ಯತೆಯನ್ನು ಮೆರೆದು ಉದಯೋನ್ಮುಖ ನಟ ನಟಿಯರನ್ನು ಕನ್ನಡಿಗರಿಗೆ ಪರಿಚಯಿಸಿವೆ ಎಂದರೆ ತಪ್ಪಾಗಲಾರದು. ಬಹಳ ಹಿಂದಿನಿಂದಲೂ ದೆಹಲಿ ಕರ್ನಾಟಕ ಸಂಘದಲ್ಲಿ ನಾಟಕಗಳ ಸ್ಪರ್ಧೆಗಳು ಏರ್ಪಡುತ್ತಾ ಬಂದಿದೆ. ಈ ಸ್ಪರ್ಧೆಯಲ್ಲಿ ಭಾಗವಹಿಸುವುದೇ ಒಂದು ಸಡಗರ ಸಂಭ್ರಮದ ಸಂಗತಿ. ದೀಪಾವಳಿ ಹಬ್ಬ ಬರುವ ಮುಂಚೆ ಮನೆಯಲ್ಲಿ ಎಷ್ಟೆಲ್ಲಾ ಸಡಗರ ಸಂಭ್ರಮ ತಯಾರಿ ನಡೆಯುತ್ತದೆಯೋ ಹಾಗೆ ನಮಗೆ ನಾಟಕ ಸ್ಪರ್ಧೆ ಕೂಡ. ಹೆಂಗಳೆಯರು ನಾಟಕವನ್ನು ಅಭ್ಯಾಸ ಮಾಡಲು ಮಧ್ಯಾಹ್ನದ ಮೇಲೆ ನಿಗದಿಪಡಿಸಿ ಮನೆಗೆಲಸ, ಅಡುಗೆಯ ಕೆಲಸವನ್ನು ಬೇಗ ಮುಗಿಸಿ, ಮೊದಲೇ ನಿರ್ಧರಿಸಿದ ಹಾಗೆ ಒಬ್ಬರ ಮನೆಯಲ್ಲಿ ಸೇರಿ ಅಭ್ಯಾಸ ಮಾಡುವುದು, ಅಭ್ಯಾಸದ ವೇಳೆ ತರಲೆ, ತಮಾಷೆ, ರೀಲ್ ಮಾಡುವುದು ವಿಶೇಷ ತಿನಿಸುಗಳನ್ನು ಸವಿಯುವುದನ್ನು ಆನಂದಿಸಿದರೆ, ಗಂಡೈಕಳು ಸಂಜೆ ಕಚೇರಿ ಮುಗಿಸಿ ಬಳಲಿ ಬಂದಿದ್ದರೂ ಸಹ ನಾಟಕ ಅಭ್ಯಾಸ ಮಾಡಿ ದಿನನಿತ್ಯದ ಒತ್ತಡವನ್ನು ಬದಿಗೊತ್ತಿ ಉತ್ಸಾಹ ಉಲ್ಲಾಸದಿಂದ ನಾಟಕ ಅಭ್ಯಾಸ ಮಾಡುತ್ತಿದ್ದರು. ಇಷ್ಟಕ್ಕೆ ನಿಲ್ಲದೆ ನಾಟಕಕ್ಕೆ ಬೇಕಾಗುವ ವೇಷಭೂಷಣಗಳನ್ನು ಹೊಂದಿಸುವುದು, ರಾತ್ರಿಯೆಲ್ಲಾ ಕೊಟ್ಟಿರುವ ಸಂಭಾಷಣೆಗಳನ್ನು ಕಲಿಯುವುದು, ಕೆಲವೊಂದು ನಾಟಕಗಳು ಅದರಲ್ಲಿಯೂ ಶ್ರೀ ರಾಮೇಶ್ವರಮ್ ನಾಟಕ ತಂಡವು ಆನ್‌ಲೈನ್‌ನಲ್ಲಿಯೂ ಬಹಳಷ್ಟು ದಿನ ಅಭ್ಯಾಸ ಮಾಡುತ್ತಿದ್ದರು.

ಈ ಎಲ್ಲಾ ಪ್ರಕ್ರಿಯೆಗಳ ಪ್ರತಿಫಲ ನಮ್ಮೆಲ್ಲರ ಆತ್ಮೀಯತೆ ಒಡನಾಟ ಏಕತಾನತೆಯನ್ನು ವೃದ್ಧಿಸಲು ಕಾರಣವಾಗಿದೆ.

ನಮ್ಮ ನಾಡಿನಲ್ಲಿ ನಮಗೆ ಅವಕಾಶಗಳು ಒದಗುವುದು ಕಡಿಮೆ, ಆದರೆ ದೆಹಲಿಯಲ್ಲಿ ದೆಹಲಿ ಕರ್ನಾಟಕ ಸಂಘದ ವೇದಿಕೆಯು ನಮ್ಮೆಲ್ಲರನ್ನೂ ಕಾರ್ಯಕ್ರಮದಲ್ಲಿ ಭಾಗವಹಿಸಲು ಹಾಗು ನೇತೃತ್ವ ವಹಿಸಲು ಕೂಡ ಸದಾ ಆಹ್ವಾನಿಸುತ್ತಿರುತ್ತದೆ. ಇದೆಲ್ಲ ನಮಗೆಲ್ಲರಿಗೂ ದೊರೆತಿರುವ ಸೌಭಾಗ್ಯ ಮತ್ತು ಒಂದು ಸುವರ್ಣಾವಕಾಶ. ಹೀಗೆ ನಮ್ಮ ದೆಹಲಿ ಕರ್ನಾಟಕ ಸಂಘವು ಹೆಮ್ಮರವಾಗಿ ಬೆಳೆದು ಪ್ರತಿಯೊಬ್ಬ ಕನ್ನಡಿಗರಿಗೂ ಆಶ್ರಯ ನೀಡುವಂತಾಗಲಿ, ಕಲೆ ಸಂಸ್ಕೃತಿಯ ಸಾಗರವಾಗಿ ಪ್ರಪಂಚದಲ್ಲಿ ಹೆಸರು ವಾಸಿಯಾಗಲಿ, ಸಂಘದ ಅಧ್ಯಕ್ಷರಿಗೆ, ಎಲ್ಲಾ ಪದಾಧಿಕಾರಿಗಳಿಗೂ ಮತ್ತು ನಾಟಕೋತ್ಸವದಲ್ಲಿ ಭಾಗವಹಿಸಿದ ಕಲಾವಿದರಿಗೂ ಹಾಗು ಶ್ರಮಿಸಿದ ಎಲ್ಲಾ ಸದಸ್ಯರಿಗೂ ಅಭಿನಂದನೆಗಳು. ಹೀಗೆ ಕಾರ್ಯಕ್ರಮಗಳು ಜರುಗುತ್ತಿರಲಿ, ಮುಂಬರುವ ಪೀಳಿಗೆಗೆ ಕನ್ನಡದ ಸಾರಸ್ವತ ಲೋಕದ ಹಿರಿಮೆ ಗರಿಮೆ ತಿಳಿಯುತ್ತಿರಲಿ ಎಂದು ಆಶಿಸುತ್ತೇನೆ ಶುಭವಾಗಲಿ. ❑

**ಎಂ.ಎಸ್. ಲಾವಣ್ಯ**

# ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್ ಪ್ರಸ್ತುತ ಪಡಿಸಿದ

## ನಾಟಕ : "ಗಣ-ಗಣ-ರಾಜ್ಯ" ನಿರ್ದೇಶನ ಮತ್ತು ವಿನ್ಯಾಸ : ಶ್ರೀಮತಿ ಮೀತಾ ಮಿಶ್ರ

**ನಾಟಕದ ಕುರಿತು :** ಶ್ರೀ ರಂಗರ ಒಂದು ಸಣ್ಣ ನಾಟಕ 'ಗಣ-ಗಣ-ರಾಜ್ಯ' ಸಾಮಾಜಿಕ-ರಾಜಕೀಯ ಪರಿಸ್ಥಿತಿಯ 'ನಗೆ ಅಣುಕು' ನಾಟಕ ಎಂದರೆ ತಪ್ಪಾಗಲಾರದು. ಸ್ವರ್ಗದಲ್ಲಿರುವ 'ಗಣೇಶ'ನಿಗೆ ಭೂಲೋಕಕ್ಕೆ ಹೋಗುವ ಒಂದು ಸನ್ನಿವೇಶ. 1966 ರಲ್ಲಿ 'ಪ್ರಿಂಟ್' ಆಗಿರುವ ಈ ನಾಟಕ ಭಾರತ ಪ್ರಜಾಪ್ರಭುತ್ವದ ಹೊಸತನವನ್ನು ಅನುಭವಿಸುತ್ತಿದ್ದ ಕಾಲದಲ್ಲಿ ಬರೆದದ್ದು. ಈ ನಾಟಕದಲ್ಲಿ ಗಣೇಶನ ಜೊತೆ ನಾರದರು ಸಹ ಇದ್ದಾರೆ. ಭೂಮಿಯ ಕೆಲವು ನಾಗರಿಕರೊಡನೆ ದೇವ ಲೋಕದವರ ಒಡನಾಟ ಈ ನಾಟಕದ ಸಾರಾಂಶ.

**ನಾಟಕಕಾರರು :** ಶ್ರೀ ರಂಗ ಆದ್ಯ ರಂಗಾಚಾರ್ಯರು (ಶ್ರೀರಂಗ)-ಇವರ ಮೂಲ ಹೆಸರು ಆರ್.ವೀ. ಜಾಗೀರ್‌ದಾರ್. ಕನ್ನಡ ಸಾಹಿತ್ಯ ಲೋಕದ ಪ್ರಸಿದ್ಧ ನಾಟಕಕಾರರು. ಇವರು ನಾಟ್ಯ ಶಾಸ್ತ್ರದಲ್ಲಿ ಪರಿಣಿತಿ ಹೊಂದಿದ್ದ ಮೇಧಾವಿ. ಕೆಲವು ನಾಟಕಗಳನ್ನು ಬರೆಯುವುದರ ಜೊತೆಗೆ ಹಲವಾರು ಕನ್ನಡ ಚಲನಚಿತ್ರಗಳಿಗೆ 'ಲಿರಿಕ್ಸ್'ಗಳನ್ನೂ ಬರೆದಿದ್ದಾರೆ. 1967ರ ಸಂಗೀತ ನಾಟಕ ಅಕಾಡೆಮಿ, ದೆಹಲಿಯ ಫೆಲೋಶಿಪ್ ಇವರಿಗೆ ದೊರಕಿದೆ. 1971ರಲ್ಲಿ ಇವರಿಗೆ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ಮತ್ತು 1972ರಲ್ಲಿ ಪದ್ಮಭೂಷಣ ಪುರಸ್ಕಾರವೂ ಸಿಕ್ಕಿವೆ. ಕರ್ನಾಟಕದ ಹೆಮ್ಮೆ 'ಶ್ರೀರಂಗರು'.

**ಪಾತ್ರ ವರ್ಗ : ನಾರದ : ಶ್ರೀಮತಿ ರಾಧಾ ಕೌಜಲಗಿ, ಗಣೇಶ : ಶ್ರೀಮತಿ ಅಶ್ವಿನಿ ಬಿ.ಎಸ್., ಗಣ ಮತ್ತು ನಾಗರಿಕ : ಸುಜಾತ ನಾಯಕ್, ಮೊದಲನೇ ನಾಗರಿಕ : ಶ್ರೀಮತಿ ಪ್ರತಿಭಾ ಗೌಡ, ಎರಡನೇ ನಾಗರಿಕ : ಶ್ರೀಮತಿ ಶೋಭಾ ಗೌಡ, ಮೂರನೇ ನಾಗರಿಕ : ಶ್ರೀಮತಿ ರಾಜೇಶ್ವರಿ ಎ. ಕಲ್ಲೂರು, ನಾಲ್ಕನೇ ನಾಗರಿಕ: ಶ್ರೀಮತಿ ಸೀಮಾ ಬಿರಾದಾರ.**

**ಪ್ರಸಾದನ : ಶ್ರೀಮತಿ ಅರ್ಚನಾ, ವಸ್ತ್ರವಿನ್ಯಾಸ : ಶ್ರೀಮತಿ ನಾಗವೇಣಿ ಹೆಗಡಿ, ಬೆಳಕು : ಮಾ. ಮೃದುಲ್ ನಾಯರ್, ರಂಗಸಜ್ಜಿಕೆ : ಶ್ರೀಮತಿ ಲಕ್ಷ್ಮೀ ಶ್ರೀನಿವಾಸ, ವಿಶೇಷ ಪರಿಣಾಮ : ಶ್ರೀಮತಿ ಆಶಾ ಕಾರಿಯಪ್ಪ**

**ನಿರ್ದೇಶಕರ ಮಾತು :** ದೆಹಲಿ ಕರ್ನಾಟಕ ಸಂಘದ ನಾಟಕೋತ್ಸವದ ಪುನಃ ಪ್ರಥಮೋ ಪ್ರಯಾಣ, ಉತ್ಕೃಷ್ಟ ಯೋಜನೆ ಹಾಗೂ ಅತ್ಯಾಕರ್ಷಕ ಕಾರ್ಯಕ್ರಮ. ನಾಟಕ ಮತ್ತು ನಟನೆ ಸಮಾಜದ ಮುಖ್ಯ ಸಾಂಸ್ಕೃತಿಕ ವಿಧಾನಗಳಲ್ಲಿ ಸ್ಥಾನ ಪಡೆಯುತ್ತದೆ. ನೃತ್ಯ ಹಾಗೂ ಸಂಗೀತ ಕಾರ್ಯಕ್ರಮಗಳಲ್ಲಿ ಕಲಾವಿದರಿಗೆ 'ಮಾತು' ಅಥವಾ 'ಭಾಷೆ' ಅಥವಾ 'ಶಬ್ಧಗಳನ್ನು ಉಚ್ಚ ಧ್ವನಿಯಲ್ಲಿ ಸರಾಗವಾಗಿ ಓದಿ, ಮತ್ತೆ ಮತ್ತೆ ಪುನರಾವರ್ತನಾ ಪ್ರಕ್ರಿಯೆಯಲ್ಲಿ ಓದುತ್ತಾ ಓದುತ್ತಾ ಮನನ ಮಾಡುವ ಜೊತೆಗೆ ಅಭಿನಯ ಕಲೆಯನ್ನೂ ಸಹ ಜೋಡಿಸುವುದು ಸಾಧಾರಣ ಪ್ರಕ್ರಿಯೆ ಅಲ್ಲವೇ ಅಲ್ಲ! ಯೋಚಿಸಿ ನೋಡಿದಾಗ ನಮ್ಮತನವನ್ನು ಬಿಟ್ಟು ಮತ್ತೊಂದು ವ್ಯಕ್ತಿಯ ಪಾತ್ರವಾಗಿ ಇತರ ಜನರ ಎದುರು ನಿರ್ಭೀತಿಯಿಂದ ವ್ಯವಹರಿಸುವುದು ಕಷ್ಟವೇ ಸರಿ.

ದೆಹಲಿ ಕರ್ನಾಟಕ ಸಂಘದ ನಾಟಕೋತ್ಸವ-ನಾಟಕಗಳ ಪ್ರಸ್ತುತಿ ಜೊತೆ ಜೊತೆಗೆ ಸ್ಪರ್ಧೆಯೂ ಆಗಿತ್ತು. ಸ್ಪರ್ಧಾತ್ಮಕ ಮನೋಭಾವ ತಂಡಗಳಲ್ಲಿ ಹುಮ್ಮಸ್ಸು ಮೂಡಿ ಮತ್ತಷ್ಟು ಚೆನ್ನಾಗಿ ಪ್ರದರ್ಶನಗಳ ತಯಾರಿಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಸಹಾಯ ಮಾಡುತ್ತದೆ. ಆದರೆ ಯಾವುದೇ ಸ್ಪರ್ಧೆಯಾದರೂ ಸಹ ನನ್ನ ವೈಯಕ್ತಿಕ ಯೋಚನೆಯೇನೆಂದರೆ ಎಲ್ಲಾ ತಂಡಗಳಿಗೂ 'Same Parameters' ಅಂದರೆ ಸಮಯಾವಧಿ, ಭಾಗವಹಿಸುವ ಕಲಾವಿದರ ಸಂಖ್ಯೆ-ಇಂತಹ ಕೆಲವು ಮೂಲಭೂತ ವಿಷಯಗಳಲ್ಲಿ ಸಮಾನತೆಯಿರಬೇಕು. ಈ ಟಿಪ್ಪಣಿ ಟೀಕೆಯಲ್ಲ. ಇದು ಕೆಲವು ನನ್ನ ವೈಯಕ್ತಿಕ ಯೋಚನೆಯಷ್ಟೆ. ಅಂತೂ ಈ ಬಾರಿಯ ನಾಟಕೋತ್ಸವ ಸ್ಪರ್ಧಾ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ಮೂಡಿ ಬಂದಿರುವುದು ಸಂಘಕ್ಕೆ ಹೆಮ್ಮೆಯ ವಿಷಯ. ಸ್ಪರ್ಧೆಯ ವಿಜೇತರಿಗೆ ಉತ್ತಮ ಬಹುಮಾನಗಳನ್ನು ಕೊಟ್ಟಿರುವುದು ಅತ್ಯಂತ ಒಳ್ಳೆಯ ವಿಚಾರ. ಈ ಬಾರಿ ಭಾಗವಹಿಸಿದ ಎಲ್ಲಾ ತಂಡಗಳು ಅತ್ಯಂತ ಶ್ರದ್ಧೆಯಿಂದ ತಮ್ಮ ತಮ್ಮ ತಂಡಗಳಿಗೆ ಸೂಕ್ತವೆನಿಸಿದಂತೆ ನಾಟಕಗಳನ್ನು ಉತ್ತಮ ರೀತಿಯಲ್ಲಿ ರಂಗ ಪ್ರಯೋಗವಾಗಿ ಪ್ರಸ್ತುತಪಡಿಸಿದ್ದಾರೆ.

ನಾನೂ ಸಹ ಸಂಘದ ಆಜೀವ ಸದಸ್ಯೆ, 'ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್'ನಿಂದ ನಾಟಕವೊಂದನ್ನು ನಿರ್ದೇಶಿಸಲು ಆಹ್ವಾನ ಬಂದಾಗ ನನಗೆ ಅತ್ಯಂತ ಸಂತೋಷವಾಯಿತು. ಸ್ನೇಹಾ ಲೇಡೀಸ್ ಅಸೋಸಿಯೇಷನ್ ತಂಡ 40ಕ್ಕೂ ಹೆಚ್ಚು ವರ್ಷಗಳಿಂದ ಘನತೆಯಿಂದ ಮಹಿಳೆಯರ ತಂಡವಾಗಿ ದೆಹಲಿಯಲ್ಲಿ ಸ್ಥಾಪಿತವಾಗಿದೆ. ಶ್ರೀಮತಿ ರಾಧಾ ಕೌಜಲಗಿಯವರು ನನ್ನನ್ನು ಸಂಪರ್ಕಿಸಿ ಮೊದಲು ಈ ವಿಷಯದ ಬಗ್ಗೆ ಸೂಚಿಸಿದರು. ಶ್ರೀಮತಿ ಆಶಾ ಕಾರಿಯಪ್ಪ, ಶ್ರೀಮತಿ ಅಶ್ವಿನಿ ಬಿ.ಎಸ್., ಶ್ರೀಮತಿ ಪ್ರತಿಭಾ ಗೌಡ, ಶ್ರೀಮತಿ ಶೋಭಾ ಗೌಡ, ಶ್ರೀಮತಿ ರಾಜೇಶ್ವರಿ ಕಲ್ಲೂರು, ಶ್ರೀಮತಿ ಸೀಮಾ ಬಿರಾದಾರ್, ಶ್ರೀಮತಿ ಸುಜಾತ ನಾಯಕ್-ಇವರೆಲ್ಲರೂ ಸಹ ರಂಗದ ಮೇಲೆ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಸಿದ್ದರಾದರು. ಜೊತೆಗೆ 'Backstage' ಕಾರ್ಯಗಳಲ್ಲಿ ಸ್ನೇಹಾ ಲೇಡೀಸ್ ಕ್ಲಬ್‌ನ ಸದಸ್ಯರು ಬಹಳ ಹುಮ್ಮಸ್ಸಿನಿಂದ ತಮ್ಮ ಸಹಯೋಗವನ್ನು ನೀಡಿದರು.

ಮಹಿಳೆಯರ ಈ ತಂಡದಲ್ಲಿ ತಮ್ಮ ಕಚೇರಿಯ ಹಾಗೂ ಪರಿವಾರದ ಕಾರ್ಯಗಳ ಜೊತೆಯಲ್ಲಿ ಆದಷ್ಟೂ ಸಮಯವನ್ನು ಪಣತೊಟ್ಟು ನಾಟಕಕ್ಕೆ ಸಮರ್ಪಿಸಿದರು. ಈ ತಂಡದ ಎಲ್ಲರಿಗೂ ನನ್ನ ನಮನಗಳು. ನಾನೂ ಸಹ ನನ್ನ ಕಚೇರಿ ಹಾಗೂ ವ್ಯಕ್ತಿಗತ ಕಾರ್ಯಗಳೊಟ್ಟಿಗೆ ನಾಟಕದ ಪ್ರಕ್ರಿಯೆಯನ್ನೂ ಮುಂದು ಮಾಡಿದೆ. ಪ್ರಶ್ನೆ ಬಂದಿದ್ದು ಯಾವ ನಾಟಕವನ್ನು ಮಾಡೋಣ? ಒಬ್ಬ ನಿರ್ದೇಶಕಿಯಾಗಿ ನಾನು ಸಾಮಾನ್ಯವಾಗಿ ತಂಡದ ಸದಸ್ಯರಿಂದ ಸಾಧ್ಯವಾಗಬಹುದಾದ ನಾಟಕವನ್ನೇ ಆರಿಸಿಕೊಳ್ಳುವುದು. ಮೊದಲಿಗೆ ನಾನೇ ಒಂದು ಸ್ಕ್ರಿಪ್ಟ್ ಬರೆಯುವುದಾಗಿ ಯೋಚಿಸಿದೆ. ನಂತರ ಹುಡುಕುತ್ತಾ ಹುಡುಕುತ್ತಾ 'ಶ್ರೀ ರಂಗ' ನಾಮಧೇಯ ಆದ್ಯ ರಂಗಾಚಾರ್ಯರ 'ಗಣ ಗಣ ರಾಜ್ಯ' ನಾಟಕಕ್ಕೆ ತಂಡದ ಒಪ್ಪಿಗೆಯಿಂದ ನಮ್ಮ ಪ್ರಯಾಣ ಮುನ್ನಡೆಯಿತು. ಆದ್ಯ ರಂಗಾಚಾರ್ಯರ ಹೆಸರು ಆರ್.ವೀ. ಜಾಗೀರ್‌ದಾರ್ 26.09.1904-17.10.1984 ಇವರ ಕಾಲಾವಧಿ. 1966 ರಲ್ಲಿ ಈ 'ಗಣ-ಗಣ-ರಾಜ್ಯ' ಕಿರುನಾಟಕ ಒಂದು ಕಿರು ಹೊತ್ತಗೆಯಲ್ಲಿ ಪ್ರಕಟವಾಯಿತು. ಶ್ರೀ ಗಣೇಶ ಸ್ವರ್ಗದಲ್ಲಿ ನಾರದ ಮುನಿಯರೊಂದಿಗೆ ಮಾತನಾಡಿ ಭೂಲೋಕದಲ್ಲಿ ಮನುಷ್ಯರ ಮಧ್ಯದಲ್ಲಿ ಏನು ನಡೆಯುತ್ತಿದೆ ಅನ್ನುವ ವಿಚಾರ-ವಿನಿಮಯದ ನಂತರ ಭೂಲೋಕಕ್ಕೆ ತಮ್ಮ ಸೊಂಡಿಲು ಹಾಗೂ ಕಿವಿಗಳನ್ನು ಸ್ವರ್ಗದಲ್ಲಿಯೇ ಬಿಟ್ಟು-ಕೆಳಗಿಳಿದು ಅವತರಿಸುತ್ತಾರೆ. 3-4 ನಾಗರಿಕರೊಂದಿಗೆ ಶ್ರೀ ಗಣೇಶನ ವ್ಯವಹಾರವೇ ಈ ನಾಟಕದ ತಿರುಳು. ಸಮಾಜದಲ್ಲಿ ರಾಜಕೀಯ-ಸಾಮಾಜಿಕ ಹಾಗೂ setting ನಡೆಸುವ ಪರಿಸ್ಥಿತಿಯಲ್ಲಿ ಶ್ರೀ ಗಣೇಶ ಪ್ರವೇಶಿಸುತ್ತಾನೆ. ಈ ಕಾಮಿಡಿ ಕಿರು ನಾಟಕಕ್ಕೆ ಇಡೀ ಸ್ನೇಹಾ ಲೇಡೀಸ್ ಅಸೋಸಿಯೇಷನ್ ತಂಡದ ಕಲಾವಿದರು ತಮ್ಮ ಶ್ರದ್ಧೆಯಿಂದ ಅತ್ಯುನ್ನತವಾಗಿ ಪಾತ್ರಗಳನ್ನು ನಿರ್ವಹಿಸಿದರು.

ನಾರದರ ಪಾತ್ರದಲ್ಲಿ ಶ್ರೀಮತಿ ರಾಧಾ ಕೌಜಲಗಿ, ಗಣೇಶನ ಪಾತ್ರದಲ್ಲಿ ಶ್ರೀಮತಿ ಅಶ್ವಿನಿ ಬಿ.ಎಸ್., ಅತ್ಯುತ್ತಮ ನಟಿಯರಾಗಿ ಮೂಡಿ ಬಂದರು. ಶ್ರೀಮತಿ ರಾಜೇಶ್ವರಿ ಎ. ಕಲ್ಲೂರು. ಹಿರಿಯ ನಟಿ ಅದ್ಭುತವಾಗಿ ಉತ್ತರ ಕರ್ನಾಟಕದ ಕನ್ನಡದ ಸೊಗಡಿನ ಕನ್ನಡ ಭಾಷೆಯೊಡನೆ ಜನರ ಮನದಲ್ಲಿ ಸ್ಥಾನ ಪಡೆದರು. ಶ್ರೀಮತಿ ಶೋಭಾ ಗೌಡ ಮತ್ತು ಶ್ರೀಮತಿ ಪ್ರತಿಭಾ ಗೌಡ ಅವರ ಜೋಡಿಯೂ ಆಕರ್ಷಕವಾಗಿ ಸಂವಾದಗಳನ್ನು ಮೂಡಿಸಿದರು. ಇವರಿಬ್ಬರೂ ಸಹ ಪ್ರತಿಭಾವಂತ ನವ ಅಭಿನೇತ್ರಿಯರು. ಇನ್ನು ಶ್ರೀಮತಿ ಸುಜಾತಾ ನಾಯಕ್ ಅವರು ಎರಡು supporting characters ಗಳಲ್ಲಿ ಮಿಂಚಿದರು. ಒಂದೇ ಒಂದು ವಾಕ್ಯವಿದ್ದರೂ ಸಹ ನಿತ್ಯ ರಿಹರ್ಸಲ್‌ಗೆ ಶ್ರದ್ಧೆಯಿಂದ ಬಂದು ಕುತೂಹಲದಿಂದ ಭಾಗವಹಿಸಿದರು. ಮತ್ತೊಂದು ಅತ್ಯುತ್ತಮ ಮಾತೇನೂ ಅಂತಂದ್ರೆ 7 ಅಭಿನೇತ್ರಿಯರೂ ಸಹ ಗಂಡಸಿನ ಪಾತ್ರದಲ್ಲಿದ್ದು, Make up ಸಹ ಗಂಡಸರದ್ದೇ!. ನೋಡಲು ಸಹಜ-ಸಾಧಾರಣ ನಾಟಕವಾದರೂ ಸಹ, ಕಷ್ಟ ಸಾಧ್ಯವೇ ಇತ್ತು. ಎಲ್ಲಕ್ಕಿಂತ ಹೆಚ್ಚಾಗಿ ಇಡೀ ತಂಡ ಮೊದಲನೆಯ ಕ್ಷಣದಿಂದಲೇ ನಾವು competition / ಸ್ಪರ್ಧೆಗಾಗಿ ನಾಟಕ ಮಾಡುವುದಕ್ಕಿಂತ ಒಂದು ಒಳ್ಳೆಯ ನಾಟಕದ ಪ್ರದರ್ಶನಕ್ಕೆ ಮುಂದೆ ಸಾಗೋಣ ಎನ್ನುವ ತಂಡದ ನಿರ್ಧಾರ. ಸಲಾಂ ಸ್ನೇಹಾ ಲೇಡೀಸ್ ಕ್ಲಬ್ ಸದಸ್ಯೆಯರಿಗೆ. ಮತ್ತೊಂದು ವಿಷಯ ಹಿರಿಯ ನುರಿತ ನಟಿ ಶ್ರೀಮತಿ ರಾಧಾ ಕೌಜಲಗಿಯವರ ಜನುಮದಿನದಂದೇ 'ಗಣ-ಗಣ-ರಾಜ್ಯ' ನಾಟಕದ ಪ್ರದರ್ಶನ ಹಾಗೂ ನಾಟಕೋತ್ಸವದ ಮೊದಲ ನಾಟಕ. ಹ್ಯಾಟ್ಸ್ ಆಫ್-ದೆಹಲಿ ಕರ್ನಾಟಕ ಸಂಘಕ್ಕೆ ಜಯವಾಗಲಿ. ಇನ್ನು ಮುಂದಕ್ಕೆ ಹೀಗೆ ಹಲವಾರು ವಾರ್ಷಿಕ ನಾಟಕೋತ್ಸವ ಹಾಗೂ ಸ್ಪರ್ಧೆಗಳನ್ನು ಸಂಘವು ಹಮ್ಮಿಕೊಳ್ಳಲಿ. ಎಲ್ಲರಿಗೂ ಶುಭಾಶಯಗಳು. ❑

**ಮೀತಾ ಮಿಶ್ರ**
(ನಿರ್ದೇಶಕಿ)

## ‘ಗಣ-ಗಣ-ರಾಜ್ಯ’ ನಾಟಕದ ಆಯ್ದ ದೃಶ್ಯಗಳು





## 'ಗಣ-ಗಣ-ರಾಜ್ಯ' ನಾಟಕದ ಮುಖ್ಯ ದೃಶ್ಯಗಳು







**ನಾಟಕ ನಿರ್ದೇಶಕರಾದ ಶ್ರೀಮತಿ ಮೀತಾ ಮಿಶ್ರ ಅವರಿಂದ ಪಾತ್ರಧಾರಿಗಳ ಪರಿಚಯ ಮತ್ತು ಸಮೂಹ ದೃಶ್ಯ**

# ನಾಡಪ್ರಭು ಕೆಂಪೇಗೌಡ ಫೌಂಡೇಷನ್‌ನ 'ರಂಗ ತರಂಗ' ತಂಡದಿಂದ ಪ್ರಸ್ತುತಿಗೊಂಡ ನಾಟಕ : 'ನಮ್ಮ ನೆಲ–ಜೀವ ಜಲ' ರಚನೆ ಮತ್ತು ನಿರ್ದೇಶನ : ಶ್ರೀ ನಮೂಶ್ರೀರಾಮ್

**ನಾಟಕದ ಕುರಿತು : ನಾಡಪ್ರಭು ಕೆಂಪೇಗೌಡ ಫೌಂಡೇಷನ್‌ನ ಸಾಂಸ್ಕೃತಿಕ ವಿಭಾಗವಾದ 'ರಂಗ ತರಂಗ' ತಂಡದಿಂದ ಪ್ರಸ್ತುತಪಡಿಸಿದ ನಾಟಕ 'ನಮ್ಮ ನೆಲ–ಜೀವ ಜಲ' ಕರ್ನಾಟಕದ ಹಳ್ಳಿಯಲ್ಲಿ ನಡೆದ ಪ್ರಸಂಗವನ್ನು ನಮ್ಮ ಮುಂದಿಡುತ್ತದೆ. ಈ ಕಲ್ಪನಾ ಪ್ರಸಂಗವನ್ನು ಚಿಕ್ಕ ತಿರುವುಗಳ ಮೂಲಕ ಒಂಭತ್ತು ದೃಶ್ಯಗಳ ನಾಟಕದಲ್ಲಿ ತಿಳಿಹಾಸ್ಯದೊಂದಿಗೆ ಸ್ವರಚನೆಯ ಮೂಲಕ ಪ್ರಸ್ತುತಪಡಿಸಿದ್ದಾರೆ ನಾಟಕದ ಸೂತ್ರಧಾರರಾದ ನಮೂಶ್ರೀ. ಮುಖ್ಯ ಭೂಮಿಕೆಯಲ್ಲಿ ಕಾಳೇಗೌಡರು, ಜಿಲ್ಲಾಧಿಕಾರಿಗಳು, ಯಲ್ಲಣ್ಣ, ಕಪ್ಪಣ್ಣ, ಕೆಂಚ, ಕಮಲಿ, ಭೈರವಿ ಮತ್ತಿತರ ಹಳ್ಳಿಯವರ ಅಭಿನಯ ಹಾಗು ಮುಖ್ಯವಾಗಿ ದೇವರಾಯ, ಸೀನಣ್ಣ ಮತ್ತು ಶಾಸಕರ ಪಾತ್ರಗಳು ನಾಟಕವನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ.**

**ಪಾತ್ರಧಾರಿಗಳಾಗಿ :** ಕಾಳೇಗೌಡ : ವಸಂತ ಕುಮಾರ್, ಚೌಡಮ್ಮ: ಶ್ರೀಮತಿ ಶೋಭ ನಾಗರಾಜ, ಜಿಲ್ಲಾಧಿಕಾರಿ: ಶ್ರೀಮತಿ ರೂಪಶ್ರೀ, ದೇವರಾಯ : ವೆಂಕಟೇಶ ಹೆಚ್., ಯಲ್ಲಣ್ಣ : ಯಲ್ಲಾಲಿಂಗ ಕೊಪ್ಪದ, ಕಪ್ಪಣ್ಣ : ಅರುಣ್ ಸಿ.ಎಸ್., ಸೀನಣ್ಣ : ಶ್ರೀನಿವಾಸಯ್ಯ, ಕೆಂಚ : ಪುನೀತ್ ಗೌಡ, ಕಮಲಿ : ಶ್ರೀಮತಿ ಡಾ. ಲಿಖಿತಾಶ್ರೀ ಕೊಪ್ಪದ, ಭೈರವಿ : ಶ್ರೀಮತಿ ಶಿಲ್ಪಾ ಪುರುಷೋತ್ತಮ, ಶಾಸಕರು : ಕೆ.ಶ್ರೀನಿವಾಸ ಮೂರ್ತಿ, ಸೂತ್ರಧಾರ : ನಮೂಶ್ರೀ

**ಹಳ್ಳಿ ಪಾತ್ರಧಾರಿಗಳು :** ಶ್ರೀಮತಿ ಪಾರ್ವತಿ ಉಭಾಳೆ, ಶ್ರೀಮತಿ ಶೋಭ ತೇಲಿ, ಶ್ರೀಮತಿ ಛಾಯಾ, ಕುಮಾರಿ ಲವಿಕಾ ಎಸ್., ಕುಮಾರಿ ನಂದಿತ, ಕುಮಾರಿ ಹರ್ಷಿತ, ಕುಮಾರಿ ರಜನಿ

**ತಂತ್ರಜ್ಞರಾಗಿ :** ಪ್ರಸಾದನ : ಶ್ರೀಮತಿ ಶೋಭ ನಾಗರಾಜ, ವಸ್ತ್ರ ವಿನ್ಯಾಸ : ಶ್ರೀಮತಿ ರೂಪಶ್ರೀ, ಬೆಳಕು : ಯಲ್ಲಾಲಿಂಗ ಕೊಪ್ಪದ, ರಂಗಸಜ್ಜಿಕೆ : ಅರುಣ್ ಸಿ.ಎಸ್., ವಿಶೇಷ ಪರಿಣಾಮ : ವಸಂತ ಕುಮಾರ್. ರಚನೆ ಮತ್ತು ನಿರ್ದೇಶನ : ಶ್ರೀ ನಮೂಶ್ರೀರಾಮ್

**ನಿರ್ದೇಶಕರ ಮಾತು :** ಕೆಂಪೇಗೌಡರ ಕಾಲದಿಂದ ಬೆಂಗಳೂರು ಕೆರೆಗಳ ನಗರವಾಗಿತ್ತು, ಹಳ್ಳಿಗಳು ಕೃಷಿಗಾಗಿ ಸ್ವಾವಲಂಬಿಗಳಾಗಿದ್ದವು. ಕಾಲಕ್ರಮೇಣ ಯಥೇಚ್ಛವಾಗಿದ್ದ ನೀರು ಈಗ ಕಡಿಮೆಯಾಗಿ ಜೀವ ಜಲಕ್ಕೆ ತತ್ವಾರವಾಗುತ್ತಿದೆ. ಕುಡಿಯಲು ಮತ್ತು ಕೃಷಿಗಾಗಿ ನೀರು ಅಗತ್ಯ ಜೀವ ಜಲ, ಸರ್ಕಾರಗಳು ಜನರಿಗೆ ನೀರಿನ ಕೊರತೆ ಎದುರಿಸದಂತೆ ಅನೇಕ ಯೋಜನೆಗಳನ್ನು ಹಾಕಿಕೊಡುತ್ತದೆ. ಆದರೆ ಮಧ್ಯವರ್ತಿಗಳು ಹೇಗೆ ಆ ಯೋಜನೆಗಳ ಹಳ್ಳ ಹಿಡಿಸುತ್ತಾರೆ ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಇಂತಹ ಸಮಸ್ಯೆಗಳಿಗೆ ಪರಿಹಾರ ಇಲ್ಲವೇ ಎಂಬುದು ಜನರ ಅಹವಾಲು. ಈ ಕ್ಲಿಷ್ಟ ಸಮಸ್ಯೆಯನ್ನು ಪರಿಹಾರದೊಂದಿಗೆ ನಾಟಕದ ವಸ್ತುವಾಗಿಸುವುದು ಸೃಜನಶೀಲತೆಯ ಸವಾಲು. ಆದರೆ ಅದನ್ನು ನಾಟಕವನ್ನಾಗಿಸಿ ಪ್ರೇಕ್ಷಕರ ಮನ ಗೆಲ್ಲುವಂತೆ ರೂಪಿಸುವುದು ಲೇಖಕ–ನಿರ್ದೇಶಕನ ಕಮಾಲು. ಅಂತಹ ಒಂದು ಕಲ್ಪನಾ ಪ್ರಸಂಗವನ್ನು ನಿಜಘಟನೆಯಂತೆ ರೂಪಿಸಿ ಪರಿಹಾರವನ್ನು ತೋರಿಸಿದ್ದು ನಮ್ಮ ನೆಲ–ಜೀವ ಜಲ ನಾಟಕ. ಇಡೀ ಪ್ರಸಂಗವನ್ನು ಕಥೆಯಂತೆ ಓದದೇ ಪಾತ್ರಧಾರಿಗಳ ಸಂಭಾಷಣೆಯ ಮೂಲಕ ಕಟ್ಟಿಕೊಟ್ಟದ್ದು ನಾಟಕ ಎನ್ನುವ ಮೂಲ ತತ್ವವನ್ನು ಎತ್ತಿ ಹಿಡಿಯಿತು. ಸಮಯ ಕಳೆವ ಗಿಮಿಕ್‌ಗಳನ್ನು ಮಾಡದೆ ಚುರುಕಾದ ಸಂಭಾಷಣೆಯಿಂದ ದೃಶ್ಯದಿಂದ ದೃಶ್ಯಕ್ಕೆ ಮುಂದೇನು ಎನ್ನುವ ಕುತೂಹಲ ಕೆರಳಿಸಿದ್ದು ಪ್ರೇಕ್ಷಕರ ಗಮನ ಸೆಳೆಯಿತು. ಭ್ರಷ್ಟಾಚಾರದ ಕಥೆಗಳು ನಾಟಕ ಆಗುವಾಗ ಅತಿ ಉದ್ದ ತತ್ವಗಳ ಹೇಳುವ ಸಂಭಾಷಣೆಯ ಪ್ರಯೋಗ ಸಹಜ. ಆದರೆ ಈ ನಾಟಕದಲ್ಲಿ ಚುಟುಕಾದ, ಸ್ಫುಟವಾದ ತಿಳಿ ಹಾಸ್ಯದ ಸಂಭಾಷಣೆ ಹೊಸತನ ತೋರಿಸಿತು. ಪ್ರತಿ ಪಾತ್ರವೂ ತನ್ನ ಇತಿ ಮಿತಿಯಲ್ಲಿ ಕಥೆಗೆ ಪೂರಕವಾಗಿ ಅಭಿನಯಿಸಿದ್ದು ನಾಟಕದ ಯಶಸ್ಸಿಗೆ ಮತ್ತೊಂದು ಕಾರಣ.

ಈ ಕಲ್ಪನಾ ಪ್ರಸಂಗವನ್ನು ಚಿಕ್ಕ ತಿರುವುಗಳ ಮೂಲಕ ಒಂಭತ್ತು ದೃಶ್ಯಗಳ ನಾಟಕದಲ್ಲಿ ತಿಳಿಹಾಸ್ಯದೊಂದಿಗೆ ಸ್ವರಚನೆಯ ಮೂಲಕ ಪ್ರಸ್ತುತಪಡಿಸಿದ ನಮೂಶ್ರೀ ನಾಟಕದ ಸೂತ್ರಧಾರರಾಗಿಯೂ ಪ್ರೇಕ್ಷಕರ ಗಮನ ಸೆಳೆದರು. ನಾಟಕದ ಎಲ್ಲಾ ವಿಭಾಗಗಳಲ್ಲಿ ಕೆಲಸ ಮಾಡಿದರೂ ಎಲ್ಲರಿಗೂ ಸ್ವಾತಂತ್ರ್ಯ ನೀಡುತ್ತ ಅವರ ನೈಜ ಅಭಿನಯವನ್ನು ನಿರ್ದೇಶಕ ಹೊರತಂದಿದ್ದು ನಾಟಕದ ಯಶಸ್ಸಿನ ಇನ್ನೊಂದು ಅಂಶ. ಕಾಳೇಗೌಡರ ಊರಿನ ಹಿತಚಿಂತನೆ, ಜಿಲ್ಲಾಧಿಕಾರಿಗಳ ಕಠಿಣ ನಿರ್ಧಾರಗಳ ಜೊತೆ ಚೌಡಮ್ಮನ ದಿಟ್ಟತನ ನಾಟಕಕ್ಕೆ ಅನೀರಿಕ್ಷಿತ ತಿರುವನ್ನು ನೀಡುತ್ತದೆ. ಚೌಡಮ್ಮನ ಸಮಯೋಚಿತ ಆಲೋಚನೆಗಳಿಗೆ ಯಲ್ಲಣ್ಣ, ಕಪ್ಪಣ್ಣ, ಕೆಂಚ, ಕಮಲಿ, ಭೈರವಿ, ಮತ್ತಿತರ ಹಳ್ಳಿಯವರು ಸೂಕ್ತವಾಗಿ ಸ್ಪಂದಿಸಿ ಹಳ್ಳಿಗೆ ಕುಡಿಯುವ ನೀರಿನ ಯೋಜನೆಯನ್ನು ಸಾಕಾರಗೊಳಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಾರೆ. ಮಧ್ಯವರ್ತಿ ದೇವರಾಯನ ಪಾತ್ರದಲ್ಲಿ ವೆಂಕಟೇಶ್ ನುರಿತ ಕಲಾವಿದನಂತೆ ಅಭಿನಯಿಸಿದ್ದು ಗಮನಾರ್ಹ ಅಂಶ. ಮೊದಲಿನಿಂದ ಕೊನೆಯವರೆಗೆ ನಾಟಕದಲ್ಲಿ ಕಾಣುವ ಚೌಡಮ್ಮ ಅಷ್ಟುದ್ದ ಸಂಭಾಷಣೆಯನ್ನು ಎಲ್ಲಿಯೂ ತಪ್ಪಿಲ್ಲದೆ ಮನಮುಟ್ಟುವ ಅಭಿನಯದೊಂದಿಗೆ ಹೇಳಿದ್ದು ವಿಶೇಷವಾಗಿತ್ತು. ಜಿಲ್ಲಾಧಿಕಾರಿ ಪಾತ್ರಧಾರಿ ಕೊನೆಯ ದೃಶ್ಯದಲ್ಲಿ ಬಂದರೂ ತನ್ನ ನೈಜಾಭಿನಯದಿಂದ ತಮ್ಮೂರಿಗೂ ಇಂತಹ ಅಧಿಕಾರಿ ಬೇಕೆನ್ನುವಷ್ಟರ ಮಟ್ಟಿಗೆ ಪ್ರೇಕ್ಷಕರ ಗಮನ ಸೆಳೆದರು. ಮೊದಲ ಬಾರಿ ಅಭಿನಯಿಸಲು ರಂಗ ಪ್ರವೇಶ ಮಾಡಿದ ಕಾಳೇಗೌಡ ಓರ್ವ ಆದರ್ಶ ಗೌಡನಾಗಿದ್ದು ಸೊಗಸಾಗಿತ್ತು. ಕಿವುಡುತನದ ಕಪ್ಪಣ್ಣ ಹಾಗೂ ಯಲ್ಲಣ್ಣನ ಸಾಂಧರ್ಭಿಕ ಹಾಸ್ಯದಿಂದ ಅನಾವರಣಗೊಳ್ಳುವ ನಾಟಕ ಅವರಿಬ್ಬರ ಸಹಜಾಭಿನಯದಿಂದ ಇಡೀ ದೃಶ್ಯ ಪ್ರೇಕ್ಷಕರನ್ನು ನಗೆಗಡಲಲ್ಲಿ ಮುಳುಗಿಸಿತು. ಸೀನಣ್ಣ ಮತ್ತು ಶಾಸಕರ ಪಾತ್ರಗಳು ನಾಟಕವನ್ನು ಮತ್ತಷ್ಟು ಗಟ್ಟಿಗೊಳಿಸಿತು. ಶಾಸಕರ ಪ್ರಥಮ ದೃಶ್ಯದಲ್ಲಿ ಅವರ ಮುಖಭಾವವನ್ನು ಮರೆಮಾಚಿ ಪ್ರೇಕ್ಷಕರಿಗೆ ಪಾತ್ರಧಾರಿ ಯಾರು ಎನ್ನುವ ಕುತೂಹಲ ಮೂಡಿಸಿದ್ದು ವಿಶಿಷ್ಟ ಶೈಲಿಯಿಂದ ಗಮನ ಸೆಳೆವ ಅಂಶವಾಗಿತ್ತು. ಹಳ್ಳಿ ಹುಡುಗಿಯಾಗಿ ಕಮಲಿ, ಹಳ್ಳಿ ಹುಡುಗನಾಗಿ ಕೆಂಚ ತಿಳಿಹಾಸ್ಯದ ಛೇಡಿಸುವ ಸಂಭಾಷಣೆ ನಾಟಕದ ಹೊಸತನ ತೋರುತ್ತಿತ್ತು. ಭೈರವಿ ಹಾಗೂ ಇತರ ಹಳ್ಳಿ ಪಾತ್ರಧಾರಿಗಳು, ಅವರ ಮಕ್ಕಳ ನೈಜ ಎನ್ನುವ ಅಭಿನಯ ನೀಡಿದ್ದು ನಾಟಕ ಯಶಸ್ಸಿಗೆ ಬಲ. ಸ್ಪರ್ಧೆಯಲ್ಲಿ ಮೂರನೇಯ ಬಹುಮಾನ ಪಡೆದ ಈ ನಾಟಕ ಅತ್ಯುತ್ತಮ ರಂಗಸಜ್ಜಿಕೆಗೆ ಸಹಾ ಬಹುಮಾನ ಗಳಿಸಿತು. ಈ ನಾಟಕದಲ್ಲಿ ಕಿವುಡು ಕಪ್ಪಣ್ಣನಾಗಿ ಅಭಿನಯಿಸಿದ ಅರುಣ್ ಸಿ.ಎಸ್. ಅತ್ಯುತ್ತಮ ನಟ, ಹಾಗೂ ಚೌಡಮ್ಮನಾಗಿ ಅಭಿನಯಿಸಿದ ಶ್ರೀಮತಿ ಶೋಭ ನಾಗರಾಜ ಅತ್ಯುತ್ತಮ ನಟಿಯಾಗಿ ಆಯ್ಕೆಯಾದರು.

ಒಟ್ಟಿನಲ್ಲಿ ಪಾತ್ರಧಾರಿಗಳಿಗೆ ನಾಟಕದ ಬಗ್ಗೆ ಇದ್ದ ಮನಸ್ಸು, ಸಾಂಘಿಕವಾಗಿ ಮಾಡಿದ ಪೂರ್ವ ತಯಾರಿಯ ತಪಸ್ಸು ಇದರ ಫಲವೇ ನಮ್ಮ ನೆಲ ಜೀವ ಜಲ ನಾಟಕದ ಯಶಸ್ಸು. ❑

**ನಮೂಶ್ರೀರಾಮ್**
(ನಿರ್ದೇಶಕರು)



## 'ನಮ್ಮ ನೆಲ-ಜೀವ ಜಲ' ನಾಟಕದ ಆಯ್ದ ದೃಶ್ಯಗಳು





## 'ನಮ್ಮ ನೆಲ-ಜೀವ ಜಲ' ನಾಟಕದ ಆಯ್ದ ದೃಶ್ಯಗಳು





## ‘ನಮ್ಮ ನೆಲ-ಜೀವ ಜಲ’ ನಾಟಕದ ಆಯ್ದ ದೃಶ್ಯಗಳು





**ಪಾತ್ರಧಾರಿಗಳ ಪರಿಚಯ ಮತ್ತು ಸಮೂಹ ಛಾಯಾಚಿತ್ರ**

# ಡೆಲ್ಲಿ ಫ್ರೆಂಡ್ಸ್ ರಂಗ ತಂಡ ಪ್ರಸ್ತುತ ಪಡಿಸಿದ ನಾಟಕ 'ಹಗ್ಗದ ಕೊನೆ'

### ನಾಟಕದ ಕುರಿತು :

ಹೊರ ಸಮಾಜದ ಒಂದು ಪ್ರತಿಬಿಂಬವನ್ನು ರಂಗ ಮೇಲೆ ಕಾಣುವ ಪ್ರಯತ್ನದಲ್ಲಿ ಹಲವು ರಂಗ ತಂಡಗಳು ತಮ್ಮದೇ ಆದ ವೈವಿಧ್ಯತೆಗಳೊಂದಿಗೆ ಈ ಸಮಾಜಕ್ಕೆ ಅಗತ್ಯವಾದ ಮನುಜ ಸಂಬಂಧಗಳ ಸೂಕ್ಷ್ಮತೆಗಳನ್ನು ಬಿಂಬಿಸುವುದೇ ಹೊಸ ಚಿಂತನೆಗಳ ಅನ್ವೇಷಣೆಗೆ ಎಡೆಮಾಡಿಕೊಡುವ ಸಣ್ಣ ಪ್ರಯತ್ನದೊಂದಿಗೆ ಪ್ರೇಕ್ಷಕರ ಮುಂದೆ ಡೆಲ್ಲಿ ಫ್ರೆಂಡ್ಸ್ ರಂಗ ತಂಡದಿಂದ ಪ್ರಸ್ತುತಿಗೊಂಡ 'ಹಗ್ಗದ ಕೊನೆ' ನಾಟಕ.

ಕತ್ತಲೆ ಕೋಣೆಯಲ್ಲಿ ಕಥೆ ಸಾಗುವ ಗಂಭೀರ ಕಥಾವಸ್ತುವಿನ 'ಹಗ್ಗದ ಕೊನೆ' ನಾಟಕವು ರಂಗಭೂಮಿಗೆ ಪರ್ವತವಾಣಿಯವರ ಅನನ್ಯ ಕೊಡುಗೆ. ಗಲ್ಲುಶಿಕ್ಷೆ ಬೇಕೇ ಬೇಡವೇ ಎಂಬ ಬಗ್ಗೆ ಶತಮಾನಗಳಿಂದಲೂ ಚರ್ಚೆ ನಡೆಯುತ್ತಲೇ ಇದೆ. ಮರಣದಂಡನೆ ಎಂದರೆ ಅದೊಂದು ರೀತಿ ವ್ಯವಸ್ಥಿತ ಕೊಲೆ. ಕೊಲೆ ಮಾಡಿರುವ ಅಪರಾಧಿಗೂ ನೇಣುಗಂಭಕ್ಕೆ ದೂಡುತ್ತಿರುವವರಿಗೂ ಏನು ವ್ಯತ್ಯಾಸ? ಎಂಬ ಜಿಜ್ಞಾಸೆಯಲ್ಲಿ ಮರಣದಂಡನೆಗೆ ಒಳಗಾಗಿರುವ ವ್ಯಕ್ತಿ ನಾನು ಮಾಡಿರುವ ಕೊಲೆಗೂ ನೀವು ಮಾಡುತ್ತಿರುವ ಶಿಕ್ಷೆಗೂ ವ್ಯತ್ಯಾಸವೇನು? ಎಂಬ ಪ್ರಶ್ನೆಗಳನ್ನು ಮಾಡುವ ಅಪರಾಧಿ ಜೈಲಿನ ಅಧಿಕಾರಿ ನಡುವೆ ಕತ್ತಲೆ ಕೋಣೆಯಲ್ಲಿ ನಡೆಯುವ ದೀರ್ಘ ಸಂಭಾಷಣೆಯೇ ಈ ನಾಟಕದ ಕಥೆ.

### ರಂಗದ ಮೇಲೆ

ಶ್ರೀ ಎಸ್. ರಮೇಶ
ಶ್ರೀಮತಿ ಮಮತಾ ಜಿಂಧೆ
ಶ್ರೀ ನಾಗರಾಜ್ ಎಂ.
ಶ್ರೀ ಅರವಿಂದ ಬಿಜೈ
ಶ್ರೀ ಎಚ್.ಎಸ್. ತೇಲಿ
ಶ್ರೀ ಮೆಲ್ವಿನ್ ಜಿ. ಲೋಬೊ
ಶ್ರೀ ಬಿ.ಕೆ. ಬಸವರಾಜು
ಮಾ. ಕಾರ್ತಿಕ್ ಆಚಾರ್ಯ
ಮಾ. ಕೀರ್ತನ್ ಪಿ.

### ನೇಪಥ್ಯದಲ್ಲಿ

ರಂಗ ಸಜ್ಜಿಕೆ : ಕು. ರಮ್ಯ ಆರ್.ಎಸ್., ಶ್ರೀ ಕುಮಾರ ಸಿ.
ಬೆಳಕು : ಶ್ರೀ ನಾಗರಾಜ ಭಂಡಾರಿ
ವೇಷಭೂಷಣ : ಶ್ರೀಮತಿ ಮೇಘನಾ ರಮೇಶ್
ಹಿನ್ನೆಲೆ ಸಂಗೀತ : ಶ್ರೀಮತಿ ಸುನಿತಾ ಎನ್.ಜೆ.
ಪ್ರಸಾದನ : ಶ್ರೀ ಮೈಲಾರಪ್ಪ ತಾವರೆಕೆರೆ,
ಸಹಾಯ : ಶ್ರೀ ಪ್ರಶಾಂತ್ ಪಿ.ಟಿ., ಶ್ರೀ ಸಂತೋಷ ಕೆ.ಕೆ.
ನಿರ್ದೇಶನ : ಶ್ರೀ ಮೈಲಾರಪ್ಪ ತಾವರೆಕೆರೆ



**'ಹಗ್ಗದ ಕೊನೆ' ನಾಟಕದ ಪಾತ್ರವರ್ಗ ಮತ್ತು ಸಮೂಹ ದೃಶ್ಯ**

## ‘ಹಗ್ಗದ ಕೊನೆ’ ನಾಟಕದ ಆಯ್ದ ದೃಶ್ಯಗಳು





## ‘ಹಗ್ಗದ ಕೊನೆ’ ನಾಟಕದ ಪ್ರಮುಖ ಪ್ರಸಂಗಗಳು





# ಜನಕಪುರಿ ಮಹಿಳಾ ಮಂಡಳಿ ಪ್ರಸ್ತುತ ಪಡಿಸಿದ ನಾಟಕ : ಕಿತ್ತೂರಿನ ಕಿರಣ
## ರಚನೆ. ಪರಿಕಲ್ಪನೆ ನಿರ್ದೇಶನ : ಶ್ರೀಮತಿ ಸವಿತಾ ಇನಾಮದಾರ್

**ನಿರ್ದೇಶಕರ ಅನಿಸಿಕೆ :** ದೆಹಲಿ ಕರ್ನಾಟಕ ಸಂಘವು ಆಯೋಜಿಸಿದ್ದ, 2025ರ ನಾಟಕೋತ್ಸವ ಸ್ಪರ್ಧೆಯಲ್ಲಿ ಸ್ವಾತಂತ್ರ್ಯದ ಪ್ರಥಮ ಮಹಿಳಾ ಹೋರಾಟಗಾರ್ತಿ, ಕಿತ್ತೂರಿನ ವೀರನಾರಿ, ರಾಣಿ ಚೆನ್ನಮ್ಮನವರ ಶೌರ್ಯ ಮತ್ತು ತ್ಯಾಗದ ಕಥೆಯನ್ನು ಆಧರಿಸಿದ 'ಕಿತ್ತೂರಿನ ಕಿರಣ' ನಾಟಕವನ್ನು ರಚಿಸಿ, ನಿರ್ದೇಶಿಸಿ ಮತ್ತು ವೀರ ರಾಣಿ ಕಿತ್ತೂರು ಚೆನ್ನಮ್ಮನಾಗಿ ಅಭಿನಯಿಸುವ ಸುವರ್ಣ ಅವಕಾಶ ನನಗೆ ಲಭಿಸಿತ್ತು. ಇದನ್ನು 'ಜನಕಪುರಿ ಮಹಿಳಾ ಮಂಡಳಿಯ ಸದಸ್ಯೆಯರ ಸಹಯೋಗದಲ್ಲಿ ದಿನಾಂಕ 18.10.2025 ರಂದು ಪ್ರದರ್ಶಿಸಿದ್ದೆವು.

ಕಿತ್ತೂರಿನ ಕಿರಣ
ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಟ್ಟಿದಂತಹ ಶಕ್ತಿ
ಸ್ವರೂಪಿಣಿಯ ಧೈರ್ಯದ ತೋರಣ.
ಕಿತ್ತೂರಿನ ಕಿರಣ...
ಇತಿಹಾಸ ಸ್ಫೂರ್ತಿಯ ನಾಟಕ
ರಚನೆ, ಪರಿಕಲ್ಪನೆ ಮತ್ತು ನಿರ್ದೇಶನ–
ಶ್ರೀಮತಿ ಸವಿತಾ ಇನಾಮದಾರ್
ಪ್ರಸ್ತುತಿ–ಜನಕಪುರಿ ಮಹಿಳಾ ಮಂಡಳಿ

'ಸ್ವಾತಂತ್ರ್ಯವೇ ಸ್ವರ್ಗ' ಎಂದು ದೃಢವಾಗಿ ನಂಬಿದವಳು ನಮ್ಮ ನಾಡಿನ ವೀರ ರಮಣಿ, ವೀರ ರಾಣಿ ಕಿತ್ತೂರು ಚೆನ್ನಮ್ಮ. ಬ್ರಿಟಿಷ್ ವಸಾಹತು ಶಾಹಿಯ ವಿರುದ್ಧ "ಹೆಣ್ಣು ಅಬಲೆಯಲ್ಲ, ಅಗ್ನಿಕನ್ಯೆ" ಎಂದು ಸಾಬೀತುಪಡಿಸಿ, ಕಿತ್ತೂರಿನ ಮಹಿಳಾ ಸೈನ್ಯ ಪಡೆಗಳನ್ನು ಮುನ್ನಡೆಸಿ, ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ಕಹಳೆಯನ್ನು ಮೊಳಗಿಸಿ, ಕಿಚ್ಚು ಹಚ್ಚಿ, ಕೆಚ್ಚೆದೆಯಿಂದ ಹೋರಾಡಿದ ಮೊಟ್ಟ ಮೊದಲ ಶೂರ–ವೀರ–ಧೀರ ಮಹಿಳೆ ಈಕೆ. ತನ್ನ ಕಿತ್ತೂರನ್ನು ಕಾಪಾಡಲು ಇಂದಿನ ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿ ಪ್ರದೇಶದಲ್ಲಿ ಹೋರಾಟ ನಡೆಸಿದ ಚೆನ್ನಮ್ಮನ ವೀರ ಗಾಥೆಗಳ ಪ್ರತಿಧ್ವನಿ ಇನ್ನೂ ಕಣಕಣದಲ್ಲೂ ಕಾಣಬಹುದು ಮತ್ತು ಓಣಿ ಓಣಿಯೊಳಗೂ ಕೇಳಬಹುದು. ಅದಕ್ಕೇ ಹೇಳ್ತಾರೆ–ಚೆನ್ನಮ್ಮ ಅಂದರೆ–ದೈವಿಕತೆಯ ಹೊಳಪು, ಚೆನ್ನಮ್ಮ ಅಂದರೆ–ಬ್ರಿಟಿಷರ ಮನದಾಳದಲ್ಲಿ ಮೂಡಿದ ಭಯದ ಛಾಪು. ಚೆನ್ನಮ್ಮನ ಹೆಸರು ಕೇಳಿದ್ರ ಸಾಕು, ಎಲ್ಲರ ಮೈಯಲ್ಲೂ ವೀರರಸ ಹರಿದು, ದೇಶಭಕ್ತಿ ಹೊಮ್ಮಿ, ತಂತಮ್ಮ ಹಕ್ಕನ್ನು, ತಂತಮ್ಮ ನಾಡನ್ನು ಕಾಪಾಡಲು ಹೋರಾಡುವ ಹುರುಪು ಮೂಡುತ್ತದೆ. ಇಡೀ ನಾರಿ ಕುಲಕ್ಕೆ ಮಾದರಿಯಾದ, ಮಹಿಳಾ ಸಬಲೀಕರಣದ ರೂವಾರಿಗೆ, ವೀರ ಮಾತೆಯರ ಮುಕುಟಮಣಿಗೆ ನಾವು ಹೃದಯಾಳದಿಂದ ನಮಸ್ಕಾರ ಮಾಡ್ತೀವಿ.

ನಾನು ಸರಿಸುಮಾರು ಎರಡು ದಶಕಗಳಿಂದ ನಮ್ಮ ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ವೇದಿಕೆಯ ಮೇಲೆ ಈಗಾಗಲೇ ಅನೇಕ ವಿಷಯಗಳನ್ನು ಆಧರಿಸಿದಂತಹ 15 ವೈವಿಧ್ಯಮಯ ನಾಟಕಗಳನ್ನು ಅಂದರೆ, ವಿವಿಧ ಸಾಮಾಜಿಕ ಪಿಡುಗುಗಳ ಮೇಲೆ ಕೆಲವು ನಾಟಕಗಳು, ಹಲವು ಹಾಸ್ಯಭರಿತ ನಾಟಕಗಳು, ಹಲವು ನೃತ್ಯ ರೂಪಕಗಳನ್ನು ರಚಿಸಿ, ನಿರ್ದೇಶಿಸಿ, ಅಭಿನಯಿಸುವ ಸುವರ್ಣ ಅವಕಾಶ ಹಾಗೂ ಅನುಭವವನ್ನು ಪಡೆದಿದ್ದೇನೆ. ಇದಕ್ಕಾಗಿ ಸಂಪೂರ್ಣ ಸಹಕಾರ ನೀಡಿದ ನಮ್ಮ ದೆಹಲಿ ಕರ್ನಾಟಕ ಸಂಘದ ಆಗಿನ ಹಾಗೂ ಈಗಿನ ಅಧ್ಯಕ್ಷರಿಗೆ ಮತ್ತು ಎಲ್ಲಾ ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ನಾನು ನಿಜಕ್ಕೂ ಚಿರಋಣಿ.

ಈ ಬಾರಿ ಶ್ರೀ ಸಿ.ಎಂ. ನಾಗರಾಜ ಅವರ ನೇತೃತ್ವದಲ್ಲಿ ದೆಹಲಿ ಕರ್ನಾಟಕ ಸಂಘವು 13 ವರ್ಷಗಳ ನಂತರ ಆಯೋಜಿಸಿದ್ದ ನಾಟಕೋತ್ಸವದಲ್ಲಿ ಪಾಲ್ಗೊಳ್ಳದೇ ಇರಲು ನನ್ನ ಕೆಲವು ವೈಯಕ್ತಿಕ ಸಮಸ್ಯೆಗಳಿದ್ದವು. ಹಾಗಾಗಿ ಈ ಬಾರಿ ನಾನು ಭಾಗವಹಿಸುವುದಿಲ್ಲ ಎಂದು ಹೇಳಿದಾಗ, ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಕರೆ ಮಾಡಿ, "ಮೇಡಂ, ನೀವೇ ಭಾಗವಹಿಸದಿದ್ದರೆ ನಾಟಕೋತ್ಸವ ಹ್ಯಾಗೆ ಆಗೋದು" ಎಂಬ ಅಭಿಮಾನದ ನುಡಿಗಳನ್ನು ಕೇಳಿದಾಗ ಹಾಗೂ ನಮ್ಮ ಮಹಿಳಾ ಮಂಡಳಿಯ ಅಧ್ಯಕ್ಷೆ ಶ್ರೀಮತಿ ನಯನಾ ಮಾನಕಾಪುರೆ ಅವರು, "ನಿಮಗೆ ಸರಿ ಎನಿಸಿದ ವಿಷಯದ ಮೇಲೆ ನಾಟಕ ರಚಿಸಿ, ನಿರ್ದೇಶನ ಮಾಡಿ, ನಿಮ್ಮ ಜೊತೆಗೆ ನಾನಿದ್ದೇನೆ" ಎಂಬ ಭರವಸೆಯ ಮಾತುಗಳು ನನಗೆ ಬೆಳಗಾವಿಯ ಆಸ್ಪತ್ರೆಯ ICU ಮುಂದೆ ತುಂಬಾ ಒತ್ತಡದಲ್ಲಿ ಕುಳಿತಿದ್ದರೂ ಕೂಡ ಆ ನೋವನ್ನು ಮರೆಸಿ, ಹೊಸ ನಾಟಕ ರಚಿಸುವಂತೆ ಪ್ರೇರೇಪಿಸಿದ್ದವು.

ಬೇರೆಯವರು ಬರೆದ ನಾಟಕವನ್ನು ನಿರ್ದೇಶಿಸುವುದು ಸುಲಭ. ಆದರೆ ನನಗೆ ಮೊದಲಿನಿಂದಲೂ ನನ್ನದೇ ಆದ ಆಲೋಚನೆಗಳು ಮತ್ತು ದೃಶ್ಯ ಸಂಯೋಜನೆಗಳನ್ನೊಳಗೊಂಡ ನಾಟಕವನ್ನು ಪ್ರೇಕ್ಷಕರ ಮುಂದೆ ಪ್ರಸ್ತುತ ಪಡಿಸುವ ಹಂಬಲ. ಹಾಗಾಗಿ ಇದು ಈ ಬಾರಿ ಇತಿಹಾಸದ ಪುಟಗಳನ್ನು ತಿರುಗಿಸಿ ನೋಡಲು ಪ್ರೇರೇಪಿಸಿತು. ಬೇರೆಯೇ ವಿಷಯದ ಮೇಲೆ ನಾಟಕ ರಚಿಸುವ ಕನಸು ಈ ನಾಟಕೋತ್ಸವದಲ್ಲಿ 'ಕಿತ್ತೂರಿನ ಕಿರಣ' ನಾಟಕವನ್ನ ರಚಿಸಿ, ನಿರ್ದೇಶಿಸಿ ಅಭಿನಯಿಸಿರುವ ಮೂಲಕ ನನಸಾಯಿತು.

ಇಪ್ಪತ್ತು ದಿನಗಳ ಸತತ ಪ್ರಯತ್ನದಿಂದ ಇನ್ನೂರು ವರ್ಷಗಳ ಐತಿಹಾಸಿಕ ಸನ್ನಿವೇಶಗಳನ್ನೊಳಗೊಂಡ ನಾಟಕದ ರೂಪ ರೇಷೆಯುಳ್ಳ ಹನ್ನೊಂದು ದೃಶ್ಯಗಳನ್ನು ರಚಿಸಿದೆ. ಅಂದರೆ ಈ ನಾಟಕ ಸಂಪೂರ್ಣ ಇತಿಹಾಸವಲ್ಲ. ಸ್ವಲ್ಪ ಜನಪದ ಕಥೆಗಳ ನೆನಪು, ಸ್ವಲ್ಪ ಸಂಶೋಧನೆ, ಮತ್ತು ಲೇಖಕಿಯ ಹೃದಯದ ಕಾವ್ಯ ಸ್ಪರ್ಶದ ಸಂಯೋಜನೆ. ಇದರ ಮುಖ್ಯ ಉದ್ದೇಶ–ಕಿತ್ತೂರಿನ ವೀರ ರಾಣಿ ಚೆನ್ನಮ್ಮನ ಧೈರ್ಯ ಮತ್ತು ತ್ಯಾಗದ ಜ್ವಾಲೆ ನಿಮ್ಮ ಹೃದಯಗಳಲ್ಲಿ ಹೊತ್ತಿ ಉರಿಯಲಿ ಎಂದು!"–ರಾಣಿ ಚೆನ್ನಮ್ಮನ ಪತಿ ಮಲ್ಲಸರ್ಜ ಹಾಗೂ ಪುತ್ರನ ಅಕಾಲಿಕ ಮರಣದ ನಂತರ ರಾಜ್ಯದ ಕೊಳಕು ರಾಜಕೀಯ, ಪಿತೂರಿಗಳ ಒಳಸಂಚು, ಹೀಗೆ ಎಂಥದ್ದೇ ಸಮಯ ಬಂದರೂ ಈ ಹೆಣ್ಣು ಹಿಮ್ಮೆಟ್ಟದೇ ನಾರಿ ಅಬಲೆಯಲ್ಲ ಸಬಲೆ ಅಂತ ತೋರಿಸಿಕೊಟ್ಟ, ವೈರಿಗಳ ವಿರುದ್ಧ ಅಗ್ನಿ ಕನ್ಯೆಯಾಗಿ ಕಿಡಿ ಕಾರಿ, ತಾನು ಕೇವಲ ಈ ರಾಜ್ಯಕ್ಕೆ ರಾಜಮಾತೆ ಅಷ್ಟೇ ಅಲ್ಲ, ರಕ್ಷಾ ಕವಚವೂ ಹೌದು ಎಂದು ಸಾಬೀತು ಪಡಿಸಲು ತನ್ನ ರಾಜ್ಯದ ಏಳಿಗೆಗೆ ಮತ್ತು ಪ್ರಜೆಗಳ ಕುಂದುಕೊರತೆಗಳನ್ನು ನಿವಾರಿಸಲು ಹಗಲಿರುಳೂ ಶ್ರಮಿಸಿದ ಸರ್ವ ಶಕ್ತಿ ಸ್ವರೂಪಿಣಿಗೆ ನಾನು ನತಮಸ್ತಕಳಾಗಿ ನಮಿಸುತ್ತೇನೆ.

ಚೆನ್ನಮ್ಮ ಕಿತ್ತೂರಿನ ರಕ್ಷಕಿ, ಧೈರ್ಯ ಮತ್ತು ಸಂಕಲ್ಪದ ಸಂಕೇತ! ದತ್ತು ಪುತ್ರನಿಗೂ ಹಕ್ಕು ಇದೆ" ಎಂದು ನಂಬಿದ್ದ ಚೆನ್ನಮ್ಮಳಿಗೆ, ಬ್ರಿಟಿಷರು Doctrine

**ಪಾತ್ರ ವರ್ಗ–ಚೆನ್ನಮ್ಮ :** ಶ್ರೀಮತಿ ಸವಿತಾ ಇನಾಮದಾರ್, **ರಾಜಾ ಮಲ್ಲಸರ್ಜಾ ದೇಸಾಯಿ, ವಿಲಿಯಂ ಚಾಪ್ಲಿನ್, ಬ್ರಿಟಿಷ್ ಕಮಿಷನರ್ :** ಶ್ರೀಮತಿ ಮಾಲಿನಿ ಪ್ರಲ್ಹಾದ್, **ತಂದೆ ದೇಸಾಯಿ ಧೂಳೆಪ್ಪ ಗೌಡರು:** ಶ್ರೀಮತಿ ಸವಿತಾ ಭಟ್, **ತಾಯಿ ಪದ್ಮಾವತಿ, ಗೌರಿ, ಭಾಲಾ ಸೇನಾ ನಾಯಕಿ ಈರವ್ವಾ ಭಾಲಾ ಸೇನಾ ನಾಯಕಿ ಈರವ್ವಾ :** ಶ್ರೀಮತಿ ಸವಿತಾ ಭಂಡಾರಕರ್, **ತಂಗಿ ಕಾಶೆವ್ವಾ :** ಶ್ರೀಮತಿ ವಾಣಿಶ್ರೀ ವಿಜಯ್, **ವ್ಯಕ್ತಿ, ಗುರುಗಳು ಮತ್ತು ಮಲ್ಲಪ್ಪ ಶೆಟ್ಟರು :** ಶ್ರೀಮತಿ ರೇಣುಕಾ ಸಾವಕಾರ್, **ರಾಮಕ್ಕಾ–ಗೆಳತಿ:** ಶ್ರೀಮತಿ ನಯನಾ ಮಾನಕಾಪುರೆ, **ಶಿವಬಸಪ್ಪಾ–ಆಪ್ತ ಸಲಹೆಗಾರ :** ಶ್ರೀಮತಿ ಜಯಶ್ರೀ ಬಸವರಾಜ್, **ದೇಸಾಯರ ಆಪ್ತ–ರುದ್ರಪ್ಪ :** ಶ್ರೀಮತಿ ಪುಷ್ಪಲತಾ ಎಮ್, **ಸಂಗೊಳ್ಳಿ ರಾಯಣ್ಣಾ :** ಶ್ರೀಮತಿ ಜಯಶ್ರೀ ಬಸವರಾಜ್, **ಬ್ರಿಟೀಷ್ ಅಧಿಕಾರಿ :** ಶ್ರೀಮತಿ ಪುಷ್ಪಲತಾ, **ನಿಂಗಣ್ಣಾ :** ಶ್ರೀಮತಿ ಸವಿತಾ ಭಟ್, **ಖಡ್ಗದ ದ್ಯಾಮವ್ವಾ :** ಶ್ರೀಮತಿ ವಾಣಿಶ್ರೀ ವಿಜಯ್, **ಸೂತ್ರಧಾರ :** ಶ್ರೀಮತಿ ಸವಿತಾ ಇನಾಮದಾರ್

**ಸಂಗೀತ :** ಶ್ರೀ ಶಿರೀಶ್ ಇನಾಮದಾರ್, **ಬೆಳಕು:** ಕು. ವೈಷ್ಣವಿ ಸಾವಕಾರ್, **ರಂಗಸಜ್ಜಿಕೆ :** ಶ್ರೀ ಸಫಲ್ ಮಾನಕಾಪುರೆ, **ಪ್ರಸಾದನ :** ಶ್ರೀಮತಿ ನಯನಾ ಮಾನಕಾಪುರೆ, **ಸಹಕಾರ:** ಶ್ರೀಮತಿ ವೈಜಯಂತಿ ಗಿರೀಶ್, ನಿರ್ದೇಶನ : ಶ್ರೀಮತಿ ಸವಿತಾ ಇನಾಮದಾರ್.



of Lapse ನೆಪ ಹಿಡಿದು ದತ್ತು ಪುತ್ರನ ಹಕ್ಕು ನಿರಾಕರಿಸಿ, ರಾಜ್ಯವನ್ನೇ ಕಬಳಿಸಲು, ಕಪ್ಪ–ನಜರಾಣಿ ಬೇಡಲು ಮುಂದಾದಾಗ ಚೆನ್ನಮ್ಮ ವಿರೋಧಿಸಿದಳು. ಅವಳ ಈ ವಿರೋಧದ ಹೋರಾಟವೇ ಕಿತ್ತೂರಿನಲ್ಲಿ ಸ್ವಾತಂತ್ರ್ಯದ ಮೊದಲ ಕಿರಣ!

ಈ ನಾಟಕದಲ್ಲಿ ಚೆನ್ನಮ್ಮ ತನ್ನ ಜನರನ್ನು ಉದ್ದೇಶಿಸಿ ಮಾತನಾಡುತ್ತಾ–ನಾವು ಹೋರಾಟ ನಡೆಸುತ್ತಿರುವುದು ನಮ್ಮ ಹೆಮ್ಮೆಯ ನಾಡಿಗಾಗಿ, ನಮ್ಮ ಮುದ್ದು ಮಕ್ಕಳ ಭವಿಷ್ಯಕ್ಕಾಗಿ. ನಾವೆಲ್ಲಾ ಇಡಿಗಾಳಾದರ ಬದುಕತೀವಿ ಬಿಡಿಗಾಳಾದರ ನಾಶ ಆಗ್ತೀವಿ ಎಂಬುದು ಎಷ್ಟು ಅರ್ಥಪೂರ್ಣವಾಗಿದೆ. ಕೇವಲ ಪುರುಷರು ಮಾತ್ರವಲ್ಲ ಪ್ರತಿಯೊಬ್ಬ ಮಹಿಳೆಯನ್ನೂ ಸಶಕ್ತಗೊಳಿಸಲು, ಮುಂಬರುವ ಯುದ್ಧಕ್ಕೆ ಅವರನ್ನೆಲ್ಲಾ ಹ್ಯಾಗೆ ತಯಾರು ಮಾಡಬೇಕೂಂತ ಅವಳೇ ಸ್ವತಃ ಯುದ್ಧ ಕೌಶಲ್ಯದ ತರಬೇತಿ ನೀಡುವ ವ್ಯವಸ್ಥೆಯನ್ನು ಮಾಡಿದ್ದು ಓದುವಾಗ ಅವಳ ಮುಂದಾಲೋಚನೆಯನ್ನು ಕಂಡು ನನ್ನ ಮೈ ರೋಮಾಂಚನಗೊಂಡಿತ್ತು. ಅವಳಂತೆ ನಾನೂ ಕೂಡ ಆಗಬೇಕು ಎಂದು ದೃಢ ನಿಶ್ಚಯ ಮಾಡಿದೆ. ನನ್ನ ಈ ನಾಟಕದ ಪ್ರತಿಯೊಂದು ದೃಶ್ಯದಲ್ಲಿ ಇನ್ನೂರು ವರ್ಷಗಳ ಗತ ಇತಿಹಾಸದ ನೈಜ ಚಿತ್ರಣವನ್ನು ಕಣ್ಮುಂದೆ ಚಿತ್ರಿಸುವಂತೆ ಬಿಂಬಿಸಲು ಪ್ರಯತ್ನಿಸಿದ್ದೇನೆ. ಇದಕ್ಕಾಗಿ 8 ಹಾಡುಗಳನ್ನು ರಚಿಸಿ, ಜಾನಪದ ಶೈಲಿಯಲ್ಲಿ ರಾಗ ಸಂಯೋಜನೆಯನ್ನೂ ಸಹ ಮಾಡಿದ್ದೇನೆ.

ಕಾಕತಿ ದೇಸಾಯರ ವಂಶದಲ್ಲಿ ಜನಿಸಿದ ಹೆಣ್ಣು ಮಗು ಚೆನ್ನಮ್ಮ ನಿಜವಾಗಿಯೂ ಶೌರ್ಯದ ಬೀಜ. ಅಂಬೆಗಾಲಿಡುವ ಕೂಸು ಖಡ್ಗದ ಜೊತೆಗೆ ಆಡಲು ಮತ್ತು ಕುದುರೆ ಹತ್ತಲು ಹಂಬಲಿಸುವುದನ್ನು ನೋಡಿ, ಅವಳ ತಂದೆ ಧೂಳಪ್ಪ ದೇಸಾಯರು ಮತ್ತು ತಾಯಿ ಪದ್ಮಾವತಿಯವರು ತಮ್ಮ ಕಂದಮ್ಮ ದೇಶವಾಳಲೆಂದೇ ಹುಟ್ಟಿದ್ದಾಳೆ ಎಂಬ ನಂಬಿಕೆಯಿಂದ, ಆಕೆಯನ್ನು ಹೆಣ್ಣು ಮಗು ಎಂದು ಯಾವುದೇ ರೀತಿಯ ಬೇಧ ಭಾವ ತೋರದೇ, ಅವಳನ್ನು ಸಕಲ ವಿದ್ಯಾ ಪಾರಂಗತಳಾಗಲು, ಶಸ್ತ್ರಾಸ್ತ್ರಗಳ ಉತ್ತಮ ಪರಿಚಯ ಹಾಗೂ ವಿದ್ಯೆ ಪಡೆಯಲು ತಕ್ಕ ಗುರುಗಳನ್ನು ಗೊತ್ತು ಮಾಡಿ, ಅರವತ್ನಾಲ್ಕು ವಿದ್ಯೆಗಳಲ್ಲಿ ಪಾರಂಗತಳಾಗಲು ಪ್ರೋತ್ಸಾಹ ನೀಡಿ, ಮುಂದೆ ನಾಡಿಗಾಗಿ ಹೋರಾಡಲು ವೀರತೆಯ ಭದ್ರ ಬುನಾದಿಯನ್ನು ನಿರ್ಮಿಸಿದ ದೃಶ್ಯಗಳು ಪ್ರತಿಯೊಬ್ಬ ಪಾಲಕರಿಗೆ ಖಂಡಿತ ಮಾರ್ಗದರ್ಶನ ನೀಡುತ್ತವೆ ಎಂದು ನನ್ನ ನಂಬಿಕೆ. ಪತಿ ಮಲ್ಲಸರ್ಜ ಸಹ ತನ್ನ ಕಿರಿಯ ರಾಣಿ ಚೆನ್ನಮ್ಮನ ಮನದಿಂಗಿತದಂತೆ ತನ್ನ ಜೊತೆಗೆ ಅನೇಕ ಯುದ್ಧಗಳಲ್ಲಿ ಪಾಲ್ಗೊಳ್ಳಲು ಪ್ರೋತ್ಸಾಹ ನೀಡಿದ್ದು ಪುರುಷ ಪ್ರಧಾನ ಸಮಾಜದಲ್ಲಿ ಮಾದರಿಯಾಗಿದೆ.

ಇದೇ ರೀತಿ ನಾಟಕದ ದೃಶ್ಯಗಳಲ್ಲಿ ಆಗಿನ ಕಾಲದಲ್ಲಿ ಬಳಸಲಾಗುತ್ತಿದ್ದ ಭಾಷೆಯ ಪ್ರಯೋಗ ಮಾಡಲೆಂದು ಉತ್ತರ ಕರ್ನಾಟಕದ ಆಡು ಭಾಷೆಯಲ್ಲಿ ಸಂಭಾಷಣೆಯನ್ನು ಬಳಸಿದ್ದೇನೆ. ಈ ನಾಟಕದಲ್ಲಿ ಒಟ್ಟು ಎಂಟು ಹಾಡುಗಳನ್ನು ರಚಿಸಿ, ಜಾನಪದ ಶೈಲಿಯಲ್ಲಿ ರಾಗ ಸಂಯೋಜನೆ ಮಾಡಿದ್ದೇನೆ.

"ಕಿತ್ತೂರಿನ ಕಿರಣ ನಮ್ಮ ದೇಶದ ಆಭರಣ, ವೀರ ರಾಣಿ ಚೆನ್ನಮ್ಮ ನಿನ್ನ ಕರ್ತವ್ಯ ನಿಷ್ಠೆಗೆ ನಾವು ಮಾಡ್ತೇವಿ ನಮನ" ಇದು ನಾಟಕದ ಕೊನೆಯಲ್ಲಿ ವೀರ ರಾಣಿ ಚೆನ್ನಮ್ಮನ ದಿಟ್ಟತನವನ್ನು ಶ್ಲಾಘಿಸುವ ವೀರಗೀತೆ.

ಒಂದು ತಿಂಗಳ ನಿರಂತರ ತರಬೇತಿ ಹಾಗೂ ಶ್ರಮದ ಫಲವಾಗಿ ಜನಕಪುರಿ ಮಹಿಳಾ ಮಂಡಳಿಯ ಸದಸ್ಯೆಯರ ಅದ್ಭುತ ನಟನೆಗೆ ದ್ವಿತೀಯ ಬಹುಮಾನ ಪಡೆಯಲು ಸಾಧ್ಯವಾಯಿತು. ಈ ಮಾತು ನಮ್ಮ ನಾಟಕದ ಕಲಾವಿದೆಯರು ಹೇಳಿದಾಗ ನನ್ನ ಹೃದಯ ತುಂಬಿ ಬಂದಿತ್ತು. ಏಳೂ ನಾಟಕಗಳು ಒಂದಕ್ಕಿಂತ ಒಂದು ಅದ್ಭುತ ವಿಷಯಗಳ ಬಗ್ಗೆ ರಚಿಸಲ್ಪಟ್ಟಿದ್ದು ಸುಂದರವಾಗಿ ಪ್ರದರ್ಶನಗೊಂಡಿವೆ.

ನಾನು ವೀರ ರಾಣಿ ಕಿತ್ತೂರು ಚೆನ್ನಮ್ಮನ ಪಾತ್ರದಲ್ಲಿ ಖಡ್ಗ ಹಿಡಿದು, ಕುದುರೆ ಸವಾರಿ ಮಾಡುತ್ತಾ ಬ್ರಿಟಿಷರ ವಿರುದ್ಧ ಹೋರಾಡಲೆಂದು ಯುದ್ಧದ ಕ್ಷೇತ್ರದಲ್ಲಿ ರಣಚಂಡಿಯಂತೆ ಕಾದಾಡುವ ದೃಶ್ಯದಲ್ಲಿ ಅಭಿನಯಿಸುತ್ತಿದ್ದಾಗ, ನಾನೇ ಆ ವೀರ ರಾಣಿ ಕಿತ್ತೂರು ಚೆನ್ನಮ್ಮ ಎಂದೇ ಭಾವಿಸುತ್ತಾ, ಅವಳಂತೆ ಹಿಡಿದ ಕೆಲಸವನ್ನು ಶ್ರದ್ಧೆಯಿಂದ ಮಾಡಲು, ಜ್ವರದ ತಾಪದಲ್ಲೂ ನಿರ್ದೇಶಕಿಯ ಜವಾಬ್ದಾರಿಯನ್ನು ನಿರ್ವಹಿಸುವಂತೆ ಪ್ರೇರಣೆ ಪಡೆದುಕೊಂಡದ್ದು ನನ್ನ ಭಾಗ್ಯವೇ ಸರಿ.

ಬಹುಮಾನಗಳು : 1. 'ಕಿತ್ತೂರಿನ ಕಿರಣ' ನಾಟಕಕ್ಕೆ ದ್ವಿತೀಯ ಬಹುಮಾನ ದೊರೆತಿದೆ. 2. ಅತ್ಯುತ್ತಮ ಅಭಿನೇತ್ರಿ–ಶ್ರೀಮತಿ ಸವಿತಾ ಇನಾಮದಾರ್. 3. ಅತ್ಯುತ್ತಮ ನಿರ್ದೇಶಕಿ–(ಮಹಿಳೆ)–ಶ್ರೀಮತಿ ಸವಿತಾ ಇನಾಮದಾರ್ ದಿ. ಶ್ರೀಮತಿ ಜಮುನಾ ಸಿ. ಮಠದ ಅವರ ಸ್ಮರಣಾರ್ಥ ಈ ಬಹುಮಾನವನ್ನು ಅವರ ಪತಿ ಶ್ರೀ ಚೆನ್ನು ಎಸ್. ಮಠದ ಅವರು ಘೋಷಿಸಿದ್ದರು.

ಈ ಬಾರಿ ಎರಡು ನಾಟಕಗಳ ನಿರ್ದೇಶನವನ್ನು ಮಹಿಳಾ ನಿರ್ದೇಶಕಿಯರು ಮಾಡಿದ್ದರು. ಅತ್ಯುತ್ತಮ ನಿರ್ದೇಶಕಿಯ ಬಹುಮಾನವನ್ನು ನನ್ನ 'ಕಿತ್ತೂರಿನ ಕಿರಣ' ನಿರ್ದೇಶನಕ್ಕೆ ಆಯ್ಕೆ ಆಗಿದ್ದು ಕೇಳಿ ನನಗೆ ಇನ್ನೂ ಹೊಸ ಹೊಸ ನಾಟಕ ರಚಿಸುವಂತೆ ಪ್ರೇರೇಪಿಸಿದ್ದವು. 4. ಅತ್ಯುತ್ತಮ ನಟ (ಮಹಿಳೆ)– ಶ್ರೀಮತಿ ಮಾಲಿನಿ ಪ್ರಹ್ಲಾದ್, ವಿಲಿಯಂ ಚಾಪ್ಲಿನ್ ಪಾತ್ರಕ್ಕೆ. ನಾನೇ ರಚಿಸಿ, ನಿರ್ದೇಶಿಸಿದ ನಾಲ್ಕೈದು ನಾಟಕಗಳಲ್ಲಿ ಇವರು ಪುರುಷನ ಪಾತ್ರವನ್ನು ಚೆನ್ನಾಗಿ ಅಭಿನಯಿಸಿದ ಅನುಭವವಿದೆ.

ಈ ನಾಟಕದಲ್ಲಿ ಬೇಕಾಗುವ ಐತಿಹಾಸಿಕ ಪರಿಕರಗಳನ್ನು ನನಗೆ ಬೇಕಾದ ವಿನ್ಯಾಸಗಳಲ್ಲಿ ತಯಾರಿಸಿದ ಶ್ರೀ ಸಫಲ್ ಮಾನಕಾಪುರೆ ಅವರಿಗೆ ಹಾಗೂ ಹಿನ್ನೆಲೆ ಸಂಗೀತಕ್ಕೆ ಸಹಾಯ ಮಾಡಿದ ಶ್ರೀ ಶಿರೀಶ್ ಇನಾಮದಾರ್ ಅವರಿಗೆ ಮನದಾಳದಿಂದ ಧನ್ಯವಾದಗಳು. ನಾಟಕದಲ್ಲಿ ಅಭಿನಯಿಸಿ, ನಾಟಕಕ್ಕೆ ಜೀವ ತುಂಬಿದ ನನ್ನ ಪ್ರೀತಿಯ ಸಖಿಯರಿಗೆಲ್ಲ ಆತ್ಮೀಯ ಅಪ್ಪುಗೆ. ರಾಣಿ ಚೆನ್ನಮ್ಮನವರ ಗಾಥೆಯನ್ನು ಸಂಭ್ರಮಿಸುತ್ತ ನಮ್ಮ ನಾಟಕವನ್ನು ವೀಕ್ಷಿಸಿ, ನಮ್ಮೊಂದಿಗೆ ಈ ಸ್ಮರಣೀಯ ಕ್ಷಣದಲ್ಲಿ ಭಾಗವಹಿಸಿ ಹಾಗೂ ನಮಗೆ ಪ್ರೋತ್ಸಾಹಿಸಿದ ಪ್ರೇಕ್ಷಕರ ವೃಂದಕ್ಕೆ ಮತ್ತು ಸ್ನೇಹಿತರಿಗೆ ಹೃತ್ಪೂರ್ವಕ ಧನ್ಯವಾದಗಳು. ❑

ಚೆನ್ನಮ್ಮ ಸತ್ತರೂ
ಚೆನ್ನಮ್ಮನ ಅಸ್ತಿತ್ವ ಶಾಶ್ವತ.
ಹರಹರ ಮಹಾದೇವಾ.

ಇತಿ ನಿಮ್ಮ
**ಶ್ರೀಮತಿ ಸವಿತಾ ಇನಾಮದಾರ್**
(ನಿರ್ದೇಶಕಿ)



## 'ಕಿತ್ತೂರಿನ ಕಿರಣ' ನಾಟಕದ ಆಯ್ದ ಮುಖ್ಯ ದೃಶ್ಯಗಳು





‘ಕಿತ್ತೂರಿನ ಕಿರಣ’ ನಾಟಕದ ಪ್ರಮುಖ ದೃಶ್ಯ





ಪಾತ್ರವರ್ಗ ಪರಿಚಯ ಮತ್ತು ಸಮೂಹ ದೃಶ್ಯ

## ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘ, ನವದೆಹಲಿ

## ಪ್ರಸ್ತುತ ಪಡಿಸಿದ ನಾಟಕ : ಶೂನ್ಯ (ಅನಂತದ ಆರಂಭ)

## ಪರಿಕಲ್ಪನೆ ಆ್ಯಕ್ಷನ್–ಕಟ್–ರಚನೆ : ಶ್ರೀ ಹರಿಪ್ರಿಯ ಎಸ್.

**ನಿರ್ದೇಶಕರ ಅನಿಸಿಕೆ :** ನಾಟಕಗಳಿಗೆ ಪ್ರಾಚೀನ ಇತಿಹಾಸವಿರುವ ಕುರುಹುಗಳನ್ನು ನಾವು ಕಾಳಿದಾಸನ ಶಾಕುಂತಲೆ ನಾಟಕದಿಂದ ಮತ್ತು ಕನ್ನಡ ನಾಟಕವನ್ನು ಆದಿ ಪಂಪ ನೀಲಾಂಜನೇಯ ಯುದ್ಧವನ್ನು ಬಣ್ಣಿಸುವಾಗ ನಾಟಕ ಎಂಬ ಪದ ಬಳಕೆಗಳಿಂದ ಕಾಣಬಹುದು.

ನಾಟಕಗಳ ಇತಿಹಾಸಕ್ಕೆ ಹೋದರೆ ಪೌರಾಣಿಕ ಕಥೆಗಳಾದ ದಶಾವತಾರ, ಕೃಷ್ಣಲೀಲೆ, ಕುರುಕ್ಷೇತ್ರದಂತಹ ಪೌರಾಣಿಕ ಕಥೆಗಳು ನೃತ್ಯರೂಪ, ಯಕ್ಷಗಾನ ಪ್ರಾಕಾರ, ಬಯಲಾಟ, ದೊಡ್ಡಾಟ ಮತ್ತು ಜನಪದ ನಾಟಕದ ಪ್ರಾಕಾರಗಳಿಗೆ 1000 ವರ್ಷಗಳಷ್ಟು ಇತಿಹಾಸವಿರಬಹುದೆಂಬ ಮಾತಿದೆ.

ಅದೇನೆ ಇರಲಿ, ನಾನು ನಾಟಕದ ಒಂದು ಭಾಗವಾಗಿ ನಾಟಕವನ್ನು ಅನುಭವಿಸಿದ್ದು ದೆಹಲಿ ಕರ್ನಾಟಕ ಸಂಘದ ವೇದಿಕೆಯ ಮೇಲೆ ದಶಕದ ಹಿಂದೆ. ಸಾಹಿತ್ಯ, ನೃತ್ಯ, ಸಂಗೀತ, ಬೆಳಕು, ಹಾಡು, ನಟನೆ, ಪ್ರಸಾದನ ಇನ್ನೂ ಅನೇಕ ಶಾಖೆಗಳು ನಾಟಕದಲ್ಲಿ ಇರುವುದನ್ನು ಕಾಣಬಹುದು. ಒಂದು ಉತ್ತಮ ನಾಟಕ ಪ್ರೇಕ್ಷಕನ ಮನಸ್ಸನ್ನು ತಟ್ಟುವುದನ್ನು ನೋಡಿ ಕೇಳಿ ಅನುಭವ ಪಡೆದಿದ್ದೇನೆ. ಒಂದು ಅನುಭವವನ್ನು ನಾವು ನಾಟಕದಲ್ಲಿ ಪಾತ್ರಗಳಾಗಿ ಚಿತ್ರಿಸಿ ಪ್ರೇಕ್ಷಕರಿಗೆ ಅವರನ್ನೇ ತೋರಿಸುವ ಶಕ್ತಿ ರಂಗಭೂಮಿಗೆ ಇರುವುದಕ್ಕೆ ಅದು ಶಾಶ್ವತವಾಗಿ ಕಾಲದಿಂದ ಕಾಲಕ್ಕೆ ತಂತ್ರಜ್ಞಾನದ ಜೊತೆಗೆ ಇನ್ನಷ್ಟು ಪ್ರಭಾವಿತವಾಗುತ್ತಿದೆ.

ದೆಹಲಿ ಕರ್ನಾಟಕ ಸಂಘದ ವರ್ಷ 2025ರ ನಾಟಕೋತ್ಸವ ಕಾರ್ಯಕ್ರಮ ಅಯೋಜನೆ ಹೊರನಾಡ ಕನ್ನಡ ರಂಗಭೂಮಿಯ ಉತ್ತಮ ಬೆಳವಣಿಗೆ. 7 ವಿಭಿನ್ನ ನಾಟಕಗಳು ಪ್ರದರ್ಶನಗೊಂಡು ಜನಗಳ ಪ್ರೇಕ್ಷಕರ ಮನದಾಳದಲ್ಲಿ ಹಲವು ಪಾತ್ರಗಳು, ದೃಶ್ಯಗಳು ಮನದಾಳಕ್ಕಂತು ಇಳಿದವು. ನಾವು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ತಂಡದ ವತಿಯಿಂದ ಶೂನ್ಯ ನಾಟಕ ತಯಾರಿಸಿ ಪ್ರದರ್ಶನ ಮಾಡಿ ಜನರ ಮೆಚ್ಚುಗೆಯ ಆಶೀರ್ವಾದಕ್ಕೆ ಪಾತ್ರರಾಗಿದ್ದು ನಿಜಕ್ಕೂ ನಮ್ಮ ತಂಡದ ಪ್ರಯತ್ನಕ್ಕೆ ಸಿಕ್ಕ ಪ್ರತಿಫಲ.

'ಶೂನ್ಯ' (ಅನಂತದ ಆರಂಭ) ಎನ್ನುವ ಶೀರ್ಷಿಕೆ ಇಟ್ಟಾಗ ಅದು ಬರೀ ಒಂದು ವಾಕ್ಯದ ಕಥೆಯಾಗಿತ್ತು. ಆ ಎಳೆಯನ್ನು ಎಳೆದು ಪಾತ್ರಗಳನ್ನು ಸೃಷ್ಟಿ ಮಾಡಿ ಸಂಭಾಷಣೆ ಬರೆದು ನಾಟಕದ ರೂಪ ತರುವುದಕ್ಕೆ ಪ್ರೇರೇಪಿಸಿದ್ದು ಕಂಡಿದ್ದು, ಕೇಳಿದ್ದು, ಅನುಭವಕ್ಕೆ ಬಂದದ್ದು ಮತ್ತು ಓದಿದ್ದು. ಆಧುನಿಕ ಮಾನವರ ಜೀವನ ಯಾಂತ್ರಿಕವಾಗಿದೆ. ಸಂಸಾರ ನಿಭಾಯಿಸಲು ದುಡಿಮೆ ಮತ್ತು ಈ ಜಾಲತಾಣದ ಯುಗದಲ್ಲಿ ಗುರಿ ಇಲ್ಲದ ಗುರಿಯನ್ನು ಬೆನ್ನಟ್ಟಿ ದಿನ ದಿನ ಓಡುತ್ತ ಆರಂಭವಾದ ಈ ಜೀವನಕ್ಕೊಂದು ಅಂತ್ಯವಿದೆ ಎಂಬುದನ್ನು ಮರೆತು ಅವಲಂಭನೆಗೆ ಒಗ್ಗಿ ಮಾಯಾಲೋಕದ ಮಾಯೆಯೊಳಗೆ ಸಿಲುಕಿದವನನ್ನು ಹೊರ ತರುವ ಕಥೆಯೇ 'ಶೂನ್ಯ' ನಾಟಕದ ಜೀವಾಳ. ಪ್ರತಿ ದೃಶ್ಯಕ್ಕೂ ಪ್ರೇಕ್ಷಕ ಮಹಾಪ್ರಭುಗಳ ಮನ್ನಣೆ ಸಿಕ್ಕಿದ್ದು ರಂಗಭೂಮಿಯ ಗೆಲುವು ಮತ್ತು ದೆಹಲಿ ಕನ್ನಡಿಗರಿಗಿರುವ ರಂಗಾಸಕ್ತಿಯ ಸೂಚನೆ.

ರಂಗಭೂಮಿ ನಮ್ಮ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಬಿಂಬಿಸುವ ಅತ್ಯುತ್ತಮ ಮಾಧ್ಯಮ. ಅದರಲ್ಲೂ ಹೊರನಾಡಿನಲ್ಲಿ ಇಂತಹ ಚಟುವಟಿಕೆಗಳು ಹೆಚ್ಚಿದಾಗ ಹೊಸ ಪೀಳಿಗೆಯ ಮಕ್ಕಳು ನಮ್ಮ ಸಾಹಿತ್ಯ, ಕಲೆ ಮತ್ತು ಪರಂಪರೆಗೆ ಹತ್ತಿರವಾಗಿ ಆಸಕ್ತರಾಗುತ್ತಾರೆ. ❑

***ಹರಿಪ್ರಿಯ ಎಸ್.***
(ನಿರ್ದೇಶಕರು)

**ನಾಟಕದ ಕುರಿತು :** ಶೂನ್ಯ (ಅನಂತದ ಆರಂಭ) : ಮಾನವ ಸಾಮಾಜಿಕ ಪ್ರಾಣಿ. ಸಂಬಂಧಠಗಳ ಸಂಕೋಲೆ ಮತ್ತು ಆ ಸಂಬಂಧಗಳ ಸರಪಳಿಯಲ್ಲಿ ಸಿಲುಕಿ ಜೀವನದ ಹೋರಾಟ ಮಾಡುತ್ತಾ ಸಾಗುತ್ತಾನೆ. ತನ್ನ ವಿವಿಧ ರೂಪವನ್ನು ಅನುಭವಿಸುತ್ತಾ ಅಂದರೆ ಮಗ / ಮಗಳು, ತಂದೆ/ತಾಯಿ, ಅಧಿಕಾರಿ, ಗೆಳೆಯ / ಗೆಳತಿ, ಗಂಡ / ಹೆಂಡತಿ ಹೀಗೆ ತನ್ನ ವಿವಿಧ ಸ್ಥಾನದ ಜವಾಬ್ದಾರಿಯಲ್ಲಿ ಅವಲಂಬನೆ ಆಧಾರದಲ್ಲಿ ಬದುಕುತ್ತಾ ತನ್ನನ್ನು ತಾನು ಕಂಡುಕೊಳ್ಳುವ ಸಮಯ ಬಂದಾಗ ಅವರ ಕೊನೆ ಘಳಿಗೆ ತಲುಪಿರುತ್ತಾನೆ ಅಥವಾ ಆ ಒಂದು ಪ್ರಯತ್ನ ಮಾಡುವುದೇ ಇಲ್ಲ. ತನ್ನನ್ನು ತಾನು ಕಂಡುಕೊಳ್ಳುವ ಶೂನ್ಯ ಶೋಧವೇ 'ಶೂನ್ಯ'.

**ಕಥೆಗಾರನ ಮನದಾಳ**

ಕೇಳಿದ ಕಥೆ ಮತ್ತು ನಮ್ಮ ನಡುವೆ ನಡೆಯುವ ಘಟನೆಗಳ ಆಧಾರಿತ ಉರುಳಿನ ದೃಶ್ಯಗಳ ಕಥೆಯನ್ನು ನಾಟಕ ರೂಪದಲ್ಲಿ ತರುವ ಒಂದು ಪ್ರಯತ್ನವೇ ಶೂನ್ಯದ ಕಥೆ. ಬದುಕಿನ ಬವಣೆಯಲ್ಲಿ ಪ್ರತಿ ಹೆಜ್ಜೆಯಲ್ಲು ನಾವು ಸವಾಲುಗಳನ್ನು ಎದುರಿಸಬೇಕು. ಇಂದಿನ ಬದುಕು ಯಾಂತ್ರಿಕ. ಆ ಬದುಕಿನ ಓಟದಲ್ಲಿ ನಮ್ಮನ್ನು ನಾವು ಅರಿಯುವಂತಹ ಪ್ರಯತ್ನವಾಗುತ್ತಿದಿಯಾ?

**ತೆರೆಯ ಮೇಲೆ–ಪಾತ್ರವರ್ಗ : ರಾಜವಿಕ್ರಮ :** ಮಹದೇವ ಆರ್., **ಬೇತಾಳ :** ಶಿವಕುಮಾರ್, **ವರ್ಷ :** ಶ್ರೀಮತಿ ಆಶಾಲತಾ ಮಹದೇವ, **ಉಲ್ಲಾಸ್ :** ನವೀನ್ ಕುಮಾರ್ ವಿ., **ಅಮ್ಮ :** ಶ್ರೀಮತಿ ಮಂಜುಳಾ ನಾಗರಾಜ್, **ಮೊಗು :** ಕು. ಅರ್ಷ್, **ಪೋಲಿಸ್ :** ಮಂಜುನಾಥ್ ಎಚ್.ಕೆ., **ಗುರುಸ್ವಾಮಿ :** ಹರಿಪ್ರಿಯ ಎಸ್., **ಶಿಷ್ಯ 1 :** ಸಾಬುದರ್ಗಾ, **ಶಿಷ್ಯ 2 :** ಕು. ಆರುಷ್, **ಶಿಷ್ಯ 3 :** ಕು. ಧನ್ವಿನ್ ಹೆಚ್, **ಶಿಷ್ಯ 4 :** ಮಂಜಪ್ಪ ಕಿತ್ತೂರು

**ತೆರೆಯ ಹಿಂಬದಿ–ತಾಂತ್ರಿಕ ವರ್ಗ–ರಂಗ ಸಜ್ಜಿಕೆ :** ಶ್ರೀಮತಿ ಜ್ಯೋತಿ ಪೊದ್ದಾರ್, **ಸಹಾಯ :** ಮಂಜಪ್ಪ ಕಿತ್ತೂರು, ಹಾಡುಗಳ **ಜೋಡಣೆ ಮತ್ತು ಸಂಗೀತ :** ಗಿರೀಶ್ ಎಸ್., **ವಸ್ತ್ರವಿನ್ಯಾಸ :** ಶ್ರೀಮತಿ ಸುನಂದಾ ಸಾಬುದರ್ಗಾ, **ಬಣ್ಣ–ಸುಣ್ಣ (ಮೇಕಪ್) :** ಶ್ರೀಮತಿ ಪುಷ್ಪ ನವೀನ್, **ಬೆಳಕು :** ಕಾಶೀನಾಥ್ ಬಿರಾದಾರ್, **ನಿರ್ದೇಶನ :** ಹರಿಪ್ರಿಯ ಎಸ್.



## ‘ಶೂನ್ಯ’ ನಾಟಕದ ಆಯ್ದ ದೃಶ್ಯಗಳು





## ‘ಶೂನ್ಯ’ ನಾಟಕದ ಪ್ರಮುಖ ದೃಶ್ಯ





**'ಶೂನ್ಯ' ನಾಟಕದ ಪ್ರಮುಖ ದೃಶ್ಯ**





**ಪಾತ್ರಧಾರಿಗಳ ಪರಿಚಯ ಮತ್ತು ಗ್ರೂಪ್ ಫೋಟೋ**

## ದೆಹಲಿ ತುಳು ಸಿರಿ ಪ್ರಸ್ತುತ ಪಡಿಸಿದ ನಾಟಕ : ಚಾರಿಟಿಯಾನ್ ಮೈಮ್
## ರಚನೆ ಮತ್ತು ನಿರ್ದೇಶನ : ಶ್ರೀ ಪ್ರಕಾಶ್ ಶೆಟ್ಟಿ ಉಳೆಪಾಡಿ

# 'ಚಾರಿಟಿಯಾನ್ ಮೈಮ್' ನಾಟಕಕ್ಕೆ ಐದು ಪ್ರಶಸ್ತಿ: ಪ್ರಾಚೀನ ಕಥೆಗೆ ಆಧುನಿಕ ತಂತ್ರಜ್ಞಾನದ ಸ್ಪರ್ಶ

**ರಂಗದ ಮೇಲೆ :** ಅಕಾಂಕ್ಷಾ ವರ್ಮಾ, ಆರಾಧ್ಯಾ ವರ್ಮಾ, ಚೈತ್ರಾ ತೋಳ್ಪಾಡಿ, ಹಂಸಶ್ರೀ, ಹರ್ಷಿತಾ ಕುಶಾಲಪ್ಪ, ಹಿಮಾಂಶು, ಶ್ರೀಮತಿ ಪೂಜಾ ರಾವ್, ಪ್ರಕಾಶ್ ಶೆಟ್ಟಿ ಉಳೆಪಾಡಿ, ರವಿ ಮೂಡಬಿದಿರೆ, ಸತ್ಯನಾರಾಯಣ ನಾಯಕ್, ಶ್ರೀಮತಿ ಶುಭಾ ದೇವಿಪ್ರಸಾದ್, ಶ್ರೀಮತಿ ಸುಜಾತಾ, ತಿಲಕ್ ರಾಜ್, ವೈಷ್ಣವಿ

**ನೇಪಥ್ಯದಲ್ಲಿ :** ರಂಗ ಸಜ್ಜಿಕೆ : ರವಿ ಮೂಡಬಿದಿರೆ, ಪ್ರಸಾದನ ಮತ್ತು ನೃತ್ಯ ನಿರ್ದೇಶನ : ಹರ್ಷಿತಾ ಕುಶಾಲಪ್ಪ, ವಸ್ತ್ರ ವಿನ್ಯಾಸ : ಶ್ರೀಮತಿ ಸುಜಾತಾ, ಹಿನ್ನೆಲೆ ಸಂಗೀತ : ಶ್ರೀಮತಿ ಶುಭಾ ದೇವಿಪ್ರಸಾದ್ ಮತ್ತು ಶ್ರೀಮತಿ ಪೂಜಾ ರಾವ್, ಬೆಳಕು : ಕಾರ್ತಿಕ್ ರೈ, ಸಹಕಾರ :ಪ್ರಸಾದ್ ನಾಯ್ಕ್ ಮತ್ತು ಮೋಹನ್‌ದಾಸ್, ನಿರ್ದೇಶನ : ಪ್ರಕಾಶ್ ಶೆಟ್ಟಿ ಉಳೆಪಾಡಿ

ರಂಗಭೂಮಿಯಲ್ಲಿ ಇತಿಹಾಸ ಮತ್ತು ಅತ್ಯಾಧುನಿಕ ತಂತ್ರಜ್ಞಾನದ ಅದ್ಭುತ ಸಮ್ಮಿಲನಕ್ಕೆ ದೆಹಲಿ ಸಾಕ್ಷಿಯಾಗಿದೆ. ದೆಹಲಿ ಕರ್ನಾಟಕ ಸಂಘದ ನಾಟಕೋತ್ಸವದಲ್ಲಿ ದೆಹಲಿ ತುಳುಸಿರಿ ತಂಡವು ಪ್ರದರ್ಶಿಸಿದ 'ಚಾರಿಟಿಯಾನ್ ಮೈಮ್' ನಾಟಕವು ಪ್ರಥಮ ಸ್ಥಾನ ಗಳಿಸಿ, ಒಟ್ಟು ಐದು ಪ್ರಶಸ್ತಿಗಳನ್ನು ಬಾಚಿಕೊಂಡಿದೆ. ಈ ಯಶಸ್ಸಿನ ಜೊತೆಗೆ, ನಾಟಕದ ತಾಂತ್ರಿಕ ಶ್ರೀಮಂತಿಕೆ ರಂಗಾಸಕ್ತರ ಗಮನ ಸೆಳೆದಿದೆ.

ಪ್ರಾಚೀನ ತುಳು ಭಾಷೆಯ ದಾಖಲೆ ಮತ್ತು ತಾಂತ್ರಿಕತೆ ನಿರ್ದೇಶಕ ಮತ್ತು ನಾಟಕ ರಚನೆಗಾರ ಶ್ರೀ ಪ್ರಕಾಶ್ ಶೆಟ್ಟಿ ಉಳೆಪಾಡಿ ಅವರ ಸೃಷ್ಟಿಯಾದ ಈ ನಾಟಕ ಸುಮಾರು 2000 ವರ್ಷಗಳಷ್ಟು ಹಳೆಯದಾದ ಗ್ರೀಕ್ ನಾಟಕದ ಅಳಿದುಳಿದ ಪುಟಗಳ ಆಧಾರದಲ್ಲಿ ಕಾಲ್ಪನಿಕವಾಗಿ ಬರೆದ ಕಥೆಯನ್ನು ಹೊಂದಿದೆ.

ಈ ನಾಟಕದ ವಿಶೇಷತೆಯೆಂದರೆ ಮೂಲ ಗ್ರಂಥದಲ್ಲಿ ಭಾರತದ ಪಶ್ಚಿಮ ಕರಾವಳಿ ಪ್ರದೇಶದಲ್ಲಿ ಬಳಕೆಯಲ್ಲಿರುವ ತುಳು ಭಾಷೆಯ ಅತ್ಯಂತ ಪುರಾತನ ಕುರುಹುಗಳು ನಮೂದಾಗಿರುವುದು ಐತಿಹಾಸಿಕವಾಗಿ ಮಹತ್ವದ ವಿಷಯವಾಗಿದೆ.

ಈ ನಾಟಕದ ದೃಶ್ಯ ವಿನ್ಯಾಸ ಮತ್ತು ಪರಿಣಾಮಗಳನ್ನು ಹೆಚ್ಚಿಸಲು ನಿರ್ದೇಶಕರು AI (ಕೃತಕ ಬುದ್ಧಿಮತ್ತೆ) ತಂತ್ರಜ್ಞಾನವನ್ನು ಬಳಸಿಕೊಂಡಿದ್ದು, ಇದು ರಂಗಭೂಮಿಯ ಪ್ರಯೋಗಾತ್ಮಕ ಹಂತದಲ್ಲಿ ಹೊಸ ಹೆಜ್ಜೆಯಾಗಿದೆ. ನಾಟಕದ ಅನುಭವವನ್ನು ಹೆಚ್ಚಿಸಲು ಇತ್ತೀಚಿನ ಡಿಜಿಟಲ್ ಸಂಗೀತವನ್ನು ಬಳಸಲಾಗಿದ್ದು ಹಿನ್ನೆಲೆಯಲ್ಲಿ ಪ್ರೊಜೆಕ್ಟರ್ ಪರದೆಗಳನ್ನು ಬಳಸಿ ವಿಶೇಷ ಪರಿಣಾಮಗಳನ್ನು ಸೃಷ್ಟಿಸಲಾಗಿತ್ತು. ಜೊತೆಗೆ, ವಿಶೇಷ ಬೆಳಕಿನ ವ್ಯವಸ್ಥೆಯು ಪ್ರದರ್ಶನಕ್ಕೆ ಹೆಚ್ಚಿನ ಜೀವ ತುಂಬಿ, ಪ್ರೇಕ್ಷಕರಿಗೆ ಕಣ್ಣಿಗೆ ಹಬ್ಬ ತಂದಿತು.

**ಕಲಾವಿದರು :** ಈ ನಾಟಕವನ್ನು ದೆಹಲಿ ತುಳು ಸಿರಿಯ ಹವ್ಯಾಸಿ ಕಲಾವಿದರಾದ ಅಕಾಂಕ್ಷಾ ವರ್ಮಾ, ಚೈತ್ರಾ ತೋಳ್ಪಾಡಿ, ಹಂಸಶ್ರೀ, ಹರ್ಷಿತಾ ಕುಶಾಲಪ್ಪ, ಹಿಮಾಂಶು, ನಾರಾಯಣ ಬಿ., ಪೂಜಾ ರಾವ್, ಪ್ರಕಾಶ್ ಶೆಟ್ಟಿ ಉಳೆಪಾಡಿ, ರವಿ ಮೂಡಬಿದಿರೆ, ಸತ್ಯನಾರಾಯಣ ನಾಯಕ್, ಶುಭಾ ದೇವಿಪ್ರಸಾದ್, ಸುಜಾತಾ, ತಿಲಕ್ ರಾಜ್, ಹಾಗು ವೈಷ್ಣವಿ. ನೇಪಥ್ಯದಲ್ಲಿ ಬೆಳಕು–ಕಾರ್ತಿಕ್ ರೈ, ತಾಂತ್ರಿಕ ಸಹಕಾರ–ಸುಮಂತ್ ಆಚಾರ್ಯ ಅವರು ನೀಡಿದರು. ಸಂಗೀತ–ಶ್ರೀಮತಿ ಶುಭಾ ದೇವಿಪ್ರಸಾದ್ ಮತ್ತು ಶ್ರೀಮತಿ ಪೂಜಾ ರಾವ್ ಹಾಗು ನೃತ್ಯ ನಿರ್ದೇಶನದಲ್ಲಿ ಹರ್ಷಿತಾ ಕುಶಾಲಪ್ಪ ಅವರು ಸಹಕರಿಸಿದರು.

**ಕಥಾವಸ್ತು :** ತುಳುನಾಡು ಮತ್ತು ಗ್ರೀಕ್ ಮಿಲನ ನಾಟಕದ ಕಥೆಯು ಗ್ರೀಕ್ ಯುವತಿ ಚಾರಿಟಿಯಾನ್ ಸುತ್ತ ಹೆಣೆಯಲ್ಪಟ್ಟಿದೆ. ಅವಳು ತನ್ನ ಸಹೋದರನೊಂದಿಗೆ ಭಾರತದ ಪಶ್ಚಿಮ ಕರಾವಳಿ (ತುಳುನಾಡು) ಪ್ರದೇಶಕ್ಕೆ ಬಂದಾಗ ಆದ ಅನುಭವಗಳು, ಅವಳನ್ನು ಸೆರೆಹಿಡಿದ ಸ್ಥಳೀಯ ರಾಜನ ಆಕರ್ಷಣೆ ಮತ್ತು ಅವಳನ್ನು ರಕ್ಷಿಸಲು ಸಹೋದರ ಮತ್ತು ಆತನ ಗೆಳೆಯ ರಾಜನ ಆಸ್ಥಾನದಲ್ಲಿ ಮಾಡುವ ಹಾಸ್ಯಮಯ ಪ್ರಯತ್ನಗಳು, ಭಾರತೀಯ ಮತ್ತು ಗ್ರೀಕ್ ನೃತ್ಯಗಳ ಜುಗಲ್ಬಂದಿ, ತುಳುನಾಡಿನ ಬುಡಕಟ್ಟು ಜನಾಂಗದಲ್ಲಿನ ಮಹಿಳಾ ಪ್ರಾಬಲ್ಯತೆ ಮುಂತಾದವು ನಾಟಕದ ಮುಖ್ಯ ಆಕರ್ಷಣೆಯಾಗಿದೆ.

ಈ ನಾಟಕವು ಪ್ರಾಚೀನ ಗ್ರೀಸ್ ಮತ್ತು ಭಾರತದ ನಡುವಿನ ವ್ಯಾಪಾರ, ಸಾಂಸ್ಕೃತಿಕ ವಿನಿಮಯ ಮತ್ತು ಕಮರ್ಷಿಯಲ್ ಸಂಬಂಧಗಳೊಂದಿಗೆ ಹೆಣೆದುಕೊಂಡಿದ್ದ ಜಗತ್ತಿನ ಕಥೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಪ್ರಸ್ತುತಪಡಿಸಿದೆ.

(ಆಧಾರ: ಚಾರಿಟಿಯಾನ್ ಮೈಮ್ – ಆನ್ ಇಂಟ್ರೊಡಕ್ಷನ್. ಸುಮಾರು 2000 ವರ್ಷದ ಹಿಂದೆ ಬರೆದ ಈ ಪ್ರಾಚೀನ ಗ್ರೀಕ್ ನಾಟಕದ ಅಳಿದುಳಿದ ಕೆಲವು ಪುಟಗಳು ಮಾತ್ರ ಲಭ್ಯವಿದ್ದು, ಉಳಿದ ಕಥಾಭಾಗವನ್ನು ನಾಟಕ ರಚನೆಗಾರ ಪ್ರಕಾಶ್ ಶೆಟ್ಟಿ ಉಳೆಪಾಡಿ ಅವರು ಕಾಲ್ಪನಿಕವಾಗಿ ನಿರ್ಮಿಸಿದ್ದಾರೆ.)



## ‘ಚಾರಿಟಿಯಾನ್ ಮೈಮ್’ ನಾಟಕದ ಆಯ್ದ ದೃಶ್ಯಗಳು





## ‘ಚಾರಿಟಿಯಾನ್ ಮೈಮ್’ ನಾಟಕದ ಆಯ್ದ ದೃಶ್ಯಗಳು





**'ಚಾರಿಟಿಯಾನ್ ಮೈಮ್' ನಾಟಕದಲ್ಲಿ ನೃತ್ಯ ಪ್ರಸಂಗ**





**ನಾಟಕ ಪಾತ್ರಧಾರಿಗಳ ಪರಿಚಯ ಮತ್ತು ಸಮೂಹ ಛಾಯಾಚಿತ್ರ**

# ಜನಕಪುರಿ ಕನ್ನಡ ಕೂಟ ಪ್ರಸ್ತುತ ಪಡಿಸಿದ ನಾಟಕ : ಶ್ರೀ ರಾಮೇಶ್ವರಮ್

## ನಿರ್ದೇಶನ : ಡಾ. ಎಸ್.ಎಲ್. ಭಂಡಾರಕರ್

**ನಿರ್ದೇಶಕರ ಅನಿಸಿಕೆ :** ಶ್ರೀ ರಾಮೇಶ್ವರಮ್ ನಾಟಕವನ್ನು ಪ್ರಸ್ತುತ ಪಡಿಸಿದ ತಂಡ ನವದೆಹಲಿಯ ಜನಕಪುರಿ ಕನ್ನಡ ಕೂಟ, ನಾಟಕ ಹಾಗೂ ಸಂಭಾಷಣೆ ಬರೆದು ನಿರ್ದೇಶಿಸಿದವರು ಡಾ. ಎಸ್. ಎಲ್. ಭಂಡಾರಕರ್. ಇದೊಂದು ರಾಮಾಯಣದ ಆಯ್ದ ಭಾಗಗಳಿಂದ ವಿಶೇಷವಾಗಿ ತಯಾರಿಸಲ್ಪಟ್ಟ ಅದರಲ್ಲೂ ರಾವಣ ಎಷ್ಟೊಂದು ಮೇಧಾವಿ ಪಂಡಿತನಾಗಿದ್ದ ಹಾಗೂ ಅವನು ವಿಶೇಷವಾಗಿ ಶ್ರೀ ಜಾಂಬವಂತರಂತಹ ಹಿರಿಯರಿಗೆ ನೀಡುತ್ತಿದ್ದ ಗೌರವ ಹಾಗೂ ತನ್ನ ವಿರುದ್ಧ ನಡೆಯುತ್ತಿರುವ ಯುದ್ಧಕ್ಕೆ ಮೊದಲು ಶಿವನ ಪೂಜೆ ಮಾಡಲು ತಾನೇ ಒಪ್ಪಿಗೆ ನೀಡಿ ಶ್ರೀ ರಾಮ ನಡೆಸುತ್ತಿದ್ದ ಶಿವ ಲಿಂಗದ ಪೂಜೆಗೆ ಬಂದು ತನ್ನ ವಿಶಿಷ್ಟ ರೂಪ ತೋರಿದ ಮಹಾನ್ ವ್ಯಕ್ತಿ ಎಂಬುದನ್ನು ನಾಟಕದಲ್ಲಿ ತುಂಬಾ ಸುಂದರವಾಗಿ ತೋರಿಸಿಕೊಟ್ಟರು ಕನ್ನಡ ಕೂಟದ ಸದಸ್ಯೆಯರು ಹಾಗೂ ಸದಸ್ಯರು.

ನಾಟಕದ ಆರಂಭದಲ್ಲಿ ಹನುಮಂತನಾಗಿ ಡಾ. ಭಂಡಾರಕರ್ ಹಾಗೂ ಸೀತಾಮಾತೆಯಾಗಿ ಶ್ರೀಮತಿ ಸವಿತಾ ನೆಲ್ಲಿ, ನಾಟಕವನ್ನು ಮೊದಲನೇ ದೃಶ್ಯದಲ್ಲಿ ಅತ್ಯುತ್ತಮವಾಗಿ ನಟಿಸಿ, ನಾಟಕದ ಪ್ರೇಕ್ಷಕರಲ್ಲಿ ಕುತೂಹಲ ಮೂಡಿಸಿ, ನಾಟಕಕ್ಕೆ ಮೆರುಗು ನೀಡುವಲ್ಲಿ ಯಶಸ್ವಿಯಾದರೆ, ಶ್ರೀಮತಿ ಸವಿತಾ ನೆಲ್ಲಿ ತಮ್ಮ ಮನೋಹರ ಅಭಿನಯದಿಂದ ಇವರೇ ಈ ನಾಟಕದ ಅತ್ಯುತ್ತಮ ನಟಿ ಎಂದು ತಮ್ಮ ಮೊದಲ ದೃಶ್ಯದಲ್ಲಿಯೇ ಪ್ರೇಕ್ಷಕರಿಗೆ ತೋರಿಸಿಕೊಟ್ಟರು. ತದನಂತರ ಶ್ರೀ ಮುಕುಂದ ಮೂರ್ತಿ ಅಂಗದರಾಗಿ, ಡಾ. ಕಿರಣ ಡಂಬಳ್ಕರ ಜಾಂಬವಂತರಾಗಿ ಅವರ ಸಂಭಾಷಣೆಯೊಂದಿಗೆ ಚಾಚು ತಪ್ಪದೆ ಹನುಮಂತನೊಂದಿಗೆ ಸೇರಿ ನಾಟಕದ ಉತ್ಸುಕತೆ ಹೆಚ್ಚಿಸುವಲ್ಲಿ ಉತ್ತಮ ಪಾತ್ರ ನಿರ್ವಹಿಸಿದರು.

ನಂತರದ ದೃಶ್ಯದಲ್ಲಿ ಕನ್ನಡ ಕೂಟದ ಉದಯೋನ್ಮುಖ ಮಕ್ಕಳಾದ ಕುಮಾರ ನಿತಿಲಾಕ್ಷ ಬಸವರಾಜ್ ಹಾಗು ಕುಮಾರ ಅಧೋಕ್ಷಜ ವೆಂಕಟೇಶ ಇಬ್ಬರೂ ವಾನರ ಸೇನೆಯ ದ್ವಾರಪಾಲಕರಾಗಿ ಅತ್ಯುತ್ತಮ ಕನ್ನಡದ ಸಂಭಾಷಣೆಯನ್ನು ಬಹಳ ಸ್ಪಷ್ಟವಾಗಿ ಹೇಳಿ ಅತ್ಯುತ್ತಮ ನಟನೆ ಮಾಡಿ ಎಲ್ಲರ ಪ್ರೀತಿಗೆ ಪಾತ್ರರಾಗಿ ಚಪ್ಪಾಳೆ ಗಿಟ್ಟಿಸಿಕೊಂಡರು. ಅನಂತರ ಸುಗ್ರೀವನ ಪಾತ್ರದಲ್ಲಿ ಡಾ. ಬಸವರಾಜ್ ಮಿಂಚಿ ಉತ್ತಮ ಸಂಭಾಷಣೆಯೊಂದಿಗೆ ತಮ್ಮ ಅಭಿನಯ ಪ್ರಸ್ತುತಿಯಲ್ಲಿ ಯಶಸ್ವಿಯಾದರು. ಶ್ರೀ ರಾಮನಾಗಿ ಶ್ರೀ ಕೃಷ್ಣರಾಜ್ ಹಾಗೂ ಲಕ್ಷ್ಮಣನಾಗಿ ಕುಮಾರ ರಿತ್ವಿಕ ನೆಲ್ಲಿ ಪಾತ್ರಗಳಲ್ಲಿ ಯಶಸ್ವಿಯಾಗುವುದಲ್ಲದೆ ಅವರಿಬ್ಬರು ನಾಟಕದಲ್ಲಿ ನೀಡಿದ ಸಂಭಾಷಣೆಗಳು ವೃತ್ತಿ ರಂಗಕರ್ಮಿಗಳನ್ನು ಮೀರಿಸಿತ್ತು. ಜನ ಅವರನ್ನು ಕಂಡು ಯಾರಪ್ಪಾ ಇವರು ರಾಮ ಹಾಗೂ ಲಕ್ಷ್ಮಣ ಅಪ್ಪಟವಾಗಿ ಸಿನಿಮಾದವರ ಹಾಗೆ ಅವರ ವೇಷಭೂಷಣ ಹಾಗೂ ಮೇಕಪ್ ಆಗಿದೆ ಅಂತ ಕೊಂಡಾಡಿದರು. ನಿಜವಾಗಲು ಶ್ರೀ ಕೃಷ್ಣರಾಜ್ ಹಾಗೂ ಕು.ರಿತ್ವಿಕ್ ನೆಲ್ಲಿ ತಮ್ಮ ಪಾತ್ರಗಳಲ್ಲಿ ಜೀವ ತುಂಬಿದ್ದರು. ಇಲ್ಲಿ ಶ್ರೀರಾಮ ಹಾಗೂ ಹನುಮಂತರ ಮಿಲನದ ಒಂದು ದೃಶ್ಯದಲ್ಲಿ ಹಿಂಬದಿಯಿಂದ ಮಂತ್ರ ಬರುತ್ತಿದ್ದಂತೆ ಜನ ಎದ್ದು ನಿಂತು ಹರುಷದಿಂದ ಚಪ್ಪಾಳೆ ತಟ್ಟಿದ್ದು ಅವಿಸ್ಮರಣೀಯ ದೃಶ್ಯವಾಗಿತ್ತು.

ಇನ್ನು, ಈ ನಾಟಕದ ಮುಖ್ಯ ಪಾತ್ರಧಾರಿ ಶ್ರೀ ಸಂಜೀವ ದೇಶಪಾಂಡೆಯವರು ರಾವಣನಾಗಿ ತಮ್ಮ ವೇಷಭೂಷಣ ಹಾಗು ಮೇಕಪ್‌ನೊಂದಿಗೆ ರಂಗಕ್ಕೆ ತಮ್ಮ ವಿಶಿಷ್ಟ ಕಂಚಿನ ಕಂಠದೊಂದಿಗೆ ನಗುತ್ತ ಪ್ರವೇಶಿಸುತ್ತಿದ್ದಂತೆ ಅಲ್ಲಿ ನೆರೆದಿದ್ದ ಪ್ರೇಕ್ಷಕರು ಹಾಗೂ ಬಹುಶಃ ನಾಟಕದ ತೀರ್ಪುಗಾರರು ಸಹ ಅಲ್ಲಿಯೇ ಅವರು ಈ ನಾಟಕದ ಅತ್ಯುತ್ತಮ ನಟ ಅಂತ ಘೋಷಣೆ ಮಾಡಿಕೊಂಡಿರಬೇಕು. ಶ್ರೀ ಸಂಜೀವ ದೇಶಪಾಂಡೆ ರಾವಣನಾಗಿ ಹಾಗೂ ಶ್ರೀ ಶೇಷಗಿರಿ ನಾಯಕ್ ಮೇಘನಾಥನಾಗಿ ತಮ್ಮ ಸಂಭಾಷಣೆಗಳನ್ನು ಅಚ್ಚು ಕಟ್ಟಾಗಿ ಹೇಳಿದರಷ್ಟೇ ಅಲ್ಲದೆ ಪಾತ್ರಗಳಲ್ಲಿ ವಿಶೇಷತೆ ತುಂಬುವಲ್ಲಿ ಯಶಸ್ವಿಯಾದರು. ಇನ್ನು ಡಾ. ಅಶೋಕ ಈಟಿಯವರು ವಿಭೀಷಣನ ಸೌಮ್ಯವಾದ ಪಾತ್ರಕ್ಕೆ ಸೌಮ್ಯವಾದ ಸಂಭಾಷಣೆ ಹೇಳುತ್ತ ಅತ್ಯುತ್ತಮ ವೇಷಭೂಷಣದಲ್ಲಿ ಮಿಂಚಿದರು.

ಇಲ್ಲಿ ರಾವಣನ ಆಸ್ಥಾನವನ್ನು ತುಂಬಾ ಅಚ್ಚುಕಟ್ಟಾಗಿ ತೆರೆಯಲ್ಲಿ ತೋರಿಸಿಕೊಟ್ಟಂತಹ ಇನ್ನೋರ್ವ ಉದಯೋನ್ಮುಖ ಕನ್ನಡ ಕೂಟದ ಕುವರಿ ನಿತ್ಯಶ್ರೀ ಈಟಿ, ಇವಳು ನಾಟಕದ ಎಲ್ಲ ದೃಶ್ಯಗಳ ಚಿತ್ರಣ, ಸಂಗೀತ ಹಾಗು ತೆರೆಯ ಸೌಂದರ್ಯ ಹೆಚ್ಚಿಸುವಲ್ಲಿ ಮುಖ್ಯ ಪಾತ್ರವಹಿಸಿದಳು. ಜೊತೆಗೆ ನಾಟಕದ ಬೆಳಕಿನ ಸೌಂಧರ್ಯ ಹೆಚ್ಚಿಸುವಲ್ಲಿ ಇನ್ನೊರ್ವ ಉದಯೋನ್ಮುಖ ಪ್ರತಿಭೆ ಕುಮಾರಿ ವೈಷ್ಣವಿ ಬಸವರಾಜ್ ತಮ್ಮ ತಾಯಿ ಶ್ರೀಮತಿ ಎಂ.ಎಸ್. ಲಾವಣ್ಯ ಬಸವರಾಜ್ ಜೊತೆ ಸೇರಿ ಸಹಕರಿಸಿ ನಾಟಕಕ್ಕೆ ಅತ್ಯುತ್ತಮ ಬೆಳಕು ನೀಡುವಲ್ಲಿ ಯಶಸ್ವಿಯಾದರು.

ನಂತರದ ದೃಶ್ಯದಲ್ಲಿ ನಾಟಕದ ಬಹುಮುಖ್ಯ ಕಥಾವಸ್ತುವಾದ ರಾವಣ ನಡೆಸಿಕೊಟ್ಟಂತಹ ಶಿವನ ಪೂಜೆ ಹಾಗೂ ಶ್ರಿ ರಾಮ ಪೂಜೆಗೆ ಕುಳಿತು ನೆರವೇರಿಸುತ್ತಿದ್ದ ಪೂಜೆ ಸಮುದ್ರ ತಟದಲ್ಲಿ ಮರಳಿನಿಂದ ತಯಾರಿಸಿದ ಶಿವಲಿಂಗ ತುಂಬಾ ಚೆನ್ನಾಗಿ ಮೂಡಿಬಂದರೆ, ಶ್ರೀ ಸಂಜೀವ ದೇಶಪಾಂಡೆ ಹಾಗೂ ಅಧೋಕ್ಷಜ ಹೇಳಿದಂತಹ ಮಂತ್ರ ಪಠಣೆ ಪ್ರೇಕ್ಷಕರನ್ನ ಮಂತ್ರ ಮುಗ್ಧರನ್ನಾಗಿ ಮಾಡಿಸುವಲ್ಲಿ ಯಶಸ್ವಿಯಾದರು.

ಶ್ರೀ ರಾಮ ಹಾಗೂ ಮಂಡೋದರಿಯ ಮಧ್ಯೆ ನಡೆದ ಸಂಭಾಷಣೆಯ ದೃಶ್ಯದಲ್ಲಿ ಮಂಡೋದರಿಯಾಗಿ ಡಾ. ರೂಪಶ್ರೀ ಈಟಿಯವರು ಮುಗ್ಧವಾದ ಅಭಿನಯದಿಂದ ಎಲ್ಲರನ್ನು ಮೆಚ್ಚಿಸುವಲ್ಲಿ ಜಯಶಾಲಿಯಾದರು.

ಕೊನೆಯ ದೃಶ್ಯದಲ್ಲಿ ಶ್ರೀರಾಮ ಸ್ಥಾಪಿಸಿ ಪೂಜಿಸಿದ ಶ್ರೀ ರಾಮೇಶ್ವರಮ್ ಶಿವಲಿಂಗದ ಸ್ಥಾಪನೆ ಹಾಗು ಅಲ್ಲಿ ಕಲಾವಿದರೆಲ್ಲ ಸೇರಿ ಪೂಜೆ ನಡೆಸುತ್ತಿದ್ದಂತೆ ಮಂತ್ರಘೋಷ ಕೇಳಿ ಬರುತ್ತಿದ್ದಾಗ, ಶ್ರೀಮತಿ ಪ್ರೇರಣಾ ವೆಂಕಟೇಶ್ ಪಾರ್ವತಿಯಾಗಿ, ಶ್ರೀ ಎಂ.ವಿ. ವೆಂಕಟೇಶ್ ಶಿವನಾಗಿ ನಾಟಕ ನೋಡುವ ಪ್ರೇಕ್ಷಕರಿಗೆ ನಿಜವಾದ ಶಿವ–ಪಾರ್ವತಿಯಾಗಿ ಮಿಂಚಿ ಭಕ್ತರಿಗೆ ಆಶೀರ್ವದಿಸಿ ನಾಟಕದ ಸೊಬಗಿಗೆ ಕಾರಣರಾದರು. ಈ ಒಂದು ದೃಶ್ಯದಲ್ಲಿ ನೆರೆದಿದ್ದ ಪ್ರೇಕ್ಷಕರೆಲ್ಲ ಎದ್ದು ನಿಂತು ಮಂತ್ರ ಪಠಿಸುತ್ತ ಸಭಾಂಗಣದಲ್ಲಿ ತಮ್ಮ ಚಪ್ಪಾಳೆಯೊಂದಿಗೆ ತಮ್ಮ ಪ್ರೀತಿಯನ್ನು ತೋರಿಸಿದ್ದು ನಿಜವಾಗಲೂ ಜನಕಪುರಿ ಕನ್ನಡ ಕೂಟದ ತಂಡವು ಅವರೆಲ್ಲರಿಗೂ ಚಿರಋಣಿಯಾಗಿದೆ. ಪ್ರೇಕ್ಷಕರ ಚಪ್ಪಾಳೆಯ ಸದ್ದು ಈ ನಾಟಕದ ಕೊನೆಯಲ್ಲಿ ಕೇಳಿಯೇ ಬಹುಶಃ ಈ ನಾಟಕದ ನಿರ್ದೇಶಕರಿಗೆ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿ ಬಂದಿರಬಹುದು.

ಈ ಶ್ರೀ ರಾಮೇಶ್ವರಮ್ ನಾಟಕದ ಪ್ರಸಾದನ ವ್ಯವಸ್ಥೆಯನ್ನ ಡಾ. ಅಶೋಕ ಈಟಿ ವಹಿಸಿಕೊಂಡಿದ್ದರು. ನಾಟಕದ ಪ್ರಸಾದನ ಎಷ್ಟೊಂದು ಚೆನ್ನಾಗಿತ್ತು ಎಂದರೆ ನಮ್ಮ ನಾಟಕಕ್ಕೆ ಅತ್ಯುತ್ತಮ ಪ್ರಸಾದನ ಪ್ರಶಸ್ತಿ ಬಂದಿದೆ.

ನಮ್ಮ ನಾಟಕದ ವೇಷಭೂಷಣದ ವ್ಯವಸ್ಥೆಯನ್ನು ವಹಿಸಿಕೊಂಡಿದ್ದವರು ಶ್ರೀಮತಿ ಸುನಿತಾ ಶೇಷಗಿರಿ ನಾಯಕ್. ಈ ನಾಟಕಕ್ಕೆ ಮೆರುಗು ತಂದಿದ್ದೇ ವೇಷಭೂಷಣ ಹಾಗೂ ಪ್ರಸಾದನ. ಈ ಒಂದು ಮಹತ್ತರ ಕಾರ್ಯವನ್ನು ಶ್ರೀಮತಿ ಸುನಿತಾ ನಾಯಕ್ ಹಾಗೂ ಡಾ. ಅಶೋಕ ಈಟಿ ಅವರು ಬಹಳ ಯಶಸ್ವಿಯಾಗಿ ನಿಭಾಯಿಸಿದ್ದಾರೆ. ನಮ್ಮ ನಾಟಕದ ಅತ್ಯುತ್ತಮ ನಟಿ ಸೀತಾ ಮಾತೆಯಾಗಿ ನಟಿಸಿದ ಶ್ರೀಮತಿ ಸವಿತಾ ನೆಲ್ಲಿಯವರ ಅಭಿನಯ. ಅವರ ವೇಷಭೂಷಣ, ಸಂಭಾಷಣೆ ಹಾಗೂ ಸಹ–ರಂಗಕರ್ಮಿಗಳ ಜೊತೆಗೆ ಸೇರಿ ತೋರಿಸಿದ ನಟನೆ ನಾನು ಈಗಾಗಲೇ ಆರಂಭದಲ್ಲಿಯೇ ಹೇಳಿದ ಹಾಗೆ ಬಹಳ ಅದ್ಭುತವಾಗಿತ್ತು.

ಇನ್ನು ನಾಟಕದ ಅತ್ಯುತ್ತಮ ನಟ ರಾವಣನಾಗಿ ನಟಿಸಿದ ಶ್ರೀ ಸಂಜೀವ ದೇಶಪಾಂಡೆಯವರ ಬಗ್ಗೆ ಹೇಳಬೇಕೆಂದರೆ ಅವರು ಜನಕಪುರಿ ಕನ್ನಡ ಕೂಟದಲ್ಲಿ ಸುಮಾರು 25 ವರ್ಷಗಳಿಂದ ನಾಟಕ ಮಾಡುತ್ತಿದ್ದು, ಅನೇಕ ಬಾರಿ ಅತ್ಯುತ್ತಮ ನಟ ಪ್ರಶಸ್ತಿ ಪಡೆದಿದ್ದಾರೆ. ಈ ನಾಟಕದಲ್ಲೂ ಸಹ ರಾವಣನ ಪಾತ್ರದಲ್ಲಿ ಮಿಂಚಿ, ರಾವಣ ಪಂಡಿತನ ಪಾತ್ರ ಅಷ್ಟೇ ಅಲ್ಲದೇ ಅಗಸ್ತ್ಯ ಮುನಿಗಳಾಗಿ ಅವರು ಹೇಳಿದ ಮಂತ್ರ ನಾಟಕ ಪ್ರಿಯರಲ್ಲಿ ಅಚ್ಚರಿ ಮೂಡಿಸಿ ಅತ್ಯುತ್ತಮ ನಟ ಪ್ರಶಸ್ತಿ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ❑

***ಡಾ. ಎಸ್.ಎಲ್. ಭಂಡಾರಕರ್***

(ನಿರ್ದೇಶಕರು)

**ಪಾತ್ರಧಾರಿಗಳಾಗಿ ಅಭಿನಯಿಸಿದವರು :** ಡಾ. ಎಸ್.ಎಲ್. ಭಂಡಾರಕರ್, ಶ್ರೀ ಕೃಷ್ಣರಾಜ್ ಕೆ.ಎನ್., ಶ್ರೀಮತಿ ಸವಿತಾ ನೆಲ್ಲಿ, ಕು. ಋತ್ವಿಕ್ ನೆಲ್ಲಿ, ಶ್ರೀ ಸಂಜೀವ ದೇಶಪಾಂಡೆ, ಡಾ. ಕಿರಣ್ ಡಂಬಳಕರ್, ಡಾ. ಬಸವರಾಜ್, ಡಾ. ಅಶೋಕ ಈಟಿ, ಡಾ. ರೂಪಶ್ರೀ ಈಟಿ, ಶ್ರೀ ಮುಕುಂದ ಮೂರ್ತಿ, ಶ್ರೀ ಶೇಷಗಿರಿ ನಾಯಕ್, ಶ್ರೀ ಎಂ.ವಿ. ವೆಂಕಟೇಶ್, ಶ್ರೀಮತಿ ಪ್ರೇರಣಾ ವೆಂಕಟೇಶ್, ಕು. ಅಧೋಕ್ಷಜ, ಕು. ನಿಟಿಲಾಕ್ಷ, ಕುಮಾರಿ ಅವನಿ ನೆಲ್ಲಿ

**ನಾಟಕ ಕಥೆ, ಸಂಭಾಷಣೆ ಹಾಗು ನಿರ್ದೇಶನ :** ಡಾ. ಎಸ್.ಎಲ್. ಭಂಡಾರಕರ್, **ಪರಿಕಲ್ಪನೆ :** ಶ್ರೀ ಎಂ.ವಿ. ವೆಂಕಟೇಶ್, **ರಂಗ ಸಜ್ಜಿಕೆ ಹಾಗು ಸಂಗೀತ :** ಕುಮಾರಿ ನಿತ್ಯಶ್ರೀ ಈಟಿ, **ಬೆಳಕು :** ಶ್ರೀಮತಿ ಲಾವಣ್ಯ ಬಸವರಾಜ್, **ವೇಷ ಭೂಷಣ :** ಶ್ರೀಮತಿ ಸುನಿತಾ ಶೇಷಗಿರಿ ನಾಯಕ್, **ಪ್ರಸಾದನ :** ಡಾ. ಅಶೋಕ ಈಟಿ

## ‘ಶ್ರೀ ರಾಮೇಶ್ವರಮ್’ ನಾಟಕದ ಪ್ರಮುಖ ಆಯ್ದ ದೃಶ್ಯಗಳು







**‘ಶ್ರೀ ರಾಮೇಶ್ವರಮ್’ ನಾಟಕದ ಪ್ರಮುಖ ಆಯ್ದ ದೃಶ್ಯಗಳು**





**ಶ್ರೀ ರಾಮೇಶ್ವರಮ್ ನಾಟಕದಲ್ಲಿ ಶಿವಲಿಂಗ ಸ್ಥಾಪನೆ ಹಾಗು ಪಂಡಿತ ರಾವಣನಿಂದ ಪೂಜೆಯ ದೃಶ್ಯ**





**ನಾಟಕ ಪಾತ್ರವರ್ಗ ಪರಿಚಯ ಮತ್ತು ಸಮೂಹ ಛಾಯಾಚಿತ್ರ**

# ಏಕಾಂಕ ನಾಟಕ ಸ್ಪರ್ಧೆ

ಕನ್ನಡ ಭಾರತೀ ಸಂಸ್ಥೆಯು ಅಂಕ ಪರದೆಯ ಹಿಂದೆ ಸರಿದಂತೆ ದೆಹಲಿಯಲ್ಲಿ ನಾಟಕಗಳ ಪ್ರದರ್ಶನಗಳು ನಿಂತೇ ಹೋದವೇನೋ ಅನಿಸಿದ ಕಾಲಬಂದಿತ್ತು. ನಾಟಕಗಳ ಬಗ್ಗೆ ಅಷ್ಟೊಂದು ಆಳವಾದ ಜ್ಞಾನವಿಲ್ಲದ ನನಗೆ ಯಕ್ಷಗಾನ ಬಿಟ್ಟರೆ ನಾಟಕಗಳೇ ಪ್ರಿಯವಾದ ವೇದಿಕೆ. ಹಾಗಾಗಿ 1989 ರಲ್ಲಿ ಪಶ್ಚಿಮ ವಿಹಾರದ ಸ್ಥಳೀಯ ಸಂಸ್ಥೆಯಾಗಿದ್ದ ಕನ್ನಡ ಕುಸುಮದ ಜೊತೆ ಸೇರಿ ಒಂದೆರಡು ನಾಟಕಗಳನ್ನು ಪ್ರಾರಂಭಿಸಿ, ಕನ್ನಡ ಚೈತನ್ಯ ಎಂಬ ನಾಟಕ ತಂಡವೊಂದನ್ನು ರಚಿಸಿ, ಟಿ.ಪಿ. ಕೈಲಾಸಂ ಅವರ ಹೋಂ ರೂಲ್, ಚಂಪಾ ಅವರ ಕುಂಟ ಕುಂಟಾ ಕುರವತ್ತಿ, ಗುರುತಿನವರು; ಚಂದ್ರಕಾಂತ ಮಲ್ಯರ ರಫ್ಪು, ನವರಸ ಮುಂತಾದ ನಾಟಕಗಳನ್ನು ಪ್ರಸ್ತುತಪಡಿಸುತ್ತಾ ಬರುವವಲ್ಲಿ ಕರ್ನಾಟಕ ಸಂಘದ ನೆರವನ್ನು ಪಡೆದಿದ್ದ ನೆನಪು ಇನ್ನೂ ಹಸಿರಾಗಿಯೇ ಇದೆ.

ಅಂದಿನ ಅಧ್ಯಕ್ಷರಾಗಿದ್ದ ಶ್ರೀ ಎನ್.ಪಿ. ಭಟ್ಟರು ಹಾಗೂ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಶ್ರೀ ಸಿ.ವಿ. ಗೋಪಿನಾಥರವರ ಕಾರ್ಯಕಾಲದಲ್ಲಿ ಏಕಾಂಕ ನಾಟಕ ಸ್ಪರ್ಧೆ ಆರಂಭವಾಗಿತ್ತು. ಸ್ಥಳಿಯ ಪ್ರತಿಭೆಗಳು ತಿಂಗಳಿಗೊಂದು ನಾಟಕ ಪ್ರಸ್ತುತ ಪಡಿಸಿದರೂ ಅದಕ್ಕೆ ಒಂದು ಸಾವಿರ ರೂಪಾಯಿಗಳ ಸಂಭಾವನೆ ನೀಡುವುದಾಗಿ ಘೋಷಿಸಿದ್ದ ಅಂದಿನ ಅಧ್ಯಕ್ಷ ಶ್ರೀ ಎನ್.ಪಿ. ಭಟ್ಟರ ಮಾತಿನಂತೆ ನಾಟಕ ಪ್ರಸ್ತುತ ಪಡಿಸಲು ಹೊರಟು ಕೈ ಸುಟ್ಟುಕೊಂಡರೂ ದೆಹಲಿಯ ಕನ್ನಡಿಗರು ಮೆಚ್ಚಿದ್ದರು.

ಪ್ರಾಯಶ: 1992ರಲ್ಲಿ ನೇರವಾಗಿ ಪ್ರಧಾನ ಕಾರ್ಯದರ್ಶಿ ಸ್ಥಾನಕ್ಕೆ ಆಯ್ಕೆಯಾಗಲು ಈ ನಾಟಕಗಳೇ ನನಗೆ ಪೂರಕವಾಗಿದ್ದವು. ಸಂಘದಲ್ಲಿ ಕರ್ನಾಟಕದ ಕಲಾವಿದರಿಗೆ ಹೆಚ್ಚಿನ ಖರ್ಚು ಸ್ಥಳೀಯ ಕಲಾವಿದರ ಕಡೆಗಣನೆ ಅಂದು ಸಹ ಇತ್ತು. ಸಂಘದ ಸಾಂಸ್ಕೃತಿಕ ಖರ್ಚಿನ ಶೇಕಡ 50ರಷ್ಟು ಸ್ಥಳೀಯ ಕಲಾವಿದರಿಗೆ ಮೀಸಲಿಡಬೇಕು ಎನ್ನುವ ನಮ್ಮ ಹೋರಾಟಕ್ಕೆ ಕೈ ಜೋಡಿಸಿದ ದಿವಂಗತ ಹೆಚ್.ಎಸ್. ಕುಲಕರ್ಣಿ, ಜಯಪ್ರಕಾಶ್ ಬೆಂಗೇರಿ, ಶ್ರೀ ಹರಿಶ್ಚಂದ್ರ ಬಂಟ್ವಾಳ, ಎಂ.ಎಚ್. ಪೂಜಾರಿ, ಚೆನ್ನು ಎಸ್. ಮಠದ ಮುಂತಾದವರನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಸ್ಥಳೀಯ ಕಲಾವಿದರನ್ನು ಬೆಳಕಿಗೆ ತರುವ ಪ್ರಯತ್ನದಲ್ಲಿ ಸಿಂಹ ಪಾಲು ಶ್ರೀ ಎಚ್.ಎಸ್. ಕುಲಕರ್ಣಿಯವರಿಗೆ ಸಲ್ಲುತ್ತದೆ. ಪ್ರಧಾನ ಕಾರ್ಯದರ್ಶಿಯಾಗಿ ಏಕಾಂಕ ನಾಟಕ ಸ್ಪರ್ಧೆಯನ್ನು ಘೋಷಣೆ ಮಾಡಿ, ನಾನು ಮೊದಲು ಹೋಗುತ್ತಿದ್ದದ್ದು ಶ್ರೀ ಕುಲಕರ್ಣಿ ಅವರ ಮನೆಗೆ. ಖರ್ಚು ಕಡಿಮೆಯಾಗಬೇಕು, ಸ್ಥಳೀಯ ನಾಟಕಗಳ ಗುಣಮಟ್ಟ ಅಷ್ಟೇನೂ ಇಲ್ಲ ಎಂಬೆಲ್ಲ ವಿರೋಧಗಳ ನಡುವೆ ಒಂದೊಂದು ವಿರೋಧವನ್ನು ಕಾರ್ಯರೂಪದಲ್ಲಿ ಕೌಂಟರ್ ಮಾಡುವ ಅನಿವಾರ್ಯತೆ ಇತ್ತು. ಹಾಗೆಂದು ನಾಟಕಗಳ ಗುಣಮಟ್ಟ ಕೂಡ ಸುಧಾರಿಸಬೇಕಾಗಿತ್ತು.

ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ನಾನು ನನ್ನ ತಂಡದ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವಂತೆ ಇರಲಿಲ್ಲ. ಆದರೆ ಹಿರಿಯರಾಗಿದ್ದ ಶ್ರೀ ಎಚ್.ಎಸ್. ಕುಲಕರ್ಣಿಯವರು ಮಾತ್ರ ಜನಕಪುರಿ ಕನ್ನಡ ಕೂಟ, ಜನಕಪುರಿ ಮಹಿಳಾ ಮಂಡಳಿಯ ಕಲಾವಿದರುಗಳನ್ನು ಸಂಪರ್ಕಿಸಿ, ಒಳ್ಳೆಯ ನಾಟಕಗಳನ್ನು ಪ್ರಸ್ತುತ ಪಡಿಸುವಂತೆ ಅವರನ್ನು ಹುರಿದುಂಬಿಸಿ, ಸಂಘಟಿಸಿ, ನಿರ್ದೇಶಿಸಿ, ಏಕಾಂಕ ನಾಟಕ ಸ್ಪರ್ಧೆಯ ಸಫಲತೆಗೆ ತಮ್ಮದೇ ವಿಶಿಷ್ಟವಾದ ಕೊಡುಗೆಯನ್ನು ನೀಡಿದ್ದರು. ಸಂಘದ ಏಕಾಂಕ ನಾಟಕ ಸ್ಪರ್ಧೆ ಬಹಳ ಉನ್ನತ ಮಟ್ಟಕ್ಕೆ ಏರಿತು. ತೆರೆಮರೆಗೆ ಸರಿದಿದ್ದ ಕನ್ನಡ ಭಾರತಿಯ ಹಿರಿಯ ನಿರ್ದೇಶಕರುಗಳಾದ ಮತ್ತು ನಟರುಗಳಾದ ಎಂ.ವಿ. ನಾರಾಯಣ್ ರಾವ್, ಶ್ರೀ ಯು. ಪ್ರಭಾಕರ್ ರಾವ್, ಶ್ರೀ ಭೀಮರಾವ್ ಮುರಗೋಡ, ಸಾಹಿತಿಗಳಾದ ಡಾ.ಪುರುಷೋತ್ತಮ ಬಿಳಿಮಲೆ, ಶ್ರೀ ರಮೇಶ್ ಭಟ್, ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದ ಶ್ರೀ ಸುರೇಶ್ ಶೆಟ್ಟಿ ಮುಂತಾದ ಪ್ರಶ್ನಾತೀತ ತೀರ್ಪುಗಾರರು ನಾಟಕಗಳನ್ನು ವೀಕ್ಷಿಸಿ ತೀರ್ಪು ನೀಡಿದ್ದು ಅಷ್ಟೇ ಅಲ್ಲ, ಒಂದು ವಾರದ ನಂತರ ಎಲ್ಲಾ ನಾಟಕಗಳ ಕುರಿತಂತೆ ಮುಕ್ತ ಚರ್ಚೆ–ವಿಮರ್ಶೆಯಲ್ಲಿ ಭಾಗವಹಿಸಿ ನಟರು ಮತ್ತು ಪ್ರೇಕ್ಷಕರ ಎಲ್ಲಾ ಗೊಂದಲಗಳ ನಿವಾರಣೆ ಮಾಡುತ್ತಿದ್ದರು. ವಾತಾವರಣವನ್ನು ತಿಳಿಯಾಗಿಸುತ್ತಿದ್ದರು. ಸೌಹಾರ್ದ ಪ್ರತಿಸ್ಪರ್ಧೆಗೆ ಪೂರಕವಾಗಿ ದೆಹಲಿಯಲ್ಲಿ ನಾಟಕ ಕ್ಷೇತ್ರ ಮತ್ತೆ ಮುಂಚೂಣಿಗೆ ಬರುವಂತೆ ಮಾಡಿದರು.

ನಾಟಕಗಳ ಬಹುಮಾನಗಳಲ್ಲಿ ಕನ್ನಡ ಭಾರತಿಯ ವಿಶೇಷ ಫಲಕವು ಉತ್ತಮ ನಾಟಕಗಳನ್ನು ಪ್ರಸ್ತುತಪಡಿಸಿದವರ ಹೆಮ್ಮೆಯ ಪ್ರತೀಕವಾಯಿತು. ಮೌಲ್ಯಮಾಪನದ ವಿಧಾನ ಪೂರ್ತಿ ಪಾರದರ್ಶಕವಾಗಿತ್ತು. ನಾಟಕಗಳ ಆಯ್ಕೆಗೆ ಅಂದರೆ ವಿಷಯ ವಸ್ತುವಿಗೆ 10 ಅಂಕಗಳು. ನಿರ್ದೇಶನಕ್ಕೆ 20 ಅಂಕಗಳು. ನಟನೆಗೆ (ಸರಾಸರಿ) 40 ಅಂಕಗಳು, ಬೆಳಕು ಮತ್ತು ರಂಗಸಜ್ಜಿಕೆಗೆ 10 ಅಂಕಗಳು, ಸಂಗೀತಕ್ಕೆ 10 ಅಂಕಗಳು, ಪ್ರಸಾದನ ವಸ್ತ್ರ ವಿನ್ಯಾಸಕ್ಕೆ 10 ಅಂಕಗಳು. ಹೀಗೆ ನೂರು ಅಂಕಗಳಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ನಾಟಕಗಳು, ನಟರು, ನಿರ್ದೇಶಕರು, ಸಂಗೀತ, ಪ್ರಸಾದನ, ವಸ್ತ್ರ ವಿನ್ಯಾಸ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಬಹುಮಾನವಿರುತ್ತಿತ್ತು. ವರ್ಷದಿಂದ ವರ್ಷಕ್ಕೆ ಏಕಾಂಕ ನಾಟಕಗಳ ಗುಣಮಟ್ಟ ಹೆಚ್ಚುತ್ತಾ ಹೋದರೂ ರಾಜೇಂದ್ರ ನಗರ ಕನ್ನಡ ಬಳಗ, ಮಯೂರ್ ವಿಹಾರ ತ್ರಿವೇಣಿ ಕನ್ನಡ ಸಾಂಸ್ಕೃತಿಕ ಸಂಘ, ಪಶ್ಚಿಮ ವಿಹಾರದ ಕನ್ನಡ ಕುಸುಮ ಹೀಗೆ ಹಲವಾರು ಸಂಸ್ಥೆಗಳಲ್ಲಿನ ಸದಸ್ಯರು ದೆಹಲಿ ಬಿಟ್ಟಾಗ ಏಕಾಂಕ ನಾಟಕ ಸ್ಪರ್ಧೆ ಬಡವಾಯಿತು. ನಿಂತೇ ಹೋಯಿತು. ನಾಟಕಗಳನ್ನು ಮತ್ತೆ ಪ್ರಸ್ತುತಪಡಿಸಲು ಅನುವಾಗುವಂತೆ ಕನ್ನಡದ ಹೆಸರಾಂತ ನಟ–ನಿರ್ದೇಶಕ ಶ್ರೀ ಕೃಷ್ಣಮೂರ್ತಿ ಕವತ್ತಾರರನ್ನು ದೆಹಲಿಗೆ ಕರೆಸಿ, ಒಂದು ತಿಂಗಳ ಕಾರ್ಯಾಗಾರ ನಡೆಸಿ, 'ಕೊಳ್ಳಿ' ಎಂಬ ನಾಟಕದ ಪ್ರದರ್ಶನದಿಂದ ಸಂಘದ ಹಲವಾರು ಮಂದಿ ಕಲಾವಿದರು ತಮ್ಮ ಆಸಕ್ತಿಗೆ ನೀರೆರೆದು ಪೋಷಿಸಿದರು. ದೆಹಲಿಯಲ್ಲಿ ಆಗೊಮ್ಮೆ ಈಗೊಮ್ಮೆ ಉತ್ತಮ ನಾಟಕಗಳು ಪ್ರದರ್ಶನಗೊಂಡರೂ ಏಕಾಂಕ ನಾಟಕ ಸ್ಪರ್ಧೆ ಮತ್ತೆ 2025 ರಲ್ಲಿ ತಲೆಯೆತ್ತಿದ್ದು ಸಂತೋಷ.

ಸಂಘದ ವೇದಿಕೆಯಲ್ಲಿ ಆಯೋಜನೆಗೊಂಡ ನಾಟಕೋತ್ಸವದಲ್ಲಿ ಪ್ರದರ್ಶನಗೊಂಡ ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್‌ನ 'ಗಣ ಗಣ ರಾಜ್ಯ', ನಾಡಪ್ರಭು ಕೆಂಪೇಗೌಡ ಫೌಂಡೇಶನ್‌ನ 'ನಮ್ಮ ನೆಲ ಜೀವ ಜಲ', ಡೆಲ್ಲಿ ಫ್ರೆಂಡ್ಸ್ ತಂಡದ 'ಹಗ್ಗದ ಕೊನೆ,' ಜನಕಪುರಿ ಮಹಿಳಾ ಮಂಡಳಿಯ 'ಕಿತ್ತೂರಿನ ಕಿರಣ', ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದವರ 'ಶೂನ್ಯ', ದೆಹಲಿ ತುಳು ಸಿರಿಯ 'ಚಾರಿಟಿಯಾನ್ ಮೈಮ್' ಮತ್ತು ಜನಕಪುರಿ ಕನ್ನಡ ಕೂಟದ 'ಶ್ರೀ ರಾಮೇಶ್ವರಮ್' ಈ ಏಳು ನಾಟಕಗಳಲ್ಲಿ ದೆಹಲಿಯ ಕನ್ನಡದ ಪ್ರತಿಭೆಗಳ ಪುನರ್ಮಿಲನ ನಿಜಕ್ಕೂ ಕನ್ನಡ ಸಾಂಸ್ಕೃತಿಕ ವಲಯಕ್ಕೆ ಭರವಸೆಯನ್ನು ತಂದುಕೊಟ್ಟಿದೆ.

ಈ ಬಾರಿಯ ಏಕಾಂಕ ನಾಟಕ ಸ್ಪರ್ಧೆಯನ್ನು ನಾಟಕ ಉತ್ಸವ ಎಂದು ಕರೆದರೆ ಹೆಚ್ಚು ಸೂಕ್ತವೇನೋ ಅನಿಸುತ್ತದೆ. ನಿಜ. ಈ ರೀತಿ ಒಂದೆರಡು ನಾಟಕೋತ್ಸವಗಳನ್ನು ಆಚರಿಸಿದಾಗ ಕೆಲವೊಂದು ಮಂದಿ ಈ ಕ್ಷೇತ್ರದಲ್ಲಿ ತೊಡಗಿಕೊಂಡು, ತಮ್ಮ ಅರಿವು ಕುಶಲತೆ ಮತ್ತು ಕಲಾ ಪ್ರೌಢಿಮೆ ಹೊಂದಿ ನಾಟಕ ಕ್ಷೇತ್ರಗಳಲ್ಲಿ ಸಾಧನೆ ಮಾಡಬಹುದು. ಈ ಬಾರಿ ಹೊಸ ತಂತ್ರಜ್ಞಾನವನ್ನು, ಮಲ್ಟಿಮೀಡಿಯಾವನ್ನು ನಾಟಕಕ್ಕೆ ಬಳಸಿ ಹೊಸ ಹೊಸ ಸಾಧ್ಯತೆಗಳನ್ನು ನಿರೂಪಿಸಿದ್ದಾರೆ. 'ಚಾರಿಟಿಯಾನ್ ಮೈಮ್' ಈ ನಿಟ್ಟಿನಲ್ಲಿ ಮೊದಲ ಸ್ಥಾನದಲ್ಲಿದೆ. ಆತ್ಮ ಚಿಂತನೆ ಮಾಡುವಂತಹ 'ಶೂನ್ಯ,' ಸಾಮಾಜಿಕ ಸಮಸ್ಯೆ ಕುರಿತ 'ನಮ್ಮ ನೆಲ ಜೀವ ಜಲ,' ಇತಿಹಾಸಕ್ಕೆ ಬೆಳಕು ಚೆಲ್ಲಿದ 'ಕಿತ್ತೂರಿನ ಕಿರಣ,' ರಾಜಕೀಯ ವಿಡಂಬನೆಯ, 'ಗಣ ಗಣರಾಜ್ಯ' ಹಾಗು ರಾಮಾಯಣವನ್ನು ಮತ್ತೊಮ್ಮೆ ಓದಿಸುವಂತೆ ಮಾಡಿದ 'ಶ್ರೀ ರಾಮೇಶ್ವರಮ್' ಈ ಎಲ್ಲ ನಾಟಕಗಳು ಬಹಳ ಚೆನ್ನಾಗಿ ಮೂಡಿ ಬಂದಿವೆ. ಆದರೆ 'ಹಗ್ಗದ ಕೊನೆ' ನಾಟಕ ನನ್ನನ್ನು ಕಟ್ಟಿ ಹಾಕಿದೆ. ನನಗೊಮ್ಮೆ ಅವಕಾಶ ಸಿಕ್ಕರೆ, ಶ್ರೀ ಟಿ.ಎಂ. ಮೈಲಾರಪ್ಪನವರ ನಿರ್ದೇಶನದಲ್ಲಿ ಮತ್ತೆ ರಂಗವೇರಬೇಕು ಎಂಬ ಭಾವನೆ ಮೂಡಿದೆ.

ಹಲವಾರು ವರ್ಷಗಳ ನಂತರ ಮತ್ತೆ ನಾಟಕ ಸ್ಪರ್ಧೆಯನ್ನು ಏರ್ಪಡಿಸಿದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ, ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ, ಸಂಚಾಲಕ ಶ್ರೀ ಎನ್.ಆರ್. ಶ್ರೀನಾಥ್ ಹಾಗೂ ಸಹಕರಿಸಿದ ಎಲ್ಲ ಪದಾಧಿಕಾರಿಗಳು, ಸದಸ್ಯರು ನಾಟಕ ಪ್ರಸ್ತುತ ಪಡಿಸಿದ ತಂಡಗಳ ಕಲಾವಿದರು, ನಾಟಕ ನಿರ್ದೇಶಕರು ಹಾಗೂ ಪ್ರೋತ್ಸಾಹಿಸಿದ ಪ್ರೇಕ್ಷಕರು ಅಭಿನಂದನೀಯರು.

ದೆಹಲಿ ಕರ್ನಾಟಕ ಸಂಘದ ಏಕಾಂಕ ನಾಟಕ ಸ್ಪರ್ಧೆ ಮತ್ತೆ ಉತ್ತುಂಗಕ್ಕೇರಲಿ. ಉತ್ತಮ ನಾಟಕಗಳು ಬರಲಿ. ಅದು ಕೇವಲ ದೆಹಲಿ ಮಾತ್ರವಲ್ಲ ದೇಶ ವಿದೇಶದ ವಿವಿಧ ಕನ್ನಡ ಸಂಘ ಹಾಗೂ ಕರ್ನಾಟಕದ ಎಲ್ಲೆಡೆ ಪಸರಿಸುವಂತಾಗಲಿ ಎಂದು ಹಾರೈಸುವೆ.❑

**ಸರವು ಕೃಷ್ಣ ಭಟ್**

# ದೆಹಲಿ ಒಕ್ಕಲಿಗ ಗೌಡ ಸಂಘ(ರಿ) ನವದೆಹಲಿ ವತಿಯಿಂದ, ಅದ್ದೂರಿಯಾಗಿ ಮೂಡಿ ಬಂದ 'ಸಂಕ್ರಾಂತಿ ಮಿಲನ-2026'



ದಿನಾಂಕ 23.01.2026ನೇ ಶುಕ್ರವಾರ ಸಂಜೆ 4:30 ಗಂಟೆಗೆ ನವದೆಹಲಿ ಆರ್.ಕೆ. ಪುರಂ ಸೆಕ್ಟರ್–12 ರಾವ್ ತುಲಾರಾಮ್ ಮಾರ್ಗದಲ್ಲಿರುವ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ದೆಹಲಿ ಒಕ್ಕಲಿಗ ಗೌಡ ಸಂಘವು (ಡಿ.ವಿ.ಜಿ.ಎಸ್.) ಆಯೋಜಿಸಿದ್ದ ಸಂಕ್ರಾಂತಿ ಮಿಲನ–2026ರ ಸಮಾರಂಭದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಯವರಿಗೆ ದೆಹಲಿ ಕನ್ನಡತಿಯರಿಂದ ಕುಂಭಕಲಶದ ಸ್ವಾಗತ ನೀಡಲಾಯಿತು. ಅವರು ದಿವ್ಯಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಈ ಕಾರ್ಯಕ್ರಮದಲ್ಲಿ ಪೂಜ್ಯ ಶ್ರೀ ಆನಂದ ಚೈತನ್ಯನಾಥ ಸ್ವಾಮೀಜಿಯವರು ಶ್ರೀ ಆದಿಚುಂಚನಗಿರಿ ಶಾಖಾಮಠ,ನವದೆಹಲಿ, ಶ್ರೀಶೈಲನಾಥ ಸ್ವಾಮೀಜಿ ನ್ಯೂಜರ್ಸಿ ಅಮೇರಿಕಾ ಶಾಖಾಮಠ ಹಾಗೂ ಮುಖ್ಯ ಅತಿಥಿಗಳಾಗಿ ಮೇಜರ್ ಜನರಲ್ ಕೆಂಪರಾಜು ರವರು ಭಾಗವಹಿಸಿದ್ದರು.

ಮೊದಲು ದೆಹಲಿಯ ಸುಮಾರು ನೂರಕ್ಕೂ ಹೆಚ್ಚು ಕಲಾವಿದರು ನಾಡಗೀತೆ ಹಾಗೂ ರೈತಗೀತೆ ಹಾಡುವುದರೊಂದಿಗೆ ಕಾರ್ಯಕ್ರಮ ಪ್ರಾರಂಭಗೊಂಡಿತು. ಶ್ರೀಮತಿ ಶೋಭಾ ಹನುಮೇಗೌಡ ಅವರು ಈ ಎಲ್ಲಾ ಕಲಾವಿದರನ್ನು ಒಂದೇ ವೇದಿಕೆ ಮೇಲೆ ತರಲು ಸಹಕರಿಸಿದರು. ದೀಪ ಪ್ರಜ್ವಲನೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಪರಮಪೂಜ್ಯರನ್ನು ಹಾಗೂ ಮುಖ್ಯ ಅತಿಥಿಗಳನ್ನು ಡಿ.ವಿ.ಜಿ.ಎಸ್.ನ ಕಾರ್ಯದರ್ಶಿಗಳಾದ ಶ್ರೀ ಪ್ರಶಾಂತ್ ಕುಮಾರ್ ಬಿ.ಆರ್. ಸ್ವಾಗತಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಒಕ್ಕಲಿಗ ಸಂಘದ ಅಧ್ಯಕ್ಷರಾದ ಶ್ರೀ ಅನಂತರಾಮ ಅರಳಿರವರು ಅಧ್ಯಕ್ಷೀಯ ಭಾಷಣವನ್ನು ಮಾಡಿದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಇಬ್ಬರಿಗೆ. 'ದೆಹಲಿ ವಿಶಿಷ್ಟ ಒಕ್ಕಲಿಗ' ಪ್ರಶಸ್ತಿ ನೀಡಲಾಯಿತು. ಮೊದಲಿಗೆ ಸನ್ಮಾನಿತರಾದ ಶ್ರೀ ಬಿ.ಆರ್. ಚಂದ್ರಶೇಖರ್, ಮಾಜಿ ಪ್ರಧಾನ ಮಂತ್ರಿಗಳಾದ ಶ್ರೀ ಹೆಚ್.ಡಿ. ದೇವೇಗೌಡರ ಆಪ್ತ ಸಹಾಯಕರು, ನವದೆಹಲಿ, ಕರ್ನಾಟಕ ಭವನ ಇವರ ವ್ಯಕ್ತಿ ಪರಿಚಯವನ್ನು ಡಿ.ವಿ.ಜಿ.ಎಸ್ ನ ಉಪಾಧ್ಯಕ್ಷರಾದ ಶ್ರೀ ಕೆ.ಎಸ್. ಮೂರ್ತಿ ಅವರು ಸಂಕ್ಷಿಪ್ತವಾಗಿ ಮಾಡಿಕೊಟ್ಟರು, ನಂತರ ಇನ್ನೊರ್ವ ಸನ್ಮಾನಿತರಾದ ಶ್ರೀ ಜಗದೀಶ, ಕರ್ನಾಟಕ ಭವನ ನವದೆಹಲಿ ಇವರನ್ನು ಡಿ.ವಿ.ಜಿ.ಎಸ್ ನ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ನಾರಾಯಣ ಬಿ. ಪರಿಚಯಿಸಿದರು. ಪರಮಪೂಜ್ಯರು ಇಬ್ಬರೂ ಸನ್ಮಾನಿತರಿಗೆ ಪ್ರಶಸ್ತಿ ಪತ್ರ ಮತ್ತು ಸಂಘದ ಸ್ಮರಣಿಕೆಯನ್ನು ನೀಡಿ ಅವರುಗಳನ್ನು ಗೌರವಿಸಿ ಆಶೀರ್ವದಿಸಿದರು.

ಮುಖ್ಯ ಅತಿಥಿ ಮೇಜರ್ ಜನರಲ್ ಕೆಂಪರಾಜು ಅವರು ಮಾತನಾಡಿ ಇಷ್ಟೊಂದು ಕನ್ನಡಿಗರನ್ನು ಸಂಘದಲ್ಲಿ ಭೇಟಿ ಮಾಡುತ್ತಿರುವುದಕ್ಕೆ ಹರ್ಷ ವ್ಯಕ್ತಪಡಿಸುತ್ತಾ, ತಮ್ಮನ್ನು ಆಹ್ವಾನಿಸಿದ್ದಕ್ಕೆ ಡಿವಿಜಿಎಸ್‌ಗೆ ಧನ್ಯವಾದಗಳನ್ನು ಹಾಗು ನೆರೆದಿದ್ದ ಎಲ್ಲರಿಗೂ ಸಂಕ್ರಾಂತಿಯ ಶುಭಾಶಯಗಳನ್ನು ತಿಳಿಸಿದರು.

ನಂತರ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳು ಮಾತನಾಡುತ್ತಾ ಸಂಕ್ರಾಂತಿ ಮತ್ತು ಇತರ ಹಬ್ಬಗಳ ಆಚರಣೆ, ನಮ್ಮ ಸಂಸ್ಕಾರದಲ್ಲದೆ, ಈ ರೀತಿಯ ಸಂಘಟನೆಗಳ ಕಾರ್ಯಕ್ರಮಗಳಲ್ಲಿ ಎಲ್ಲರೂ ಒಟ್ಟಾಗಿ ಭಾಗವಹಿಸುತ್ತಿರಬೇಕು, ನಮ್ಮ ಮನಸ್ಸನ್ನು ನಾವು ಹಿಡಿತದಲ್ಲಿಟ್ಟುಕೊಳ್ಳಬೇಕು, ಒಳ್ಳೆಯದನ್ನು ಬಯಸಿದರೆ ಒಳ್ಳೆಯದಾಗುತ್ತದೆ, ಕೆಟ್ಟದನ್ನು ಯೋಚಿಸಿದರೆ ಅದರಂತೆ ನಡೆಯುತ್ತದೆ ಎಂದರು. ಪ್ರಾಣಿಗಳಿಗೆ ಗೊತ್ತಿಲ್ಲದ ಮನಸ್ಸು ಮತ್ತು ಮನಸ್ಸಿಗೆ ತಿಳಿಹೇಳುವಂತಹ ಜ್ಞಾನ ಮನುಷ್ಯನಿಗಿರುವ ವಿಶೇಷ ಗುಣಗಳು. ಬದುಕು ಒಂದು ಹೂವಿನ ಹಾಗೆ ನಾವು ನಮ್ಮ ಬದುಕನ್ನು ನಮ್ಮ ಪ್ರಕಾರ ಮಾಡಿಕೊಳ್ಳಬಹುದು. ಮಹಾಭಾರತದ ಘಟನೆಯನ್ನು ಉಲ್ಲೇಖಿಸುತ್ತಾ ಶರಶಯ್ಯೆಯಲ್ಲಿದ್ದ ಪಾಂಡವರ ಮುತ್ತಾತ ಭೀಷ್ಮರ ಬಳಿ ಕೃಷ್ಣನು ಪಾಂಡವರನ್ನು ಕರೆದುಕೊಂಡು ಬಂದು ಅವರ ಪರಂಪರೆಯ ಜ್ಞಾನವನ್ನು ತಿಳಿಸಲು ಹೇಳುತ್ತಾನೆ. ಅದೇ ರೀತಿ ಅಮ್ಮ ಅಪ್ಪಂದಿರು ತಮ್ಮ ಜ್ಞಾನವನ್ನು ಮಕ್ಕಳಿಗೆ ಮೊಮ್ಮಕ್ಕಳಿಗೆ ಹಂಚಿಕೊಳ್ಳಬೇಕು. ಡಿವಿಜಿಯವರು ಹೇಳಿರುವಂತೆ ಸಂಗೀತ, ಕಾವ್ಯ, ನೃತ್ಯ ಪ್ರಕಾರಗಳೆಲ್ಲಾ ಒಂದು ಕಲೆಯಾಗಿದ್ದು, ಮಕ್ಕಳಿಗೆ ಇವುಗಳಲ್ಲಿ ಪ್ರೋತ್ಸಾಹ ನೀಡಬೇಕು ಎಂದು ಸಲಹೆ ನೀಡಿದರು.



ಮುಂದುವರಿದು ಹಿಂದೆ Joint family concept ಇತ್ತು, ಈಗ Micro family / Nuclear Family ಗಳಾಗಿ ಬದಲಾಗಿದೆ ಎಂದರು. ಕುವೆಂಪು ಅವರನ್ನು ಸ್ಮರಿಸುತ್ತಾ ಅವರು ತಾವು ಅಷ್ಟೊಂದು ಎತ್ತರಕ್ಕೆ ಬೆಳೆಯಲು, ಮಹಾಕವಿಯಾಗಲು ತಮ್ಮ ತಾಯಿ ಸೀತಮ್ಮನವರು ಮಾಡಿದ ಪ್ರಾರ್ಥನೆಯಿಂದಾಗಿ ಸಾಧ್ಯವಾಯಿತು ಎಂದು ಹೇಳಿದ್ದನ್ನು ನೆನಪಿಸಿಕೊಂಡರು. ಹಾಗೆಯೇ, ಮಾಜಿ ಪ್ರಧಾನಿ ಶ್ರೀ ದೇವೇಗೌಡರ ತಾಯಿ ಶಿವಭಕ್ತೆ, ಮಗನ ಏಳಿಗೆಗಾಗಿ ಸದಾ ಪ್ರಾರ್ಥನೆ ಮಾಡುತ್ತಿದ್ದರು. ಬುಡಬುಡಿಕೆಯವನೊಬ್ಬ ಆ ತಾಯಿಯ ಬಳಿ ಬಲು ಹಿಂದೆಯೇ ನಿಮ್ಮ ಮಗ ಮುಂದೆ ಚಕ್ರವರ್ತಿಯಾಗುತ್ತಾನೆಂದು ಭವಿಷ್ಯ ನುಡಿದಿದ್ದರೆಂಬ ವಿಷಯ ತಿಳಿಸುತ್ತಾ, ಅದರಂತೆ ಅವರು ಮುಂದೆ ದೇಶದ ಪ್ರಧಾನಿಯಾದರು ಎಂದರು.

ಮುಂದುವರಿದು ಮಾತನಾಡುತ್ತಾ, ಪರಂಪರೆ ಜ್ಞಾನವನ್ನು ಬಿಡದ ಹಾಗೆ ಕುವೆಂಪು ವಿವೇಕಾನಂದ ಮತ್ತು ಐನ್‌ಸ್ಟೀನ್‌ರವರ ಬದುಕಿನಲ್ಲಿ, ಜೀವನದಲ್ಲಿ ಆಧ್ಯಾತ್ಮಿಕತೆ ಮತ್ತು Metaphysical Science

ಕಡೆ ಒಲವಿತ್ತು. ಐನ್‌ಸ್ಟೀನ್ ಪ್ರಕಾರ ಆಧ್ಯಾತ್ಮಿಕತೆ, ವಿಜ್ಞಾನ / ಆಧುನಿಕತೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಅಣು ಸಂಶೋಧನೆ ವಿಜ್ಞಾನಿ ರುದರ್ ಫೋರ್ಡ್ ಅವರ In search of my life, I ended up finding, Proton Neutron which has no life ಎಂಬ ಮಾತನ್ನು ನೆನಪಿಸಿಕೊಂಡು ನಮ್ಮ ಈ ಅಮೂಲ್ಯವಾದ ಬದುಕನ್ನು ಸುಂದರವಾಗಿ ಬಾಳೋಣ, ಈ ಸಂಕ್ರಾಂತಿಯ ಸಮಯ ಎಳ್ಳು, ಬೆಲ್ಲ ಸವಿದರೆ ದೇಹಕ್ಕೆ ಒಳ್ಳೆಯದು, ವಿಷ್ಣು ಸಹಸ್ರನಾಮ ಜಪ ಮಾಡುವುದು ಸಂಕ್ರಾಂತಿ ಹೊತ್ತಿನಲ್ಲಿ ಶುಭ ಕಾರ್ಯ, ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೆ ಎನ್ನುವ ಗಾದೆಯಂತೆ ಮಕ್ಕಳ ಬಾಲ್ಯದಿಂದಲೇ ಪೋಷಕರು ಅವರಿಗೆ ಒಳ್ಳೆಯ ಸಂಸ್ಕಾರ ಕೊಟ್ಟು, ತಮ್ಮ ಜೀವನ ಜ್ಞಾನವನ್ನು ಅನುಭವವನ್ನು ಹಂಚಿಕೊಂಡರೆ ಅವರು ಮುಂದೆ ದೇಶದ ಸತ್ಪ್ರಜೆಗಳಾಗುವುದರಲ್ಲಿ ಯಾವುದೇ ಸಂದೇಹವಿಲ್ಲ, ಸಮಾಜದ ಎಲ್ಲ ವರ್ಗಗಳನ್ನು ಎತ್ತಿದ ಸಮುದಾಯ ಒಕ್ಕಲಿಗರದ್ದು, ಎಲ್ಲರನ್ನೂ ಇಂದು ಇಲ್ಲಿ ಈ ಸಂಕ್ರಾಂತಿ ಸಮ್ಮಿಲನ ಕಾರ್ಯಕ್ರಮದಲ್ಲಿ ಒಟ್ಟು ಸೇರಿಸಿದ ದೆಹಲಿ ಒಕ್ಕಲಿಗ ಗೌಡ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಅಭಿನಂದನೆಗಳು. ಇಂತಹ ಕಾರ್ಯಕ್ರಮಗಳಲ್ಲಿ ಎಲ್ಲರೂ ನಗುನಗುತ್ತಾ ಪಾಲ್ಗೊಂಡಾಗ ನಮ್ಮ ಕಷ್ಟಗಳು ನಷ್ಟವಾಗುತ್ತವೆ, ಒಳ್ಳೆಯ ವಿಚಾರಗಳು ತಿಳಿದು ಮನಸ್ಸಿನ ಆರೋಗ್ಯ ಹೆಚ್ಚಾಗುತ್ತದೆ, ಸಭಾಂಗಣದಲ್ಲಿ ನೆರೆದಿರುವ ಎಲ್ಲಾ ತಾಯಿ ತಂದೆಯವರಿಗೆ, ಮಕ್ಕಳಿಗೆ ಹಾಗು ದೆಹಲಿ ಕನ್ನಡಿಗರಿಗೆ ಸಂಕ್ರಾಂತಿಯ ಶುಭಾಶಯಗಳು, ಆ ಭಗವಂತ ಎಲ್ಲರಿಗೂ ಒಳ್ಳೆಯದನ್ನು ಮಾಡಲಿ ಎಂದು ಮಹಾಸ್ವಾಮೀಜಿಗಳು ಆಶೀರ್ವಾದ ನೀಡಿದರು.

ನಂತರ ಪರಮ ಪೂಜ್ಯರಿಗೆ ಗುರುವಂದನಾ ಮತ್ತು ಮುಖ್ಯ ಅತಿಥಿಗಳಿಗೆ ಗೌರವ ಸಮರ್ಪಣೆ ಕಾರ್ಯಕ್ರಮವನ್ನು ಡಿವಿಜಿಎಸ್‌ನ ಎಲ್ಲಾ ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರುಗಳು ತುಂಬಾ ಅಚ್ಚುಕಟ್ಟಾಗಿ ಶಿಸ್ತುಬದ್ಧವಾಗಿ ನೆರವೇರಿಸಿದರು.

ನಂತರ ದೆಹಲಿಯ ಸುಮಾರು 16 ತಂಡಗಳ 150 ಕ್ಕೂ ಹೆಚ್ಚು ಸ್ಥಳೀಯ ಕಲಾವಿದರುಗಳು ಹಾಗೂ ಕರ್ನಾಟಕದಿಂದ ಬಂದ ಕಲಾವಿದರುಗಳು ಪೂಜಾಕುಣಿತ, ಗೊರವರ ಕುಣಿತ, ಸುಗಮ ಸಂಗೀತ ಹಾಗೂ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿ ಪರಮಪೂಜ್ಯರನ್ನು ಹಾಗೂ ಪ್ರೇಕ್ಷಕರನ್ನು ಮನರಂಜಿಸಿದರು. ಸಂಪೂರ್ಣ ಸಭಾ ಕಾರ್ಯಕ್ರಮದ ನಿರೂಪಣೆಯನ್ನು ಜಂಟಿ ಕಾರ್ಯದರ್ಶಿ ಶ್ರೀ ಗಿರೀಶ್ ಗೌಡ ಅವರು ಅಚ್ಚುಕಟ್ಟಾಗಿ ನಿರ್ವಹಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಸಂತೋಷ್ ಜೆ. ರವರು ತುಂಬಾ ಶಿಸ್ತುಬದ್ಧವಾಗಿ ಮಾಡಿಕೊಟ್ಟರಲ್ಲದೇ ಕೊನೆಯಲ್ಲಿ ಎಲ್ಲರಿಗೂ ವಂದನಾರ್ಪಣೆ ಸಲ್ಲಿಸಿದರು. ನಂತರ ಸಂಘದ ಉಪಾಧ್ಯಕ್ಷರಾದ ಶ್ರೀ ಬಿ.ಎನ್. ಮೋಹನ್ ಕುಮಾರ್ ಹಾಗೂ ಖಜಾಂಚಿಗಳಾದ ಶ್ರೀ ಗೋವಿಂದ ರಾಜುರವರ ನೇತೃತ್ವದಲ್ಲಿ ವಿಶೇಷವಾದ ವಿಶಿಷ್ಟವಾದ ರುಚಿಕರ ಭೋಜನವನ್ನು ಬಂದಂತಹ ಜನಸ್ತೋಮ ಸವಿದು ಹರ್ಷವ್ಯಕ್ತಪಡಿಸಿದರು. ❑

***ಅಧ್ಯಕ್ಷರು ಮತ್ತು ಪದಾಧಿಕಾರಿಗಳು***
ಡಿವಿಜಿಎಸ್, ನವದೆಹಲಿ






**ಕವನ**

## ಪರ್ಯಾಯ ಕಾಲ

ಕ್ಷಣ ಕ್ಷಣ ನಾ–ನೀನೆಂಬ ಬೇಧವೇಕೆ ಜಗತ್ತಿನಾದ್ಯಂತ?
ಹುಟ್ಟು ಸಾವಿನ ಸತ್ಯದ ಅಂಚಿನಲಿ ನಾನಿರಲು
ಮರೆವ, ನಲಿವ, ನೋವಿನಲ್ಲಿ, ದುಃಖದಲಿ
ನಾವೆಲ್ಲ ಮೇಲೇಳುತ್ತಿರಲು ಹುಚ್ಚಿನ ಬಾವದಲಿ
ನಮ್ಮನ್ನೇ ನಾವು ಮರೆಯುವ ಹಂತದಲಿ
ಜಗದ, ಮನದ, ಪ್ರಕೃತಿಯ ಬಾವಗಳ ಅರಿಯಲು
ಭ್ರಮಾಧೀನರಾಗುತ್ತಿರುವ ಈ ಕ್ಷಣದಲಿ
ತಪ್ಪು ಸರಿಗಳ ಗ್ರಹಿಕೆಯ ಬದುಕಿನಲಿ
ಮಾನವತ್ವ, ಪ್ರಕೃತಿಯ ಸಮಾನ ಬಾವ ಮೇಳೈಸಿ
ನಾ ಮೇಲೆ ನೀನ್ಯಾರು ಬಾವ ಚಿಂತನೆಗಳ ಬದಿಗಿರಿಸಿ–
ಪ್ರಕೃತಿ, ಭುವಿ, ಆಕಾಶ, ನೀರಿನ ಅಂಶಗಳು
ಜೈವಿಸಿ, ಉಸಿರಿಸಿ, ಒಂದಾಗಿ ಮೆರೆಯುವ ಬಾವ
ತನು ಮನದ ಕಣಕಣಗಳಲಿ ಮೇಳೈಸಿ
ಲೋಕ ತಂತ್ರಕ್ಕೆ, ಮನುಜ ಕುಲಕೆ, ಜೀವಕಣಗಳಿಗೆ
ಶಾಂತಿ, ನೆಮ್ಮದಿಯ ಸತ್ಯದ ಆಳದ ಅರಿವಿನಲಿ
ಭವ್ಯತೆಯ ಬದುಕು ನಮ್ಮ ನಿಮ್ಮದಾಗಿಸುವ
ಸರ್ವೋತ್ತಮ ಪರಂಪರೆಯ ಉತ್ಕೃಷ್ಟ ಪಳೆಯುಳಿಕೆಯ
ಬಿಟ್ಟು ಹೋಗುವ ಪರ್ಯಾಯ ಸಮಯವಿದು.
ಮನದುಂಬಿ ಹಾರೈಸೋಣ, ಸ್ವಾಗತಿಸೋಣ ಪರ್ಯಾಯ ಕಾಲವನ ॥

***ಸರೋಜ ಮಾಧವ***
ದೆಹಲಿ ಕನ್ನಡತಿ

# ಮೈಸೂರು ದಸರಾ ಎಷ್ಟೊಂದು ಸುಂದರ, ನೋಡಿದಿರಾ ನಮ್ಮ ದೆಹಲಿ ಮಕ್ಕಳ ನೃತ್ಯವಾ...



ಅತ್ಯಂತ ಆಕರ್ಷಿತ, ವೈಭವಯುತವಾದ ವಿಶ್ವ ವಿಖ್ಯಾತ ದಸರಾ ಹಬ್ಬದ ಸಂಭ್ರಮಾಚರಣೆಯ ಅಂಗವಾಗಿ ಮೈಸೂರು ಅರಮನೆ ವೇದಿಕೆಯಲ್ಲಿ ದಿನಾಂಕ 29.09.2025 ರಂದು ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ದೆಹಲಿಯ ಕನ್ನಡದ ಮಕ್ಕಳು ನೀಡಿದ ಅಮೋಘವಾದ ನೃತ್ಯ ರೂಪಕ ಸದಾ ಅವಿಸ್ಮರಣೀಯ ಹಾಗೂ ದೆಹಲಿ ಕನ್ನಡಿಗರ ಹೆಮ್ಮೆಯ ಪ್ರತೀಕ.

ದಸರಾ ಹಬ್ಬವನ್ನು, ಅದರ ವೈಭವಯುತ ಕಾರ್ಯಕ್ರಮಗಳನ್ನು ನೋಡಿ ಕಣ್ತುಂಬಿಕೊಳ್ಳುವುದೇ ಒಂದು ಆನಂದ, ಅಂತಹುದರಲ್ಲಿ ನಮ್ಮ ದೆಹಲಿಯ ಹತ್ತು ಕನ್ನಡದ ಮಕ್ಕಳು ಪ್ರಪ್ರಥಮ ಬಾರಿಗೆ ದೆಹಲಿಯಿಂದ ಮೈಸೂರಿನವರೆಗೆ ಹೋಗಿ, ಮೈಸೂರು ದಸರಾ ಸಂಭ್ರಮದ ಅರಮನೆ ವೇದಿಕೆಯಲ್ಲಿ ನೃತ್ಯ ಮಾಡುವ ಅವಕಾಶ ದೊರೆತ್ತಿದ್ದು, ದೆಹಲಿಯಲ್ಲಿ ನೆಲೆಸಿರುವಂತ ಪ್ರತಿಭಾನ್ವಿತ ಮಕ್ಕಳಿಗೆ ಸಿಕ್ಕ ಸುವರ್ಣ ಅವಕಾಶವೇ ಸರಿ. ಪ್ರಥಮ ಬಾರಿಗೆ ದೆಹಲಿ ಕರ್ನಾಟಕ ಸಂಘದ ವತಿಯಿಂದ ಮೈಸೂರು ದಸರಾ ಅರಮನೆ ವೇದಿಕೆಯಲ್ಲಿ ನೃತ್ಯ ರೂಪಕವನ್ನು ಮಾಡಿದ ದೆಹಲಿ ಕನ್ನಡ ಕುವರಿಯರಾದ ಲವಿಕಾ ಎಸ್., ಸಾನಿಧ್ಯ ಎಸ್., ಅಂಕಿತ ಲದ್ದೆ, ದಿವ್ಯ ಮಾಡಳ್ಳಿ, ಸೃಷ್ಠಿ ಪೂಜಾರಿ, ನಿಷ್ಠ ಪೂಜಾರಿ, ವಿಧಿ ಕೊಠಾರಿ, ಹರ್ಷಿತ ಉಭಾಳೆ, ಜೈನಬ್, ಶ್ರೇಷ್ಠಾ ತೇಲಿ ಹಾಗೂ ನೃತ್ಯ ಸಂಯೋಜಿಸಿ ಕಾರ್ಯಕ್ರಮದ ಯಶಸ್ಸು ತಂದ ಶ್ರೀಮತಿ ಡಾ. ಲಿಖಿತಾಶ್ರೀ ಯಲ್ಲಾಲಿಂಗ ಕೊಪ್ಪದ ಮತ್ತು ಎಲ್ಲಾ ಪೋಷಕರಿಗೆ ದೆಹಲಿ ಕರ್ನಾಟಕ ಸಂಘ ಮತ್ತು ಸಮಸ್ತ ಹೊರನಾಡ ಕನ್ನಡಿಗರ ಪರವಾಗಿ ಅಭಿನಂದನೆಗಳನ್ನು ತಿಳಿಸುತ್ತೇನೆ.

ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿ ಕರುನಾಡಿನಿಂದ ಅನೇಕ ದೊಡ್ಡ ದೊಡ್ಡ ಖ್ಯಾತ ಕಲಾವಿದರಿಂದ ಹಿಡಿದು ಗ್ರಾಮೀಣ ಭಾಗದ ಕಲಾವಿದರುಗಳು ಬಂದು ನೃತ್ಯ, ಸಂಗೀತ, ನಾಟಕ, ಹಾಸ್ಯ ಇತ್ಯಾದಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಹಾಗೇನೇ, ಅಮೃತಮಹೋತ್ಸವದ ಐತಿಹಾಸಿಕ, ಅದ್ದೂರಿಯ ಕಾರ್ಯಕ್ರಮಕ್ಕೆ ಕರ್ನಾಟಕ ರಾಜ್ಯದ ಪ್ರತೀ ಜಿಲ್ಲೆಗಳಿಂದ ಕಲಾವಿದರು ಆಗಮಿಸಿ ಸಂಘದ ವೇದಿಕೆಯಲ್ಲಿ ತಮ್ಮ ಕಾರ್ಯಕ್ರಮದ ಪ್ರಸ್ತುತಿ ನೀಡಿದ್ದಾರೆ, ಆದರೆ, ನಮ್ಮ ದೆಹಲಿಯಿಂದ ನಮ್ಮ ಪ್ರತಿಭಾನ್ವಿತ ಮಕ್ಕಳು ನೃತ್ಯ ಕಲಿತು ಕಲಾತಂಡವಾಗಿ ಮೈಸೂರಿಗೆ ಹೋಗಿ ಕಾರ್ಯಕ್ರಮ ನೀಡಿರುವುದು ಇದೇ ಮೊದಲು. ಇಂತಹ ಕನಸನ್ನು ಕಟ್ಟಿ, ತಮ್ಮ ನಿರಂತರ ಪ್ರಯತ್ನದಿಂದ ಈ ಕಾರ್ಯವನ್ನು ಸಾಧಿಸಿ ದೆಹಲಿಯ ಕನ್ನಡದ ಮಕ್ಕಳಿಗೆ ಮೈಸೂರು ದಸರಾ ವೇದಿಕೆ ಅವಕಾಶ ಸಿಗುವಂತೆ ಮಾಡಿದಂತಹ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜರವರ ಹೃದಯವಂತಿಕೆ ಮತ್ತು ಬದ್ಧತೆಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಧನ್ಯವಾದ ಹಾಗು ಅಭಿನಂದನೆಗಳು. ನಮ್ಮ ದೆಹಲಿ ಕನ್ನಡಿಗರ ಮಕ್ಕಳು ಸಹಾ ತಮಗೆ ಸಿಕ್ಕ ಅವಕಾಶವನ್ನು ಸಮರ್ಪಕವಾಗಿ ಬಳಸಿಕೊಂಡು, ಕಲಿತ ನೃತ್ಯವನ್ನು ತುಂಬಾ ಅತ್ಯುತ್ತಮವಾಗಿ ನಾಡಿನ ಜನತೆಯ ಮುಂದೆ



ಪ್ರದರ್ಶನ ನೀಡುವ ಮೂಲಕ ನೆರೆದಿದ್ದ ಎಲ್ಲರ ಗಮನ ಸೆಳೆದರು, ನೃತ್ಯದ ಸಮಯದಲ್ಲಿ ಸುರಿದ ಮಳೆಯಲ್ಲಿಯೂ ನಿಲ್ಲದೆಯೇ "ಮೈಸೂರ ದೊರೆ ನಾಲ್ವಡಿ ಕೃಷ್ಣರಾಜ ಒಡೆಯರ ನೆನೆದು, ಬಾರಿಸು ಕನ್ನಡ ಡಿಂಡಿಮವ ಓ ಕರ್ನಾಟಕ ಹೃದಯ ಶಿವ" ಎಂದು ಮಕ್ಕಳು ಮಾಡಿದ ಅದ್ಭುತ ನೃತ್ಯಕ್ಕೆ ನೆರೆದಿದ್ದ ಜನ ಸಮೂಹವೇ ನೋಡಿ ಬೆರಗಾದರು. ನೇರಪ್ರಸಾರದ ಮೂಲಕ ವೀಕ್ಷಿಸಿದ ಸಮಸ್ತ ದೆಹಲಿ ಕನ್ನಡಿಗರ ಹಾಗೂ ನಾಡಿನ ಅನೇಕರ ಹರುಷದಿಂದ ಮಕ್ಕಳಿಗೆ ಅಭಿನಂದನೆಯ ಮಹಾಪೂರವೇ ಹರಿದುಬಂದಿತು. ಇದೊಂದು ದೆಹಲಿ ಕನ್ನಡಿಗರಿಗೆ ಸಂದ ಬಹುದೊಡ್ಡ ಗೌರವ ಮತ್ತು ಹೆಮ್ಮೆಯ ಸಂಗತಿ ಹಾಗೂ ಐತಿಹಾಸಿಕ ಸಾಧನೆಯಾಗಿದೆ. ಹೊರನಾಡಿನ ಕನ್ನಡ ಮಕ್ಕಳಿಗೆ ಮೈಸೂರು ದಸರಾ ವೇದಿಕೆಗೆ ಅವಕಾಶ ನೀಡಿದ ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವಿಶೇಷವಾಗಿ ದೆಹಲಿ ಕರ್ನಾಟಕ ಸಂಘದ ಪರವಾಗಿ ಧನ್ಯವಾದಗಳು.

ನಮ್ಮ ಮಕ್ಕಳ ಮೈಸೂರು ಪಯಣ ಹೀಗಿತ್ತು, ಕನ್ನಡ ಕಲರವ ಮೆರೆದಿತ್ತು...

ದೆಹಲಿಯಿಂದ ಸೆಪ್ಟೆಂಬರ್ 26ರಂದು ಬೆಂಗಳೂರು ರಾಜಧಾನಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಹೊರಟು 28ರಂದು ಮುಂಜಾನೆ ಬೆಂಗಳೂರಿಗೆ ನೃತ್ಯ ಸಂಯೋಜಕರು, ಮಕ್ಕಳು ಮತ್ತು ಪೋಷಕರು ತಲುಪಿದರು. ಬೆಂಗಳೂರಿನಿಂದ ಮೈಸೂರಿಗೆ ಹೋಗಿ ಬರಲು ವಾಹನದ ವ್ಯವಸ್ಥೆಯನ್ನು ಮಾಡಲಾಗಿತ್ತು, ನಾವು ಬೆಂಗಳೂರಿನಿಂದ ಹೊರಟಾಗಿನಿಂದ ಮೈಸೂರಿಗೆ ತಲುಪುವವರೆಗೂ ಸಂಘದ ಅಧ್ಯಕ್ಷರು ಎಲ್ಲಾ ವ್ಯವಸ್ಥೆಗಳನ್ನು ಮಾಡಿ ಬಿಟ್ಟಿದ್ದರು. ರಾಮನಗರದ ಶ್ರೀ ಆದಿಚುಂಚನಗಿರಿ ಶಾಖಾ ಮಠದಲ್ಲಿ ಪೂಜ್ಯರಾದ ಶ್ರೀ ಅನ್ನದಾನೇಶ್ವರ ಸ್ವಾಮೀಜಿಗಳು ಪ್ರೀತಿಯಿಂದ ಎಲ್ಲರಿಗೂ ಉಪಹಾರದ ವ್ಯವಸ್ಥೆ ಮಾಡಿದ್ದರು, ಅಲ್ಲಿಯೇ ಎಲ್ಲರಿಗೂ ಶುದ್ಧಗೊಳ್ಳಲು/ಸ್ನಾನಕ್ಕೂ ಅವಕಾಶ ಕಲ್ಪಿಸಿದ್ದರು. ಉಪಹಾರವನ್ನು ಸೇವಿಸಿದ ನಂತರ, ರಾಮನಗರದಲ್ಲಿ ಸುಮಾರು 15 ಎಕರೆಯಲ್ಲಿ ರೂಪುಗೊಂಡಿರುವ ನಾಡೋಜ ದಿ॥ ಎಚ್.ಎಲ್. ನಾಗೇಗೌಡರಿಂದ ಸ್ಥಾಪಿತ "ಜಾನಪದ ಲೋಕಕ್ಕೆ" ನಾವು ತೆರಳಿದೆವು. ಜಾನಪದ ಲೋಕದ ಪ್ರಸ್ತುತ ಅಧ್ಯಕ್ಷರಾದ ಡಾ. ಈಚಿ. ಬೋರಲಿಂಗೇಗೌಡರು ಎಲ್ಲರಿಗೂ ನಾಡಿನ ಜಾನಪದ ಕಲೆ–ಸೊಬಗನ್ನು ನೋಡುವ, ಆನಂದಿಸುವ ಸೌಭಾಗ್ಯವನ್ನು ನೀಡಿದರು. ಜಾನಪದ ಲೋಕದ ಅಧಿಕಾರಿಯಾದ ಶ್ರೀಮತಿ ಸರಸವಾಣಿರವರು ಮಕ್ಕಳಿಗೆ ಜಾನಪದ ಕಲೆಗಳ ಮಹತ್ವ, ಹಿರಿಮೆ ಬಗ್ಗೆ ವಿವರಿಸಿದರು. ನಮ್ಮ ನೆಲದ ಪ್ರಾಚೀನ ಪರಂಪರೆಯ ಬದುಕು, ಕಲೆಗಳನ್ನು ಜಾನಪದ ಲೋಕದಲ್ಲಿ ನೋಡಿ ಆನಂದಿಸಿದ ನಂತರ ನಾವು ಮಂಡ್ಯಕ್ಕೆ ತೆರಳಿದೆವು. ಮಧ್ಯಾಹ್ನದ ಹೊತ್ತಿಗೆ ಮಂಡ್ಯ ಕರ್ನಾಟಕ ಸಂಘಕ್ಕೆ ತಲುಪಿದ ನಮಗೆ ಸಂಘದ ಅಧ್ಯಕ್ಷರಾದ ಶ್ರೀ ಜಯಪ್ರಕಾಶ ಗೌಡರವರು ಮತ್ತು ಪದಾಧಿಕಾರಿಗಳ ಆತಿಥ್ಯವನ್ನು ಪ್ರೀತಿಯ ಮುದ್ದೆ ಊಟದ ಔತಣವನ್ನು ನೀಡಿದ್ದನ್ನು ಮರೆಯುವಂತಿಲ್ಲ. ಅಲ್ಲಿನ ಸಭಾಂಗಣದಲ್ಲಿ ಮಕ್ಕಳು ನೃತ್ಯಾಭ್ಯಾಸವನ್ನು ಮುಗಿಸಿ, ನಂತರ ಮೈಸೂರಿನ ಕಡೆಗೆ ನಮ್ಮ ಪ್ರಯಾಣ ಮುಂದುವರೆಯಿತು.

ಕೊನೆಗೂ ಸಂಜೆಯ ವೇಳೆಗೆ ಮೈಸೂರನ್ನು ತಲುಪಿದ ನಮಗೆ, ಸಂದೇಶ್ ಪ್ರೈಡ್‌ನಂತಹ ಒಳ್ಳೆಯ 5 ಸ್ಟಾರ್ ಹೋಟೆಲ್‌ನಲ್ಲಿ ವಾಸ್ತವ್ಯದ ವ್ಯವಸ್ಥೆಯಾಗಿತ್ತು. ಮಕ್ಕಳ ಸಂತೋಷಕ್ಕಾಗಿ ಹಾಗೇ ಮೈಸೂರಿನ ದೀಪಾಲಂಕಾರಗಳನ್ನು ವೀಕ್ಷಿಸುವ ಸಲುವಾಗಿ ಎಲ್ಲರೂ ಹೊರಗೆ ಸುತ್ತಾಡಿ ಬರಲು ಹೊರಟೆವು. ಗೋಬಿ ಮಂಚೂರಿ, ಪಾನಿ ಪೂರಿ,









ತಿನಿಸುಗಳನ್ನು ಸವಿದು, ಅರಮನೆಯತ್ತ ಸಾಗಿದೆವು. ಮೈಸೂರು ಅರಮನೆಯ ದೀಪಾಲಂಕಾರ, ಬೀದಿ ತುಂಬ ನೆರೆದಿದ್ದ ಜನಸಮೂಹ, ದೆಹಲಿಯಿಂದ ಮೈಸೂರು ದಸರಾ ವಿಜ್ರಂಭಣೆಯನ್ನು ಸವಿದದ್ದು ಸ್ವರ್ಗವೇ ಸರಿ. ಅರಮನೆಯ ಮುಂಭಾಗ ಎಲ್ಲರೂ ಆನಂದದಿಂದ ಸೇರಿ ನನ್ನ 30ನೇ ಹುಟ್ಟು ಹಬ್ಬವನ್ನು ಮಕ್ಕಳ ಪ್ರೀತಿ ಹಾಗೂ ಎಲ್ಲರ ಶುಭಹಾರೈಕೆಗಳಿಂದ ಆಚರಿಸಿದ್ದು ನನಗೆ ಎಂದಿಗೂ ಮರೆಯಲಾಗದ ಕ್ಷಣ. ಅಂದು ಮೈಸೂರಿನ ದಸರಾ ಹಬ್ಬದ ಸಾಗರದಲ್ಲಿ ನಮ್ಮ ಸಡಗರ ತುಂಬಿತ್ತು..

ದಿನಾಂಕ: 29.09.2025 ರಂದು ಮುಂಜಾನೆಯೇ ಚಾಮುಂಡಿ ಬೆಟ್ಟಕ್ಕೆ ತೆರಳಿ ತಾಯಿ ಚಾಮುಂಡೇಶ್ವರಿಯ ದರ್ಶನವನ್ನು ಪಡೆದುಕೊಂಡು, ಹೋಟೆಲ್ಗೆ ಬಂದು ಬೆಳಗಿನ ಬಗೆಬಗೆಯ ಬ್ರೇಕ್–ಫಾಸ್ಟ್ ಸವಿದು ನಂತರ ಅರಮನೆ ಕಡೆಗೆ ಹೊರಟೆವು. ದೆಹಲಿ ಕರ್ನಾಟಕ ಸಂಘದ ಐತಿಹಾಸಿಕವಾಗಿ ಮೊಟ್ಟ ಮೊದಲ ಬಾರಿಗೆ ದೆಹಲಿ ಕನ್ನಡದ ಮಕ್ಕಳು ಅರಮನೆ ವೇದಿಕೆಯಲ್ಲಿ ನೃತ್ಯ ಕಾರ್ಯಕ್ರಮವನ್ನು ನೀಡಿದರು. ನಂತರ ನಮ್ಮೆಲ್ಲರನ್ನು ಅಧ್ಯಕ್ಷರ ಸ್ನೇಹಿತರಾದ ಶ್ರೀ ಮಂಜುನಾಥ್ ಗೌಡ ಅವರ ನಿವಾಸಕ್ಕೆ ಕರೆದೊಯ್ದರು. ಅಲ್ಲಿ ತಮ್ಮ ನೆಂಟರಂತೆ ಅವರು ನಮ್ಮನ್ನು ಸ್ವಾಗತಿಸಿದರಲ್ಲದೇ ಸವಿರುಚಿಯಾದ ಊಟವನ್ನು ಏರ್ಪಡಿಸಿದ್ದರು. ಊಟ ಸವಿದು, ಬಸ್ ಹತ್ತಿ, ಐಸ್ ಕ್ರೀಮ್ ತಿಂದು ಹೋಟೆಲ್ ಕಡೆಗೆ ಸಾಗಿದೆವು. ಯಶಸ್ವಿಯಾದ ನೃತ್ಯದ ಗುಂಗಿನಲ್ಲಿ ಎಲ್ಲರೂ ಮುಳುಗಿದೆವು.

ಮರುದಿನ ನಮ್ಮ ಪಯಣ ಮರಳಿ ಬೆಂಗಳೂರಿನ ಕಡೆಗೆ ಸಾಗಿತು. ಶ್ರೀರಂಗಪಟ್ಟಣದ ಬಳಿ ಕಾವೇರಿ ನದಿ ತೀರದಲ್ಲಿರುವ ತಾಯಿ ನಿಮಿಷಾಂಬ ದೇವಿಯ ದರ್ಶನವನ್ನು ಮಾಡಿಕೊಂಡು, ಪ್ರಯಾಣದಲ್ಲಿ ಮಕ್ಕಳೊಂದಿಗೆ ಮಸ್ತಿ–ಮನರಂಜನೆಯಿಂದ ಹಾಡುತ್ತ–ಕುಣಿಯುತ್ತ ಸಂಜೆ ಹೊತ್ತಿಗೆ ಬೆಂಗಳೂರು ರೈಲ್ವೆ ನಿಲ್ದಾಣಕ್ಕೆ ತಲುಪಿದೆವು. ಅಂತು ನಮ್ಮನ್ನು ದೆಹಲಿಗೆ ಮರಳಿಸುವ ರೈಲು ಗಾಡಿಯನ್ನು ಹತ್ತಿ ಕುಳಿತೆವು. ರೈಲಿನಲ್ಲಿಯೂ ನಮ್ಮ ಮಸ್ತಿ–ಮನರಂಜನೆ, ಅಂತ್ಯಾಕ್ಷರಿ ಆಟ ಮುಂದುವರಿಯಿತು, ರಾಜಸ್ತಾನದ ಒಂದು ಪುಟಾಣಿ ಕಂದ ನಮ್ಮೊಂದಿಗೆ ಸೇರಿಕೊಂಡು ಹಾಡಲು ಶುರುಮಾಡಿತು. ಕನ್ನಡ ಮಾತನಾಡಿ ಅಲ್ಲದೇ ನೀತಿ ಕಥೆಗಳನ್ನು ಹೇಳಿ ನಮ್ಮೆಲ್ಲರಿಗೂ ನಗುವಿನ ಹೊಳೆ ಹರಿಸಿದಳು. ಮಕ್ಕಳ ಮನಸ್ಸು ಸದಾ ಸ್ವಚ್ಛಂದ, ನಿಷ್ಕಲ್ಮಷ ಅಲ್ಲಿ ಮುಗ್ಧತೆ ಮತ್ತು ಸಂತೋಷಕ್ಕೆ ಮಾತ್ರ ಜಾಗ. ರೈಲಿನಲ್ಲಿ ಎರಡು ದಿನದ ಪ್ರಯಾಣ ಮುಗಿಸಿ ಅಂತು ಇಂತು ಎಲ್ಲರೂ ದೆಹಲಿಯನ್ನು ತಲುಪಿದೆವು.

ನಮ್ಮ ದೆಹಲಿಯ ಕನ್ನಡದ ಮಕ್ಕಳು ಪ್ರಥಮ ಬಾರಿ ಮೈಸೂರು ದಸರಾ ಸಾಂಸ್ಕøತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಅರಮನೆ ವೇದಿಕೆಯಲ್ಲಿ ನೃತ್ಯ ಮಾಡಿರುವುದು ಎಲ್ಲರ ಮನದಲ್ಲಿ ಹಚ್ಚ ಹಸಿರಾಗಿ ಉಳಿಯುವುದು ಎಂದು ಭಾವಿಸುತ್ತೇನೆ. ಇಂತಹ ಅಭೂತಪೂರ್ವವಾದ ಕಾರ್ಯಗಳನ್ನು ಸಂಕಲ್ಪಿಸಿ ಯಶಸ್ವಿಯಾಗಿ ಕಾರ್ಯಗತಗೊಳಿಸಿ ತಮ್ಮ ಪರಿಕಲ್ಪನೆ, ಪರಿಶ್ರಮ, ಹೊಸ ಹೊಸ ಕಾರ್ಯಗಳ ಮೂಲಕವೇ ದೆಹಲಿ ಕನ್ನಡಿಗರ ಮೆಚ್ಚುಗೆಗೆ ಪಾತ್ರರಾಗಿರುವ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜರವರಿಗೆ ಹಾಗೂ ಮೈಸೂರಿಗೆ ಬಂದು ಸಹಕರಿಸಿದ ಸಂಘದ ಕಾರ್ಯದರ್ಶಿಗಳಾದ ಶ್ರೀ ರಾಧಾಕೃಷ್ಣ, ಖಜಾಂಚಿ ಶ್ರೀಮತಿ ಆಶಾಲತಾ ಎಂ., ಜಂಟಿ ಕಾರ್ಯದರ್ಶಿ ಶ್ರೀ ಬಿ. ನಾರಾಯಣ, ಸದಸ್ಯರಾದ ಶ್ರೀ ಶಶಿಕಾಂತ್ ಪಾಟೀಲ್ ಮತ್ತು ಶ್ರೀ ನವೀನ್ ಕುಮಾರ್ ಹಾಗು ಪ್ರೋತ್ಸಾಹಿಸಿದ ಎಲ್ಲಾ ಪದಾಧಿಕಾರಿಗಳಿಗೆ, ಪೋಷಕರಿಗೆ, ಕನ್ನಡಿಗರಿಗೆ ಅನಂತಾನಂತ ಧನ್ಯವಾದಗಳು ಹಾಗು ಮೈಸೂರು ದಸರಾ ಕಾರ್ಯಕ್ರಮಕ್ಕೆ ನನ್ನನ್ನು ಸಂಚಾಲಕನಾಗಿ ನೇಮಿಸಿ ಜವಾಬ್ದಾರಿ ನೀಡಿದ್ದಕ್ಕೆ ನನ್ನ ಮನಃಪೂರ್ವಕ ಕೃತಜ್ಞತೆಗಳು.

ಒಂದು, ಎರಡು (1, 2)
ದೆಹಲಿಯಿಂದ ಹೊರಡು,
ಮೂರು, ನಾಲ್ಕು (3, 4)
ಮೆಹಂದಿ ಹಾಕು,
ಐದು, ಆರು (5, 6)
ಮಂಡ್ಯದಲ್ಲಿ ಮುದ್ದೆ ಸಾರು,
ಏಳು, ಎಂಟು (7, 8)
ದಸರಾ ವೇದಿಕೆ ನೃತ್ಯದ ನಂಟು,
ಒಂಬತ್ತು, ಹತ್ತು (9, 10)
ದೆಹಲಿ ಕರ್ನಾಟಕ ಸಂಘದ ಕನ್ನಡ ವೈಭವ ಮೆರೆದಿತ್ತು,
1 ರಿಂದ 10 ಹೀಗಿತ್ತು
ಮೈಸೂರು ದಸರಾ ಪ್ರವಾಸ ಮುಗಿದಿತ್ತು...❑

**ಅರುಣ್ ಸಿ.ಎಸ್.**






# ಸಂಘದಲ್ಲಿ ಶೃಂಗೇರಿ ಶ್ರೀ ಶಾರದಾ ಪೀಠದ ಶ್ರೀಗಳಿಂದ ಭಕ್ತಾಧಿಗಳಿಗೆ ಆಶೀರ್ವಚನ





ದಿನಾಂಕ 09.11.2025 ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಆಯೋಜನೆಗೊಂಡ ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ವಹಿಸಿದ್ದ ಶೃಂಗೇರಿ ಶಾರದಾ ಪೀಠದ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ವಿಧುಶೇಖರ ಭಾರತಿ ಮಹಾಸ್ವಾಮಿಗಳವರಿಂದ ಅನುಗ್ರಹ ಭಾಷಣ ಹಾಗು ನೆರೆದಿದ್ದವರಿಗೆ ಆಶೀರ್ವಚನ ನೀಡಲಾಯಿತು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷರು, ಕಾರ್ಯಕಾರಿ ಸಮಿತಿ ಪದಾಧಿಕಾರಿಗಳು ಮತ್ತು ಸದಸ್ಯರು ಹಾಗು ಉತ್ತಮ ಸಂಖ್ಯೆಯಲ್ಲಿ ದೆಹಲಿ ಭಕ್ತಾಧಿಗಳು ಮತ್ತು ಕನ್ನಡಿಗರು ಉಪಸ್ಥಿತರಿದ್ದರು. ಪೂಜ್ಯ ಸ್ವಾಮೀಜಿ ಅವರಿಗೆ ಸಂಘದ ಪರವಾಗಿ ಭಕ್ತಿ ಪೂರ್ವಕ ಗೌರವ ಸಮರ್ಪಣೆ ನೀಡಲಾಯಿತು.

# ಸಂಘದಲ್ಲಿ ಆಯೋಜನೆಗೊಂಡ ಸಾಹಿತ್ಯೋತ್ಸವ ಕಾರ್ಯಕ್ರಮ ಕುರಿತು ಅನಿಸಿಕೆ

**ರಾಜಧಾನಿಯಲ್ಲಿ ಕನ್ನಡ ಸಾಹಿತ್ಯ ಸಂಭ್ರಮ**

ಕಲೆ, ಸಾಹಿತ್ಯಗಳ ಅಭಿರುಚಿ ಇಲ್ಲದ ಅಥವಾ ಬೆಳೆಸಿಕೊಳ್ಳದ ಮನುಷ್ಯ ಪಶುಸಮಾನ ಎಂದು ಸಂಸ್ಕೃತ ಸುಭಾಷಿತವೊಂದು ಹೇಳುತ್ತದೆ. ಈ ಬಾರಿ ದೆಹಲಿ ಕರ್ನಾಟಕ ಸಂಘವು ಕನ್ನಡ ಸಾಹಿತ್ಯೋತ್ಸವವನ್ನು ಹಮ್ಮಿಕೊಂಡಿದ್ದು ತಿಳಿದು ನನ್ನ ಉತ್ಸಾಹ ನೂರ್ಮಡಿಯಾಗಿತ್ತು.

ವೃತ್ತಿಯಿಂದ ವಕೀಲೆ ಆದರೂ ಪ್ರವೃತ್ತಿಯಿಂದ ಸಾಹಿತ್ಯ ಪ್ರೇಮಿಯಾದ ನನಗೆ ಇದೊಂದು ಹಬ್ಬವೇ ಸರಿ. ತಪ್ಪದೆ ಎಲ್ಲ ಗೋಷ್ಠಿಗಳಿಗೂ ಹಾಜರಾಗಬೇಕೆಂದು ನಿರ್ಧರಿಸಿದ್ದೆ. ಮತ್ತೆ ಮತ್ತೆ ನನಗನ್ನಿಸುವುದು ಹೊರನಾಡಿನಲ್ಲಿ ಇರುವಾಗ ನಮ್ಮ ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಒಲವು ಹೆಚ್ಚೆ ಇರುತ್ತದೆ. ಕನ್ನಡ ಶ್ರೀಮಂತ ಭಾಷೆ. ಅಪ್ರತಿಮ ಸಾಹಿತ್ಯ, ಅಗಣಿತ ಸಾಹಿತಿಗಳು ಅವರಿಗೆಲ್ಲ ದೊರೆತ ಪ್ರತಿಷ್ಠಿತ ಪ್ರಶಸ್ತಿ ಪುರಸ್ಕಾರಗಳು.... ಹೀಗೆ ಸಂಭ್ರಮಕ್ಕೆ ಕಾರಣಗಳು ಒಂದೇ ಎರಡೇ!!

ಸಾಹಿತ್ಯೋತ್ಸವದ ಅಂಗವಾಗಿ ಪ್ರಪ್ರಥಮವಾಗಿ ದೇಶದ ಅತ್ಯಂತ ಪ್ರತಿಷ್ಠಿತ ಪುರಸ್ಕಾರವಾದ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ ಅಷ್ಟ ಮಹಾ ದಿಗ್ಗಜರ ಸ್ಮರಣೆ, ಅವರ ಬದುಕು ಮತ್ತು ಬರಹಗಳ ಕುರಿತು ವಿಚಾರ ಗೋಷ್ಠಿಗಳನ್ನು ಆಯೋಜಿಸಲಾಗಿತ್ತು. ಕಳೆದ ಆಗಸ್ಟ್ ತಿಂಗಳ ಪ್ರತಿ ಭಾನುವಾರ ಇದಕ್ಕೆಂದೇ ಮೀಸಲಿಟ್ಟಿದ್ದಾಯ್ತು.

ಕಾರ್ಯಕ್ರಮದ ರೂಪುರೇಶೆಗಳ ಬಗ್ಗೆ ಸಂಘದ ಅಧ್ಯಕ್ಷರಿಂದ ತಿಳಿದು ಬಂದಿತ್ತು.ಅದಕ್ಕಾಗಿ ಅವರು ಇತರೆ ಪದಾಧಿಕಾರಿಗಳೊಂದಿಗೆ ಸೇರಿ ಅತ್ಯಂತ ಉತ್ಸಾಹದಿಂದ ಒಂದು ಸುಂದರವಾದ ಕಾರ್ಯಕ್ರಮವನ್ನು ಆಯೋಜಿಸಿದ್ದರು.

ಅವರೆಲ್ಲರ ಕನ್ನಡ ಪರ ಕಾಳಜಿ ಮತ್ತು ಆಸಕ್ತಿ ನನಗೆ ಅತೀವ ಸಂತಸ ತಂದಿತ್ತು. ಪ್ರತೀ ವಾರವೂ ಸಂಪನ್ಮೂಲ ವ್ಯಕ್ತಿಗಳಿಂದ ವಿಚಾರ ಸಂಕಿರಣ, ಸಂವಾದ ಮತ್ತು ಸ್ಥಳೀಯ ಕಲಾವಿದರಿಂದ ಆಯಾ ಕವಿಗಳ ರಚನೆಗಳ ಪ್ರಸ್ತುತಿ. ಇತ್ಯಾದಿ ಕಾರ್ಯಕ್ರಮಗಳು.

ದೆಹಲಿ ಕನ್ನಡತಿಯರ ತಂಡದಿಂದ ಸ್ನೇಹಿತೆಯರಾದ ಶುಭ ದೇವಿಪ್ರಸಾದ್, ಮಾಲಿನಿ ಪ್ರಹ್ಲಾದ್, ಪೂಜಾ ರಾವ್, ವಾಣಿಶ್ರೀ ವಿಜಯ್ ಅವರೊಂದಿಗೆ ಚರ್ಚಿಸಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಬಗ್ಗೆ ನಿರ್ಧರಿಸಿದೆವು. 2025ರ ಆಗಸ್ಟ್ 10ರಂದು ರಾಷ್ಟ್ರಕವಿ ಕುವೆಂಪು ಮತ್ತು ಯು.ಆರ್. ಅನಂತಮೂರ್ತಿ, ಆಗಸ್ಟ್ 17ರಂದು ಕನ್ನಡದ ಆಸ್ತಿ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಮತ್ತು ವಿ.ಕೃ. ಗೋಕಾಕ್. ಆಗಸ್ಟ್ 21ರಂದು ದ.ರಾ. ಬೇಂದ್ರೆ ಮತ್ತು ಗಿರೀಶ್ ಕಾರ್ನಾಡ್, ಆಗಸ್ಟ್ 28ರಂದು ಕಡಲ ತೀರದ ಭಾರ್ಗವ ಶಿವರಾಮ್ ಕಾರಂತ ಮತ್ತು ಚಂದ್ರಶೇಖರ ಕಂಬಾರರ ಕುರಿತ ವಿಚಾರ ಸಂಕಿರಣಗಳು ಯಶಸ್ವಿಯಾಗಿ ಆಯೋಜನೆಗೊಂಡವು.

ಇಷ್ಟಕ್ಕೇ ನಿಲ್ಲದ ಉತ್ಸವ ಮುಂದುವರೆದು ಪು.ತಿ. ನರಸಿಂಹಚಾರ್, ಕೆ.ಎಸ್. ನರಸಿಂಹಸ್ವಾಮಿ, ಚೆನ್ನವೀರ ಕಣವಿ, ಪಂಜೆ ಮಂಗೇಶರಾಯರು, ಅ.ನ. ಕೃಷ್ಣರಾಯರು, ಡಿ.ವಿ. ಗುಂಡಪ್ಪ, ಎಂ. ಗೋಪಾಲಕೃಷ್ಣ ಅಡಿಗ, ಬಿ.ಎಂ. ಶ್ರೀಕಂಠಯ್ಯ, ಡಾ ಸಿದ್ದಲಿಂಗಯ್ಯ, ಎಂ. ಗೋವಿಂದ ಪೈ, ಡಾ. ಎಸ್.ಎಲ್. ಭೈರಪ್ಪ ನವರಂತಹ ಅತ್ಯುತ್ತಮ ಸಾಹಿತಿಗಳ ಬದುಕು–ಬರಹಗಳ ಕುರಿತು ಗೋಷ್ಠಿಗಳು ನಡೆದವು.

ಈ ಉತ್ಸವದ ಎಲ್ಲಾ ಕಂತುಗಳಲ್ಲಿ ತಪ್ಪದೆ ಭಾಗವಹಿಸಿದ್ದೇನೆ. ಸಮೂಹದಲ್ಲಿ ಮತ್ತು ಪ್ರತ್ಯೇಕವಾಗಿ ಸಹ. ಪ್ರತಿ ಬಾರಿಯೂ ಹಳೆಯದನ್ನು ನೆನಪಿಸಿಕೊಳ್ಳುತ್ತಾ ಹೊಸದನ್ನು ಕಲಿತಿದ್ದೇನೆ.

ನನ್ನ ಹೊಸ ಪ್ರಯತ್ನ ಕಾರಂತರ ಸಣ್ಣ ಕಥೆಯ ಓದು ಮತ್ತು ವಿಮರ್ಶೆ ಎಲ್ಲರ ಪ್ರಶಂಸೆಗೆ ಪಾತ್ರವಾಗಿದ್ದು ಒಂದು ಸುಂದರ ಅನುಭವ.

ನನ್ನ ದುರಾದೃಷ್ಟ ಸಾಹಿತ್ಯೋತ್ಸವದ ಕೊನೆಯ ಕಂತಿನಲ್ಲಿ ನಿಗದಿತ ಕಾರ್ಯಕ್ರಮಗಳಲ್ಲಿ ವ್ಯಸ್ತವಾಗಿದ್ದರಿಂದ ನನಗೆ ಭಾಗಿಯಾಗಲು ಸಾಧ್ಯವಾಗಲಿಲ್ಲ. ಆದರೆ ಇದೇ ಸಂದರ್ಭದಲ್ಲಿ ನನ್ನ ಸಂದೇಶವನ್ನು ಓದಿ ನನ್ನ ಕನ್ನಡ ಬಾಂಧವರಿಗೆ ತಲುಪಿಸಿದ ಗೆಳತಿ ಮಾಲಿನಿ ಪ್ರಹ್ಲಾದ್ ಅವರಿಗೆ ನಾನು ಋಣಿ.

ಇಂತಹ ಒಂದು ಅಪರೂಪದ ಕಾರ್ಯಕ್ರಮದ ಉಡುಗೊರೆ ನೀಡಿದ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಹೃತ್ಪೂರ್ವಕ ಧನ್ಯವಾದಗಳು.

ಈ ಸಂದರ್ಭದಲ್ಲಿ ದೆಹಲಿ ಕನ್ನಡತಿಯರು ಕಲಾವಿದರ ತಂಡವನ್ನು ಹುಟ್ಟುಹಾಕಿರುವ ಶ್ರೀಮತಿ ಮಾಲಿನಿ ಪ್ರಹ್ಲಾದ್ ಅವರಿಗೂ, ನಮ್ಮಿಂದ ಎಲ್ಲ ಸಾಹಿತಿಗಳ ಅಪರೂಪದ ರಚನೆಗಳನ್ನು ಹಾಡಿಸಿದ ಶ್ರೀಮತಿ ಶುಭಾ ದೇವಿಪ್ರಸಾದ್ ಮತ್ತು ಪ್ರತಿ ಕಂತಿನಲ್ಲೂ ನಮಗೆ ಸಹಕರಿಸಿದ ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ರಾವ್ ಅವರಿಗೂ ಅಭಿನಂದನೆಗಳು. ಈ ಕಂತುಗಳು ಹೀಗೆ ನಿರಂತರವಾಗಿರಲಿ ಎಂದು ಆಶಿಸುವ ಕನ್ನಡ ಸಾಹಿತ್ಯಭಿಮಾನಿ ನಾನು.

ಈ ಎಲ್ಲ ಸಾಹಿತಿಗಳನ್ನು ಸ್ಮರಿಸುವ, ಅಲ್ಲದೇ ಇಂದಿನ ಯುವ ಪೀಳಿಗೆಗೆ ಪರಿಚಯಿಸಿದ ಒಂದು ಅತ್ಯುತ್ತಮ ಕಾರ್ಯಕ್ರಮ ಇದಾಗಿತ್ತು. ಇದು ತಾಯ್ನಾಡಿನಿಂದ ಸಾವಿರಾರು ಮೈಲು ದೂರವಿರುವ ಕನ್ನಡಿಗರಿಗೆ ಬಡಿಸಿದ ರಸದೌತಣವೇ ಸರಿ. ದೆಹಲಿ ಕನ್ನಡಿಗರೆಲ್ಲ ಇದರ ಸದುಪಯೋಗ ಪಡೆದುಕೊಂಡಿದ್ದೇ ಆದಲ್ಲಿ ಕಾರ್ಯಕ್ರಮವು ಅರ್ಥಪೂರ್ಣವೆನಿಸೀತು. ❑

***ವೈಜಯಂತಿ ಗಿರೀಶ್***
ವಕೀಲರು, ದೆಹಲಿ ಕನ್ನಡತಿ

# ಸಂಘದಲ್ಲಿ ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಕಲ್ಯಾಣ ಕರ್ನಾಟಕ ಉತ್ಸವ ಆಚರಣೆ



ಸಮಸ್ತ ದೆಹಲಿಯ ಕನ್ನಡ ಶರಣ ಬಂಧುಗಳಿಗೆ ಶರಣು ಶರಣಾರ್ಥಿ. ದಿನಾಂಕ 28.12.2025ರ ರವಿವಾರದಂದು ದೆಹಲಿ ಕರ್ನಾಟಕ ಸಂಘ ಮತ್ತು ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಟ್ರಸ್ಟ್ ನವದೆಹಲಿ ವತಿಯಿಂದ 'ಕಲ್ಯಾಣ ಕರ್ನಾಟಕ ಉತ್ಸವ' ಕಾರ್ಯಕ್ರಮ ದೆಹಲಿ ಕರ್ನಾಟಕ ಸಂಘದ ವೇದಿಕೆಯಲ್ಲಿ ಅದ್ದೂರಿಯಾಗಿ ನಡೆಯಿತು. ಈ ಕಾರ್ಯಕ್ರಮಕ್ಕೆ ದಿವ್ಯ ಸಾನಿಧ್ಯ ವಹಿಸಿದ ಪರಮಪೂಜ್ಯ ಡಾ. ಜಗದ್ಗುರು ಶ್ರೀ ಚನ್ನಬಸವಾನಂದ ಸ್ವಾಮಿಯವರು ತಮ್ಮ ಅಮೂಲ್ಯ ಸಮಯವನ್ನು ಬಿಟ್ಟು ಕಾರ್ಯಕ್ರಮಕ್ಕೆ ಬಂದು ಸಭೆಗೆ ಶೋಭೆಯನ್ನು ತಂದುಕೊಟ್ಟರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ನಿವೃತ್ತ ಹಿರಿಯ ಐಎಎಸ್ ಅಧಿಕಾರಿ ಶ್ರೀ ಅಮರನಾಥ್ ತಲವಾಡೆಯವರು, ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ, 'ಕಲ್ಯಾಣ ಕರ್ನಾಟಕ ರತ್ನ' ಪ್ರಶಸ್ತಿಗೆ ಭಾಜನರಾದ ಶ್ರೀ ಶಿವಶಂಕರ ಶರಣಪ್ಪಾ ರಾಂಪುರೆ, ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಟ್ರಸ್ಟ್‌ನ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳ ಜೊತೆ ವೇದಿಕೆ ಮೇಲೆ ಉಪಸ್ಥಿತರಿದ್ದರು.

ಇನ್ನೋರ್ವ ಅತಿಥಿ ಮಾಜಿ ಶಾಸಕರಾದ ಶ್ರೀ ಮಲ್ಲಿಕಾರ್ಜುನ ಖೂಬಾ ಅವರು ಕಾರಣಾಂತರಗಳಿಂದ ಕಾರ್ಯಕ್ರಮಕ್ಕೆ ಬರಲಾಗದಿದ್ದ ಸಂದರ್ಭದಲ್ಲಿ ತಮ್ಮ ಸಂದೇಶ ನೀಡಿ ಶುಭ ಕೋರಿದರು. ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಟ್ರಸ್ಟಿನ ಅಧ್ಯಕ್ಷರಾದ ಶ್ರೀ ವಿ.ವಿ. ಬಿರಾದಾರ ಅವರು ಸ್ವಾಮೀಜಿ ಅವರನ್ನು ಮತ್ತು ಅತಿಥಿಗಳನ್ನು ಎಲ್ಲರ ಪರವಾಗಿ ಆತ್ಮೀಯವಾಗಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜರವರು ಕಲ್ಯಾಣ ಕರ್ನಾಟಕ ಉತ್ಸವ ಕಾರ್ಯಕ್ರಮದ ಚಾಲನೆಗೆ ವೇದಿಕೆ ಮೇಲಿದ್ದ ಅತಿಥಿಗಣ್ಯರೊಂದಿಗೆ ದೀಪ ಪ್ರಜ್ವಲನೆ ಮಾಡುವುದರ ಮೂಲಕ ಅವಕಾಶ ಮಾಡಿಕೊಟ್ಟರು.

ನಿವೃತ್ತ ಪ್ರಿನ್ಸಿಪಾಲರು ಮತ್ತು ಸಾಮಾಜಿಕ, ಧಾರ್ಮಿಕ ಸಾಹಿತ್ಯಕ ಹಾಗು ಸಾಂಸ್ಕೃತಿಕ ಶೈಕ್ಷಣಿಕ ರಂಗದಲ್ಲಿ ಅಪಾರ ಸೇವೆ ಸಲ್ಲಿಸಿದವರಾದ ಶ್ರೀ ಶಿವಶಂಕರ ಶರಣಪ್ಪಾ ರಾಂಪುರೆ ಅವರಿಗೆ ಸಭೆಯಲ್ಲಿ ಎಲ್ಲರ ಸಮ್ಮುಖದಲ್ಲಿ ವಿಜೃಂಭಣೆಯಿಂದ 2025ರ 'ಕಲ್ಯಾಣ ಕರ್ನಾಟಕ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಶ್ರೀ ಶಿವಶಂಕರ ಶರಣಪ್ಪಾ ರಾಂಪುರೆ ಅವರು ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತಾ, ತಮ್ಮ ಜೀವನದಲ್ಲಿನ ಪರಿಶ್ರಮದ ಹಾದಿ ಮತ್ತು ಅನುಭವವನ್ನು ಎಲ್ಲರಿಗೂ ತಿಳಿಸಿ, ದೆಹಲಿಯಲ್ಲಿ ಇಂತಹ ಕಾರ್ಯಕ್ರಮಕ್ಕೆ ತಮ್ಮನ್ನು ಆಹ್ವಾನಿಸಿದ್ದಕ್ಕಾಗಿ ಧನ್ಯವಾದಗಳು ತಿಳಿಸಿದರು

ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ ದೆಹಲಿ ಕರ್ನಾಟಕ ಸಂಘ ಇಲ್ಲಿನ ಎಲ್ಲ ಸಂಘ–ಸಂಸ್ಥೆಗಳ ಜೊತೆ ಮಾತೃ ಸ್ಥಾನದಲ್ಲಿ ನಿಂತು ಬೇಕಾದ ಸಹಕಾರ ನೀಡುತ್ತಾ ಬಂದಿದೆ, ಮುಂದೆಯೂ ಎಲ್ಲ ಕಾರ್ಯಕ್ರಮಗಳ ಜೊತೆ ನಿಲ್ಲುತ್ತೇವೆ, ಎಲ್ಲರಿಗೂ ಶುಭವಾಗಲಿ ಎಂದರು. ಪರಮಪೂಜ್ಯರಾದ ಶ್ರೀ ಡಾ. ಚನ್ನಬಸವಾನಂದ ಸ್ವಾಮಿಯವರು ಮಾತನಾಡಿ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಕ್ಕೆ ತಮ್ಮ ಹರ್ಷವನ್ನು ವ್ಯಕ್ತಪಡಿಸಿ ಎಲ್ಲರಿಗೂ ತಮ್ಮ ಆಶೀರ್ವಚನ ನೀಡಿದರು. ಶ್ರೀ ಅಮರನಾಥ್ ತಲವಾಡೆಯವರು ಮಾತನಾಡುತ್ತಾ ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಟ್ರಸ್ಟ್‌ನ ಕಾರ್ಯಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ಎಲ್ಲರಿಗೂ ಕಲ್ಯಾಣ ಕರ್ನಾಟಕ ಉತ್ಸವದ ಶುಭಾಶಯಗಳನ್ನು ತಿಳಿಸಿದರು.

ಸಭಾ ಕಾರ್ಯಕ್ರಮದ ಕೊನೆಯಲ್ಲಿ ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಟ್ರಸ್ಟ್ ಕಾರ್ಯದರ್ಶಿಗಳಾದ ಡಾ. ಎಸ್.ಎಲ್. ಭಂಡಾರಕರ್ ಅವರು ಕಲ್ಯಾಣ ಕರ್ನಾಟಕ ವಿಮೋಚನಾ ಹೋರಾಟದಲ್ಲಿ ನಡೆದ ಘಟನೆಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ನೀಡುತ್ತಾ, ಪ್ರತಿ ವರ್ಷ ಸೆಪ್ಟೆಂಬರ್ 17ರಂದು ಈ ವಿಮೋಚನಾ ದಿನವನ್ನು ಆಚರಣೆ ಮಾಡುವ ನಿಟ್ಟಿನಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ರಾಷ್ಟ್ರ ಧ್ವಜಾರೋಹಣ ಮತ್ತು ಕಲ್ಯಾಣ ಕರ್ನಾಟಕ ಉತ್ಸವವನ್ನು ಸಂಘದ ಸಭಾಂಗಣದಲ್ಲಿ ಕಳೆದ ಹಲವಾರು ವರ್ಷಗಳಿಂದ ಮಾಡುತ್ತಿರುವುದನ್ನು ತಿಳಿಸಿ, ಪೂಜ್ಯ ಸ್ವಾಮೀಜಿಯವರಿಗೆ, ಅತಿಥಿಗಳಿಗೆ ಮತ್ತು ಸಭಾಂಗಣದಲ್ಲಿ ಉಪಸ್ಥಿತರಿದ್ದ ಎಲ್ಲರಿಗೂ ಧನ್ಯವಾದಗಳನ್ನು ಅರ್ಪಿಸಿದರು.

ಕಲ್ಯಾಣ ಕರ್ನಾಟಕ ಭಾಗದ ಬೀದರ್ ಜಿಲ್ಲೆಯ ಕೋಳಿ ಮಂಡಳಿಯ ಕಲಾವಿದರು ಹಾಗು ಕುಮಾರಿ ಭೂಮಿಕಾ ಮಧುಸೂದನ್, ಸುಗಮ ಸಂಗಿತ ಗಾಯಕರು, ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಬಂದು ತಮ್ಮ ಸಂಗೀತ ನಿನಾದ ನೀಡಿ ಸಭಿಕರನ್ನು ರಂಜಿಸಿದರು. ದೆಹಲಿಯ ಸ್ಥಳೀಯ ಕನ್ನಡ ಕಲಾವಿದರು, ಮಕ್ಕಳು ಮತ್ತು ಮಹಿಳೆಯರು ನಾಡಗೀತೆ, ಸಮೂಹ ನೃತ್ಯ ಪ್ರದರ್ಶನ, ಭರತನಾಟ್ಯ, ಸುಗಮ ಸಂಗೀತ ನೀಡಿ ಕಾರ್ಯಕ್ರಮದ ಮೆರುಗನ್ನು ಹೆಚ್ಚಿಸಿದರು.

ಈ ಎಲ್ಲ ಕಾರ್ಯಕ್ರಮಕ್ಕೆ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ನೀಡಿದ ಸಲಹೆ, ಸಹಕಾರಗಳಿಗೆ ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಟ್ರಸ್ಟ್‌ನ ಅಧ್ಯಕ್ಷರು ಕಾರ್ಯದರ್ಶಿ ಹಾಗೂ ಪದಾಧಿಕಾರಿಗಳು ಸದಾ ಕೃತಜ್ಞರಾಗಿದ್ದೇವೆ. ದೆಹಲಿಗೆ ದೂರದ ಪ್ರದೇಶಗಳಿಂದ ಪ್ರಯಾಣ ಮಾಡಿ ಕೊರೆಯುವ ಚಳಿಯಲ್ಲಿಯೂ ಮೂನ್ನೂರಕ್ಕೂ ಹೆಚ್ಚು ಜನ ಪಾಲ್ಗೊಂಡು ಈ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟಂತಹ ಸಮಸ್ತ ದೆಹಲಿ ಕನ್ನಡಿಗರಿಗೆ ಅನಂತಾನಂತ ನಮನಗಳು. ❑

**ವಿ.ವಿ. ಬಿರಾದಾರ**
ಅಧ್ಯಕ್ಷರು
ಮತ್ತು ಕಾರ್ಯದರ್ಶಿಗಳು, ಪದಾಧಿಕಾರಿಗಳು
ಹಾಗು ಸದಸ್ಯರು, ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ
ಟ್ರಸ್ಟ್ (ರಿ) ನವದೆಹಲಿ





# ದೇವಭೂಮಿಯ ಮತ್ತೊಂದು ಪರ್ಯಟನೆ

ಅನೇಕ ಬಾರಿ ಆಯ್ತು. ಮತ್ತೆ ಮತ್ತೆ ಮತ್ತೆ... ಅದರೇ ಅಗೆದಷ್ಟು ಅಗಾಧವೆನಿಸುವ, ದೇವಭೂಮಿ ಎಂದು ಅರ್ಥಪೂರ್ಣವಾಗಿ ಕರೆಸಿಕೊಳ್ಳುವ ಈ ಪ್ರದೇಶ ನನಗೆ ಎಂದೆಂದಿಗೂ ಅಚ್ಚುಮೆಚ್ಚು.

ಈ ಬಾರಿ ನಾವು ಮುಖ್ಯವಾಗಿ ಪರ್ಯಟನೆ ಮಾಡಲು ಹೋಗಿದ್ದು ಚಾರಧಾಮ್ ಎಂದೇ ಖ್ಯಾತವಾಗಿರುವ ಬದರಿನಾಥ್, ಕೇದಾರನಾಥ್, ಗಂಗೋತ್ರಿ ಮತ್ತು ಯಮುನೋತ್ರಿ. ಆದರೆ ಇಲ್ಲಿ ನನ್ನನ್ನು ಆಕರ್ಷಿಸಿದ್ದು ಮಾರ್ಗ ಮಧ್ಯದಲ್ಲಿ ವೀಕ್ಷಿಸಿದ ಪಂಚ ಪ್ರಯಾಗಗಳು.

ಭಾರತೀಯರಿಗೆ ವಿಶ್ವಾಸವೇ ಬುನಾದಿ. ಪ್ರತಿ ಹೆಜ್ಜೆಯಲ್ಲೂ ದೇವರನ್ನು ಕಾಣುವ, ಪವಿತ್ರತೆಯನ್ನು ಹುಡುಕುವ ಪ್ರವೃತ್ತಿ ನಮ್ಮದು. ಪ್ರಕೃತಿ, ನದಿ, ಬೆಟ್ಟ ಗುಡ್ಡ ಎಲ್ಲೆಲ್ಲಿಯೂ ಸಹ !! ಉತ್ತರಖಂಡದ ಈ ಐದು ಪ್ರಯಾಗಗಳು ಇದಕ್ಕೆ ಸಾಕ್ಷಿಯಾಗಿ ನಿಲ್ಲುತ್ತವೆ.

ಪ್ರಯಾಗ ಎಂದರೆ ಎರಡು ಅಥವಾ ಹೆಚ್ಚು ನದಿಗಳು ಸಂಗಮವಾಗುವ ಪವಿತ್ರ ಸ್ಥಳ. ಹಿಮಾಲಯದಿಂದ ಹರಿದು ಬರುವ ನದಿಗಳು ವಿಶೇಷವಾಗಿ ಅಲ್ಲಿಯ ಗಿಡಮೂಲಿಕೆಗಳ ಸಾರ–ಸತ್ವಗಳನ್ನು ಹೊತ್ತು ಬರುತ್ತವೆ ಎನ್ನುವುದು ನಿಜವೇ. ಹೀಗಿರುವಾಗ ಎರಡು ನದಿಗಳ ಸಂಗಮವಾದರೆ ಅದರ ಪ್ರಬಲತೆ ದ್ವಿಗುಣವಾಗಲೇ ಬೇಕಲ್ಲವೇ ! ಅದಕ್ಕೆಂದೇ ಅಂತಹ ಸಂಗಮ ಸ್ಥಳಕ್ಕೆ ಹೆಚ್ಚಿನ ಮಹತ್ವ, ಇಂತಹ ಸಂಗಮದಲ್ಲಿ ಸ್ನಾನ–ಪಾನ ಮಾಡುವುದು ಅತೀ ಶ್ರೇಷ್ಠ.

ಉತ್ತರಖಂಡದಲ್ಲಿ ಅನೇಕ ಸಂಗಮಗಳಿದ್ದರೂ ಸಹ ಈ ಐದು ಸಂಗಮಗಳು ಪಂಚ ಪ್ರಯಾಗಗಳು ಎಂದು ಪ್ರಸಿದ್ಧಿ ಪಡೆದಿವೆ: ವಿಷ್ಣುಪ್ರಯಾಗ, ನಂದಪ್ರಯಾಗ, ಕರ್ಣಪ್ರಯಾಗ, ರುದ್ರಪ್ರಯಾಗ ಮತ್ತು ದೇವಪ್ರಯಾಗ.



FIG. 1: PANCH PRAYAG

ಈ ಎಲ್ಲ ಸಂಗಮಗಳಿಗೂ ಪೌರಾಣಿಕ ಹಿನ್ನೆಲೆ ಇರುವುದು ವಿಶೇಷ. ಶ್ರದ್ಧಾಳುಗಳಿಗೆ ಇನ್ನು ಹೆಚ್ಚಿನ ಆಸ್ಥೆ ಬರುವುದಂತೂ ನಿಸ್ಸಂಶಯ. ಅಷ್ಟೇ ಅಲ್ಲ ಭೌಗೋಳಿಕವಾಗಿ ಆಸಕ್ತಿ ಮೂಡಿಸುವ ವಿಷಯ...ಪ್ರಕೃತಿಯಲ್ಲಿ ಸೌಂದರ್ಯವನ್ನು ಹೆಚ್ಚಿಸುವ ವಿಷಯ...ಬೆಟ್ಟಗಳಿಂದ ಎರಡು ನದಿಗಳು ಹರಿದು ಬಂದು ಒಂದಾಗುವ ದೃಶ್ಯ ಕಣ್ಣಿಗೆ ಮನಸ್ಸಿಗೆ ಮುದ ನೀಡುವ ವಿಷಯ...





ಪಂಚಪ್ರಯಾಗದ ಬಗ್ಗೆ ಹೇಳುವುದಾದರೆ, ಇಲ್ಲಿ ಮುಖ್ಯವಾಗಿ ಕಾಣುವುದು ಸತೋಪಂಥ್ ಮತ್ತು ಭಾಗೀರಥಿ ಖರಖ್ ಹಿಮಪ್ರವಾಹ (ಬದರಿನಾಥ)ದಿಂದ ಹರಿದು ಬರುವ ಅಲಕನಂದ, ನಾಲ್ಕು ನದಿಗಳೊಂದಿಗೆ ಸಂಗಮಿಸಿ ಕೊನೆಗೆ ಭಾಗೀರಥಿಯನ್ನು ಸೇರಿ ಗಂಗೆ ಎನಿಸಿಕೊಳ್ಳುತ್ತಾಳೆ. ಈ ಎಲ್ಲ ನದಿಗಳೂ ಹಿಮ ಪ್ರವಾಹ (glaciers) ದಿಂದ ಹುಟ್ಟಿ ಬಂದವುಗಳೇ.

ಸಾಮಾನ್ಯವಾಗಿ ಗಂಗೆ ಹುಟ್ಟುವುದು ಗಂಗೋತ್ರಿಯಲ್ಲಿ ಎನ್ನುವ ಅಭಿಪ್ರಾಯವಿದೆ. ಆದರೆ ಗಂಗೋತ್ರಿಯಲ್ಲಿ ಉಗಮವಾಗುವುದು ಗಂಗಾಮೂಲ ಭಾಗೀರಥಿ ಮಾತ್ರ. ಪುರಾಣದಲ್ಲಿ ಉಲ್ಲೇಖವಾಗಿರುವ ಭಗೀರಥನ ಕಥೆಯಲ್ಲಿ ಬರುವುದು ಇದೇ ಭಾಗೀರಥಿ. ಸಗರ ಪುತ್ರರ ಮೋಕ್ಷಕ್ಕಾಗಿ ಸ್ವರ್ಗದಿಂದ ಇಳಿದು ಬಂದವಳು ಇವಳೇ. ಗಂಗೋತ್ರಿಯಲ್ಲಿ ಕಾಣುವ ಇವಳ ರಭಸ, ಮೊರೆಯುವ ಭೋರ್ಗರೆತ ನೋಡಿದರೆ ಭಗೀರಥನನ್ನು ಹಿಂಬಾಲಿಸಿ ಸೊಕ್ಕಿನಿಂದ ಉಕ್ಕಿ ಬಂದವಳು ಇವಳೇ ಇರಬಹುದು ಅನುಮಾನವೇ ಇಲ್ಲ ಎನಿಸುತ್ತದೆ !!

ಬದರಿನಾಥ್ ಬಳಿ ಹಿಮಪ್ರವಾಹದಿಂದ ಹುಟ್ಟಿದ ಅಲಕನಂದೆಯು ಮುಂದೆ ವಿಷ್ಣುಪ್ರಯಾಗದಲ್ಲಿ ವಸುಧಾರ ತಾಲ್‌ನಲ್ಲಿ ಉಗಮಿಸಿ ಬರುವ ಧೌಲಿಗಂಗ ನದಿಯೊಂದಿಗೆ ಸಂಗಮಿಸಿ ಹರಿಯುತ್ತದೆ.

ನಾರದ ಮುನಿಗಳು ಬ್ರಹ್ಮಾಂಡ ಶಕ್ತಿಯನ್ನು ಪಡೆಯುವ ಹಂಬಲದಿಂದ ಭಗವಾನ್ ವಿಷ್ಣುವಿನ ಕೃಪೆಗಾಗಿ ತಪಸ್ಸು ಮಾಡಿದ ಸ್ಥಳ, ವಿಷ್ಣು ಪ್ರತ್ಯಕ್ಷನಾಗಿ ನಾರದರಿಗೆ ವರ ಕರುಣಿಸಿದ್ದಕ್ಕಾಗಿ ಈ ಪವಿತ್ರ ಸಂಗಮವು ವಿಷ್ಣು ಪ್ರಯಾಗವೆಂದು ಖ್ಯಾತವಾಯಿತು.

ಮುಂದೆ ನಂದ ಪರ್ವತದಿಂದ ಹರಿದು ಬಂದ ನಂದಾಕಿನಿಯೊಂದಿಗೆ ಅಲಕನಂದೆಯು ಸಂಗಮಿಸುವ ಸ್ಥಳ ನಂದಪ್ರಯಾಗ. ರಾಜ ನಂದನು ಇಲ್ಲಿ ಮಹಾಯಜ್ಞ ಮಾಡಿ ವಿಷ್ಣುವನ್ನು ಒಲಿಸಿಕೊಂಡು ಮುಂದೆ ವಿಷ್ಣುವೇ ತನ್ನ ಮಗನಾಗಿ ಹುಟ್ಟಬೇಕೆಂಬ ವರವನ್ನು ಪಡೆದಿದ್ದನಂತೆ. ಅದೇ ಈ ಸ್ಥಳ ನಂದಪ್ರಯಾಗವೆಂದು ಪ್ರಸಿದ್ಧಿ ಪಡೆಯಿತು.

ನಂತರ ಕುಮಾಂವ್ ಪ್ರಾಂತದ ಬಾಗೇಶ್ವರದ ಬಳಿ ಪಿಂಡರಿ ಹಿಮಪ್ರವಾಹದಲ್ಲಿ ಉಗಮಿಸುವ ಪಿಂಡರ್ ಗಂಗಾನದಿ ಅಲಕನಂದ ನದಿಯನ್ನು ಸಂಗಮಿಸುವ ಸ್ಥಳ ಕರ್ಣ ಪ್ರಯಾಗ. ಇದು ಕರ್ಣ ತಪಸ್ಸು ಮಾಡಿದ ಸ್ಥಳವೆಂದೂ ಅಲ್ಲದೆ ಕರ್ಣನ ಅಂತಿಮ ಕ್ರಿಯೆಗಳೂ ಸಹ ಇಲ್ಲೇ ಮಾಡಲ್ಪಟ್ಟಿವೆ ಎಂತಲೂ ಪುರಾಣಗಳು ಉಲ್ಲೇಖಿಸಿವೆ.

ಮುಂದೆ ಕೇದಾರನಾಥ್ ಬಳಿ ಚೋರಬರಿ

ಹಿಮಪ್ರವಾಹದಿಂದ ಉಗಮಿಸಿ ಮಂದಗತಿಯಲ್ಲಿ ಹರಿಯುವ ಮಂದಾಕಿನಿಯೊಂದಿಗೆ ಅಲಕನಂದೆಯ ಸಂಗಮ ರುದ್ರಪ್ರಯಾಗದಲ್ಲಿ. ನಾರದರು ತಮ್ಮ ಸಂಗೀತ ಸಾಧನೆಗಾಗಿ ಶಿವನನ್ನು ಕುರಿತು ತಪಸ್ಸು ಮಾಡಿದ ಪುಣ್ಯಸ್ಥಳ. ಶಿವನು ರುದ್ರನ ರೂಪದಲ್ಲಿ ಪ್ರತ್ಯಕ್ಷನಾಗಿ ನಾರದರಿಗೆ ಸಂಗೀತ ವಿದ್ಯೆಯನ್ನು ಕರುಣಿಸಿ ಆಶೀರ್ವದಿಸಿದನಂತೆ. ಶಿವನು ರುದ್ರರೂಪದಲ್ಲಿ ಪ್ರತ್ಯಕ್ಷನಾದ ಕಾರಣ ಈ ಸಂಗಮಕ್ಕೆ ರುದ್ರಪ್ರಯಾಗ ಎಂದು ಹೆಸರಾಯಿತಂತೆ.

ಅಂತ್ಯದಲ್ಲಿ ಅಲಕನಂದೆಯು ಗಂಗಾ ಮೂಲ ಗಂಗೋತ್ರಿಯಿಂದ ಬರುವ ಭಾಗೀರಥಿಯೊಂದಿಗೆ ದೇವಪ್ರಯಾಗದಲ್ಲಿ ಮಿಲನಗೊಳ್ಳುತ್ತದೆ. ನಂತರ ಮುಂದೆ ಪ್ರವಹಿಸುವುದು ಗಂಗೆ ಎನಿಸಿಕೊಂಡು. ದೇವಪ್ರಯಾಗವು ಅತ್ಯಂತ ಪುಣ್ಯಸ್ಥಳ ಎಂದು ಪರಿಗಣಿಸಲ್ಪಟ್ಟಿದೆ. ಇದು ಶ್ರೀ ರಾಮನು ಯುದ್ಧಾನಂತರ ರಾವಣ ಸಂಹಾರದಿಂದ ಒದಗಿದ್ದ ಬ್ರಹ್ಮಹತ್ಯಾ ದೋಷ ನಿವಾರಣೆಗಾಗಿ ತಪಸ್ಸು ಮಾಡಿದ ಸ್ಥಳ. ಅದಕ್ಕಾಗಿಯೇ ಅಲ್ಲಿ ರಾಮನಾಥ ದೇಗುಲವು ಇದೆ. ಈ ದೇವಾಲಯದಲ್ಲಿ ಸಾಮಾನ್ಯವಾಗಿ ಕಂಡುಬರುವಂತೆ ಲಕ್ಷ್ಮಣ ಸೀತೆಯರೊಂದಿಗೆ ಇರದೇ ಕೇವಲ ಶ್ರೀರಾಮನ ಮೂರ್ತಿ ಮಾತ್ರ ಸ್ಥಾಪಿತವಾಗಿದೆ.

ಈ ಎಲ್ಲಾ ಮಾಹಿತಿಗಳ ಹಿನ್ನೆಲೆಯಲ್ಲಿ ನಮ್ಮ ಚಾರಧಾಮ ಪರ್ಯಟನೆಯು ಅಂತಿಮ ಹಂತ ತಲುಪಿತ್ತು. ನಾಲ್ಕು ಧಾಮಗಳ ದರ್ಶನವನ್ನೂ ಸಹ ಸದ್ಯದಲ್ಲೇ ಬರವಣಿಗೆಯ ರೂಪಕ್ಕೆ ತರುವ ಪ್ರಯತ್ನ ಮಾಡುತ್ತೇನೆ.

ಹೀಗೆ ಪಂಚಪ್ರಯಾಗಗಳ ದರ್ಶನ ಮಾಡಿ ಅವುಗಳ ಆಳ ಹರಿವುಗಳನ್ನು ಅಚ್ಚರಿಯಿಂದ ವೀಕ್ಷಿಸಿದ್ದೆ. ನಿಸರ್ಗದ ರಮಣೀಯತೆ ಕಣ್ಮನಗಳನ್ನು ದಣಿಸಿತ್ತು. ಅನುಭವಗಳನ್ನು ಬರವಣಿಗೆಗೆ ಇಳಿಸಲು ಶಬ್ದಗಳ ಕೊರತೆ ಕಾಣುತ್ತಿತ್ತು. ಆದರೂ ತೋಚಿದ್ದನ್ನು ಬರೆಯುವ ಪ್ರಯತ್ನ ಮಾಡಿದೆ.

ಪರ್ಯಟನೆಯನ್ನು ಮೆಲುಕು ಹಾಕುವಾಗ ನನಗನ್ನಿಸಿದ್ದು... ಈ ಪುಣ್ಯ ಸಂಗಮಗಳನ್ನು ನೋಡಿದಾಗ ದೇವರ ಅನುಭವ ಆಗದಿದ್ದರೂ ದೈವತ್ವದ ಅನುಭವವಾಗುವುದು ಖಚಿತ. ❑



***ವೈಜಯಂತಿ ಗಿರೀಶ್***
ವಕೀಲರು, ದೆಹಲಿ ಕನ್ನಡತಿ

# ಕಲ್ಯಾಣ ಕರ್ನಾಟಕ 'ವಿಮೋಚನಾ ದಿನಾಚರಣೆ' ಅಂಗವಾಗಿ ಸಂಘದಲ್ಲಿ ರಾಷ್ಟ್ರ ಧ್ವಜಾರೋಹಣ



ದಿನಾಂಕ 17.09.2025 ರಂದು ಸಂಘದ ಆವರಣದಲ್ಲಿ ಬೆಳಿಗ್ಗೆ 9.00 ಗಂಟೆಗೆ ರಾಷ್ಟ್ರ ಧ್ವಜಾರೋಹಣ ಮಾಡಿ ರಾಷ್ಟ್ರಗೀತೆ ಹಾಡುವುದರೊಂದಿಗೆ ವಂದನೆ ಸಲ್ಲಿಸುವ ಮೂಲಕ ಕಲ್ಯಾಣ ಕರ್ನಾಟಕ (ಹಿಂದಿನ ಹೈದ್ರಾಬಾದ್ ಕರ್ನಾಟಕ) ವಿಮೋಚನಾ ದಿನವನ್ನು ಸಂಭ್ರಮದಿಂದ ಆಚರಿಸಲಾಯಿತು. ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಬಸವ ಕಲ್ಯಾಣ ಕ್ಷೇತ್ರದ ಮಾಜಿ ಶಾಸಕರಾದ ಶ್ರೀ ಮಲ್ಲಿಕಾರ್ಜುನ ಖೂಬಾ ಅವರು ಧ್ವಜಾರೋಹಣವನ್ನು ನೆರವೇರಿಸಿ ದೆಹಲಿ ಕರ್ನಾಟಕ ಸಂಘವು ಈ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿರುವುದರ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಇನ್ನೋರ್ವ ಮುಖ್ಯ ಅತಿಥಿ ಶ್ರೀ ಅಮರನಾಥ ತಲವಾಡೆ ಐಎಎಸ್, ನಿವೃತ್ತ ಕಾರ್ಯದರ್ಶಿ, ಭಾರತ ಸರ್ಕಾರ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ, ಉಪಾಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಟ್ರಸ್ಟ್‌ನ ಗೌರವ ಕಾರ್ಯದರ್ಶಿ ಡಾ. ಎಸ್.ಎಲ್. ಭಂಡಾರ್‌ಕರ್, ದೆಹಲಿ ಮತ್ತು ಗುರುಗಾಂವ್‌ನಲ್ಲಿ ನೆಲಸಿರುವ ಕಲ್ಯಾಣ ಕರ್ನಾಟಕ ಭಾಗದ ಅನೇಕ ಕನ್ನಡಿಗರು ಹಾಗು ಇನ್ನಿತರ ದೆಹಲಿ ಕನ್ನಡಿಗರು ಉಪಸ್ಥಿತರಿದ್ದರು. ಡಾ. ಎಸ್.ಎಲ್. ಭಂಡಾರಕರ್ ಅವರು ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆಯ ಮಹತ್ವವನ್ನು ಮತ್ತು ಹೈದ್ರಾಬಾದ್ ನಿಜಾಮರಿಂದ ಆ ಭಾಗವನ್ನ ವಿಮೋಚನೆಗೊಳಿಸಲು ಅದಕ್ಕಾಗಿ ಆ ಭಾಗದ ಜನರು ಅಂದಿನ ಸಮಯದಲ್ಲಿ ಮಾಡಿದ ಹೋರಾಟವನ್ನು ಹಾಗೂ ಸ್ವಾತಂತ್ರ್ಯ ಭಾರತ ಒಕ್ಕೂಟದಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶವನ್ನು ವಿಲೀನಗೊಳಿಸಲು ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಬಾಯಿ ಪಟೇಲ್ ನೀಡಿದ ಕೊಡುಗೆಯನ್ನು ಸ್ಮರಿಸುತ್ತಾ ಧ್ವಜಾರೋಹಣ ನಡೆಸಿಕೊಟ್ಟ ಅತಿಥಿಗಳಾದ ಶ್ರೀ ಮಲ್ಲಿಕಾರ್ಜುನ ಖೂಬಾ ಅವರಿಗೆ ಮತ್ತು ಕಾರ್ಯಕ್ರಮಕ್ಕೆ ಅವಕಾಶ ಮಾಡಿಕೊಟ್ಟಂತಹ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಿಗೂ, ಪದಾಧಿಕಾರಿಗಳು ಮತ್ತು ನೆರೆದಿದ್ದ ಎಲ್ಲರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆಯ ಶುಭಾಶಯಗಳನ್ನು ತಿಳಿಸಿದರು. ❑

***ಅಭಿಮತ ವರದಿ***

# ಸಂಘದ ಸಭಾಂಗಣದಲ್ಲಿ ಕನ್ನಡ ಚಲನಚಿತ್ರಗಳ ಪ್ರದರ್ಶನ

ಸುಸಜ್ಜಿತ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ದಿನಾಂಕ 04.10.2025 ರಂದು ಸಂಜೆ ದೆಹಲಿಯ ಸಿನೆಮಾ ಪ್ರಿಯರಿಗಾಗಿ ಇತ್ತೀಚೆಗೆ ತೆರೆಕಂಡು ಬಹಳ ಯಶಸ್ವಿಯಾದ ಜೆ.ಪಿ. ತುಮಿನಾಡ್ ನಿರ್ದೇಶನದ ಶನೀಲ್ ಗೌತಮ್, ಜೆ.ಪಿ. ತುಮಿನಾಡ್, ಸಂಧ್ಯಾ ಅರಕೆರೆ, ಪ್ರಕಾಶ್ ತುಮಿನಾಡ್, ದೀಪಕ್ ರೈ ಫಾಣಾಜೆ, ಮೈಮ್ ರಾಮದಾಸ್ ಮತ್ತು ರಾಜ್ ಬಿ. ಶೆಟ್ಟಿಯ ನಟನೆಯ ಹೊಚ್ಚ ಹೊಸ ಕನ್ನಡ ಚಲನಚಿತ್ರ 'ಸು ಫ್ರಮ್ ಸೋ' ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಹಾಗೆಯೇ ದಿನಾಂಕ 26.10.2025 ರಂದು ಸಾಯಂಕಾಲ ಶ್ರೀರಾಜ್ ನಿರ್ದೇಶನದ, ಪೃಥ್ವಿ ಅಂಬಾರ್, ಕಾವ್ಯಶೈವ ಅಭಿನಯದ 'ಕೊತ್ತಲವಾಡಿ' ಚಲನಚಿತ್ರವನ್ನು ಮತ್ತು ದಿನಾಂಕ 09.11.2025ರಂದು ಸಂಜೆ ಶ್ರೀ ರಿಷಬ್ ಶೆಟ್ಟಿ ಅವರ (ರಚನೆ ಮತ್ತು ನಿರ್ದೇಶನ ಮತ್ತು ಅಭಿನಯದ) 'ಕಾಂತಾರ' ಒಂದು ದಂತಕಥೆ ಅಧ್ಯಾಯ–1, ಸೂಪರ್ ಹಿಟ್ ಚಲನಚಿತ್ರವನ್ನು ಸಹಾ ಸಂಘದ ಸಭಾಂಗಣದಲ್ಲಿ ಪ್ರದರ್ಶಿಸಲಾಗಿತ್ತು.

ಹೊಸದಾಗಿ ಬಿಡುಗಡೆಗೊಂಡು ಎಲ್ಲೆಡೆ ಅತ್ಯಂತ ಜನಪ್ರಿಯತೆ ಪಡೆದು ವಾಣಿಜ್ಯಕವಾಗಿ ಹಣ ಗಳಿಕೆಯಲ್ಲಿ ಯಶಸ್ವಿಯಾದಂತಹ ಈ ಚಲನಚಿತ್ರ ಚಿತ್ರಗಳನ್ನು ನೂತನ ಸೌಂಡ್ ಸಿಸ್ಟಮ್, ಡಿಜಿಟಲ್ ಪ್ರೊಜೆಕ್ಟರ್ ಹಾಗು ಹೊಸ ಆಸನ ಮತ್ತು ಕಾರ್ಪೆಟ್ ಅಳವಡಿಕೆಗೊಂಡು ಸಜ್ಜಾಗಿರುವ ಸಂಘದ ಸಭಾಂಗಣದ ಬೆಳ್ಳಿ ತೆರೆಯ ಮೇಲೆ ವೀಕ್ಷಿಸಿದ ದೆಹಲಿ ಕನ್ನಡಿಗರು ಹರ್ಷಪಟ್ಟರು. ❑

# 77ನೇ ಗಣರಾಜ್ಯೋತ್ಸವ ಅಂಗವಾಗಿ ಸಂಘದಲ್ಲಿ ರಾಷ್ಟ್ರ ಧ್ವಜಾರೋಹಣ



ದಿನಾಂಕ 26.01.2026 ರಂದು ಬೆಳಿಗ್ಗೆ 9.30 ಗಂಟೆಗೆ ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ರಾಷ್ಟ್ರ ಧ್ವಜಾರೋಹಣದೊಂದಿಗೆ ಗಣರಾಜ್ಯೋತ್ಸವ ಆಚರಣೆಯ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಶ್ರೀ ಡಿ.ವಿ.ಎಸ್. ಮೂರ್ತಿ ಅವರು ಆಗಮಿಸಿದ್ದರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಮತ್ತು ಪದಾಧಿಕಾರಿಗಳು ಹಾಗೂ ಉತ್ತಮ ಸಂಖ್ಯೆಯಲ್ಲಿ ನೆರೆದಿದ್ದ ದೆಹಲಿ ಕನ್ನಡಿಗರು ಧ್ವಜಾರೋಹಣದಲ್ಲಿ ಪಾಲ್ಗೊಂಡು ರಾಷ್ಟ್ರಗೀತೆ ಹಾಡುವುದರೊಂದಿಗೆ ರಾಷ್ಟ್ರ ಧ್ವಜಕ್ಕೆ ಗೌರವ ನಮನ ಸಲ್ಲಿಸಿದರು. ಅಧ್ಯಕ್ಷ ಶ್ರೀ ಸಿ.ಎಂ. ನಾಗರಾಜ ಅವರ ಎಲ್ಲರಿಗೂ ಗಣರಾಜ್ಯೋತ್ಸವದ ಶುಭಾಶಯಗಳನ್ನು ತಿಳಿಸಿದರು. ಶ್ರೀ ಡಿ.ವಿ.ಎಸ್. ಮೂರ್ತಿಯವರು ಕಾರ್ಯಕ್ರಮಕ್ಕೆ ತಮ್ಮನ್ನು ಆಹ್ವಾನಿಸಿದ್ದಕ್ಕೆ ಹರ್ಷ ವ್ಯಕ್ತಪಡಿಸಿ ಎಲ್ಲರಿಗೂ ಧನ್ಯವಾದ ಹೇಳುತ್ತಾ ಗಣರಾಜ್ಯೋತ್ಸವದ ಶುಭಾಶಯಗಳನ್ನು ತಿಳಿಸಿದರು. ಉಪಾಧ್ಯಕ್ಷೆ ಶ್ರೀಮತಿ ಪೂಜಾ ಪಿ. ರಾವ್ ಅವರು ಭಾಗವಹಿಸಿದ್ದವರಿಗೆಲ್ಲರಿಗೂ ವಂದನೆಗಳನ್ನು ಅರ್ಪಿಸಿದರು. ❑

# ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘ ನವದೆಹಲಿ ವತಿಯಿಂದ ಪಿಕ್‌ನಿಕ್ ಮತ್ತು ಆಟೋಟ ಸ್ಪರ್ಧೆ ಆಯೋಜನೆ ಹಾಗು ನೂತನ ಕಾರ್ಯಕಾರಿಣಿ ಸಮಿತಿ ಆಯ್ಕೆ





ಕಳೆದ ಕೆಲವು ವರ್ಷಗಳಿಂದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘವು ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ದೆಹಲಿಯಲ್ಲಿ ಆಯೋಜಿಸುತ್ತಾ ಬಂದಿದೆ. ದಿನಾಂಕ 21.12.2025 ರವಿವಾರದಂದು ಬೆಳಿಗ್ಗೆ 11 ಗಂಟೆಗೆ ನವದೆಹಲಿಯ ನೆಹರು ಪಾರ್ಕ್‌ನಲ್ಲಿ ನಮ್ಮ ಬಳಗದ ಎಲ್ಲಾ ಸದಸ್ಯರನ್ನು ಒಟ್ಟುಗೂಡಿಸಿ ಪಿಕ್‌ನಿಕ್ ಮತ್ತು ಆಟೋಟ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ನಮ್ಮ ಸಂಘದ ಪ್ರಸ್ತುತ ಅಧ್ಯಕ್ಷರಾಗಿರುವ ಶ್ರೀ ವೈದ್ಯನಾಥ್ ಅವರು ಎಲ್ಲರನ್ನು ಆದರದಿಂದ ಸ್ವಾಗತಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಮಹಿಳೆಯರು, ಮಕ್ಕಳು ಮತ್ತು ಬಳಗದ ಎಲ್ಲಾ ಸದಸ್ಯರಿಗೆ ಕಳೆದ ಎರಡು ವರ್ಷಗಳಿಂದ ನಡೆದ ಕಾರ್ಯಕ್ರಮಗಳ ಅವಲೋಕನ ಮಾಡಿಸಿದರು.

ಬೆಳಗ್ಗೆಯ ಉಪಹಾರ ಮತ್ತು ಮಧ್ಯಾಹ್ನದ ಭೋಜನ ಸೇವಿಸಿದ ಎಲ್ಲರೂ ಸಂತೋಷ ಸಂಭ್ರಮದಿಂದ ಕೂಡಿಕೊಂಡು 2025ರ ಕೊನೆಯ ದಿನಗಳಲ್ಲಿ ಹಳೆಯ ವರ್ಷಕ್ಕೆ ವಿನಯ ಮತ್ತು ವಿನಮ್ರತೆಯಿಂದ ಬೀಳ್ಕೊಡುಗೆ ಮಾಡುತ್ತಾ ಹಿಂದಿನ ವರುಷಗಳಲ್ಲಿ ಎಲ್ಲರೂ ಯಾವ ರೀತಿ ಸಂತೋಷ ಸಂಭ್ರಮದಿಂದ ಕಳೆದರೋ ಅದೇ ರೀತಿ ಮುಂದಿನ ದಿನಗಳಲ್ಲಿ ಸಮುದಾಯದ ಏಳಿಗೆ ಹಾಗೂ ಮಕ್ಕಳ ಭವಿಷ್ಯ ಉಜ್ವಲವಾಗಿರಲಿ ಎಂದು ಶುಭ ಹಾರೈಸಿದರು. ಹಾಗೆಯೇ ಮುಂಬರುವ 2026–2027 ಅವಧಿಯ ಎರಡು ವರ್ಷಕ್ಕೆ ಹೊಸ ಕಾರ್ಯಕಾರಿಣಿ ಸಮಿತಿಯ ಪದಾಧಿಕಾರಿಗಳು ಮತ್ತು ಸದಸ್ಯರನ್ನು ಸರ್ವಸಮ್ಮತವಾಗಿ ಆಯ್ಕೆ ಮಾಡಲಾಯಿತು.

ನಮ್ಮ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ಗೌರವಾಧ್ಯಕ್ಷರಾಗಿರುವ ಡಾ. ಮುನಿರಾಜು ಸರ್ ಅವರ ನೇತೃತ್ವದಲ್ಲಿ ನೇಮಕಗೊಂಡ ನೂತನ ಹೊಸ ಕಾರ್ಯಕಾರಿಣಿ ಸಮಿತಿಯ ಪರಿಚಯ ಈ ಕೆಳಗಿನಂತಿದೆ :

**ಅಧ್ಯಕ್ಷರಾಗಿ** : ಶ್ರೀ ಮಹಾದೇವ್ ಎಂ., **ಉಪಾಧ್ಯಕ್ಷರಾಗಿ** : ಶ್ರೀ ಸಾಬು ದರ್ಗಾ, ಪ್ರಧಾನ **ಕಾರ್ಯದರ್ಶಿಯಾಗಿ** : ಶ್ರೀ ಎಸ್.ಡಿ. ಶ್ರೀನಿವಾಸ್, **ಕೋಶಾಧ್ಯಕ್ಷರಾಗಿ** : ಶ್ರೀ ಶ್ರೀನಿವಾಸ್ ಕೆ., **ಜಂಟಿ ಕಾರ್ಯದರ್ಶಿಯಾಗಿ** : ಶ್ರೀ ನವೀನ್ ಕುಮಾರ್ ವಿ.

**ಸದಸ್ಯರುಗಳಾಗಿ ಶ್ರೀಯುತರಾದ** : ವೈದ್ಯನಾಥ, ರಾಜಣ್ಣ ಬಿರಾದಾರ್, ಶೇಖರಪ್ಪ, ಆನಂದ್ ಬಿರಾದಾರ್, ಮಂಜಪ್ಪ, ಶ್ರೀಮತಿ ರಶ್ಮಿ ಮುನಿರಾಜು, ಟಿ.ಎಂ. ಮೈಲಾರಪ್ಪ, ಶ್ರೀಮತಿ ಸುನಂದಾ ಸಾಬು ದರ್ಗಾ, ಶ್ರೀಮತಿ ಶಾಂತಾ ಶ್ರೀನಿವಾಸ್, ಶ್ರೀಮತಿ ಆಶಾಲತಾ ಎಂ. ಎಲ್ಲರೂ ಸಮಯ ಕೊಟ್ಟು ಇಂದಿನ ಭೇಟಿಯಲ್ಲಿ ಭಾಗಿಯಾಗಿ ಹೊಸ ಪದಾಧಿಕಾರಿಗಳ ಆಯ್ಕೆ ಮಾಡುವುದರ ಜೊತೆಗೆ ಮುಂಬರುವ ಕಾರ್ಯಕ್ರಮವನ್ನು ತುಂಬಾ ಅದ್ದೂರಿಯಾಗಿ ನಡೆಸಬೇಕೆಂದು ಚರ್ಚಿಸಲಾಯಿತು. ಕೊನೆಯಲ್ಲಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದಕ್ಕೆ ಎಲ್ಲರಿಗೂ ಸಂಘದ ಗೌರವಾಧ್ಯಕ್ಷರಾದ ಡಾ. ಮುನಿರಾಜು ಅವರು ಧನ್ಯವಾದಗಳನ್ನು ಅರ್ಪಿಸಿದರು.❑

***ಸಾಬು ದರ್ಗಾ***

ಉಪಾಧ್ಯಕ್ಷರು, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘ, ನವದೆಹಲಿ

# ಜನಕಪುರಿ ಕನ್ನಡ ಕೂಟದಿಂದ ವಾರ್ಷಿಕ ಕ್ರೀಡೆ ಮತ್ತು ರಾಜ್ಯೋತ್ಸವ ಆಚರಣೆ



ಜನಕಪುರಿ ಕನ್ನಡ ಕೂಟದ ವತಿಯಿಂದ ದಿನಾಂಕ 23ನೇ ನವೆಂಬರ್ 2025 ರಂದು, ಭಾನುವಾರದ ತುಸು ಚಳಿಯ ಸಮಯದಲ್ಲೂ ಬೆಳಿಗ್ಗೆ 11 ಗಂಟೆಗೆ ಪ್ರಾರಂಭವಾಗಿ ಸಂಜೆ 4 ಘಂಟೆಯ ತನಕ ಜನಕಪುರಿಯ ಡಿಸ್ಟ್ರಿಕ್ಟ್ ಪಾರ್ಕ್‌ನಲ್ಲಿ ಆಯೋಜನೆಗೊಂಡ ರಾಜ್ಯೋತ್ಸವ ಹಾಗೂ ವಾರ್ಷಿಕ ಕ್ರೀಡೆ ತುಂಬ ಚೆನ್ನಾಗಿ ಮೂಡಿ ಬಂತು.

ಮೊದಲು ರಾಜ್ಯೋತ್ಸವದ ಕಾರ್ಯಕ್ರಮ ನಡೆದು ಕಾರ್ಯದರ್ಶಿಗಳಾದ ಡಾ. ಬಸವರಾಜು ಅವರು ಬಂದಂತ ಎಲ್ಲರನ್ನೂ ಸ್ವಾಗತಿಸಿದರು. ಕಾರ್ಯಕ್ರಮದ ಉದ್ಘಾಟನೆ ಭುವನೇಶ್ವರಿ ಮಾತೆಗೆ ಆರತಿ ಹಾಗೂ ಪುಷ್ಪಾರ್ಚನೆ ಮೂಲಕ ನಡೆಯಿತು. ಪೂಜೆಯ ವೇಳೆ ಜನಕಪುರಿ ಮಹಿಳಾ ಮಂಡಳಿಯ ಸದಸ್ಯರು ಭುವನೇಶ್ವರಿ ಮಾತೆಯ ಭಜನೆ ಮಾಡಿದರು.



ನಂತರ ಎಲ್ಲರೂ ಸೇರಿ ನಾಡಗೀತೆ ಹಾಡಿದರು. ತದನಂತರ ಕೂಟದ ಅಧ್ಯಕ್ಷರಾದ ಡಾ. ಅಶೋಕ್ ಈಟಿ ಅವರು ಮಾತನಾಡುತ್ತಾ ಇದು 70ನೆಯ ರಾಜ್ಯೋತ್ಸವ ಹಾಗೂ ಕೂಟದ 50ನೇ ವರ್ಷದ ಕಾರ್ಯಕ್ರಮ ಅಂತ ಹೇಳುತ್ತಾ ಕೂಟ ಶುರುವಾದ ಬಗೆ, ಶ್ರಮಿಸಿದ ಹಿರಿಯರ ಬಗ್ಗೆ ಮಾತನಾಡಿದರು ಹಾಗು ಎಲ್ಲರಿಗೂ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳನ್ನು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿ ಕಾರ್ಯಕ್ರಮದ ಉದ್ಘಾಟನೆ ಮಾಡಿದ ಭಾರತ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಹಿರಿಯ ವಿಜ್ಞಾನಿ ಡಾ. ಎಂ.ಎಸ್. ಶಶಿ ಕುಮಾರ್ ಅವರು ಮಾತನಾಡುತ್ತಾ, ನಾನು ತುಂಬ ವರ್ಷಗಳಿಂದ ಕೂಟದ ಜೊತೆ ಒಳ್ಳೆಯ ನಂಟಿನ ಒಡನಾಟದಲ್ಲಿದ್ದೇನೆ. ಕೂಟವು ಪ್ರತಿ ವರ್ಷ ಮಾಡುವ ರಾಮ ನವಮಿ ಆಗಲಿ, ಗಣೇಶ ಉತ್ಸವ ಆಗಲಿ ಹಾಗೂ ಇನ್ನಿತರ ಕಾರ್ಯಕ್ರಮಗಳನ್ನು ಸಹಾ ನೋಡುತ್ತಾ ಅವುಗಳಲ್ಲಿ ಭಾಗವಹಿಸುತ್ತಾ ಬಂದಿದ್ದೇನೆ. ಬಹಳಷ್ಟು ಜನಕಪುರಿಯ ಮಹಿಳೆಯರು ಹಾಗೂ ಸದಸ್ಯರು ಒಳ್ಳೆಯ ಕಲಾವಿದರು ಸಹಾ ಅಂತ ಹೇಳುತ್ತಾ ಮುಂದಿನ ದಿನಗಳಲ್ಲಿ ಮಾಡುವ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಅನಂತರ ಮಹಿಳಾ ಮಂಡಳಿಯ ಹಿರಿಯ ಸಲಹೆಗಾರರಾದ ಶ್ರೀಮತಿ ಸವಿತಾ ಇನಾಮದಾರ್ ಮಾತನಾಡುತ್ತಾ ಕೂಟ ನಮ್ಮ ಮನೆಯ ತರ ಇದ್ದು ನಾವುಗಳು ಬೇಕೆಂದಾಗ ಸೇರಿಕೊಳ್ಳುವುದು ಸುಲಭವಾಗಿದೆ, ಕೂಟದ ಮುಂದಿನ ಪೀಳಿಗೆ ಇದನ್ನು ನಡೆಸಿಕೊಂಡು ಹೋಗಬೇಕು, ಅವರಿಗೆ ಹಿರಿಯರೆಲ್ಲಾ ಸಲಹೆ ನೀಡೋಣ ಎಂದರು. ಕೂಟದ ಮಾಜಿ ಅಧ್ಯಕ್ಷರಾದ ಶ್ರೀ ಎನ್.ಆರ್. ಶ್ರೀನಾಥ್ ಅವರು ಮಾತನಾಡುತ್ತಾ ಕೂಟದ ಮಹಿಳೆಯರು ಹಾಗೂ ಸದಸ್ಯರು ತುಂಬ ಚೆನ್ನಾಗಿ ನಾಟಕದ ಪ್ರದರ್ಶನ ನೀಡಿದರು ಎಂದರು. ತುಂಬ ವರ್ಷಗಳ ನಂತರ ದೆಹಲಿಗೆ ಬಂದ ಶ್ರೀ ವಿನಾಯಕ ನಾಡಗೌಡರು ಹಾಗೂ ಶ್ರೀಮತಿ ಸಂಗೀತ ನಾಡಗೌಡ ಮಾತನಾಡಿ ಈ ಸಂದರ್ಭದಲ್ಲಿ ಕೂಟವು ಕಾರ್ಯಕ್ರಮ ಇಟ್ಟುಕೊಂಡಿದ್ದು ತಮಗೆ ತುಂಬ ಸಂತಸದ ಸಂಗತಿ ಹಾಗೂ ತಮ್ಮನ್ನು ನೆನಪಿಸಿಕೊಂಡು ಸ್ವಾಗತಿಸಿದ್ದಕ್ಕೆ ಧನ್ಯವಾದ ಸಮರ್ಪಿಸಿದರು.

ತದನಂತರ ಇತ್ತೀಚೆಗಷ್ಟೇ ಅಗಲಿದ ಕೂಟದ ಆರಂಭ ಮಾಡಿದ ಹಿರಿಯರೊಬ್ಬರಾದ ಶ್ರೀ ಪಾಂಡುರಂಗ ಅಗ್ನಿಹೋತ್ರಿ ಅವರಿಗೆ ನಮನವನ್ನು ಸಲ್ಲಿಸಲಾಯಿತು. ಶ್ರೀ ಕೃಷ್ಣರಾಜ್ ಅವರು ಕಾರ್ಯಕ್ರಮದ ನಿರೂಪಣೆಯನ್ನು ನಿರ್ವಹಿಸಿ, ಕೊನೆಯಲ್ಲಿ ಎಲ್ಲರಿಗೂ ಧನ್ಯವಾದ ಸಮರ್ಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಕೂಟದ ಉಪಾಧ್ಯಕ್ಷರಾದ ಡಾ. ಎಸ್.ಎಲ್. ಭಂಡಾರಕರ್, ಖಜಾಂಜಿ ಶ್ರೀ ಎಂ.ವಿ. ವೆಂಕಟೇಶ್, ಸದಸ್ಯರಾದ ಶ್ರೀ ಮುಕುಂದ ಮೂರ್ತಿ, ಶ್ರೀಮತಿ ಸುನೀತಾ ನಾಯ್ಕ್, ಮಹಿಳಾ ಮಂಡಳಿಯ ಕಾರ್ಯದರ್ಶಿ ಶ್ರೀಮತಿ ರೇಣುಕಾ ಸಾವಕಾರ, ಖಜಾಂಜಿ ಶ್ರೀಮತಿ ಸವಿತಾ ಭಟ್ ಮತ್ತು ಕೂಟದ ಹಾಗು ಮಹಿಳಾ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

ಇನ್ನು, ಕಾರ್ಯಕ್ರಮದ ಎರಡನೇ ಭಾಗವಾಗಿದ್ದ ವಾರ್ಷಿಕ ಕ್ರೀಡೆ ತುಂಬ ಸಮರ್ಪಕವಾಗಿ ಮೂಡಿ ಬಂತು. ಸುಮಾರು 15 ಕ್ರೀಡೆಯಲ್ಲಿ ಹೆಂಗಸರು, ಗಂಡಸರು ಹಾಗೂ ಮಕ್ಕಳು ಲವ ಲವಿಕೆಯಿಂದ ಭಾಗವಹಿಸಿದರು. ಸಮಿತಿಯ ಖಜಾಂಜಿ ಶ್ರೀ ಎಂ. ವಿ. ವೆಂಕಟೇಶ್, ಜಂಟಿ ಕಾರ್ಯದರ್ಶಿ ಶ್ರೀ ಕೃಷ್ಣರಾಜ್ ಹಾಗೂ ಸಮಿತಿ ಸದಸ್ಯ ಶ್ರೀ ಮುಕುಂದ ಮೂರ್ತಿ ಎಲ್ಲ ಆಟಗಳನ್ನು ಸೊಗಸಾಗಿ ನಿರ್ವಹಿಸಿಕೊಟ್ಟರು. ನಡೆಸಿದರು. ಇದರ ನಡುವೆ ಪುಷ್ಕಳ ಭೋಜನ ಹಾಗೂ ಕೊನೆಗೆ ಚಹಾದೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು. ❑

**ಕೃಷ್ಣರಾಜ್ ಕೆ.ಎನ್.**
ಜಂಟಿ ಕಾರ್ಯದರ್ಶಿ
ಜನಕಪುರಿ ಕನ್ನಡ ಕೂಟ (ರಿ)

# ಸಂಘದಲ್ಲಿ ಸಪ್ತಕದ 950ನೇ ಕಾರ್ಯಕ್ರಮದ ಸಂಭ್ರಮ




ಸಪ್ತಕ ಬೆಂಗಳೂರು ಮತ್ತು ದೆಹಲಿ ಕರ್ನಾಟಕ ಸಂಘ ಜಂಟಿಯಾಗಿ ದಿನಾಂಕ 28.02.2026ರ ಶನಿವಾರ ಸಂಜೆ ಸಂಘದ ಸಭಾಂಗಣದಲ್ಲಿ ಸಾರ್ಥಕ ಸಂಭ್ರಮದ ಸಪ್ತಕದ 950ನೇಯ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ವಿಶೇಷ ಆಹ್ವಾನಿತರಾಗಿ ಕೇಂದ್ರ ಉಕ್ಕು ಮತ್ತು ಭಾರಿ ಕೈಗಾರಿಕೆಗಳ ಸಚಿವರ ಆಪ್ತ ಕಾರ್ಯದರ್ಶಿ ಡಾ. ತೇಜಸ್ವಿ ನಾಯ್ಕ್ ಐ.ಎ.ಎಸ್. ಆಗಮಿಸಿದ್ದರು. ಗೌರವಾನ್ವಿತ ಅತಿಥಿಗಳಾಗಿ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಮಾಜಿ ಅಧ್ಯಕ್ಷರೂ ಹಾಗೂ ಜೆ.ಎನ್.ಯು. ಪ್ರಾಧ್ಯಾಪಕರಾದ ಡಾ. ವೆಂಕಟಾಚಲ ಜಿ. ಹೆಗಡೆ ಮತ್ತು ಕರ್ನಾಟಕ ಬ್ಯಾಂಕ್, ನವದೆಹಲಿಯ ಡಿಜಿಎಂ ಶ್ರೀ ಬಸವರಾಜ್ ದೇಸಳ್ಳಿ ಮತ್ತು ಸಪ್ತಕದ ಟ್ರಸ್ಟಿ ಶ್ರೀ ಜಿ.ಎಸ್. ಹೆಗಡೆ ಅವರು ಉಪಸ್ಥಿತರಿದ್ದರು. ಮುಂಬಯಿನ ಪ್ರತಿಭಾನ್ವಿತ ಕಲಾವಿದ, ಕನ್ನಡಿಗ ಶ್ರೀ ಜಿ.ಎಸ್. ಹೆಗಡೆಯವರ ಸುಪುತ್ರ ಶ್ರೀ ಧನಂಜಯ ಹೆಗಡೆ ಅವರಿಂದ ಸುಶ್ರಾವ್ಯ ಗಾಯನ ನೆರೆದಿದ್ದವರನ್ನು ಮಂತ್ರ ಮುಗ್ಧರನ್ನಾಗಿಸಿತು. ತಬಲಾವಾದಕರಾಗಿ ಶ್ರೀ ರೂಪಕ ಕಲ್ಲೂರಕರ ಮತ್ತು ಹಾರ್ಮೋನಿಯಂ ಕಲಾವಿದ ಶ್ರೀ ಲಲಿತ್ ಸಿಸೋಡಿಯಾ ಅವರ ಜೊತೆ ಸಹಯೋಗ ನೀಡಿದರು.

ಅತಿಥಿ ಗಣ್ಯರಿಂದ ಜ್ಯೋತಿ ಬೆಳಗಿಸುವುದರೊಂದಿಗೆ ಸಭಾ ಕಾರ್ಯಕ್ರಮ ಆರಂಭಗೊಂಡಿತು. ಡಾ. ತೇಜಸ್ವಿ ನಾಯ್ಕ್ ಐ.ಎ.ಎಸ್. ಅವರು ಮಾತನಾಡಿ, ತಮ್ಮ ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿನ ಬಾಲ್ಯ ಜೀವನ, ನಂತರ ಐಎಎಸ್ ಪದವಿ ಪಡೆದಿದ್ದು ಮತ್ತು ವೃತ್ತಿ ಜೀವನದಲ್ಲಿ ತಮಗೆ ಸಂಗೀತದ ಬಗ್ಗೆ ಹಾಗು ಸಾಹಿತ್ಯದ ಬಗ್ಗೆ ಒಲವು ಮೂಡಿದ್ದನ್ನು ನೆನಪಿಸಿಕೊಂಡರಲ್ಲದೆ, ಇಂದಿನ ಗಾಯನ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ಸೂಚಿಸಿ, 950ನೇ ಕಾರ್ಯಕ್ರಮ ಆಯೋಜಿಸಿದ ಸಪ್ತಕದ ಶ್ರೀ ಜಿ.ಎಸ್. ಹೆಗಡೆ ಅವರಿಗೆ, ಕರ್ನಾಟಕ ಬ್ಯಾಂಕ್‌ನ ಅಧಿಕಾರಿಗಳಿಗೆ ಮತ್ತು ದೆಹಲಿ ಕರ್ನಾಟಕ ಸಂಘಕ್ಕೆ ಧನ್ಯವಾದಗಳನ್ನು ಹೇಳಿದರು.

ಶ್ರೀ ಸಿ.ಎಂ. ನಾಗರಾಜ ಮಾತನಾಡಿ ಸಪ್ತಕದ ಕಾರ್ಯಕ್ರಮ ನಮ್ಮ ಸಂಘದಲ್ಲಿ ಈ ಹಿಂದೆ ಆಯೋಜನೆಗೊಂಡಿತ್ತು ಮತ್ತು ಇಂದು 950ನೇಯ ಕಾರ್ಯಕ್ರಮ ಏರ್ಪಡಿಸಿದ್ದು ತುಂಬಾ ಸಂತಸ ತಂದಿದೆ, ಶ್ರೀ ಜಿ.ಎಸ್. ಹೆಗಡೆ ಮತ್ತು ಶ್ರೀ ಧನಂಜಯ ಹೆಗಡೆಯವರಿಗೆ ಅಭಿನಂದನೆಗಳು. ಅತಿಥಿಗಳಾಗಿ ಆಗಮಿಸಿದ ಐಎಎಸ್ ಅಧಿಕಾರಿ ಶ್ರೀ ತೇಜಸ್ವಿ ನಾಯ್ಕ್ ಹಾಗು ಕಾರ್ಯಕ್ರಮಕ್ಕೆ ಸಹಕರಿಸಿದ ನವದೆಹಲಿ ಕರ್ನಾಟಕ ಬ್ಯಾಂಕ್‌ನ ಡಿಜಿಎಂ ಶ್ರೀ ಬಸವರಾಜ್ ದೇಸಳ್ಳಿ ಅವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಧನ್ಯವಾದಗಳು ಎಂದರು.

ಶ್ರೀ ಬಸವರಾಜ್ ದೇಸಳ್ಳಿ ಅವರು ಮಾತನಾಡಿ ಶ್ರೀ ಜಿ.ಎಸ್. ಹೆಗಡೆಯವರ ಕರ್ನಾಟಕ ಬ್ಯಾಂಕಿನ ಜೊತೆ ವೃತ್ತಿ ಜೀವನದ ಸಂಬಂಧ ಮತ್ತು ಸಹೋದ್ಯೋಗಿಗಳ ಜೊತೆ ಒಡನಾಟವನ್ನು ನೆನಪಿಸಿಕೊಂಡು ಅವರ ಪ್ರವೃತ್ತಿಯಾದ ಸಂಗೀತವನ್ನು ಪೋಷಿಸಿಕೊಂಡು ಅವರ ಮಗ ಶ್ರೀ ಧನಂಜಯ ಹೆಗಡೆ ಒಬ್ಬ ರಾಷ್ಟ್ರೀಯ ಹಾಗು ಅಂತರರಾಷ್ಟ್ರೀಯ ಮಟ್ಟದಲ್ಲಿ ಕಲಾವಿದನಾಗಿ ಹೊರ ಹೊಮ್ಮಿರುವುದು ಹೆಮ್ಮೆಯ ವಿಷಯ ಎಂದು ಹೇಳಿ, ಅವರಿಬ್ಬರಿಗೂ ಹಾಗು ಮುಖ್ಯ ಅತಿಥಿಗಳಿಗೆ, ಸಂಘದ ಅಧ್ಯಕ್ಷರು, ಮಾಜಿ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ಕೃತಜ್ಞತೆಗಳನ್ನು ತಿಳಿಸಿದರು.

ಡಾ. ವೆಂಕಟಾಚಲ ಹೆಗಡೆಯವರು ಮಾತನಾಡಿ ಎಲ್ಲರಿಗೂ ಸಪ್ತಕದ 950ನೆಯ ಕಾರ್ಯಕ್ರಮದ ಶುಭಾಶಯಗಳನ್ನು ತಿಳಿಸುತ್ತಾ ಈ ಸಾರ್ಥಕ ಪ್ರಯಾಣದ ಹಾದಿಯಲ್ಲಿ ಯಶಸ್ವಿಯಾದ ಶ್ರೀ ಜಿ.ಎಸ್. ಹೆಗಡೆ ಅವರಿಗೆ ಹಾಗು ಸುಂದರ ಗಾಯನ ಪ್ರಸ್ತುತಪಡಿಸಿದ ಅವರ ಮಗ ಶ್ರೀ ಧನಂಜಯ ಹೆಗಡೆಯವರಿಗೆ ಅಭಿನಂದನೆಗಳನ್ನು ತಿಳಿಸಿದರು. ನಂತರ ಶ್ರೀ ಜಿ.ಎಸ್. ಹೆಗಡೆ ಹಾಗು ಗಾಯಕ ಶ್ರೀ ಧನಂಜಯ ಹೆಗಡೆಯವರನ್ನು ಗೌರವಿಸಿ ಸನ್ಮಾನಿಸಲಾಯಿತು.


ಕೊನೆಯಲ್ಲಿ ಸಪ್ತಕದ ರೂವಾರಿ ಮತ್ತು ಟ್ರಸ್ಟಿಗಳಾದ ಶ್ರೀ ಜಿ.ಎಸ್. ಹೆಗಡೆ ಅವರು ಮಾತನಾಡಿ ತಮಗೆ ಸನ್ಮಾನ ನೀಡಿದ್ದಕ್ಕಾಗಿ ಕೃತಜ್ಞತೆ ಸಲ್ಲಿಸುತ್ತಾ ತಮ್ಮ ಕರ್ನಾಟಕ ಬ್ಯಾಂಕಿನ ವೃತ್ತಿ ಜೀವನದ ಹಾದಿಯನ್ನು ಮೆಲುಕು ಹಾಕಿ ಈ ಹಿಂದೆ ದೆಹಲಿ ಕರ್ನಾಟಕ ಸಂಘದಲ್ಲಿ ಕಾರ್ಯಕ್ರಮವನ್ನು ಆಯೋಜಿಸಿದ ಬಗ್ಗೆ ನೆನಪಿಸಿಕೊಂಡು ದೇಶಾದ್ಯಂತ ಹಲವಾರು ಕಾರ್ಯಕ್ರಮಗಳನ್ನು ನಡೆಸಿ ಈಗ 950ನೇ ಕಾರ್ಯಕ್ರಮ ಇಂದು ಸಂಘದ ಈ ಸುಂದರ ಸಭಾಂಗಣದಲ್ಲಿ ಆಯೋಜನೆಗೊಂಡಿದ್ದು ತಮಗೆ ತೃಪ್ತಿ ತಂದಿದೆ, ಇದಕ್ಕಾಗಿ ಸಹಕಾರ ನೀಡಿದ ಕರ್ನಾಟಕ ಬ್ಯಾಂಕ್‌ಗೆ, ಸಹಯೋಗ ನೀಡಿದ ದೆಹಲಿ ಕರ್ನಾಟಕ ಸಂಘಕ್ಕೆ ಹಾಗು ಆಗಮಿಸಿದ ಪ್ರೇಕ್ಷಕರಿಗೆ ಸಪ್ತಕದ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದರು.

ಕಾರ್ಯಕ್ರಮವನ್ನು ಸಂಘದ ಉಪಾಧ್ಯಕ್ಷೆ ಶ್ರೀಮತಿ ಪೂಜಾ ಪಿ. ರಾವ್ ಅವರು ಸುಂದರವಾಗಿ ನಿರೂಪಿಸಿದರು. ಜೊತೆಯಲ್ಲಿ ಕಾರ್ಯಕಾರಿ ಸಮಿತಿ ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ್ ಸಹಕರಿಸಿದರು. ❑

***ಅಭಿಮತ ವರದಿ***



# 'ದೆಹಲಿ ಕನ್ನಡ ಶಾಲೆಯ ಸಂಸ್ಕೃತ ಶಿಕ್ಷಕ ಶ್ರೀ ಗಣೇಶ ಹೆಗಡೆಯವರಿಗೆ ಪಿ.ಎಚ್‌ಡಿ ಪದವಿ ಪ್ರದಾನ'



ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಸಂಸ್ಕೃತ ಶಿಕ್ಷಕರಾಗಿರುವ ಶ್ರೀ ಗಣೇಶ ಹೆಗಡೆ ಅವರು ಮಂಡಿಸಿದ, 'ನಾರಾಯಣ ತೀರ್ಥ ವಿರಚಿತ ಅದ್ವೈತ ರತ್ನಾಕರ ಗ್ರಂಥ ಸಂಪಾದನೆ ಮತ್ತು ಸಮೀಕ್ಷಾತ್ಮಕ ಅಧ್ಯಯನ' ಎಂಬ ಮಹಾ ಶೋಧ ಪ್ರಬಂಧಕ್ಕೆ ಇತ್ತೀಚೆಗೆ ಗುಜರಾತಿನ ಶ್ರೀ ಸೋಮನಾಥ ಸಂಸ್ಕೃತ ವಿಶ್ವವಿದ್ಯಾಲಯವು ಪಿಎಚ್‌ಡಿ ಪದವಿ ಪ್ರದಾನ ಮಾಡಿದೆ.

ಶ್ರೀಯುತರು ಕಳೆದ ಮೂರು ವರ್ಷಗಳಿಂದ ವಿಶ್ವವಿದ್ಯಾಲಯದ ದರ್ಶನ ವಿಭಾಗಾಧ್ಯಕ್ಷರಾದ ಡಾ. ಜಾನಕಿಶರಣ ಆಚಾರ್ಯರ ಮಾರ್ಗದರ್ಶನದಲ್ಲಿ, ಪಾಂಡುಲಿಪಿಯಲ್ಲಿರುವ ಗ್ರಂಥದ ಸಂಶೋಧನೆಯಲ್ಲಿ ತೊಡಗಿದ್ದರು. ಶ್ರೀ ಸೋಮನಾಥ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ದಿನಾಂಕ 20.01.2026 ರಂದು ನಡೆದ ಹದಿನೆಂಟನೆಯ ಘಟಿಕೋತ್ಸವ ಸಮಾರಂಭದಲ್ಲಿ ಗುಜರಾತಿನ ರಾಜ್ಯಪಾಲ ಶ್ರೀ ಆಚಾರ್ಯ ದೇವವ್ರತ ಅವರು ಈ ಪದವಿಯನ್ನು ಹಸ್ತಾಂತರಿಸಿದರು. ಜೊತೆಗೆ ಡಾ. ಗಣೇಶ ಹೆಗಡೆಯವರು ಈ ಸಾಲಿನ ಸರ್ವಶ್ರೇಷ್ಠ ಶೋಧಪ್ರಬಂಧ ಪ್ರಶಸ್ತಿಯಾದ 'ಶೋಧವಿಭೂಷಣಮ್' ಮತ್ತು ಸ್ವರ್ಗೀಯ ಮಣಿಶಂಕರ ಜೀವನರಾಮ ಪಾಂಡ್ಯಾ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದ್ದಾರೆ.

ಕರ್ನಾಟಕದ ಶಿರಸಿ ತಾಲೂಕಿನ ಅಮಚಿ ಮನೆಯ ಶ್ರೀಮತಿ ಲಲಿತಾ ಹೆಗಡೆ ಮತ್ತು ಶ್ರೀ ರಮೇಶ ಹೆಗಡೆ ಅವರ ಹೆಮ್ಮೆಯ ಪುತ್ರರಾಗಿರುವ ಗಣೇಶ ಹೆಗಡೆಯವರು ಊರಿನಲ್ಲಿಯೇ ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸವನ್ನು ಮುಗಿಸಿ, ಬಳಿಕ ಪಾಠಶಾಲೆಯಲ್ಲಿ ಐದು ವರ್ಷಗಳ ಕಾಲ ಪಾರಂಪರಿಕವಾಗಿ ಸಾಂಗ ಯಜುರ್ವೇದವನ್ನೂ, ಪೂಜಾ ವಿಧಿವಿಧಾನವನ್ನೂ ಅಧ್ಯಯನ ಮಾಡಿ, ಶೃಂಗೇರಿಯ ಶ್ರೀ ಶಾರದಾಂಬಾ ಸನ್ನಿಧಿಯಲ್ಲಿರುವ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ರಾಜೀವ ಗಾಂಧಿ ಪರಿಸರದಲ್ಲಿ ಬಂಗಾರದ ಪದಕದೊಂದಿಗೆ ತಮ್ಮ ಬಿ.ಎ. ಪದವಿಯನ್ನು ಪಡೆದರು. ಆ ಬಳಿಕ ಅಲ್ಲಿಯೇ ಬಿ.ಎಡ್. ಪದವಿಯನ್ನು ಪಡೆದು, ನಂತರ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಬಂಗಾರದ ಪದಕದೊಂದಿಗೆ ಎಂ. ಎ. ಸ್ನಾತಕೋತ್ತರ ಪದವಿಯನ್ನು ಪಡೆದಿರುತ್ತಾರೆ.

2016ರಿಂದ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಸಂಸ್ಕೃತ ಅಧ್ಯಾಪಕರಾಗಿ ನಿರಂತರ ಸೇವೆಯನ್ನು ಸಲ್ಲಿಸುತ್ತಿರುವ ಡಾ. ಗಣೇಶ ಹೆಗಡೆಯವರು ಅಧ್ಯಾಪನದ ಜೊತೆಗೆ, ಶಿಕ್ಷಣ ಸಂಸ್ಥೆಯ ಅನುಮತಿಯೊಂದಿಗೆ, ಆಕಾಶವಾಣಿಯಲ್ಲಿ ಸಂಸ್ಕೃತ ವಾರ್ತಾ ಪ್ರವಾಚಕರಾಗಿ ಕಾರ್ಯ ನಿರ್ವಹಿಸುತ್ತಿರುವುದು ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ.

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿ



ಪಿ.ಎಚ್‌ಡಿ. ಪದವಿ ಸ್ವೀಕರಿಸಿದ ಕ್ಷಣ

ಸಾಮಾಜಿಕ, ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಇವರು ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು, ದೆಹಲಿ ಘಟಕದ ಪ್ರಧಾನ ಕಾರ್ಯದರ್ಶಿಯಾಗಿಯೂ ಮತ್ತು ದೆಹಲಿಯ "ಗೋಕರ್ಣ ಮಂಡಲ"ದ ಕಾರ್ಯದರ್ಶಿಯಾಗಿಯೂ ಉತ್ತಮ ಸೇವೆ ಸಲ್ಲಿಸಿದ್ದಾರೆ.

ತಮ್ಮ ನಿರಂತರ ಪರಿಶ್ರಮ ಮತ್ತು ಸಂಶೋಧನಾ ಅಧ್ಯಯನದ ಮೂಲಕ ಪಿಎಚ್‌ಡಿ ಪದವಿ ಪಡೆಯುವಲ್ಲಿ ಯಶಸ್ವಿಯಾಗಿರುವ ಇವರ ಈ ಸಾಧನೆಗೆ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಪ್ರಭಾರ ಅಧ್ಯಕ್ಷ ಡಾ. ಅವನೀಂದ್ರನಾಥ್ ರಾವ್, ಆಡಳಿತ ಸಮಿತಿ ಸದಸ್ಯರು ಹಾಗು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಗೌರವ ವ್ಯವಸ್ಥಾಪಕ ಶ್ರೀ ಬಿ.ಆರ್. ಉಮೇಶ್ ಮತ್ತು ಪ್ರಾಂಶುಪಾಲ ಶ್ರೀ ಪ್ರಶಾಂತ್ ಕುಮಾರ್, ಉಪ ಪ್ರಾಂಶುಪಾಲೆ ಶ್ರೀಮತಿ ಪ್ರೇಮಲತಾ ಬಿ. ಸೇರಿದಂತೆ ಅಧ್ಯಾಪಕ, ಅಧ್ಯಾಪಕೇತರ ವೃಂದ ಸಂತಸ ವ್ಯಕ್ತಪಡಿಸಿದ್ದಾರೆ. **ದೆಹಲಿ ಕನ್ನಡಿಗರ ಹೆಮ್ಮೆಗೆ ಪಾತ್ರರಾಗಿರುವ ಪ್ರತಿಭಾವಂತ, ಅಪ್ಪಟ ಕನ್ನಡಿಗರಾದ ಡಾ. ಗಣೇಶ ಹೆಗಡೆ ಅವರಿಗೆ ದೆಹಲಿ ಕರ್ನಾಟಕ ಸಂಘದಿಂದ ಹಾರ್ದಿಕ ಅಭಿನಂದನೆಗಳು.!** ❑

***ಅಭಿಮತ ವರದಿ***

## ಸರ್. ಎಂ. ವಿಶ್ವೇಶ್ವರಯ್ಯ ನಮನ



ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವತಿಯಿಂದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಜಿ.ಪಿ. ರಾಜರತ್ನಂ ಸಭಾಂಗಣದಲ್ಲಿ ಮಹಾನ್ ತಂತ್ರಜ್ಞ, ಭಾರತ ರತ್ನ ಪುರಸ್ಕೃತ ಸರ್.ಎಂ. ವಿಶ್ವೇಶ್ವರಯ್ಯ ಅವರ ಜನ್ಮದಿನದ ಸವಿನೆನಪಿನಲ್ಲಿ ಅವರ ಸ್ಮರಣೆ ಕಾರ್ಯಕ್ರಮವನ್ನು ಇತ್ತೀಚೆಗೆ ಆಯೋಜಿಸಲಾಗಿತ್ತು.

ಈ ಸಂದರ್ಭ ಶಾಲೆಯ ಪ್ರಾಂಶುಪಾಲರಾದ ಶ್ರೀ ಪ್ರಶಾಂತ ಕುಮಾರ್ ಅವರು ವಿಶ್ವೇಶ್ವರಯ್ಯ ಅವರ ಭಾವಚಿತ್ರಕ್ಕೆ ಪುಷ್ಪ ನಮನವನ್ನು ಸಲ್ಲಿಸಿದರು. ಬಳಿಕ ಮಾತನಾಡಿ ಸರ್.ಎಂ. ವಿಶ್ವೇಶ್ವರಯ್ಯ ದೇಶ ಕಂಡ ಅಪ್ರತಿಮ ಸಾಧಕರಲ್ಲೊಬ್ಬರು. ಶಿಕ್ಷಣ ತಜ್ಞರಾಗಿ, ಕೈಗಾರಿಕಾ ಕ್ರಾಂತಿಯ ಹರಿಕಾರರಾಗಿ ಶ್ರೇಷ್ಠ ಇಂಜಿನಿಯರಾಗಿ ಮಹತ್ತರವಾದ ಸೇವೆ ಸಲ್ಲಿಸಿ ತಮ್ಮ ಸಾಧನೆಯ ಮೂಲಕ ದೇಶಕ್ಕೆ ಕೀರ್ತಿ ತಂದುಕೊಟ್ಟ ಹೆಮ್ಮೆಯ ಕನ್ನಡಿಗ. ಜೀವನದಲ್ಲಿ ಅತ್ಯಂತ ಶಿಸ್ತನ್ನು ರೂಢಿಸಿಕೊಂಡಿದ್ದ ಇವರು ಸರಳ, ಸಜ್ಜನ ವ್ಯಕ್ತಿತ್ವವನ್ನು ಹೊಂದಿದ್ದರು. ವಿಶ್ವೇಶ್ವರಯ್ಯ ಅವರ ಆದರ್ಶ ಜೀವನ, ಕಾರ್ಯ ಸಾಧನೆಗಳು ನಮಗೆಲ್ಲರಿಗೂ ಮಾದರಿ ಜೊತೆಗೆ ಇದನ್ನು ಓದಿ ತಿಳಿಯುವ ಪ್ರಯತ್ನವನ್ನು ವಿದ್ಯಾರ್ಥಿಗಳು ಮಾಡಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳಾದ ಕು. ಬುದ್ಧನಾ, ಕು. ನೂತನ ಕೈಕಾಡೆ, ಕು. ಹರ್ಷಿತಾ ಉಭಾಳೆ, ಕು. ವೈಷ್ಣವಿ, ಕು. ಜೈನಬ್ ವಿಶ್ವೇಶ್ವರಯ್ಯ ಕುರಿತಾದ ವಿಚಾರಧಾರೆಯನ್ನು, ಕು. ವಿಧಿ ಕೊಠಾರಿ, ಕು. ನಿಷ್ಠಾ ಪೂಜಾರಿ ವಿಶ್ವೇಶ್ವರಯ್ಯ ಕುರಿತಾದ ಹಾಡಿಗೆ ನೃತ್ಯವನ್ನು ಪ್ರಸ್ತುತಪಡಿಸಿದರು. ಕನ್ನಡ ವಿದ್ಯಾರ್ಥಿಗಳು, ಶಿಕ್ಷಕರುಗಳಾದ ಹೆಚ್. ಎಸ್. ತೇಲಿ, ಶ್ರೀಮತಿ ಜ್ಯೋತಿ ಎಸ್. ಪೊದ್ದಾರ್, ಶ್ರೀಮತಿ ಲಾವಣ್ಯ ಎಂ.ಎಸ್. ಉಪಸ್ಥಿತರಿದ್ದರು. ಸಹ ಶಿಕ್ಷಕಿ ಶ್ರೀಮತಿ ರೇಖಾ ಐ. ಸ್ವಾಗತಿಸಿದರು. ಕನ್ನಡ ಶಿಕ್ಷಕ ಅರವಿಂದ ಬಿಜ್ಜೈ ಕಾರ್ಯಕ್ರಮ ನಿರೂಪಿಸಿ ಕೊನೆಯಲ್ಲಿ ಎಲ್ಲರಿಗೂ ವಂದನೆ ಸಲ್ಲಿಸಿದರು. ❑

***ಅರವಿಂದ ಬಿಜ್ಜೈ***

# ಡಾ. ವಿ.ಕೃ. ಗೋಕಾಕ್ ಸ್ಮರಣೆ



ತಾಯಿ ಕನ್ನಡ ಭುವನೇಶ್ವರಿಯ ಮುಕುಟಮಣಿಗೆ ಐದನೆಯ ಜ್ಞಾನಪೀಠ ಪ್ರಶಸ್ತಿಯ ಗರಿ ತಂದುಕೊಟ್ಟ, ಕವಿ, ಕಾದಂಬರಿಕಾರ, ವಾಗ್ಮಿ, ವಿಮರ್ಶಕ, ಹೋರಾಟಗಾರ, ಶಿಕ್ಷಣತಜ್ಞ, ಚಿಂತಕ, ಕನ್ನಡ ಸಾಹಿತ್ಯದಲ್ಲಿ ನವ್ಯತೆಗೆ ಬುನಾದಿ ಹಾಕಿದ ಡಾ. ವಿನಾಯಕ ಕೃಷ್ಣ ಗೋಕಾಕ್ ಅವರ ಜನ್ಮದಿನದ ಸಲುವಾಗಿ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಎಸ್.ವಿ. ಕೃಷ್ಣಮೂರ್ತಿ ರಾವ್ ಸಭಾಂಗಣದಲ್ಲಿ ಗೋಕಾಕ್ ಸ್ಮರಣೆ ಕಾರ್ಯಕ್ರಮವನ್ನು ಇತ್ತೀಚೆಗೆ ಆಯೋಜಿಸಲಾಗಿತ್ತು.

ಕವಿ ವಿ.ಕೃ. ಗೋಕಾಕ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲ ಶ್ರೀ ಪ್ರಶಾಂತ್ ಕುಮಾರ್ ಅವರು ಕನ್ನಡ ಸಾಂಸ್ಕೃತಿಕ ಕ್ಷೇತ್ರವನ್ನು ರಾಷ್ಟ್ರೀಯ ಮಟ್ಟಕ್ಕೇರಿಸಿ, ಗೋಕಾಕ್ ಅವರು ಸಾಹಿತ್ಯ ಕ್ಷೇತ್ರದಲ್ಲಿ ಮಾತ್ರ ತಮ್ಮ ಛಾಪನ್ನು ಮೂಡಿಸದೆ ಸಾಮಾಜಿಕ ಕಳಕಳಿಯನ್ನು ಹೊತ್ತವರಾಗಿದ್ದರು. ಒಂದರಿಂದ ಹತ್ತನೇ ತರಗತಿಯವರೆಗೂ ಕನ್ನಡ ಪ್ರಥಮ ಭಾಷೆಯನ್ನಾಗಿ ಮಾಡಿಸಿದರು. ಕನ್ನಡ ಮಾತೃಭಾಷೆಯಲ್ಲಿ ಅಧ್ಯಯನ ಮಾಡಿದವರಿಗೆ ಆದ್ಯತೆ ನೀಡಬೇಕೆಂದು ಆಗ್ರಹಿಸಿ ಕನ್ನಡ ಭಾಷೆಯ ಅಸ್ಮಿತೆಯನ್ನು ಎತ್ತಿ ಹಿಡಿದರು. ವಿದ್ಯಾರ್ಥಿಗಳು ಇಂತಹ ಕವಿ, ಸಾಹಿತಿಗಳ, ಮಹನೀಯರ ಬದುಕಿನ ಹಾದಿ, ಸಾಧನೆಗಳನ್ನು ಅರಿತು ಮುನ್ನಡೆಯಬೇಕು ಎಂದರು.

ವಿದ್ಯಾರ್ಥಿಗಳಾದ ಕು. ಕೀರ್ತನ್ ಪಿ. ಗೋಕಾಕ್ ಅವರ ಬಾಲ್ಯ, ಕು. ಬುದ್ಧನಾ ಗೋಕಾಕ್ ಅವರ ವಿದ್ಯಾಭ್ಯಾಸ, ಕು. ನೂತನ ಕೈಕಾಡೆ ಗೋಕಾಕ್ ಅವರ ಸಾಹಿತ್ಯ ಜೀವನದ ಹಾದಿ, ಕು. ಹರ್ಷಿತ್ ಆರ್. ಕನ್ನಡ ಸಾಹಿತ್ಯದ ಧೀಮಂತ ಬರಹಗಾರ ಎಂಬ ವಿಚಾರಧಾರೆಯನ್ನು ಪ್ರಸ್ತುತಪಡಿಸಿದರು. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಗೌರವ ವ್ಯವಸ್ಥಾಪಕ ಶ್ರೀ ಬಿ.ಆರ್. ಉಮೇಶ್, ಶಾಲಾ ಕನ್ನಡ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಸಹ ಶಿಕ್ಷಕಿ ಶ್ರೀಮತಿ ರೇಖಾ ಐ. ಸ್ವಾಗತಿಸಿದರು. ಕನ್ನಡ ಶಿಕ್ಷಕ ಶ್ರೀ ಅರವಿಂದ ಬಿಜ್ಜೆ ಕಾರ್ಯಕ್ರಮ ನಿರೂಪಿಸಿ ಎಲ್ಲರಿಗೂ ವಂದನೆಗಳನ್ನು ಅರ್ಪಿಸಿದರು. ❑

# ಆಕ್ಸ್‌ಫರ್ಡ್‌ನಲ್ಲಿ ಉಪನ್ಯಾಸ ನೀಡುವವರೆಗೂ ಬೆಳೆಸಿದ ದೆಹಲಿ ಕನ್ನಡ ಶಾಲೆ-ಪದ್ಮಶ್ರೀ ಪುರಸ್ಕೃತೆ, ಡಾ. ನಳಿನಿ




ಪ್ರತಿಯೊಬ್ಬನ ವ್ಯಕ್ತಿತ್ವದಲ್ಲಿ ಪ್ರಮುಖ ಪಾತ್ರ ವಹಿಸುವುದು ಸಂಸ್ಕಾರ, ಅದು ಈ ಶಾಲೆಯಲ್ಲಿದೆ. ಇವತ್ತಿಗೂ ಈ ಶಾಲೆಯ ಜೊತೆ ಹೃದಯ ಮತ್ತು ಮನಸ್ಸಿನ ಸಂಬಂಧವಿದೆ. ನಾವು ಗುರುವಿನಿಂದ ಕೇವಲ ಓದು ಬರಹ ಕಲಿತಿಲ್ಲ, ಅವರ ವ್ಯಕ್ತಿತ್ವವನ್ನು ಅನುಸರಿಸಲು ಪ್ರಯತ್ನಿಸುತ್ತಿದ್ದೆವು. ಈ ಶಾಲೆ ನನ್ನನ್ನು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಉಪನ್ಯಾಸ ನೀಡುವವರೆಗೂ ಬೆಳೆಸಿದೆ ಎಂದು ಪದ್ಮಶ್ರೀ ಪುರಸ್ಕೃತೆ, ಎಸ್‌ಎನ್‌ಎ ಪ್ರಶಸ್ತಿ ಪುರಸ್ಕೃತ ಕಥಕ್ ಕಲಾವಿದೆ ಹಾಗೂ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಹಳೇ ವಿದ್ಯಾರ್ಥಿನಿ ಡಾ. ನಳಿನಿ ಅವರು ಹೇಳಿದರು.

ದೆಹಲಿ ಕನ್ನಡ ಶಾಲಾ ವಾರ್ಷಿಕೋತ್ಸವ ಸಮಾರಂಭದಲ್ಲಿ ಗೌರವ ಉಪಸ್ಥಿತರಾಗಿದ್ದ ಅವರು ಸಮಾರಂಭವನ್ನು ಉದ್ದೇಶಿಸಿ ಮಾತನಾಡಿ ಒಂದು ದೊಡ್ಡ ಮರವು ಬೆಳೆದು ನಿಂತು ಹೂ-ಹಣ್ಣು ನೀಡುತ್ತಿದೆಯಾದರೂ ಅದು ಮಣ್ಣಿನೊಳಗಿರುವ ಒಂದು ಸಣ್ಣ ಬೀಜದಿಂದ ಬೆಳೆದಿದೆ ಎಂಬುದನ್ನು ನಾವು ಮರೆಯಬಾರದು. ದೊಡ್ಡ ಮರವಾಗಿ ಬೆಳೆದಿದೆಯೆಂದರೆ ಅದು ಮಣ್ಣಿನ ಗುಣದಿಂದ. ಇಂತಹ ಗುಣ ಈ ಶಾಲೆಯ ಮಣ್ಣಿಗಿದೆ. ಆಗ್ರಾದಲ್ಲಿ ಹುಟ್ಟಿದ ನನ್ನನ್ನು 1962ರಲ್ಲಿ ನನ್ನ ತಂದೆ ಈ ಶಾಲೆಗೆ ಸೇರಿಸಿದರು. ಎರಡನೇ ತರಗತಿಯಿಂದ ನನ್ನ ವಿದ್ಯಾಭ್ಯಾಸ ಇಲ್ಲಿ ಆರಂಭವಾಯಿತು. ನೀವು ಗುರುವಿನಿಂದ ಏನು ಪಡೆಯುತ್ತೀರಿ ಎಂಬುದು ಮುಖ್ಯ ಹೊರತು ಗುರು ನಿಮಗೆ ಏನು ನೀಡುತ್ತಾರೆ ಎಂಬುದಲ್ಲ. ಬದುಕಿಗೆ ಬೇಕಾಗುವ ತತ್ವಗಳನ್ನು ಈ ಶಾಲೆ ನನಗೆ ನೀಡಿದೆ ಎಂದು ಹೇಳಿದರು.

ಸಮಾರಂಭದ ಮುಖ್ಯ ಅತಿಥಿ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಅಕಾಡೆಮಿ, ನೊಯ್ಡಾ ಇಲ್ಲಿನ ಪ್ರಾಂಶುಪಾಲ ಡಾ. ಮನೋಜ್ ಕುಮಾರ್ ಅವರು ಸಮಾರಂಭವನ್ನು ದೀಪ ಬೆಳಗಿಸಿ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು ದೆಹಲಿಯ ಪ್ರತಿಷ್ಠಿತ ವಿದ್ಯಾಸಂಸ್ಥೆಗಳಲ್ಲಿ ಒಂದಾದ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯು ರಾಜಧಾನಿ ದೆಹಲಿಯ ಹೃದಯ ಭಾಗದಲ್ಲಿದ್ದು ಗುಣಾತ್ಮಕ ಶಿಕ್ಷಣಕ್ಕಾಗಿ ಮತ್ತು ಕರ್ನಾಟಕದ ಸಾಂಸ್ಕೃತಿಕ ಅನನ್ಯತೆಗಾಗಿ ತನ್ನದೇಯಾದ ಹೆಸರು ಪಡೆದಿದೆ. ಶಾಲೆಯೇ ಮೊದಲ ದೇವಾಲಯ. ನಮ್ಮ ವ್ಯಕ್ತಿತ್ವಕ್ಕೆ ಅಗತ್ಯವಿರುವ ಮೌಲ್ಯಗಳನ್ನು, ಸಂಸ್ಕಾರಗಳನ್ನು, ಕಲೆಗಳನ್ನು ಪಡೆಯುವುದು ನಾವು ಇಲ್ಲಿಂದಲೇ. ಕನ್ನಡ ಭಾಷೆಯ ಸಂರಕ್ಷಣೆ, ಬೆಳವಣಿಗೆ ಹಾಗೂ ಮುಂದಿನ ಪೀಳಿಗೆಗೆ ಅದರ ಮೌಲ್ಯಗಳನ್ನು ತಲುಪಿಸುವ ಅತ್ಯುತ್ತಮ ವೇದಿಕೆ ಈ ಶಾಲೆ. ಕನ್ನಡದೊಂದಿಗೆ ಜ್ಞಾನ ಮತ್ತು ಮೌಲ್ಯಗಳು ಬೆಳವಣಿಗೆಗೆ ದಾರಿಯಾಗಲಿ ಎಂದು ಶುಭ ಹಾರೈಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಪ್ರಭಾರ ಅಧ್ಯಕ್ಷ ಡಾ. ಅವನೀಂದ್ರನಾಥ್ ರಾವ್ ಅವರು ಕಾಲಕ್ಕೆ ಅನುಗುಣವಾಗಿ ಶಾಲೆಗೆ ಬೇಕಾದಂತಹ ಅಗತ್ಯ ಸೌಕರ್ಯಗಳನ್ನು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಒದಗಿಸುತ್ತಿದೆ. ಸಾಂಸ್ಕೃತಿಕ ಹಾಗೂ ಕ್ರೀಡೆಯಲ್ಲಿ ದೆಹಲಿ ಶಿಕ್ಷಣ ಇಲಾಖೆಯ ವಲಯ ಮಟ್ಟದಲ್ಲಿ ದೆಹಲಿ ಕನ್ನಡ ಶಾಲೆಯು ತನ್ನದೇ ಛಾಪು ಮೂಡಿಸಿದೆ. ಪ್ರತಿಯೊಬ್ಬ ವಿದ್ಯಾರ್ಥಿಯ ಪ್ರತಿಭೆಯು ಈ ಶಾಲೆಯಲ್ಲಿ ನಿರಂತರವಾಗಿ ಅನಾವರಣಗೊಳ್ಳುತ್ತಿದೆ

ಎಂದು ಶ್ಲಾಘಿಸಿದರು. ಅಲ್ಲದೆ ಅವರು ಸಮಯದ ಮೌಲ್ಯವನ್ನು ಅರಿಯುವಂತೆ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು

ಪ್ರಾಂಶುಪಾಲ ಶ್ರೀ ಪ್ರಶಾಂತ ಕುಮಾರ್ ಅವರು ಶೈಕ್ಷಣಿಕ, ಸಾಂಸ್ಕೃತಿಕ, ಕ್ರೀಡಾ ಕ್ಷೇತ್ರಗಳಲ್ಲಿ ರಾಜ್ಯಮಟ್ಟ, ರಾಷ್ಟ್ರಮಟ್ಟದ ಸಾಧನೆಯ ಜೊತೆಗೆ 10ನೇ ಮತ್ತು 12ನೇ ತರಗತಿಯಲ್ಲಿ ನೂರಕ್ಕೆ ನೂರು ಪ್ರತಿಶತ ಫಲಿತಾಂಶ ದಾಖಲಿಸಿದ ಕುರಿತಾದ ಸವಿವರವಾದ ವಾರ್ಷಿಕ ವರದಿ ವಾಚಿಸಿದರು. ವೇದಿಕೆಯಲ್ಲಿ ಪದ್ಮಶ್ರೀ ಪುರಸ್ಕೃತೆ ಡಾ. ಕಮಲಿನಿ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷೆ ಶ್ರೀಮತಿ ವೀಣಾ ಜಗದೀಶ್, ಶಾಲಾ ಉಪ ಪ್ರಾಂಶುಪಾಲೆ ಶ್ರೀಮತಿ ಪ್ರೇಮಲತಾ ಬಿ. ಉಪಸ್ಥಿತರಿದ್ದರು.

ಸಮಾರಂಭದಲ್ಲಿ ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಸಾಧನೆಗೈದ ಶಾಲೆಯ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಪ್ರಶಸ್ತಿ, ಪುರಸ್ಕಾರದೊಂದಿಗೆ ಗೌರವಿಸಲಾಯಿತು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಸಮಿತಿ ಸದಸ್ಯರು, ಶಾಲಾ ಶಿಕ್ಷಕ–ಶಿಕ್ಷಕೇತರ ವೃಂದ, ಹಳೆಯ ವಿದ್ಯಾರ್ಥಿಗಳು, ಪೋಷಕರು, ಕನ್ನಡಿಗರು ಉಪಸ್ಥಿತರಿದ್ದರು. ಶಾಲಾ ವ್ಯವಸ್ಥಾಪಕ ಶ್ರೀ ಉಮೇಶ್ ಬಿ.ಆರ್. ಸ್ವಾಗತಿಸಿದರು. ಗೌರವ ಖಜಾಂಚಿ ಹಾಗೂ ಪ್ರಭಾರ ಗೌರವ ಕಾರ್ಯದರ್ಶಿ ಶ್ರೀ ಕಾಶಿನಾಥ ಬಿರಾದರ್ ವಂದಿಸಿದರು. ಶಿಕ್ಷಕರಾದ ಶ್ರೀಮತಿ ಪ್ರೊಮಿೀಳಾ ದಹಿಯಾ, ಕುಮಾರಿ ಬಿದಿಶಾ ಕಾರ್ಯಕ್ರಮ ನಿರೂಪಿಸಿದರು.

ಸುಮಾರು ನಾಲ್ಕು ಗಂಟೆಗಳ ಕಾಲ ಶಾಲಾ ವಿದ್ಯಾರ್ಥಿಗಳು ಪ್ರದರ್ಶಿಸಿದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮವು ನೆರೆದಿದ್ದವರ ಮನಸೂರೆಗೊಂಡಿತು. ಸುಮಾರು 542 ವಿದ್ಯಾರ್ಥಿಗಳು ಭಾಗವಹಿಸಿ ಸುಂದರ ಸಂಜೆಗೆ ಮೆರುಗು ನೀಡಿದರು. ವಿಶೇಷವಾಗಿ ಶಾಲೆಯ 22 ಕನ್ನಡೇತರ ವಿದ್ಯಾರ್ಥಿಗಳು ಪ್ರದರ್ಶಿಸಿದ ಕನ್ನಡ ತಾಯಿಗೆ ವರಮಾಲೆ ಎಂಬ ಕನ್ನಡ ಕಿರುನಾಟಕ ಪ್ರೇಕ್ಷಕರ ಪ್ರಶಂಸೆಗೆ ಪಾತ್ರವಾಯಿತು. ಸಾಂಸ್ಕೃತಿಕ ಕಾರ್ಯಕ್ರಮದ ನಿರೂಪಣೆಯನ್ನು ವಿದ್ಯಾರ್ಥಿಗಳಾದ ಆಯುಷಿ, ಹಿತೇನ್, ಪಿ. ಅಪೇಕ್ಷಾ, ಸಾತ್ವಿಕ್ ಎಚ್. ತೇಲಿ ನಡೆಸಿಕೊಟ್ಟರು. ❑

# ರಾಷ್ಟ್ರ ರಾಜಧಾನಿಯಲ್ಲಿ ಕನ್ನಡೇತರ ವಿದ್ಯಾರ್ಥಿಗಳಿಂದ 'ಕನ್ನಡ ತಾಯಿಗೆ ವರಮಾಲೆ'




ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಶಾಲಾ ವಾರ್ಷಿಕೋತ್ಸವ ಸಮಾರಂಭವು ಇತ್ತೀಚೆಗೆ ಅದ್ದೂರಿಯಾಗಿ ನೆರವೇರಿತು. ವಿಶೇಷವೆಂದರೆ ಶಾಲೆಯ ಇಪ್ಪತ್ತೆರಡು ಕನ್ನಡೇತರ ವಿದ್ಯಾರ್ಥಿಗಳು ಸುಮಾರು ಇಪ್ಪತ್ತೈದು ನಿಮಿಷಗಳ ಕಾಲ ಪ್ರಸ್ತುತಪಡಿಸಿದ ಕನ್ನಡ ಕಿರು ನಾಟಕ 'ಕನ್ನಡ ತಾಯಿಗೆ ವರಮಾಲೆ'. ಶಾಲೆಯ ಕನ್ನಡ ಶಿಕ್ಷಕರಾದ ಶ್ರೀ ಅರವಿಂದ ಬಿಜ್ಜೈ ಅವರ ರಚನೆ ಮತ್ತು ನಿರ್ದೇಶನದಲ್ಲಿ ಹತ್ತು ದಿವಸಗಳ ಕಾಲ ನಿರಂತರ ಅಭ್ಯಾಸ ಮಾಡಿ, ಸಂಭಾಷಣೆಯನ್ನು ಬರೆದು, ಅರ್ಥವನ್ನು ತಿಳಿದು, ಕಂಠಪಾಠ ಮಾಡಿ, ಭಾವಾಭಿವ್ಯಕ್ತಿಯೊಂದಿಗೆ ಪ್ರದರ್ಶಿಸಿದ ಕನ್ನಡೇತರ ವಿದ್ಯಾರ್ಥಿಗಳ ಈ ಕಿರುನಾಟಕ ಅಪಾರ ಕನ್ನಡಿಗರ ಪ್ರಶಂಸೆಗೆ ಪಾತ್ರವಾಯಿತು. ಈ ವಿನೂತನ ಪ್ರಯೋಗ ಶಾಲಾ ಇತಿಹಾಸದಲ್ಲಿಯೇ ಮೊದಲು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕನ್ನಡ ಹಾಡುಗಳನ್ನು ಹಾಡುವ, ಕನ್ನಡ ಹಾಡುಗಳಿಗೆ ನೃತ್ಯಗೈಯುವ ಹಾಗೆಯೇ ಕನ್ನಡ ನುಡಿಮುತ್ತು, ಗಾದೆಮಾತು, ವಚನಗಳನ್ನು ಸರಾಗವಾಗಿ ನುಡಿಯುವ ಕನ್ನಡೇತರ ವಿದ್ಯಾರ್ಥಿಗಳಿಂದ ಕನ್ನಡ ನಾಟಕವನ್ನು ಪ್ರಸ್ತುತಪಡಿಸಬೇಕೆಂಬ ಮಹಾದಾಸೆ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯದ್ದಾಗಿತ್ತು. ಹೊರನಾಡಿನಲ್ಲಿ ಇತರ ಭಾಷೆಗಳನ್ನು ಮಕ್ಕಳ ಮೇಲೆ ಹೇರುವ ಪೋಷಕರಿಗೆ ಮಾತೃಭಾಷೆಯ ಸೊಗಡನ್ನು ಕಣ್ಣಿಗೆ ಕಟ್ಟಿಕೊಡುವ ಮತ್ತು ಪರಭಾಷಿಕರು ಕನ್ನಡವನ್ನು ಇಷ್ಟಪಟ್ಟರೆ ಸುಲಭವಾಗಿ ಕಲಿಯಬಹುದು ಎಂಬ ಉದ್ದೇಶವನ್ನು ಈ ನಾಟಕ ಮುಂದಿಟ್ಟಿತು.

ಕನ್ನಡ ಭಾಷೆಯ ಇತಿಹಾಸವು ಸುಮಾರು 2000 ವರ್ಷಗಳಿಗೂ ಹೆಚ್ಚು ಹಳೆಯದು. ಕನ್ನಡ ಭಾಷೆಯ ಬೆಳವಣಿಗೆಗೆ ಕನ್ನಡ ನಾಡಿನ ರಾಜಮನೆತನಗಳ ಕೊಡುಗೆ ಅಪಾರ. ಇಲ್ಲಿನ ಕತೆಯು ಕಾಲ್ಪನಿಕವಾಗಿದ್ದು, ಈ ನಾಟಕದಲ್ಲಿ ಇರುವ ರಾಜ ಅಪ್ಪಟ ಭಾಷಾಪ್ರೇಮಿ. ತನ್ನ ರಾಜ್ಯದಲ್ಲಿ ಕನ್ನಡ ಭಾಷೆಯ ಸೊಗಡನ್ನು ಪ್ರಜೆಗಳು ಹೇಗೆ ಮೈಗೂಡಿಸಿಕೊಂಡಿದ್ದಾರೆ ಎನ್ನುವ ಕುತೂಹಲದಿಂದ ರಾಜ್ಯ ವಿಹಾರ ಮಾಡುವ ಸನ್ನಿವೇಶವೇ ಈ ನಾಟಕದ ಕತೆ.

ರಂಗಸಜ್ಜಿಕೆಯಲ್ಲಿ ಶ್ರೀಮತಿ ಜ್ಯೋತಿ ಎಸ್. ಪೊದ್ದಾರ್, ಪ್ರಸಾದನದಲ್ಲಿ ಶ್ರೀಮತಿ ಸೀಮಾ ಬಿರಾದರ್, ಬೆಳಕಿನಲ್ಲಿ ರಮೇಶ ಕೆ., ವಸ್ತ್ರ ವಿನ್ಯಾಸದಲ್ಲಿ ಶ್ರೀಮತಿ ಅಂಜುಂ, ತಾಂತ್ರಿಕ ಸಹಾಯದಲ್ಲಿ ಕು. ಸುಮಂತ್ ಆಚಾರ್ಯ, ಕು. ಮೊಹಮ್ಮದ್ ಸಾಹಿಲ್, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಖಜಾಂಚಿ, ಪ್ರಭಾರ ಗೌರವ ಕಾರ್ಯದರ್ಶಿ ಕಾಶಿನಾಥ್ ಬಿರಾದರ್, ಸಂಸ್ಥೆಯ ಸಾಂಸ್ಕೃತಿಕ ಸಮಿತಿಯ ಸಂಚಾಲಕ ಹರಿಪ್ರಿಯ ಎಸ್., ಶಾಲಾ ಪ್ರಾಂಶುಪಾಲ ಪ್ರಶಾಂತ ಕುಮಾರ್ ಅವರು ವಿಶೇಷ ಸಹಕಾರ ನೀಡಿದರು. ಕಾರ್ಯಕ್ರಮ ನಿರ್ವಹಣೆಯಲ್ಲಿ ಉಪನ್ಯಾಸಕ ನಾಗರಾಜ ಎಂ., ಗೋಪಾಲಕೃಷ್ಣ ಮತ್ತು ಕು. ನೂತನ ಕೈಕಾಡೆ ಸಹಕರಿಸಿದರು. ❑

# ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರಿಗೆ ನುಡಿನಮನ



ಹಸಿರು ಕ್ರಾಂತಿಗೆ ನಾಂದಿ ಹಾಡಿದ ವೃಕ್ಷಮಾತೆ, ಪದ್ಮಶ್ರೀ ಪುರಸ್ಕೃತೆ, ಕನ್ನಡ ನಾಡಿನ ಹೆಮ್ಮೆಯ ಸಾಧಕಿ, ನಾಡೋಜ ಸಾಲುಮರದ ತಿಮ್ಮಕ್ಕ ಅವರಿಗೆ ಇತ್ತೀಚೆಗೆ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಿಂದ ನುಡಿನಮನವನ್ನು ಅರ್ಪಿಸಲಾಯಿತು.

ಶಾಲಾ ಉಪಪ್ರಾಂಶುಪಾಲೆ, ಪರಿಸರಪ್ರೇಮಿ ಶ್ರೀಮತಿ ಪ್ರೇಮಲತಾ ಬಿ. ಅವರು ಸಾಲುಮರದ ತಿಮ್ಮಕ್ಕ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಸಲ್ಲಿಸಿ ಮಾತನಾಡಿ, 385 ಆಲದ ಮರಗಳ ಜೊತೆ ಸುಮಾರು 8000 ಮರಗಳನ್ನು ಬೆಳೆಸಿದ ವೃಕ್ಷಮಾತೆ ಸಾಲು ಮರದ ತಿಮ್ಮಕ್ಕ ಅವರಿಗೆ 2019ರಲ್ಲಿ ಮಾನ್ಯ ರಾಷ್ಟ್ರಪತಿಯವರು ಪದ್ಮಶ್ರೀ ಪ್ರಶಸ್ತಿ ನೀಡಿ ಪುರಸ್ಕರಿಸಿದರು. ದೇಶದ ಮಹಿಳೆ ಮಾಡಿದ ಅತ್ಯುನ್ನತ

ಸಾಧನೆಯಿದು. ಪದ್ಮಶ್ರೀ ಪ್ರಶಸ್ತಿ ಪಡೆದ ದಿನವೇ ಅವರು ನಮ್ಮ ಶಾಲೆಗೆ ಆಗಮಿಸಿ ಅಶೋಕ ಗಿಡವನ್ನು ನೆಟ್ಟಿರುವುದು ಅವಿಸ್ಮರಣೀಯ. ಅವರ ಕನಸಿನಂತೆ ಈ ಶಾಲಾ ಪರಿಸರವನ್ನು ಹಸಿರುಮಯವನ್ನಾಗಿಸಲು ನಾವೆಲ್ಲರೂ ಪರಿಶ್ರಮಪಡೋಣ ಎಂದು ಅವರಿಗೆ ನುಡಿನಮನವನ್ನು ಅರ್ಪಿಸಿದರು.

ಮಾನ್ಯ ಪ್ರಾಂಶುಪಾಲ ಶ್ರೀ ಪ್ರಶಾಂತ ಕುಮಾರ್ ಅಧ್ಯಕ್ಷತೆ ವಹಿಸಿ ಮಾತನಾಡಿ ಮಕ್ಕಳಿಲ್ಲ ಎಂದು ಕೊರಗದೆ ಸರ್ವರ ಹಿತಕ್ಕಾಗಿ ದಾರಿಯುದ್ದಕ್ಕೂ ಸಸಿಗಳನ್ನು ನೆಟ್ಟು, ತಾನು ನೆಟ್ಟ ಸಾಲುಸಾಲು ಸಸಿಗಳಿಗೆ ಪ್ರತಿನಿತ್ಯ ನೀರೆರೆದು, ರಕ್ಷಿಸಿ, ಸಂರಕ್ಷಿಸಿ ಅವುಗಳನ್ನು ಮರಗಳನ್ನಾಗಿ ಮಾಡಿದ ತಾಯಿ ಸಾಲುಮರದ ತಿಮ್ಮಕ್ಕ, ಅವರ ಜೀವನ ನಮಗೆಲ್ಲರಿಗೂ ಆದರ್ಶಪ್ರಾಯವಾದುದು. ವಿದ್ಯಾರ್ಥಿಗಳು ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಗಿಡಗಳನ್ನು ನೆಡುವುದು ಮಾತ್ರವಲ್ಲ, ಅದರ ನಿರಂತರ ಪೋಷಣೆಯನ್ನು ಮಾಡಿ ಪರಿಸರ ಪ್ರೀತಿಯನ್ನು ಬೆಳೆಸಬೇಕು ಎಂದರು.

ವಿದ್ಯಾರ್ಥಿಗಳಾದ ವಿಧಿ ಕೊಠಾರಿ, ಜೈನಬ್, ಹರ್ಷಿತಾ ಉಭಾಳೆ, ನೂತನ ಕೈಕಾಡೆ, ಬುದ್ಧನಾ ಸಂಘಮಿತ್ರ ಅವರು ಸಾಲುಮರದ ತಿಮ್ಮಕ್ಕನ ಆದರ್ಶ ಜೀವನದ ವಿಚಾರಧಾರೆಗಳನ್ನು ಪ್ರಸ್ತುತಪಡಿಸಿದರು. ಪರಿಸರ ಗೀತೆ ಮತ್ತು ಸಾಲುಮರದ ತಿಮ್ಮಕ್ಕ ಅವರ ಬಗ್ಗೆಗಿನ ಘೋಷಣಾ ವಾಕ್ಯಗಳ ಜೊತೆ ಕಾರ್ಯಕ್ರಮವನ್ನು ಆರಂಭಿಸಲಾಯಿತು. ಉಪನ್ಯಾಸಕಿ ಶ್ರೀಮತಿ ಸೌಮ್ಯ ಎನ್. ಎಂ., ಸಹ ಶಿಕ್ಷಕರುಗಳಾದ ಶ್ರೀಮತಿ ರೇಖಾ ಐ., ಶ್ರೀಮತಿ ವೀಣಾ ಕೊಠಾರಿ, ಕನ್ನಡ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಕನ್ನಡ ಶಿಕ್ಷಕ ಶ್ರೀ ಅರವಿಂದ ಬಿಜ್ಜೈ ಸ್ವಾಗತಿಸಿದರು. ಕು। ವೈಷ್ಣವಿ ಬಿ. ವಂದಿಸಿದರು. ಕು। ಕೀರ್ತನ್ ಪಿ. ಕಾರ್ಯಕ್ರಮ ನಿರೂಪಿಸಿದರು. ❑

# ಕಲಿಕೆಯ ನಿಜ ನೋಟ ಕನ್ನಡ ಮಕ್ಕಳ ಕೂಟ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಹಾಗೂ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆ ವತಿಯಿಂದ ಸಂಸ್ಥೆಯ ಕನ್ನಡ ವಿದ್ಯಾರ್ಥಿಗಳು, ಶಿಕ್ಷಕರು, ಪೋಷಕರು ಹಾಗೂ ಆಡಳಿತ ಸಮಿತಿಯವರಿಗೆ ಕನ್ನಡ ಮಕ್ಕಳ ಕೂಟ ಎರಡು ದಿನಗಳ ವಿಶಿಷ್ಟ ಕಾರ್ಯಕ್ರಮವನ್ನು ಇತ್ತೀಚೆಗೆ ದೆಹಲಿ ಕನ್ನಡ ಶಾಲೆಯ ಆವರಣದಲ್ಲಿ ಆಯೋಜಿಸಲಾಗಿತ್ತು.



ದೀಪ ಬೆಳಗಿಸಿ ಕನ್ನಡ ಮಕ್ಕಳ ಕೂಟಕ್ಕೆ ಚಾಲನೆ ನೀಡಲಾಯಿತು. ಕಾರ್ಯಕ್ರಮದ ಮುಖ್ಯ ಅತಿಥಿ ಭಾರತ ಸರಕಾರದ ಎಐಸಿಟಿಇ ಸಲಹೆಗಾರರಾದ ಡಾ. ಎನ್. ಎಚ್. ಸಿದ್ದಲಿಂಗಸ್ವಾಮಿ ಅವರು ಮಾತನಾಡಿ ದೆಹಲಿ ಕನ್ನಡಿಗರಿಗೆ ಈ ಸಂಸ್ಥೆಯು ಪುಣ್ಯಭೂಮಿ. ಒಬ್ಬ ಕನ್ನಡಿಗನಾಗಿ ಈ ನೆಲದಲ್ಲಿ ನಿಂತು ಮಾತನಾಡುವುದು, ಮಕ್ಕಳ ಕಾರ್ಯಕ್ರಮದಲ್ಲಿ ಭಾಗವಹಿಸುವುದು ನನ್ನ ಸೌಭಾಗ್ಯ ಎಂದು ತಿಳಿದಿದ್ದೇನೆ. ಮಹನೀಯರು ಕಟ್ಟಿದ ಈ ಶಿಕ್ಷಣ ಸಂಸ್ಥೆಯನ್ನು ಇನ್ನಷ್ಟು ಎತ್ತರಕ್ಕೆ ಬೆಳೆಸಿ, ಕನ್ನಡದ ಮಕ್ಕಳಿಗಾಗಿ ಇಂತಹ ಸ್ಫೂರ್ತಿಯುತ ಕಾರ್ಯಕ್ರಮಗಳನ್ನು ಸಂಘಟಿಸಿ ಎಂದು ಹಾರೈಸಿದರು.

ಅಧ್ಯಕ್ಷತೆ ವಹಿಸಿದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಪ್ರಭಾರ ಅಧ್ಯಕ್ಷ ಡಾ. ಅವನೀಂದ್ರನಾಥ ರಾವ್ ಅವರು ಮಾತನಾಡಿ ಒಳ್ಳೆಯ ಜನರು, ಒಳ್ಳೆಯ ವಿಚಾರಗಳು ಒಂದೆಡೆ ಸೇರುವುದೇ ಕೂಟ. ಈ ಕೂಟದಲ್ಲಿ ಮಕ್ಕಳು ಸೃಜನಾತ್ಮಕತೆಯನ್ನು, ಸ್ವಾವಲಂಬನೆಯನ್ನು ಮೈಗೂಡಿಸಿಕೊಳ್ಳಲು ವೈವಿಧ್ಯಮಯ ಚಟುವಟಿಕೆಗಳನ್ನು ಆಯೋಜಿಸಲಾಗಿದೆ. ಕನ್ನಡವನ್ನು ಬೆಳೆಸುವ ಇಂತಹ ಕಾರ್ಯಕ್ರಮಗಳನ್ನು ಸಂಸ್ಥೆಯು ಸದಾ ಪ್ರೋತ್ಸಾಹಿಸುತ್ತದೆ ಎಂದು ಹೇಳಿದರು. ಸುಮಾರು 65 ವರ್ಷಗಳ ಹಿಂದೆ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕನ್ನಡಿಗರ ಮಕ್ಕಳು ಕನ್ನಡವನ್ನು ಕಲಿಯಬೇಕು ಎನ್ನುವ ಆಶಯದೊಂದಿಗೆ ಈ ಸಂಸ್ಥೆಯನ್ನು ಕಟ್ಟಿದ ಎಸ್. ವಿ. ಕೃಷ್ಣಮೂರ್ತಿ ರಾವ್ ಅವರ ಜನ್ಮದಿನದಂದೇ ಮಕ್ಕಳಿಗಾಗಿ ಈ ಕಾರ್ಯಕ್ರಮ ಆಯೋಜನೆಗೊಳ್ಳುತ್ತಿರುವುದು ಸಂತಸದ ಸಂಗತಿ ಎಂದರು.

ಇದೇ ಸಂದರ್ಭದಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಎಸ್. ವಿ. ಕೃಷ್ಣಮೂರ್ತಿ ರಾವ್ ಅವರ ಜನ್ಮ ದಿನದ ಸವಿನೆನಪಿಗಾಗಿ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಸಲ್ಲಿಸಿ ನಮನಗಳನ್ನು ಸಲ್ಲಿಸಲಾಯಿತು. 2024–25ನೇ ಶೈಕ್ಷಣಿಕ ಸಾಲಿನ ಸಿಬಿಎಸ್‌ಸಿ ಪರೀಕ್ಷೆಯಲ್ಲಿ ಕನ್ನಡ ಭಾಷೆಯಲ್ಲಿ ಅತ್ಯಧಿಕ ಅಂಕ ಗಳಿಸಿದ ವಿದ್ಯಾರ್ಥಿಗಳಾದ ಪಿ. ಅಪೇಕ್ಷಾ, ಕು. ಸಾತ್ವಿಕ್ ಎಚ್. ತೇಲಿ ಅವರುಗಳನ್ನು ಅಭಿನಂದನಾ ಪತ್ರ ನೀಡಿ ಗೌರವಿಸಲಾಯಿತು.



ಮಕ್ಕಳಲ್ಲಿ ಕಲಿಕೆ, ಮನರಂಜನೆ ಹಾಗೂ ಸಹಭಾಗಿತ್ವದ ಧ್ಯೇಯದೊಂದಿಗೆ ಆಯೋಜಿಸಿದ ಕನ್ನಡ ಮಕ್ಕಳ ಕೂಟದಲ್ಲಿ ಭಕ್ತಿಭಾವದಿಂದ ಕೂಡಿದ ಭಜನೆ, ಪ್ರತಿಭೆಗೆ ವೇದಿಕೆ ನೀಡಿದ ಸಾಂಸ್ಕೃತಿಕ ಕಾರ್ಯಕ್ರಮ, ಮಾತೃಭೋಜನ, ಮನಸ್ಸಿಗೆ ಉಲ್ಲಾಸವನ್ನು ನೀಡಿದ ಯೋಗಾಸನ, ಕನ್ನಡವನ್ನು ಕಟ್ಟುವ ಭಾಷಾ ಚಟುವಟಿಕೆ, ಹೊಸ ಕಲಿಕೆಯ ಅನುಭವ ನೀಡಿದ ಮನರಂಜನಾತ್ಮಕ ಆಟಗಳು, ಆತ್ಮಬಲವನ್ನು ಹೆಚ್ಚಿಸಿದ ಕ್ರೀಡಾ ಚಟುವಟಿಕೆ, ಮಧ್ಯರಾತ್ರಿಯಲ್ಲಿ ಕಣ್ಣುಗಳಿಗೆ ಹೊಸ ಬೆಳಕು ನೀಡಿದ ಶಿಬಿರಾಗ್ನಿಯು ಕನ್ನಡ ಮಕ್ಕಳಿಗೆ ಹೊಸತನದ ರಸದೂಟವನ್ನು ನೀಡಿತು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಖಜಾಂಚಿ ಮತ್ತು ಪ್ರಭಾರ ಕಾರ್ಯದರ್ಶಿ ಕಾಶಿನಾಥ ಬಿರಾದರ್, ಆಡಳಿತ ಸಮಿತಿ ಸದಸ್ಯರು ಹಾಗೂ ನಿಕಟ ಪೂರ್ವ ಅಧ್ಯಕ್ಷ ವಸಂತ ಶೆಟ್ಟಿ ಬೆಳ್ಳಾರೆ ಕಾರ್ಯಕ್ರಮಕ್ಕೆ ಶುಭ ಹಾರೈಸಿ ಮಾತನಾಡಿದರು. ಸಂಸ್ಥೆಯ ಉಪಾಧ್ಯಕ್ಷೆ ಶ್ರೀಮತಿ ವೀಣಾ ಜಗದೀಶ್, ಸಂಸ್ಥೆಯ ಆಡಳಿತ ಸಮಿತಿಯ ಸದಸ್ಯ ರಾಧಾಕೃಷ್ಣ ಕೆ., ಡಾ. ಅಶೋಕ್ ಗೋನಾಳ್, ಕನ್ನಡ ಪೋಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಶಾಲೆಯ ಶಿಕ್ಷಕ ಎಚ್.ಎಸ್. ತೇಲಿ ಅತಿಥಿ ಅವರ ಪರಿಚಯಗೈದರು. ರಾಜ್ಯಶಾಸ್ತ್ರ ಉಪನ್ಯಾಸಕ ನಾಗರಾಜ್ ಎಂ. ಕಾರ್ಯಕ್ರಮ ನಿರೂಪಿಸಿದರು. ಪ್ರಾಂಶುಪಾಲ ಪ್ರಶಾಂತ ಕುಮಾರ್ ಸ್ವಾಗತಿಸಿದರು. ಸಂಸ್ಥೆಯ ಆಡಳಿತ ಸಮಿತಿ ಸದಸ್ಯ ಹರಿಪ್ರಿಯಾ ಎಸ್. ವಂದಿಸಿದರು. ❑

# ಶಿಕ್ಷಕರೆಲ್ಲರ ಸಮರ್ಪಣೆ ಮತ್ತು ಕಠಿಣ ಪರಿಶ್ರಮವನ್ನು ನೆನೆಯಬೇಕಾಗಿದೆ
## - ಡಾ. ವೈ. ಅವನೀಂದ್ರನಾಥ ರಾವ್




ಭಾರತೀಯ ಶಿಕ್ಷಣ ವ್ಯವಸ್ಥೆಗೆ ಅಪ್ರತಿಮ ಯೋಗದಾನ ನೀಡಿದ ಆದರ್ಶ ಶಿಕ್ಷಕ, ದಾರ್ಶನಿಕ ಮತ್ತು ಮಾಜಿ ರಾಷ್ಟ್ರಪತಿ ಡಾ. ಸರ್ವೇಪಲ್ಲಿ ರಾಧಾಕೃಷ್ಣನ್ ಅವರ ಜನ್ಮದಿನವನ್ನು ಶಿಕ್ಷಕರ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. ಈ ದಿನದಂದು ಶಿಕ್ಷಕರೆಲ್ಲರ ಸಮರ್ಪಣೆ ಮತ್ತು ಕಠಿಣ ಪರಿಶ್ರಮವನ್ನು ನೆನೆದು ಗೌರವಿಸುವುದು ನಮ್ಮೆಲ್ಲರ ಕರ್ತವ್ಯ. ವಿದ್ಯಾರ್ಥಿಗಳ ಯಶಸ್ಸಿಗೆ ಅಚಲವಾದ ಬದ್ಧತೆಯನ್ನು ಗುರುತಿಸುವ ಶಿಕ್ಷಕರಿಗೆ ಸ್ವಯಂ ಆರೋಗ್ಯಕರ ಮತ್ತು ಪ್ರೇರಕ ವಾತಾವರಣವನ್ನು ಸೃಷ್ಟಿಸಲು ಪ್ರಯತ್ನಿಸಬೇಕಾಗಿದೆ. ಶಿಕ್ಷಕರು ವಿದ್ಯಾರ್ಥಿಗಳ ಎರಡನೇ ಪೋಷಕರು ಹಾಗೂ ಅವರ ಜೀವನವನ್ನು ರೂಪಿಸುವ ಮಾರ್ಗದರ್ಶಕರು ಎಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷ ಡಾ. ವೈ. ಅವನೀಂದ್ರನಾಥ ರಾವ್ ಅವರು ಹೇಳಿದರು.

ಅವರು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಜಿ.ಪಿ. ರಾಜರತ್ನಂ ಸಭಾಂಗಣದಲ್ಲಿ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಶಿಕ್ಷಕ, ಶಿಕ್ಷಕೇತರ ವೃಂದದವರಿಗೆ ಆಯೋಜಿಸಿದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು.

ಸಂಸ್ಥೆಯ ಉಪಾಧ್ಯಕ್ಷೆ ಶ್ರೀಮತಿ ಎಂ. ವೀಣಾ ಜಗದೀಶ್ ಅವರು ಮಾತನಾಡಿ ಜೀವನದಲ್ಲಿ ನಾವು ಪ್ರತಿಕ್ಷಣವೂ ಪಡೆದುಕೊಳ್ಳುವ ಅನುಭವಗಳೆಲ್ಲವೂ ಶಿಕ್ಷಣ. ಉತ್ತಮ ದಾರಿ ತೋರುವ ಎಲ್ಲರೂ ಗುರುಗಳೇ ಎನ್ನುವ ಮಾತಿದ್ದರೂ ಭಾರತೀಯ ಪರಂಪರೆಯಲ್ಲಿ ಶಿಕ್ಷಕ ವೃತ್ತಿಗೆ ಮಹತ್ವದ ಸ್ಥಾನವಿದೆ. ವಿದ್ಯಾರ್ಥಿಗಳಿಗೆ ಶಿಕ್ಷಕರೇ ಮೊದಲ ಆದರ್ಶ. ಇಂಥ ಸ್ಥಿತಿಯಲ್ಲಿ ಶಿಕ್ಷಕರ ಜವಾಬ್ದಾರಿ ಮಹತ್ವದ್ದಾಗಿರುತ್ತದೆ. ಗುಣಮಟ್ಟದ ಶಿಕ್ಷಣಕ್ಕಾಗಿ ಶಿಕ್ಷಕರೆಲ್ಲರೂ ಶ್ರಮಿಸುತ್ತಿರುವುದು ಅನುಕರಣೀಯ ಎಂದು ಹೇಳಿದರು.

ಸಂಸ್ಥೆಯ ವತಿಯಿಂದ ಶಾಲಾ ಶಿಕ್ಷಕ, ಶಿಕ್ಷಕೇತರ ವೃಂದದವರಿಗೆ ಉಡುಗೊರೆಯನ್ನು ನೀಡಿ ಗೌರವಿಸಲಾಯಿತು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಿ.ಕೆ. ಬಸವರಾಜು, ಗೌರವ ಖಜಾಂಚಿ ಕಾಶೀನಾಥ ಬಿರಾದರ್, ಆಡಳಿತ ಸಮಿತಿ ಸದಸ್ಯರುಗಳಾದ ರಾಧಾಕೃಷ್ಣ ಕೆ., ಗಿರೀಶ್ ಎಸ್., ಡಾ. ಅಶೋಕ್ ಗೋನಾಳ್, ಮೋಹನ್ ಕುಮಾರ್ ಬಿ.ಎನ್. ಉಪಸ್ಥಿತರಿದ್ದರು. ಪ್ರಾಂಶುಪಾಲ ಪ್ರಶಾಂತ ಕುಮಾರ್ ಸ್ವಾಗತಿಸಿದರು. ಶಿಕ್ಷಕರುಗಳಾದ ಬಿದಿಶಾ ಚಟರ್ಜಿ ಮತ್ತು ಎಚ್. ಎಸ್. ತೇಲಿ ಕಾರ್ಯಕ್ರಮ ನಿರೂಪಿಸಿದರು. ಉಪ ಪ್ರಾಂಶುಪಾಲೆ ಶ್ರೀಮತಿ ಪ್ರೇಮಲತಾ ಬಿ. ವಂದನೆಗಳನ್ನು ಸಲ್ಲಿಸಿದರು. ❑

## ದೆಹಲಿ ಕನ್ನಡ ಶಾಲೆಯಲ್ಲಿ ವಾರ್ಷಿಕ ಕ್ರೀಡಾ ಕೂಟ





ದೆಹಲಿ ಕನ್ನಡ ಶಾಲೆಯ ಆವರಣದಲ್ಲಿ ದಿನಾಂಕ 22.11.2025 ರಂದು ನಡೆದ ಶಾಲಾ ವಾರ್ಷಿಕ ಕ್ರೀಡಾ ಕೂಟದಲ್ಲಿ ಪೋಷಕರು, ಶಾಲಾ ಮಕ್ಕಳು, ಬಹಳ ಉತ್ಸಾಹದಿಂದ ಪಾಲ್ಗೊಂಡರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಅಂತರರಾಷ್ಟ್ರೀಯ ಬಾಸ್ಕೆಟ್‌ಬಾಲ್ ಆಟಗಾರ್ತಿ ಶ್ರೀಮತಿ ಆಶಾ ಹೆಗಡೆ ಮತ್ತು ಕಸಾಡಿ ಸೋನಿಪತ್‌ನ ಕ್ರೀಡಾ ಸಂಕೀರ್ಣದ ರೆಸ್ಲಿಂಗ್‌ನ ಮುಖ್ಯ ತರಬೇತುದಾರರಾದ ಶ್ರೀ ಸುಭಾಷ್‌ಚಂದ್ ಅವರು ಆಗಮಿಸಿ ಕ್ರೀಡಾಕೂಟ ಉದ್ಘಾಟನೆ ಮಾಡಿ ಎಲ್ಲರಿಗೂ ಶುಭ ಹಾರೈಸಿದರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿ ಪದಾಧಿಕಾರಿಗಳು, ಸದಸ್ಯರು, ಶಾಲೆಯ ಪ್ರಾಶುಪಾಲರು, ಉಪ ಪ್ರಾಂಶುಪಾಲೆ, ಗೌರವ ವ್ಯವಸ್ಥಾಪಕರು, ಶಿಕ್ಷಕರು, ಶಿಕ್ಷಕೇತರ ವೃಂದ ಮತ್ತು ಸಿಬ್ಬಂದಿ ಕ್ರೀಡಾಕೂಟದಲ್ಲಿ ಭಾಗಿಯಾಗಿ ಸಹಕರಿಸಿದರು. ಮುಖ್ಯ ಅತಿಥಿಗಳು ವಿಜೇತ ಮಕ್ಕಳಿಗೆ ಬಹುಮಾನ ವಿತರಣೆ ಮಾಡಿದರು.

ಬೆಂಗಳೂರಿನಲ್ಲಿ ನಡೆದ 35ನೇ ರಾಷ್ಟ್ರೀಯ ಥ್ರೋಬಾಲ್ ಚಾಂಪಿಯನ್‌ಶಿಪ್‌ನಲ್ಲಿ ಶಾಲೆಯ 12ನೇ ತರಗತಿ 'ಬಿ' ವಿಭಾಗದಲ್ಲಿ ಓದುತ್ತಿರುವ ಅಲೆಕ್ಸ್ ಬಿಷ್ವೆಕರ್ಮ ಮತ್ತು 11ನೇ ತರಗತಿ "ಸಿ" ವಿ. ಲಿಯೋನ್ ನಾಯ್ಡು ಇವರು ತಂಡವನ್ನು ಪ್ರತಿನಿಧಿಸಿ ಶಾಲೆಗೆ ಕೀರ್ತಿ ತಂದರು. ಇವರನ್ನು ಅಭಿನಂದಿಸಲಾಯಿತು.



# 70ನೇ ಕರ್ನಾಟಕ ರಾಜ್ಯೋತ್ಸವ ಸಂಭ್ರಮ



ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಹಾಗೂ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆ ವತಿಯಿಂದ ಜಂಟಿಯಾಗಿ ಏರ್ಪಡಿಸಲಾಗಿದ್ದ 70ನೇ ಕರ್ನಾಟಕ ರಾಜ್ಯೋತ್ಸವವನ್ನು ದೆಹಲಿ ಕನ್ನಡ ಶಾಲಾ ಆವರಣದಲ್ಲಿ ಸಂಭ್ರಮದಿಂದ ಆಚರಿಸಲಾಯಿತು. ರಾಷ್ಟ್ರಕವಿ ಕುವೆಂಪು ರಚಿತ ನಾಡಗೀತೆಗೆ ನೂರು ವರುಷ ಪೂರೈಸಿದ ಹಿನ್ನೆಲೆಯಲ್ಲಿ ಕನ್ನಡ ಮತ್ತು ಕನ್ನಡೇತರ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಪೋಷಕರಿಂದ ನಾಡಗೀತೆ ಹಾಡುವ ಮೂಲಕ ವಿಶಿಷ್ಟವಾಗಿ ಸಂಭ್ರಮಿಸಿದರು.

ದೀಪ ಪ್ರಜ್ವಲಿಸಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಭಾರತ ಸರ್ಕಾರದ ಗ್ರಾಮೀಣ ಅಭಿವೃದ್ಧಿ ಇಲಾಖೆಯ ನಿರ್ದೇಶಕಿ ಶ್ರೀಮತಿ ಡಾ. ಡಾ. ರಾಜೇಶ್ವರಿ ಎಸ್.ಎಂ. ಅವರು ಹೊರನಾಡಿನಲ್ಲಿ, ಪರಭಾಷಿಕರಲ್ಲಿ ನಮ್ಮ ಭಾಷೆಯನ್ನು ಮಾತನಾಡಲು ಸಂಕೋಚವಿರಬಾರದು. ನಮ್ಮ ಭಾಷೆಯನ್ನು ಅರ್ಥ ಮಾಡಿಕೊಳ್ಳುವವರಿದ್ದರೂ ಕನ್ನಡದಲ್ಲಿ ಮಾತನಾಡಲು ನಾವೇ ಕೆಲವೊಮ್ಮೆ ಹಿಂಜರಿಯುತ್ತೇವೆ. ಅತೀಯಾದ ಒಳ್ಳೆಯತನ ನಮ್ಮ ಭಾಷೆಯನ್ನು ಬೆಳೆಸಲು ಸಹಕಾರಿಯಾಗದು ಎಂದರು. ಇತ್ತೀಚೆಗೆ ಜೆಎನ್‌ಯು ಭಾಷಾ ವಿಭಾಗಕ್ಕೆ ಹೋಗಿದ್ದಾಗ ಅಲ್ಲಿ ಚೀನೀ ಭಾಷೆಯನ್ನು ಬೆಳೆಸಲು ಮತ್ತು ಪಸರಿಸಲು ಅಲ್ಲಿನ ಸರ್ಕಾರ ಹೇಗೆ ಪ್ರಾಮುಖ್ಯತೆ ನೀಡುತ್ತಿರುವುದನ್ನು ಸ್ಮರಿಸಿ, ಅದೇರೀತಿ ಕನ್ನಡವನ್ನು ಹೊರನಾಡಿನಲ್ಲಿ ಬೆಳೆಸಲು ಕರ್ನಾಟಕ ಸರ್ಕಾರವು ಆರ್ಥಿಕ ಹಿನ್ನೆಲೆಯ ಯೋಜನೆಗಳ ಮೂಲಕ ಮುಂದಾಗಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದರು.

ಮುಖ್ಯ ಅತಿಥಿ ಭಾರತ ಸರಕಾರದ ಜನ ಜಾತಿಯ ಕಾರ್ಯ ಮಂತ್ರಾಲಯದ ನಿರ್ದೇಶಕ ಶ್ರೀ ಶಿವಾನಂದ ಬಾಚಗುಂಡಿ, ಐಇಎಸ್ ಅವರು ಮಾತನಾಡಿ ವಿದ್ಯಾರ್ಥಿ ಜೀವನದಲ್ಲಿ ರಾಜ್ಯೋತ್ಸವವನ್ನು ಬಹಳ ಸಂಭ್ರಮದಿಂದ ಆಚರಿಸಿದ್ದೇನೆ. ಆದರೆ ಇಂದು ಹೊರನಾಡಿನಲ್ಲಿ ಕನ್ನಡ ಶಿಕ್ಷಣ ಸಂಸ್ಥೆಯೊಂದಿಗೆ ರಾಜ್ಯೋತ್ಸವವನ್ನು ಆಚರಿಸುತ್ತಿರುವುದು ಸೌಭಾಗ್ಯ. ಭಾರತದ ಇತಿಹಾಸದಲ್ಲಿ ಝಾನ್ಸಿ ರಾಣಿ ಲಕ್ಷ್ಮೀಬಾಯಿ ಅವರಿಗಿಂತ ಹಿಂದೆಯೇ ಕನ್ನಡದ ಹೆಮ್ಮೆ ಕಿತ್ತೂರ ರಾಣಿ ಚೆನ್ನಮ್ಮ ಬ್ರಿಟಿಷರ ಜೊತೆ ಹೋರಾಡಿ ಜಯ ಸಾಧಿಸಿದ ಬಗ್ಗೆ ವಿದ್ಯಾರ್ಥಿಗಳಿಗೆ ವಿವರಿಸಿದರು. ಹೊರನಾಡಿನಲ್ಲಿ ಕನ್ನಡವನ್ನು ಹೇಗೆ ಬೆಳೆಸಬೇಕು ಎಂಬ ಅರಿವು ನಮ್ಮಲ್ಲಿರಬೇಕು. ಈ ಸಂಸ್ಥೆಯು ಕನ್ನಡೇತರರಿಗೆ ಕನ್ನಡವನ್ನು ಕಲಿಸುತ್ತಿರುವುದು ನಿಜವಾಗಿಯೂ ಪ್ರಶಂಸನೀಯ ಎಂದರು.

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಗೌರವ ವ್ಯವಸ್ಥಾಪಕ ಶ್ರೀ ಉಮೇಶ್ ಬಿ.ಆರ್. ಕಾರ್ಯಕ್ರಮಕ್ಕೆ ಶುಭ ಹಾರೈಸಿ ಮಾತನಾಡಿದರು. ಕನ್ನಡೇತರ ಶಿಕ್ಷಕರು ತಮ್ಮ ಹೆಸರುಗಳನ್ನು ಕನ್ನಡದಲ್ಲಿ ಬರೆದು ಮನಸೆಳೆದರು. ಶಿಕ್ಷಕರು ಕನ್ನಡ ನಾಡಗೀತೆ ಹಾಗೂ ಕನ್ನಡ ಗೀತೆಯ ಹಾಡುವೆವು ಆಶಯ ಗೀತೆಯನ್ನು ಸುಶ್ರಾವ್ಯವಾಗಿ ಪ್ರಸ್ತುತಪಡಿಸಿದರು. ವಿದ್ಯಾರ್ಥಿಗಳು ಕನ್ನಡ ನಾಡುನುಡಿಯ ವೈವಿಧ್ಯಮಯ ಸಂಸ್ಕೃತಿಯನ್ನು ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮವನ್ನು ಪ್ರಸ್ತುತಪಡಿಸಿದರು. ವಿದೇಶಿಯರ ವಿರುದ್ಧ ಹೋರಾಡಿದ ಪ್ರಪ್ರಥಮ ಮಹಿಳಾ ಸ್ವಾತಂತ್ರ್ಯ ಹೋರಾಟಗಾರ್ತಿ ವೀರರಾಣಿ ಅಬ್ಬಕ್ಕನ 500ನೇ ಜಯಂತಿಯ ಸುಸಂದರ್ಭದ ಪ್ರಯುಕ್ತ ಅಬ್ಬಕ್ಕನ ಪಾತ್ರವನ್ನು ವಿದ್ಯಾರ್ಥಿನಿ ಜೈನಬ್ ಅವರು ನಿರ್ವಹಿಸಿ ಕನ್ನಡ ನಾಡಿನ ಐತಿಹಾಸಿಕ ಕ್ಷಣವನ್ನು ಕಣ್ಣಿಗೆ ಕಟ್ಟಿಕೊಟ್ಟರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಹಿರಿಯ ಸದಸ್ಯ ವಸಂತ ಶೆಟ್ಟಿ ಬೆಳ್ಳಾರೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷೆ ಶ್ರೀಮತಿ ವೀಣಾ ಜಗದೀಶ್, ಆಡಳಿತ ಸಮಿತಿ ಸದಸ್ಯರುಗಳಾದ ರಾಧಾಕೃಷ್ಣ ಕೆ., ಗಿರೀಶ್ ಎಸ್., ಹರಿಪ್ರಿಯಾ ಎಸ್., ಡಾ. ಅಶೋಕ ಗೋನಾಳ್, ಮೋಹನ್ ಕುಮಾರ್ ಬಿ.ಎನ್., ಶಾಲಾ ಉಪಪ್ರಾಂಶುಪಾಲೆ ಶ್ರೀಮತಿ ಪ್ರೇಮಲತಾ ಬಿ., ಶಾಲಾ ವಿದ್ಯಾರ್ಥಿಗಳು, ಶಿಕ್ಷಕ–ಶಿಕ್ಷಕೇತರ ವೃಂದದವರು, ಕನ್ನಡ ಪೋಷಕರು ಉಪಸ್ಥಿತರಿದ್ದರು. ಸಂಸ್ಥೆಯ ಗೌರವ ಖಜಾಂಚಿ ಮತ್ತು ಪ್ರಭಾರ ಗೌರವ ಕಾರ್ಯದರ್ಶಿ ಕಾಶಿನಾಥ್ ಬಿರಾದರ್ ಸ್ವಾಗತಿಸಿದರು. ಶಾಲಾ ಪ್ರಾಂಶುಪಾಲ ಪ್ರಶಾಂತ ಕುಮಾರ್ ವಂದಿಸಿದರು. ಕನ್ನಡ ಶಿಕ್ಷಕ ಅರವಿಂದ ಬಿಜ್ಜೈ ಕಾರ್ಯಕ್ರಮ ನಿರೂಪಿಸಿದರು. ಸಾಂಸ್ಕೃತಿಕ ಕಾರ್ಯಕ್ರಮವನ್ನು ಶಿಕ್ಷಕಿ ಶ್ರೀಮತಿ ರೇಖಾ ಐ. ನಿರೂಪಿಸಿದರು. ಉಪನ್ಯಾಸಕ ನಾಗರಾಜ್ ಎಂ., ಶಿಕ್ಷಕರಾದ ಹೆಚ್.ಎಸ್. ತೇಲಿ, ಜ್ಯೋತಿ ಎಸ್. ಪೊದ್ದಾರ್ ಕಾರ್ಯಕ್ರಮ ನಿರ್ವಹಣೆಯಲ್ಲಿ ಸಹಕರಿಸಿದರು. ❑

# ನವೀಕೃತ ಕೊಠಡಿಗಳ ಉದ್ಘಾಟನೆ



ದೆಹಲಿ ಕನ್ನಡ ಮಾಧ್ಯಮಿಕ ಶಾಲೆಯಲ್ಲಿ ಬಂಟ್ಸ್ ಕಲ್ಚರಲ್ ಅಸೋಸಿಯೇಷನ್ ನವದೆಹಲಿ ಇವರು ಐದು ಲಕ್ಷ ರೂಪಾಯಿಗಳ ದೇಣಿಗೆಯ ಎರಡು ನವೀಕೃತ ತರಗತಿ ಕೊಠಡಿಗಳ ಉದ್ಘಾಟನೆ ಕಾರ್ಯಕ್ರಮವು ಇತ್ತೀಚೆಗೆ ನೆರವೇರಿತು.

ಉದ್ಘಾಟಕರಾದ ಕೇಂದ್ರ ಹಡಗು ಬಂದರು ಮತ್ತು ಜಲಮಾರ್ಗ ಸಚಿವಾಲಯದ ಜಂಟಿ ಕಾರ್ಯದರ್ಶಿ ಶ್ರೇಣಿಯ ಹಿರಿಯ ಅಧಿಕಾರಿಗಳಾದ ಶ್ರೀ ಎಚ್.ಎನ್. ಅಶ್ವಥ್ ಅವರು ಬಂಟ್ಸ್ ಸಮಾಜದ ಸಮಾಜಮುಖಿ ಕಾರ್ಯವನ್ನು ಶ್ಲಾಘಿಸಿದರು. ವಿದ್ಯಾಸಂಸ್ಥೆಗಳಿಗೆ ನೀಡುವ ದೇಣಿಗೆಯು ಅತ್ಯಂತ ಶ್ರೇಷ್ಠ ಕಾರ್ಯ ಮತ್ತು ಅನುಕರಣೀಯ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಪ್ರಭಾರ ಅಧ್ಯಕ್ಷ ಡಾ. ಅವನೀಂದ್ರನಾಥ್ ರಾವ್ ಅವರು, ಒಳ್ಳೆಯ ಪ್ರಜೆಗಳನ್ನು ರೂಪಿಸುವ ಶಿಕ್ಷಣ ಸಂಸ್ಥೆಗಳಿಗೆ ನೀಡುವ ದೇಣಿಗೆ ಇತರ ಸಂಘ–ಸಂಸ್ಥೆಗಳಿಗೆ ಮಾದರಿಯಾಗಿದೆ. ಕನ್ನಡಿಗರು ಔದಾರ್ಯಕ್ಕೆ ಹೆಸರಾದವರು ಈ ಔದಾರ್ಯವನ್ನು ಬಂಟ ಸಮುದಾಯದ ಮೂಲಕ ನೋಡಬೇಕು ಎಂದು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಬಂಟ್ಸ್ ಕಲ್ಚರ್ ಅಸೋಸಿಯೇಷನ್ ಕಾರ್ಯದರ್ಶಿ ಶ್ರೀ ದೀಪಕ್ ಶೆಟ್ಟಿಯುವರನ್ನು ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಬಂಟ್ಸ್ ಅಸೋಸಿಯೇಷನ್‌ನ ಜಂಟಿ ಕಾರ್ಯದರ್ಶಿ ಶ್ರೀ ಟಿ.ಎಸ್. ಶಿವಪ್ರಸಾದ್ ಶೆಟ್ಟಿ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಸಮಿತಿ ಸದಸ್ಯ ಶ್ರೀ ಗಿರೀಶ್ ಎಸ್. ಡಾ. ಅಶೋಕ್ ಎಸ್. ಗೊನಾಳ್, ಶಾಲಾ ಪ್ರಾಂಶುಪಾಲ ಶ್ರೀ ಪ್ರಶಾಂತ್ ಕುಮಾರ್, ಉಪ ಪ್ರಾಂಶುಪಾಲೆ ಶ್ರೀಮತಿ ಪ್ರೇಮಲತಾ ಬಿ., ಹಾಗೂ ಶಾಲಾ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಸಮಿತಿ ಸದಸ್ಯರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ ಸ್ವಾಗತಿಸಿದರು. ಶಿಕ್ಷಕಿ ಲಾವಣ್ಯ ಬಸವರಾಜು ಕಾರ್ಯಕ್ರಮ ನಿರೂಪಿಸಿದರು. ಶ್ರೀ ಹರಿಪ್ರಿಯಾ ಎಸ್ ವಂದನೆಗಳನ್ನು ಅರ್ಪಿಸಿದರು.

ಸಮಗ್ರ ವರದಿ
**ಅರವಿಂದ ಬಿಜ್ಜೈ**
ಕನ್ನಡ ಶಿಕ್ಷಕರು

# ಶಿಕ್ಷಕರು ಶರಣಾಗಬೇಕಿಲ್ಲ

ಶಿಕ್ಷಕ, ಮಗು ಶಿಕ್ಷಣದ ಎರಡು ಮುಖಗಳು. ಶಿಕ್ಷಕನು ಕಲಿಸುತ್ತಾನೆ, ಮಗು ಕೇಳಿ ಕಲಿಯುತ್ತಾನೆ. ಇಲ್ಲಿ ಶಿಕ್ಷಕನಿಗೆ, ಕಲಿಸುವಿಕೆಗೆ ಪ್ರಾಧಾನ್ಯತೆಯಿದೆ. ಇದು ಹಳೆಯ ಕಲ್ಪನೆ. ಈ ಹಳೆಯ ಕಲ್ಪನೆಯಲ್ಲಿ ಕಲಿಯುವ ಮಗುವಿಗೆ ಮೂರನೇ ಸ್ಥಾನ ಮೊದಲನೆಯ ಮತ್ತು ಎರಡನೆಯ ಸ್ಥಾನ ಶಿಕ್ಷಕನಿಗೆ ಮತ್ತು ಪಠ್ಯಕ್ರಮಕ್ಕೆ. ಆದರೆ ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಮಗುವೇ ಕೇಂದ್ರಬಿಂದು. ಇಲ್ಲಿ ಶಿಕ್ಷಕ ಕಲಿಸುವವನಲ್ಲ ಮಗುವಿನ ಕಲಿಯುವಿಕೆಗೆ ಮಾರ್ಗದರ್ಶನ ಮಾಡುವವನು.


ಶಿಕ್ಷಕರ ಜೀವನ ಆದರ್ಶವೂ ಆಕರ್ಷಕವೂ ಆಗಿರಬೇಕು ಎಂದು ಗಾಂಧೀಜಿ ಹೇಳುತ್ತಾರೆ. ನಡವಳಿಕೆ, ಆಚಾರ–ವಿಚಾರ, ಸಂಸ್ಕಾರಗಳಿಂದ ಇತರರಿಗೆ ಮಾರ್ಗದರ್ಶಕರಾಗಿ ಆದರ್ಶಪ್ರಾಯರಾಗಿ ಬದುಕುತ್ತಾರೋ ಅವರೇ ನಿಜವಾದ ಗುರು. 'ಹಿಂದೆ ಗುರು ಇರಲಿ, ಮುಂದೆ ಗುರಿ ಇರಲಿ' ಎಂಬ ಕುವೆಂಪು ಉಕ್ತಿಯಂತೆ ವಿದ್ಯಾರ್ಥಿಗಳು ತಮ್ಮ ಜೀವನವನ್ನು ರೂಪಿಸಿಕೊಳ್ಳುವಲ್ಲಿ ಶಿಕ್ಷಕ ದಾರಿದೀಪ. ಮೊದಮೊದಲು ದೇಹದ ಹಸಿವಿಗೆ ಆಹಾರವು ಸುಖವಾದರೆ, ಬೆಳೆಯುತ್ತಾ ಬೌದ್ಧಿಕ ಹಸಿವಿಗೆ ಜ್ಞಾನವೇ ಅಮೃತವಾಗುವುದು. ಈ ಜ್ಞಾನಾಮೃತವನ್ನು ಬಿತ್ತುವ ಗದ್ದೆಯೇ ಶಾಲೆಯಾದರೆ ಬಿತ್ತಿ ಬೆಳೆಸುವವನು ಶಿಕ್ಷಕ. ವಿದ್ಯಾರ್ಥಿಯ ಪೂರ್ಣ ಪಠ್ಯಪುಸ್ತಕ ಶಿಕ್ಷಕ.

ಪುಸ್ತಕದಿ ದೊರೆತರಿವು ಮಸ್ತಕದಿ ತಳೆದ ಮಣಿ।
ಚಿತ್ತದೊಳು ಬೆಳೆದರಿವು ತರುತಳೆದ ಪುಷ್ಪ॥
ವಸ್ತು ಸಾಕ್ಷಾತ್ಕಾರವಂತರೀಕ್ಷಣೆಯಿಂದ।
ಶಾಸ್ತ್ರಿತನದಿಂದಲ್ಲ–ಮಂಕುತಿಮ್ಮ॥

ಡಿವಿಜಿ ಈ ಕಗ್ಗದಲ್ಲಿ ಹೇಳುವುದು, ಪುಸ್ತಕದಲ್ಲಿದ್ದದ್ದನ್ನು ಗಿಳಿಪಾಠ ಮಾಡಿದರೆ ಅದರಿಂದ ಹೊಟ್ಟೆ ತುಂಬಿತೇ? ಅದು ತಲೆಯ ಮೇಲೆ ಕಿರೀಟವಿದ್ದ ಹಾಗೆ ಅಷ್ಟೇ. ನಾಟಕದಲ್ಲಿ ತಲೆಯ ಮೇಲೆ ಕಿರೀಟವಿದೆ ಎಂದರೆ ಅದು ಏನು ಪ್ರಯೋಜನ? ಅದರ ಬದಲು ಚಿತ್ತದಲಿ ಬೆಳೆದರಿವು ತರುತಳೆದ ಪುಷ್ಪ ಎನ್ನುತ್ತಾರೆ. ಕಲಿಕೆಯೂ ಕೂಡ ಸ್ವಾಭಾವಿಕವಾದ, ಸಹಜವಾದ ಒಂದು ಪ್ರಕ್ರಿಯೆ.

ಕಲಿಕೆ ಬಹುಪಾಲು ಊಟ ಮಾಡಿದಂತೆ. ನೀವು ಎಷ್ಟು ಉಂಡಿದ್ದೀರಿ ಅನ್ನುವುದಕ್ಕಿಂತ ಎಷ್ಟು ಜೀರ್ಣಿಸಿಕೊಂಡಿದ್ದೀರಿ, ಅರಗಿಸಿಕೊಂಡಿದ್ದೀರಿ ಎಂಬುವುದು ತಿಳಿದವರ ಮಾತು. ಶಿಕ್ಷಣವು ನಾವು ಏನು ಮಾಡಬಹುದು, ಮಾಡಬಾರದು ಎಂಬುವುದನ್ನು ಕಲಿಸುತ್ತದೆ. ಇಂದು ಕಡ್ಡಾಯ, ಸಮಾನ ಶಿಕ್ಷಣವಿದೆ. ಗುಣಾತ್ಮಕ ಶಿಕ್ಷಣ ಪ್ರತಿಯೊಬ್ಬ ಮಗುವಿಗೆ ದೊರೆಯುತ್ತಿದೆಯೇ ಅಥವಾ ಅಂತಹ ಪ್ರಯತ್ನಕ್ಕೆ ಶಿಕ್ಷಕರಿಗೆ ಅನುಕೂಲಕರ ವಾತಾವರಣ ಇದೆಯೇ? ಎಂಬುವುದು ಚರ್ಚಿತ ಅಂಶ.

ಜೀವನದಲ್ಲಿ ಪೆಟ್ಟುಗಳು (ಕಷ್ಟಗಳು) ಬೀಳುವುದು ನಮ್ಮನ್ನು ಪಾವನಗೊಳಿಸುವುದಕ್ಕೆ. ತಪ್ಪು ಮಾಡಿದಾಗ ಎಷ್ಟೋ ದಂಡನೆಯನ್ನು ನಾವೆಲ್ಲರೂ ಶಾಲಾ ಜೀವನದಲ್ಲಿ ಅನುಭವಿಸಿದ್ದೇವೆ. ಅದನ್ನು ನೆನಪಿಸುತ್ತಾ ನಮ್ಮ ಇಂದಿನ ಸ್ಥಿತಿಗೆ ಅಂದಿನ ದಂಡನೆಗಳು ಕಾರಣವೆಂದು ಅರ್ಥೈಸಿಕೊಂಡಿದ್ದೇವೆ. ಪ್ರಸ್ತುತ ವ್ಯವಸ್ಥೆಯಲ್ಲಿ ಶಿಕ್ಷಕನನ್ನು ಕಾನೂನು, ಸಂವಿಧಾನ, ಹಕ್ಕುಗಳು ಮುಂತಾದ ನೆಪದಲ್ಲಿ ಬಂಧಿಸಲಾಗಿದೆ. ಒಳ್ಳೆಯ ಫಲಿತಾಂಶಕ್ಕಾಗಿ ಶಿಕ್ಷಕ ಪ್ರಯತ್ನಿಸಬೇಕು.



ಆದರೆ ಅದಕ್ಕಾಗಿ ಶಿಸ್ತಿನ ಕ್ರಮಗಳನ್ನು ಸ್ವತಂತ್ರವಾಗಿ ತೆಗೆದುಕೊಳ್ಳುವಂತಿಲ್ಲ, ಕಲಿಕಾ ಸ್ವಾತಂತ್ರ್ಯವಿಲ್ಲ. ವಿದ್ಯಾರ್ಥಿಗಳನ್ನು ಬಯ್ಯುವಂತಿಲ್ಲ, ದಂಡಿಸುವಂತಿಲ್ಲ. ವಿದ್ಯಾರ್ಥಿಯನ್ನು ಶಿಕ್ಷಿಸಿದರೆ ಶಿಕ್ಷಕನ ಉದ್ಯೋಗಕ್ಕೆ ಕುತ್ತು. ದಂಡಿಸಿಯೇ ಕಲಿಸಬೇಕು ಎನ್ನುವುದು ಉದ್ದೇಶವಲ್ಲ. ಶಿಕ್ಷಕರು ಕೂಡ ಪೋಷಕರು ಎಂಬುವುದನ್ನು ಗಮನಿಸಬೇಕು. ಅಂತಹ ಕ್ರೌರ್ಯ ಮನಸ್ಥಿತಿ ಶಿಕ್ಷಕರಲ್ಲಿ ಇಲ್ಲ. ಕೆಲವೊಂದು ನಿದರ್ಶನಗಳಿರಬಹುದು. ಸಾರ್ವತ್ರಿಕವಾಗಿ ಶಿಕ್ಷಕರಿಗೆ ಈ ಹಣೆಪಟ್ಟಿ ಕಟ್ಟುವಾಗಿಲ್ಲ. ಇಲ್ಲಿ ಮುಖ್ಯವಾಗಿ ಮುನ್ನೆಲೆಗೆ ಬರುವ ಸಂಗತಿ ಎಂದರೆ, ಶಿಕ್ಷಕರು ಹೊಸ ಕಲಿಕಾ ತಂತ್ರಗಳನ್ನು ಬಳಸಬೇಕು, ವಿದ್ಯಾರ್ಥಿಗಳನ್ನು ತಮ್ಮ ವಿಷಯದ ಬೋಧನೆಯ ಕಡೆ ಆಕರ್ಷಿಸಬೇಕು ಎಂಬುವುದು. ಹಾಗಾದರೆ ಶಿಕ್ಷಕರಿಗೆ ಕಾಲಕಾಲಕ್ಕೆ ಬೋಧನಾ ಕೌಶಲ್ಯಗಳ ಬಗ್ಗೆ ತರಬೇತಿಗಳು ಆಯೋಜನೆಗೊಳ್ಳುತ್ತಿದೆಯೇ? ತರಗತಿಯಲ್ಲಿ ಬೋಧಿಸುವ ಜೊತೆ ಇತರ ಕಚೇರಿಯ ಕೆಲಸಗಳು ಶಿಕ್ಷಕರ ಕೈಗಂಟಿಕೊಂಡಿರುವುದು ಸಮಂಜಸವೇ? ಪಠ್ಯಕ್ರಮ, ಮೌಲ್ಯಮಾಪನ, ಗೈರುಹಾಜರಿ, ಶಿಸ್ತು ಎಲ್ಲದಕ್ಕೂ ಶಿಕ್ಷಕರನ್ನೇ ಗುರಿಯಾಗಿಸುವುದು ಒಪ್ಪಿತವೇ?

ಮಕ್ಕಳ ಮನಸ್ಸು ಚಂಚಲ. ಇಂದು ಆಧುನಿಕ ತಂತ್ರಜ್ಞಾನ, ತಂತ್ರಾಂಶಗಳೆಡೆಗೆ ಅವರ ಮನಸ್ಸುಗಳು ಹೆಚ್ಚು ಆಕರ್ಷಿತವಾಗುತ್ತಿವೆ. ಸಮಾಜದಲ್ಲಿನ ಸ್ಥಿತಿಗತಿಗಳು ಕ್ಷಣಕ್ಷಣಕ್ಕೆ ಬದಲಾಗುತ್ತಿವೆ. ಇಂತಹ ಸ್ಥಿತಿಯಲ್ಲಿ ತರಗತಿಯೊಳಗೆ ಮಕ್ಕಳ ಬೌದ್ಧಿಕ ಮಟ್ಟದ ಜೊತೆಗೆ ಆಸಕ್ತಿಗನುಸಾರವಾಗಿ ಬೋಧಿಸಲು ಶಿಕ್ಷಕರಿಗೂ ತರಬೇತಿಯ, ಕೌಶಲ್ಯಗಳ ಅಗತ್ಯವಿದೆ. ಜ್ಞಾನ ಸಂಪಾದನೆ, ಬೌದ್ಧಿಕ ಬೆಳವಣಿಗೆಯ ಜೊತೆಗೆ ಸಂಸ್ಕಾರವನ್ನು ನೀಡುವ ಜವಾಬ್ದಾರಿಯು ಶಿಕ್ಷಕರ ಮೇಲಿದೆ. ಒಂದೇ ತರಗತಿಯಲ್ಲಿ ಒಂದೇ ವಯಸ್ಸಿನ ಮಕ್ಕಳಿದ್ದರೂ ಅವರ ಬೌದ್ಧಿಕ ಮಟ್ಟದಲ್ಲಿ ಭಿನ್ನತೆಗಳಿವೆ. ಮಕ್ಕಳ ಬುದ್ಧಿ ಸಾಮರ್ಥ್ಯಗಳಲ್ಲಿ, ಆಸಕ್ತಿ ಅಭಿರುಚಿಗಳಲ್ಲಿ ಭಿನ್ನತೆ ಇರುವುದು ಸಹಜ. ಸೂರ್ಯನ ಕಿರಣಗಳು ಎಲ್ಲೆಡೆ ಪ್ರಜ್ವಲಿಸುವಂತೆ ಶಿಕ್ಷಕರ ಪೂರ್ಣ ಗಮನವು ಎಲ್ಲಾ ವಿದ್ಯಾರ್ಥಿಗಳಿಗೆ ಕೇಂದ್ರಿತವಾಗಿರಬೇಕು. ತರಗತಿಯೊಳಗೆ ವಿದ್ಯಾರ್ಥಿಗಳನ್ನು ನಿಯಂತ್ರಿಸುವುದು, ನಿಗದಿತ ಪಠ್ಯಕ್ರಮವನ್ನು ಪೂರ್ಣಗೊಳಿಸುವುದಷ್ಟೇ ಶಿಕ್ಷಕನ ಸಾಧನೆಯಾಗಬಾರದು. ಹೊಸ ಯೋಚನೆ, ಯೋಜನೆ, ಕಲಿಕಾ ತಂತ್ರಗಳು ಪರಿಪೂರ್ಣ ಕಲಿಕೆಯ ಸಾಧನವಾಗಬೇಕು.

ಮಕ್ಕಳಲ್ಲಿರುವ ಸಣ್ಣಸಣ್ಣ ಸಕಾರಾತ್ಮಕ ವಿಚಾರಗಳನ್ನು ಗುರುತಿಸಿ ಪ್ರೋತ್ಸಾಹಿಸಬೇಕು. ಎಲ್ಲರ ಎದುರು ಮಕ್ಕಳನ್ನು ಎಂದಿಗೂ ಅವಮಾನಿಸಬಾರದು. ಹಾಸ್ಯವನ್ನು ಹೇಳಿ ಮಕ್ಕಳನ್ನು ನಗಿಸಬೇಕೆ ಹೊರತು ಮಕ್ಕಳನ್ನೇ ಹಾಸ್ಯಕ್ಕೆ ಒಳಪಡಿಸಬಾರದು. ಇತರರ ಜೊತೆ ಹೋಲಿಕೆ ಮಾಡಿ ಮೂದಲಿಸಿದಾಗ ಅಥವಾ ಅವಮಾನಗಳು ಎದುರಾದಾಗ ಮಕ್ಕಳು ಛಲವಂತರಾಗುತ್ತಾರೆ ಎನ್ನುವುದು ಪ್ರಸ್ತುತ ಪರಿಸ್ಥಿತಿಯಲ್ಲಿ ಕೇವಲ ಭ್ರಮೆ. ಇತ್ತೀಚಿನ ವಿದ್ಯಮಾನಗಳನ್ನು ಕಂಡಾಗ ಸ್ಪಷ್ಟವಾಗುತ್ತದೆ. ಕೇವಲ ನಕಾರಾತ್ಮಕ ಅಂಶಗಳಿಗೆ ಮಹತ್ವ ನೀಡದೆ, ಮಕ್ಕಳಲ್ಲಿರುವ ನೈಜ ಪ್ರತಿಭೆಗಳಿಗೆ ಬೆಳಕು ಚೆಲ್ಲಬೇಕು. ಒಬ್ಬ ಸಾಮಾನ್ಯ ಶಿಕ್ಷಕ ಬೋಧಿಸುತ್ತಾನೆ, ಉತ್ತಮ ಶಿಕ್ಷಕ ವಿದ್ಯೆ ನೀಡುತ್ತಾನೆ, ಶ್ರೇಷ್ಠ ಶಿಕ್ಷಕ ಸ್ಫೂರ್ತಿಯನ್ನು ನೀಡುತ್ತಾನೆ.

ತಂದೆ, ತಾಯಿ, ಶಿಕ್ಷಕರು, ಹಿರಿಯರು ಎಲ್ಲರೂ ಇಂದು ಮಕ್ಕಳನ್ನು ತಿದ್ದುವ ಪ್ರಯತ್ನದಲ್ಲಿದ್ದಾರೆ. ಮಕ್ಕಳು ತಪ್ಪು ಮಾಡುತ್ತಿದ್ದರೆ ಅವರಿಗೆ ಸರಿಯಾದ ಜ್ಞಾನ ಮಾರ್ಗದರ್ಶನ ನಾವು ಕೊಡಲಿಲ್ಲವೆಂದು ಅರ್ಥ. ಮಗುವಿನ ಸಾಧನೆಯಲ್ಲಿ ಪಾಲು ಪಡೆಯುವ ನಾವುಗಳು ಮಗು ತಪ್ಪು ಮಾಡಿದಾಗ ಕೈ ತೊಳೆದುಕೊಳ್ಳುವುದು ಸರಿಯಲ್ಲ. ಮನಸ್ಸು ಬುದ್ಧಿಯನ್ನು ಮತ್ತೆಮತ್ತೆ ಕೆರಳಿಸುವಂತಹ ಸಮಾಜದಲ್ಲಿ ಮಗು ಬದುಕುತ್ತಿದೆ ಎನ್ನುವುದು ನಾವು ತಿಳಿದುಕೊಳ್ಳಬೇಕಾದ ಸತ್ಯ.

ಪಠ್ಯಪುಸ್ತಕದಲ್ಲಿನ ಪ್ರಶ್ನೆಗಳಿಗೆ ಉತ್ತರ ಬರೆಸುವ ಶಿಕ್ಷಕರು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಪ್ರಶ್ನೆಗಳನ್ನು ಕುತೂಹಲವನ್ನು ಮೂಡಿಸುವ ಕೆಲಸವನ್ನು ಮಾಡಬೇಕು. ಕೇವಲ ಫಲಿತಾಂಶದ ಹಿಂದೆ ಓಡುವ ವ್ಯವಸ್ಥೆಗೆ ಶಿಕ್ಷಕರೆಲ್ಲರೂ ಶರಣಾಗಬೇಕಿಲ್ಲ. ಆಯ್ಕೆಯಿಂದ ಅಥವಾ ಅನಿವಾರ್ಯತೆಯಿಂದ ಶಿಕ್ಷಕ ವೃತ್ತಿಗೆ ಬಂದಿರಬಹುದು. ಆದರೆ ಶಿಕ್ಷಕ ವೃತ್ತಿಯೆಂಬುದು ಗೌರವ. ಜೀವನದ ಪ್ರತಿಯೊಂದು ಸಂದರ್ಭಗಳಲ್ಲಿ ನಾವು ನಮ್ಮ ಗುರುಗಳನ್ನು ನೆನಪಿಸಿಕೊಂಡ ಹಾಗೆ ನಮ್ಮ ವಿದ್ಯಾರ್ಥಿಗಳು ನಮ್ಮನ್ನು ನೆನಪಿಸಿಕೊಂಡರೆ ಅಷ್ಟೇ ಸಾಕು. ಆ ದಿಕ್ಕಿನಲ್ಲಿ ನಾವು ನಡೆಯಬೇಕು. ಹಿಂದಿನಂತೆ ಕಲಿಕೆಯನ್ನು ಸಂಭ್ರಮಿಸುವ ದಿನಗಳು ಮತ್ತೆ ಮರುಕಳಿಸಬೇಕು.

ಶಿಕ್ಷಕರ ದಿನಾಚರಣೆಯಂದು ಶಿಷ್ಟಾಚಾರಕ್ಕಾದರೂ ಶಿಕ್ಷಕರನ್ನು ಹಾಡಿ ಹೊಗಳುವ, ಅಭಿನಂದಿಸುವ ಕಾರ್ಯಕ್ರಮಗಳು ನಡೆಯುತ್ತಿವೆ. ಸಾಮಾಜಿಕ ಜಾಲತಾಣದಲ್ಲಿ ಮೆಸೇಜ್‌ಗಳು, ಸ್ಟೇಟಸ್‌ಗಳು ಸಾಕಷ್ಟು ಹರಿದು ಬರುತ್ತವೆಯಾದರೂ ಶಿಕ್ಷಕರ ದಿನಾಚರಣೆ ಕೇವಲ ಒಂದು ದಿನದ ಸಾಂಕೇತಿಕ ಆಚರಣೆಯಾಗಿ ಉಳಿಯಬಾರದು. ಶಿಕ್ಷಣ ವ್ಯವಸ್ಥೆ ಈಗ ಬಹಳ ಭಿನ್ನವಾಗಿದೆ. ಹಿಂದಿನ ಕಾಲದಲ್ಲಿ ಇದ್ದಂತಹ ಶಿಕ್ಷಣದ ಪಾವಿತ್ರ್ಯತೆ, ಶಿಕ್ಷಕರ ಮೇಲಿನ ಭಯ, ಭಕ್ತಿ, ಗೌರವವೆಲ್ಲವೂ ಇಂದು ತೋರಿಕೆಯಾಗಿ ಮಾರ್ಪಟ್ಟಿದೆ. ಜೀವನ ಶೈಲಿಯೂ ಬದಲಾದಂತೆ ಗುರುಶಿಷ್ಯರ ಸಂಬಂಧವೂ ಬದಲಾಗಿದೆ. ಶಿಕ್ಷಣದ ನಿಜವಾದ ಮೌಲ್ಯಗಳನ್ನು ಅಳವಡಿಸಿಕೊಂಡು ಗುರುಶಿಷ್ಯರ ಸಂಬಂಧವನ್ನು ಪುನರ್ ಪ್ರತಿಷ್ಠಾಪಿಸಬೇಕಾದ ಅನಿವಾರ್ಯತೆ ಇದೆ. ಹಾಗಾದರೆ ಮಾತ್ರ ಶಿಕ್ಷಕರ ದಿನಾಚರಣೆಯು ಹೆಚ್ಚು ಅರ್ಥಪೂರ್ಣವಾದೀತು. ❑

ಲೇಖಕರು :
**ಅರವಿಂದ ಬಿಜ್ಜೆ**
ಕನ್ನಡ ಶಿಕ್ಷಕರು, ದೆ.ಕ.ಹಿ.ಮಾ. ಶಾಲೆ
ನವದೆಹಲಿ

Delhi Karnataka Sangha Abhimata
October 2025-March 2026, Vol. No.36, Issue No.1-6, Price Rs.1/-
RNI Regn. No. 53405/91, DL-SW-01/4016/22-24
Date of Publication : March 8th / 9th, Posting Date : 10th / 11th, Total Pages-112 Monthly-Language Kannada, POSTED AT RMS DELHI-110006
Printed & Published by Radhakrishna, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: K.Sreenivasa Murthy

# ಸಂಘದಲ್ಲಿ ದಿನಾಂಕ ೦೮.೦೩.೨೦೨೬ ರಂದು ಆಯೋಜನೆಗೊಂಡ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದ ಆಯ್ದ ದೃಶ್ಯಾವಳಿ

















